
೭೭ನೇ
ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನ, ಗದಗ



ಕಲಿಯೇ ಕಾಯಕ

ಜಿ. ಹೆಚ್. ವೀರಣ್ಣ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮

೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ

ಕಲೆಯೇ ಕಾಯಕ

(ಗುಬ್ಬಿ ವೀರಣ್ಣನವರ ಆತ್ಮಕಥೆ)

ಜಿ. ಹೆಚ್. ವೀರಣ್ಣ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

KALEYE KAYAKA - Auto Biography of Gubbi Veeranna
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : xxxii + 172 Price : **Rs. 80=00 ; 2010**

ಮುದ್ರಣದ ವರ್ಷ : ೨೦೧೦
ಪ್ರತಿಗಳು : ೧೦೦೦
ಬೆಲೆ : ಎಂಬತ್ತು ರೂಪಾಯಿಗಳು

ಪ್ರಕಟಣಾ ಸಮಿತಿ

ಮುಖಪುಟ ವಿನ್ಯಾಸ : ಶ್ರೀ ಶಿವು ವಿ. ಹೂಗಾರ

ಮುದ್ರಣ : ಬಿ.ಎಂ.ಶ್ರೀ ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿರುವುದನ್ನು ಕಂಡು ನನಗೆ ಮಹದಾನಂದವಾಗಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲುಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹು ವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ ಆರಾಧನೆ ಮಾಡುತ್ತಿದ್ದೇನೆಂದು ಭಾವಿಸಿ ಕನ್ನಡ ಸಾಹಿತ್ಯ ಪರಿಷತ್ತು ತಣ್ಣಗೆ, ನಿರುಮ್ಮಳವಾಗಿ ಇರುವ ಕಾಲ ಮುಗಿದುಹೋಯಿತು. ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದರಲ್ಲೇ ಸಾಹಿತ್ಯ ಪರಿಷತ್ತಿನ ಜೀವಂತಿಕೆಯಿದೆಯೆಂದು ಬಲವಾಗಿ ನಂಬಿ ನಡೆಯುತ್ತಿರುವವನು ನಾನು. ಕನ್ನಡದಲ್ಲಿ ಇತ್ತೀಚೆಗೆ ಬರುತ್ತಿರುವ ವೈವಿಧ್ಯಮಯ ಪುಸ್ತಕಗಳನ್ನು ನೋಡಿದರೆ ಮೊದಲು ಅವುಗಳನ್ನು ಕಣ್ಣಿಗೊತ್ತಿಕೊಂಡು, ಮೃದುವಾಗಿ ಮೈದಡವಿ, ಸ್ವಲ್ಪ ಹತ್ತಿರದಿಂದಲೂ ನಂತರ ದೂರದಿಂದಲೂ ನೋಡಿ ಪುಳಕಗೊಂಡು ಪುಟ ತಿರುವಬೇಕೆನ್ನಿಸುತ್ತದೆ. ಪಂಚೇಂದ್ರಿಯಗಳಲ್ಲಿ ನಾಲಗೆಯೊಂದನ್ನು ಹೊರತುಪಡಿಸಿ ಉಳಿದವುಗಳೆಲ್ಲ ತಣಿಯದ ದಿವ್ಯಸುಖವನ್ನು ಖಂಡಿತ ಅನುಭವಿಸುತ್ತವೆ. ಪುಸ್ತಕಪ್ರೇಮಿಗಳು ಯಾರೂ ಈ ಭವಸುಖನಿಮಜ್ಜನದಿಂದ ಬಿಡಿಸಿಕೊಳ್ಳಲಾರರು.

ಲೇಖಕ–ಮಾರಾಟಗಾರ–ಓದುಗರಿಗೆ ವಿಭಿನ್ನ ರೀತಿಯ ಸುಖವುಣ್ಣಿಸುವ ಪೈಪೋಟಿಯಲ್ಲಿ ಪುಸ್ತಕೋದ್ಯಮ ಮುಳುಗಿಹೋಗಿರುವಾಗ ಪರಿಷತ್ತು ತಟಸ್ಥ ತಲ್ಲೀನತೆಯಲ್ಲಿರುವುದು ಸಾಧ್ಯವೇ ಇಲ್ಲ. ಗತವೈಭವದ ಸಾಕ್ಷಿಯಾಗಿ ಉಳಿದಿರುವ, ಆದರೆ ಇವತ್ತಿನ ಅಭಿರುಚಿಗೆ ಸಲ್ಲದಂಥ ಮುಖಪುಟ, ವರ್ಣಸಂಯೋಜನೆ, ಚಿತ್ರ ವಿನ್ಯಾಸ, ಒಳಗಿನ ಕಾಗದಗಳನ್ನು ಸಂಪೂರ್ಣ ಬದಲಾಯಿಸಿ ಚಂದಗಾಣಿಸಿದರೆ ಮಾತ್ರ ಓದುಗರು ಹತ್ತಿರ ಬರುತ್ತಾರೆ, ಕೈಯಿಂದ ಎತ್ತಿ ನೋಡುತ್ತಾರೆ, ಕೊಳ್ಳುವ ಮನಸ್ಸು ಮಾಡುತ್ತಾರೆ, ಮನೆಯ ಕಪಾಟುಗಳನ್ನು ಪುಸ್ತಕಗಳಿಂದ ಅಲಂಕರಿಸುತ್ತಾರೆ. ಪುಸ್ತಕವೊಂದರ ಪುಟ ಪುಟಗಳಲ್ಲಿ ಪ್ರತಿಭೆ–ಪಾಂಡಿತ್ಯಗಳ ವಿದ್ಯುತ್ ಪ್ರವಾಹ ಹರಿದು ಓದುಗರನ್ನು ರಸರೋಮಾಂಚನಗೊಳಿಸುವುದು ಎಷ್ಟು ಮುಖ್ಯವೋ ನಮಗೆ ಬೇಕಾದ್ದು ಅದರಲ್ಲೇನೋ ಇದೆ ಎನ್ನುವ ಸೂಚನೆ ಪುಸ್ತಕದತ್ತ ನೋಟ ಹಾಯಿಸುತ್ತಿದ್ದಂತೆ ಸಿಗುವುದೂ ಅಷ್ಟೇ ಮುಖ್ಯ. ಆಧುನಿಕ ಮುದ್ರಣ ತಂತ್ರಜ್ಞಾನದ ಸಾಧ್ಯತೆಗಳನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳುವುದರಿಂದಲೂ ಯಶಸ್ಸಿನ ಹೆದ್ದಾರಿ ನಿರ್ಮಾಣವಾಗುತ್ತದೆಂಬ ಮಾತೂ ಸತ್ಯವೇ. ಇಷ್ಟೆಲ್ಲಾ ಚಿಂತನ–ಮಂಥನ, ಪರೀಕ್ಷೆ–ಪ್ರಯೋಗ, ಅವಲೋಕನ–ಪರಾಮರ್ಶನಗಳ ಪರಿಣಾಮವಾಗಿಯೇ ವರ್ತಮಾನದ ಪುಸ್ತಕ ಪ್ರಕಟಣೆಯ ತುರುಸಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆತ್ಮವಿಶ್ವಾಸದ ಮತ್ತು ಹೆಮ್ಮೆಯ ಹೆಜ್ಜೆಗಳನ್ನು ಇಡಲು ಸಾಧ್ಯವಾಗಿದೆ. ಬೆಂಗಳೂರು ಮತ್ತು ಹೊರಗೆ ನಡೆಯುತ್ತಿರುವ ಪುಸ್ತಕ ಮೇಳ–ಪುಸ್ತಕ ಪ್ರದರ್ಶನಗಳಲ್ಲಿ ಜಯಭೇರಿ ಬಾರಿಸಲು ಸಾಧ್ಯವಾಗಿದೆ. ೨೦೦೯ರ ಕನ್ನಡ ರಾಜ್ಯೋತ್ಸವದ ನೆನಪಿಗೆ ಏರ್ಪಡಿಸಿದ್ದ ಪುಸ್ತಕ ಪ್ರದರ್ಶನ ಮತ್ತು ಮಾರಾಟದಲ್ಲಿ ದಾಖಲೆಯ ವಹಿವಾಟು ನಡೆಸಲು ಸಾಧ್ಯವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ಸಮ್ಮೇಳನಗಳ ಸಂದರ್ಭದಲ್ಲಿ ಭರವಸೆಯಿಂದ ಪುಸ್ತಕಗಳನ್ನು ಹೊರತರಲು ಸಾಧ್ಯವಾಗಿದೆ. ಇದನ್ನೆಲ್ಲ ಸಾಧ್ಯವಾಗಿಸುವುದಕ್ಕೆ ಕಾರಣರಾದ ಕನ್ನಡ ಪುಸ್ತಕಪ್ರೇಮಿಗಳನ್ನು ಅಭಿನಂದಿಸಬೇಕಾಗಿದೆ.

೨೦೧೦ ಫೆಬ್ರವರಿ ೧೯ ರಿಂದ ೨೧ ರವರೆಗೆ ಮೂರು ದಿನಗಳ ಕಾಲ ಗದಗದಲ್ಲಿ ನಡೆಯಲಿರುವ ೭೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿಗಾಗಿ ೭೬ ಕೃತಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿದೆ. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಒಳಗೊಳ್ಳಲಿರುವ ಈ ಪುಸ್ತಕಗಳ ಆಯ್ಕೆಗೆ ಅವುಗಳ ಗುಣಮಟ್ಟವೇ ಮೂಲ ಬಂಡವಾಳವಾಗಿದೆ. ಪರಿಷತ್ತು ತಮ್ಮ ಒಂದು ಪುಸ್ತಕವನ್ನು ಪ್ರಕಟಿಸಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿ ನಾಡಿನ ಮೂಲೆಮೂಲೆಗಳಿಂದ ಲೇಖಕರು ಪತ್ರ ಬರೆದು ವಿನಂತಿ ಮಾಡಿಕೊಳ್ಳುತ್ತಾರೆ. ಅನೇಕರು ಹಸ್ತಪ್ರತಿಗಳನ್ನೇ ಕಳುಹಿಸಿಕೊಡುತ್ತಾರೆ. ಜಿಲ್ಲಾಧ್ಯಕ್ಷರುಗಳ ಮೂಲಕ ಒತ್ತಾಯ ತರುತ್ತಾರೆ. ಅಂಥ ಮನವಿಗಳು ವರ್ಷವೊಂದರಲ್ಲಿ ಸಾವಿರವನ್ನೂ ಮೀರುತ್ತವೆ. ಹಾಗೆ ಎಲ್ಲ ಪುಸ್ತಕಗಳನ್ನೂ ಮರುಮಾತಿಲ್ಲದೆ ಪ್ರಕಟಿಸುವುದು ಪರಿಷತ್ತಿಗೆ ಸಾಧ್ಯವೂ ಇಲ್ಲ, ಅದು ಸಾಧುವೂ ಅಲ್ಲ. ಪುಸ್ತಕದ ಶಕ್ತಿ–ಯೋಗ್ಯತೆಗಳನ್ನು ಜರಡಿಯಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವ ಪರಿಶೀಲನಾ ಸಮಿತಿಯ ಅಗ್ನಿದಿವ್ಯವನ್ನು ಎದುರಿಸಿಯೇ ಕೃತಿ ಪ್ರಕಟಗೊಳ್ಳಬೇಕಾಗುತ್ತದೆ. ಈ ಬಾರಿಯ ಅಕ್ಷರಜಾತ್ರೆಯನ್ನು ಅರ್ಥಪೂರ್ಣವಾಗಿ ಸಿಂಗರಿಸುವುದಕ್ಕಾಗಿಯೇ ಸಜ್ಜುಗೊಂಡಿರುವ ಈ ಪುಸ್ತಕಗಳು ಪ್ರೀತಿಸುವ ಸಹೃದಯರ ಮಡಿಲನ್ನು ಸೇರಲಿ, ಅವರ ಜ್ಞಾನಭಂಡಾರವನ್ನು ವಿಸ್ತರಿಸಲಿ, ಅವರನ್ನು ರಸಾನಂದದಲ್ಲಿ ಮುಳುಗಿಸಲಿ ಎಂದು ಹಾರೈಸುತ್ತೇನೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತವಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಮುನ್ನುಡಿ
(ಪ್ರಥಮ ಮುದ್ರಣ)

'ಕಲೆಯೇ ಕಾಯಕ', ಅನ್ವರ್ಥವಾಗಿ ವೀರಣ್ಣನವರ ಆತ್ಮವೃತ್ತ. ಕನ್ನಡ ವೃತ್ತಿ ರಂಗಭೂಮಿಗೆ ತಮ್ಮ ಜೀವನವನ್ನೆ ಧಾರೆ ಎರೆದು 'ನಾಟಕ ರತ್ನ'ರಾಗಿ ಮೆರೆದು ಇಂದಿಗೂ ನಮ್ಮ ರಂಗಭೂಮಿಯ ಹಿರಿಮೆಯ ಕುರುಹಾಗಿ ನಿಂದಿರುವ ಅಂತಹವರ ಜೀವನ ಚರಿತೆಗೆ ನನ್ನಂಥವರ ಮುನ್ನುಡಿ ಅನವಶ್ಯಕ. ಆದರೆ ಇದು ನನಗೆ ಗೌರವ ತರುವ ಮಾತು. ವೀರಣ್ಣನವರ ರಂಗಕಲೆ ಹಾಗೂ ಮಾನವೀಯತೆಯ ಬಗೆಗೆ ನನಗಿರುವ ಅಪಾರವಾದ ಗೌರವವನ್ನು ಮುಂದಿನ ಎರಡು ಮಾತುಗಳಲ್ಲಿ ಮೂಡಿಸುತ್ತಿದ್ದೇನೆ.

ಕನ್ನಡ ನಾಡಿಗೆ ವೀರಣ್ಣನವರು ನಿತ್ಯ ಪರಿಚಿತರು. ಸುಮಾರು ಐವತ್ತು ವರುಷಗಳ ಕಾಲ ಅವರ ರಂಗಕಲೆಯನ್ನು ಕನ್ನಡಿಗರು ಸವಿದಿದ್ದಾರೆ. ವರದಾಚಾರ್ಯರ ನಂತರ, ಕನ್ನಡ ರಂಗಭೂಮಿ ಎಂದರೆ ವೀರಣ್ಣನವರು –ವೀರಣ್ಣ ಎಂದರೆ ಕನ್ನಡ ನಾಟಕ ಎನಿಸಿ ಹೋಗಿತ್ತು. ತೀರ ಕೊಂಪೆಗಳೆನ್ನಿಸಿಕೊಳ್ಳುವ ಹಳ್ಳಿಗಳಿಗೆ ಕೂಡ ತಮ್ಮ ಮಂಡಳಿಯನ್ನು ಒಯ್ದು ನಾಟಕಗಳನ್ನಾಡಿದ ಕೀರ್ತಿ ಅವರಿಗಿದೆ. ಇನ್ನು. ದಕ್ಷಿಣ ಭಾರತದಲ್ಲಿಯೂ ಅವರ ಪರಿಚಯ ಕಡಮೆಯದಲ್ಲ. ನಾಲ್ಕಾರು ಬಾರಿ ಆಂಧ್ರ, ತಮಿಳು ನಾಡುಗಳಲ್ಲಿ ಪ್ರವಾಸ ಮಾಡಿ, ಕನ್ನಡ ವೃತ್ತಿರಂಗದ ಹಿರಿಮೆಯನ್ನು ಮೆರೆದವರು ವೀರಣ್ಣನವರು. "ಕರ್ಣಾಟಕಾಂದ್ರ ನಾಟಕ ಸಾರ್ವಭೌಮ'ರೆಂಬ ಪ್ರಶಸ್ತಿಯನ್ನು ತೆಲುಗು ಬಾಂಧವರಿಂದಲೇ ಪಡೆದವರು. ವರದಾಚಾರ್ಯರ ನಂತರ ಮತ್ತೊಂದು ಹೆಸರು ದಕ್ಷಿಣ ಭಾರತದಲ್ಲಿ ನಿಂತುದು ವೀರಣ್ಣನವರದು. ಅವರಿಂದಾಗಿ ಕನ್ನಡ ನಾಟಕ ದಕ್ಷಿಣ ಭಾರತದಲ್ಲಿ ಗೌರವ ಪಡೆಯಿತು. ಅಲ್ಲಿನ ಪ್ರಾದೇಶಿಕ ವೃತ್ತಿ ರಂಗಗಳನ್ನು ರೂಪಿಸುವುದರಲ್ಲಿ ಅದು ದೊಡ್ಡ ಪಾತ್ರವಹಿಸಿತೆಂದು, ಮುಂದೆ ಅಲ್ಲಿನ ತಜ್ಞರೇ ಒಪ್ಪಿ ಬರೆದರು. ಆದರೂ, ಭಾರತೀಯ ರಂಗಭೂಮಿಯ ಬಗೆಗೆ ವಿಚಾರ ಮಾಡಿ ಇಂಗ್ಲಿಷ್‌ನಲ್ಲಿ ಪುಸ್ತಕಗಳನ್ನು ಬರೆದವರಿಗೆ ಕನ್ನಡ ರಂಗಭೂಮಿಯ ಬೆಳಕು ಕಾಣದೇ ಹೋದುದು ಆಶ್ಚರ್ಯದ ಮಾತು. ಆದರೆ ಒಂದು ಮುಖ್ಯಕಾರಣವೆಂದರೆ, ನಮ್ಮ ನಾಟಕ ಹಾಗೂ ನಮ್ಮ ರಂಗಭೂಮಿಯ ಬಗೆಗೆ ಇತ್ತೀಚಿನವರೆಗೂ ನಾವು ಏನೊಂದು ಹೇಳಿಕೊಳ್ಳದೆ ಕುಳಿತುದು. ಹೀಗಾಗಿ, ಯಾಜ್ಞಿಕ್, ಮುಲ್ಕ್‌ರಾಜ್ ಆನಂದ್, ದಾಸ್‌ಗುಪ್ತ ಮೊದಲಾದ ಸಂಶೋಧಕರು ತಮ್ಮ ಪುಸ್ತಕಗಳಲ್ಲಿ ಕನ್ನಡ ರಂಗಭೂಮಿಯ ಬಗೆಗೆ ಚಕಾರವನ್ನೂ ಎತ್ತಲಿಲ್ಲ. ಎತ್ತಿದರೂ ಅಪಸ್ವರ! ಆಧುನಿಕ ಸಂಶೋಧನೆಯಾದರೂ ನೋಟಕ್ಕಿಂತ ಓದನ್ನು ಅವಲಂಬಿಸಿ ಕುಳಿತುದು ತಾನೆ! ಅದರಿಂದಾಗಿ, ಹೊರಗಿನ ಸಂಶೋಧಕರಿಗೆ ನಮ್ಮ ರಂಗಭೂಮಿ, ನಮ್ಮ ನಟರು, ಹಾಗೂ ನಮ್ಮ ನಾಟಕಗಳ ಬಗೆಗೆ ಏನೂ ಸಾಹಿತ್ಯ ಸಿಕ್ಕದಿದ್ದುದರಿಂದ, ಅವರ ಪುಸ್ತಕಗಳಲ್ಲಿ ಕನ್ನಡ ರಂಗಭೂಮಿಯ ವಿಚಾರ ಬರಲಿಲ್ಲ. ಅವರೇನೂ ಬರೆಯದಿದ್ದುದರಿಂದಾಗಿ ಭಾರತೀಯ ಪ್ರಾದೇಶಿಕ ರಂಗಭೂಮಿಗಳ ಕಕ್ಷೆಯಲ್ಲಿ ನಮ್ಮ ರಂಗ ನಿಲ್ಲಲಿಲ್ಲ. ಸದ್ಯ ಇದೀಗ ಕನ್ನಡ ರಂಗಭೂಮಿಯ ಪುಣ್ಯ! ಹಿಂದೆ ಅದರ ಏಳಿಗೆಗಾಗಿ ಪಣತೊಟ್ಟು ನಿಂತಿದ್ದ 'ರಂಗಭೂಮಿ' 'ಕಲಾ' ಹಾಗೂ

`Theatre' ಪತ್ರಿಕೆಗಳು ನಿಂತ ಮೂವತ್ತು ಮೂವತ್ತೈದು ವರುಷಗಳನಂತರ, ಈಗ, 'ಸುಧಾ' ಪತ್ರಿಕೆ ತನ್ನ ಮೊದಲ ಸಂಚಿಕೆಯಿಂದಲೂ ಕೆಲವು ಪುಟಗಳನ್ನು ಕನ್ನಡ ರಂಗ ಭೂಮಿಯ ಸಲುವಾಗಿ ಮೀಸಲಿಟ್ಟು, ರಂಗಕ್ಕೆ ಧುಮಕಿ ದುಡಿದವರ ಅನುಭವಗಳನ್ನು ಬರೆಯಿಸಿ ಪ್ರಕಟಿಸ ತೊಡಗಿದಮೇಲೆ, ಪಾಶ್ಚಾತ್ಯರಂಗದ ಉಪಾಸಕರಾದ ಆಧುನಿಕರು 'ಓಹೋ ನಮ್ಮಲ್ಲಿಯೂ ಪ್ರಭಾವಶಾಲಿಯಾದ ರಂಗಮಂಟಪವಿತ್ತು. ಕಲೆಯಲ್ಲಿ ಎಂತಹ ಪಾಶ್ಚಾತ್ಯನಿಗೂ ಕಡಿಮೆ ಇಲ್ಲ ನಟರಿದ್ದರು' ಎಂದು ಕಣ್ಣು ಬಿಡುವಂತಾಯಿತು.

ರಂಗದಲ್ಲಿ ಸ್ವತಃ ದುಡಿದವರ ಲೆಕ್ಕಣಿಯಿಂದ ಮೂಡಿ ಬಂದ 'ಅನುಭವ ಸಾಹಿತ್ಯ'ಕ್ಕೆ ಇರುವ ಶಕ್ತಿ ದೊಡ್ಡದು. ವೀರಣ್ಣನವರ ರಂಗಾನುಭವವೇ ಇಂದು ಪುಸ್ತಕ ರೂಪದಲ್ಲಿ ಬರುತ್ತಿದೆ. ಹೀಗೆಯೇ ಮೊನ್ನೆ ತಾನೆ ಕನ್ನಡದ ಮತ್ತೊಬ್ಬ ಹಿರಿಯ ಕಲಾವಿದರಾದ ಮುಂಡಾಜೆ ರಂಗನಾಥ ಭಟ್ಟರು ವೃತ್ತಿ ರಂಗಭೂಮಿಯ ತಮ್ಮ ಅನುಭವಗಳನ್ನು ಬರೆದು 'ಕಲಾರಾಧನೆ' ಎಂದು ಹೆಸರಿಟ್ಟು ಪುಸ್ತಕವಾಗಿ ಪ್ರಕಟಿಸಿದರು. ಕನ್ನಡ ರಂಗಭೂಮಿ ನಡೆದು ಬಂದ ದಾರಿಯನ್ನು ತೋರುವ ದೀಪಗಳು ಇವು. ಇವುಗಳಿಂದಾಗಿ, ಕನ್ನಡ ನಾಡಿನ ವೃತ್ತಿ ರಂಗಭೂಮಿಗೆ ಉಪಕಾರವಾಗಿದೆ. ಅದರ ಬಗೆಗಿದ್ದ ಒಂದು ಕೊರತೆ ಸ್ವಲ್ಪ ತುಂಬಿ ಬಂದಂತಾಗಿದೆ. ಇನ್ನು ಇವು ಆದಷ್ಟು ಬೇಗ ಭಾರತೀಯ ಭಾಷೆಗಳಿಗೆ ಹಾಗೂ ಇಂಗ್ಲಿಷಿಗೆ ಪರಿವರ್ತನೆಗೊಳ್ಳಬೇಕಾಗಿದೆ. ಕಥೆಗಿಂತ ರಮ್ಯವಾದ ಇಲ್ಲಿನ ಕಟು ಸತ್ಯ, ಮನಸ್ಸನ್ನು ಹಿಡಿದಿಟ್ಟು ಕೈಗೆತ್ತಿಕೊಂಡ ಪುಸ್ತಕವನ್ನು ಓದಿಮುಗಿಸುವವರೆಗೂ ಕೆಳಗಿಡದಂತೆ ಮಾಡುತ್ತದೆ. ಓದುಗನನ್ನೂ ರಂಗದ ಲೋಕಕ್ಕೆ ಒಯ್ದು, ಒಂದೇ ನೋಟಕ್ಕೆ ನೂರು ನಾಟಕಗಳನ್ನು ತೋರುತ್ತದೆ. ಇಲ್ಲಿನ ಸತ್ಯದರ್ಶನ ವಿವೇಕ ವಿನೋದಗಳು ನವರತ್ನ ರಾಮರಾವ್, ವಾಸುದೇವಾಚಾರ್ಯ, ಅನಂತಕೃಷ್ಣಶರ್ಮರು ರಚಿಸಿ ಕನ್ನಡಕ್ಕೆ ತಿಲಕವಿಟ್ಟ ಅನುಭವ ಸಾಹಿತ್ಯದಂತೆ ಹೊಳೆ ಹೊಳೆಯುತ್ತವೆ. ಎಲ್ಲರಿಗೂ ರುಚಿಯೆನಿಸುವ ಶೀಲ ಸಾಹಿತ್ಯ ಇದು. ಕನ್ನಡ ರಂಗಭೂಮಿಯ ಸತ್ಯದರ್ಶನ.

ಶ್ರೀ ವೀರಣ್ಣನವರು ಹುಟ್ಟು ನಟರು; ಸಮರ್ಥರಾದ ನಿರ್ದೇಶಕರು; ಧೀಮಂತ ನಿರ್ಮಾತೃಗಳು. ತಮ್ಮ ತುಂಬುವಯಸ್ಸಿನಲ್ಲಿ ಕೂಡ, ನಾಲ್ಕು ವರ್ಷಗಳ ಹಿಂದೆ ನೆರೆ ಹಾವಳಿಯ ಸಂತ್ರಸ್ತರ ನೆರವಿಗೆಂದು ಏರ್ಪಡಿಸಿದ ಚಿತ್ರಕಲಾವಿದರ ವಿನೋದ ವಿನೋದಾವಳಿಯಲ್ಲಿ ವೀರಣ್ಣನವರೂ ಜಯಮ್ಮನವರೂ 'ಗುಲೇಬಕಾವಲಿ' ನಾಟಕದ ಎರಡು ದೃಶ್ಯಗಳನ್ನು ಪ್ರದರ್ಶಿಸಿದರು. ಅಂದು ಅವರಿಗೆ ಪ್ರೇಕ್ಷಕರಿಂದ ದೊರೆತ ಅತ್ಯದ್ಭುತವಾದ ಹರ್ಷೋದ್ಗಾರ, ಅಂತಹ ಹಿಂದಿನ ನಾಟಕಕ್ಕೆ, ಅಂತಹ ಹಿಂದಿನ ರೀತಿಯ ಅಭಿನಯಕ್ಕೆ ಇಂದೂ ರುಚಿ ಇದೆ ಎಂದು ತೋರಿತು. ಅದರ ಮುಂದೆ ಇಂದಿನ 'ಬುದ್ಧಿಯ ನಾಟಕ' ನಿಲ್ಲಲಾರದೆ ನೆಲಕ್ಕುರುಳಿದ ಕಾರಣ ಹೊಳೆಯಿತು. ನಾನು ವೀರಣ್ಣ ನವರನ್ನು ಮೊದಲು ರಂಗದಮೇಲೆ ಕಂಡುದು ಸುಮಾರು ಇಪ್ಪತ್ತೈದು ವರುಷಗಳ ಹಿಂದೆ, ಚಿತ್ರದುರ್ಗದಲ್ಲಿ. ಅಂದಿನಿಂದ ಇಂದಿನವರೆಗೂ ಅವರ ನಾಟಕಗಳನ್ನು ನೋಡುತ್ತ ಬಂದಿದ್ದೇನೆ. ಪ್ರೇಕ್ಷಕರ ಕಣ್ಣು ಕಿವಿಗಳಿಗೆ ಹಬ್ಬ ಮಾಡುವ ಪಣ ಅವರದು ಹೀಗೆಂದ ಮಾತ್ರಕ್ಕೆ ಅಲ್ಲಿ ಬುದ್ಧಿಯ

ಮಾತಿಗೆ ಬರಗಾಲವೆಂದಲ್ಲ. ಆದರೆ ಕಣ್ಣು ಕಿವಿಗಳನ್ನು ಮೊದಲು ದೃಶ್ಯಾವಳಿಗಳಿಂದ ಅಭಿನಯದಿಂದ, ಸಂಗೀತದಿಂದ ತುಂಬಿ, ನಂತರ ಒಳಗಣ್ಣು ತೆರೆಯಿಸುವ ನೀತಿ ಅದು. ಅದರಿಂದಲೇ ಅಂದಿನ ಅವರ ನಾಟಕಕ್ಕೆ ಅಂತಹ ಆಕರ್ಷಣೆ : ಕಲಿತವನಿಗೂ ಕಲಿಯದಿದ್ದವನೀಗೂ, ಹೆಣ್ಣಿಗೂ, ಗಂಡಿಗೂ ಮಗುವಿಗೂ ಅವರ ನಾಟಕವೆಂದರೆ ಒಂದು ಹಬ್ಬ. ಕಣ್ಣಿದ್ದಂತೆ ಕಲಿಕೆ ಅಲ್ಲಿ !

ಅಂತೂ, ಈಗ ಆರುವರ್ಷಗಳ ಕೆಳಗೆ ನಾನು ಬೆಂಗಳೂರು ಆಕಾಶವಾಣಿಯ ನಾಟಕ ವಿಭಾಗದ ನಿರ್ದೇಶಕನಾಗಿ ಬಂದನಂತರ, ವೀರಣ್ಣನವರ ಪರಿಚಯ ನಿಕಟವಾಯಿತು. ಅವರ ಸಂಸ್ಥೆಯ ಕಲಾವಿದರ ಸ್ನೇಹಫಲ ದೊರೆತಿತು. ಅವರೆಲ್ಲರ ಬಳಿ ನಿಂತು ನೋಡಿ ಆಡಿದಾಗಲೇ ವೀರಣ್ಣನವರ ಬಗೆಗೆ ನನಗೆ ಮೊದಲಿನಿಂದ ಇದ್ದ ಗೌರವ ನೂರು ಮಡಿ ಬೆಳೆದುದು! ಇಹವನ್ನು ವೈಭವದಿಂದ ಆಳಿದಂತೆ ಪರವನ್ನೂ ಗಳಿಸಿ ಆಳಲು ಪ್ರಾಮಾಣಿಕವಾದ ಶ್ರದ್ಧೆಯುಳ್ಳವರು ವೀರಣ್ಣನವರು. ಸತ್ಯವಾದಿಗಳು; ನೇರವಾದ ಮಾತಿನವರು. ಮೈ ಒಗ್ಗದಾಗಲೂ, ಕೈ ಸಾಗದಾಗಲೂ ಸುಮ್ಮನೆ ಕುಳ್ಳಿರಲಾರದವರು. ಅವರ ಛಲ ದೊಡ್ಡದು; ಅದರಿಂದಾಗಿ ಅವರ ಅನುಭವವೂ ದೊಡ್ಡದು. ಅಷ್ಟೇ ದೊಡ್ಡದು ಅವರ ನಮ್ರತೆ. 'ಶಿವನ ಸಂಸಾರ'ವನ್ನು ಕಟ್ಟಿಕೊಂಡು, ಅಡಿಗಡಿಗೂ ಪಡಬಾರದ ಪಾಡು ಪಟ್ಟರೂ ತೊಟ್ಟ ಹಟ ಬಿಡದೆ, ಸಂಸ್ಥೆಯನ್ನು ವಿಜಯದಿಂದ ವಿಜಯಕ್ಕೆ ನುಗ್ಗಿಸಿಕೊಂಡು ಹೋಗುವಲ್ಲಿ ಅವರ ಆ ನಮ್ರತೆ ದೊಡ್ಡಪಾತ್ರವನ್ನು ವಹಿಸಿತು. ಆದರೂ ಇಂತಹ ಸಂಗ್ರಾಮದ ಬಾಳಿನಲ್ಲಿ ನೂರು ಜನಕ್ಕೆ ಒಳ್ಳೆಯದನ್ನು ಮಾಡುವಾಗ ಹತ್ತು ಜನಕ್ಕೆ ಸ್ವಲ್ಪ ಕೆಟ್ಟದೂ ಆದೀತೇನೋ! ಅಲ್ಲದೆ, ನಾಟಕ ಸಂಸ್ಥೆಯನ್ನು ನಡೆಸುವಂತಹವನಿಗೆ ನೂರು ಕಣ್ಣುಗಳಿರಬೇಕು, ಹತ್ತು ಕಿವಿಗಳಿರಬೇಕು, ಎರಡಾದರೂ ನಾಲಿಗೆ ಬೇಕೆಬೇಕು. ರಂಗದ ಆ ರಾಜ್ಯದಲ್ಲಿ ಅವೆಲ್ಲ ಅವಶ್ಯಕ. ವೀರಣ್ಣನವರು ಆ ರಾಜ್ಯವನ್ನು ಚಕ್ರವರ್ತಿಯಂತೆ ಆಳಿದವರು, ಎಂದಮೇಲೆ, ತನಗೆ ಒಗ್ಗದಿದ್ದರೂ, ಅದನ್ನೇಲ್ಲಾ ಇಟ್ಟುಕೊಳ್ಳದಿದ್ದರೆ ಆಗುತ್ತದೆಯೇ? ಆದರೂ ಆತ ಹುಟ್ಟು ದಯಾವಂತ, ಕರುಣಿ, ನಮ್ರ. ಅವರು ಕೊಟ್ಟುದು ಕಡಿಮೆಯಲ್ಲವಾದರೂ ಕಾಣದಂತಹುದು. ತಮ್ಮ ಸಂಸ್ಥೆಯ ಕಲಾವಿದರ ಮದುವೆ, ಮಕ್ಕಳ ಮುಂಜಿ, ಸಾಲ ಸೋಲ ತೀರಿಸಲು ಹಣ! ಒಂದೆ–ಎರಡೆ? ಒಬ್ಬರಿಗೆ– ಇಬ್ಬರಿಗೆ? ಇನ್ನೆಲ್ಲ ಮರೆತರೂ ಅವರಂತೆ, ರಂಗದ ಬಳಗಕ್ಕಲ್ಲ ಅನುದಿನವೂ ತುಪ್ಪ ಮೊಸರಿನ ಊಟ ಹಾಕಿ. ತಿಂಗಳಾಗುವಲ್ಲಿ ಕರಾರುವಕ್ಕಾಗಿ ಸಂಬಳ ಕೊಟ್ಟ ಶಕ್ತಿವಂತ ಯಾರು ಎಂದು ಹುಡುಕಿ ನೋಡಬೇಕಾಗುತ್ತದೆ. ಅದೂ ಹತ್ತಿಪ್ಪತ್ತೆ? ನೂರಾರು ಮಂದಿಗೆ ತಲಾ, ಐವತ್ತರಿಂದ ಮುನ್ನೂರ ಐವತ್ತರವರೆಗೆ!

ನಿಜ, ವೀರಣ್ಣನವರು ಹಾಗೆ ಗಳಿಸಿಯೂ ಗಳಿಸಿದರು. ಆದರೆ, ನೂರು ಹಾಕದೆ ಸಾವಿರ ಬಂದೀತೆ? ಸಾವಿರ ಸುರಿದರೂ, ಸಂಸ್ಥೆಗೆ ಕಲೆಯ ಸತ್ವವಿಲ್ಲದಿದ್ದರೆ ಸಾಗುತ್ತಿತ್ತೇ? ಲಕ್ಷಾಂತರ ಜನ ನಾನು ಮುಂದು ತಾನು ಮುಂದು ಎಂದು ಬಂದು ದುಡ್ಡು ಕೊಟ್ಟು ಅವರ ನಾಟಕಗಳನ್ನು ನೋಡಿದ್ದಾರೆ. ಅವರಲ್ಲಿ ಒಬ್ಬನಾದರೂ 'ಅಯ್ಯೋ ನಾನು ಕೊಟ್ಟ ದುಡ್ಡ ವ್ಯರ್ಥವಾಯಿತು' ಎಂದುಕೊಳ್ಳಲು ವೀರಣ್ಣನವರು ಎಂದೂ ಅವಕಾಶಕೊಡಲಿಲ್ಲ.

ಆತ ಕೊಟ್ಟ ದುಡ್ಡಿಗೆ ಪ್ರತಿಫಲವಾಗಿ ಅವರು ಕೊಟ್ಟ ಆನಂದ ಜೀವನ ಪರ್ಯಂತ ಮರೆಯದಂತಹುದು. ಜನತೆಯೇ ಅವರ ಜನಾರ್ಧನ. ನಿಜವಾಗಿ ಅರಮನೆ-ಗುರುಮನೆಗಳಿಗಿಂತ ಹೆಚ್ಚಾಗಿ, ಜನತೆ ಅವರನ್ನು ಎತ್ತಿ ಮೆರೆಯಿಸಿತು. ಅಂತಹ ಜನತೆಗೆ ಅವರೆಂದೂ ಅನ್ಯಾಯಮಾಡಲಿಲ್ಲ. ಸಾಲ ಮಾಡಿಯಾದರೂ, ಮೂವತ್ತು ನಲವತ್ತು ಸಾವಿರ ರೂಪಾಯಿಗಳನ್ನು ಕೃಷ್ಣಲೀಲೆ, ಕುರುಕ್ಷೇತ್ರ, ದಶಾವತಾರ ಮೊದಲಾದ ರಂಗ ನಾಟಕಗಳ ಸಜ್ಜಿಕೆ ಸಿದ್ಧತೆಗಳಿಗಾಗಿ ಸುರಿದರು. ಗುಣ ಕಂಡಕಡೆ ಮುಂದಾಗಿ ಹೋಗಿ ಕೈ ಮುಗಿದು ಕರೆತಂದು ನಾಡು ಹೆಮ್ಮೆಪಡುವಂತಹ ಕಲಾಬಳಗನ್ನು ಕಟ್ಟಿದರು. ಬೆಳ್ಳಾವೆ, ತೋರಣಗಲ್ ಪುಟ್ಟಸ್ವಾಮಯ್ಯನವರಿಂದ ನಾಟಕಗಳನ್ನು ಬರೆಯಿಸಿದರು. ಬೇರೆ ವೃತ್ತಿ ಸಂಸ್ಥೆಗಳು ಕರಬುವಂತಹ ವಾದ್ಯಮೇಳವನ್ನು ಕೂಡಿಸಿದರು. ಸ್ಪೆಷಲ್ ರೈಲುಗಳಲ್ಲಿ ತಮ್ಮ ಸಂಸ್ಥೆಯನ್ನು ಊರಿಂದ ಊರಿಗೆ ಸಾಗಿಸಿದರು. ರಂಗಭೂಮಿ ನಿಜವಾಗಿ ಬೆಳಗಬೇಕಾದರೆ, ಓದದವನ ವಿದ್ಯಾಲಯವಾಗಬೇಕಾದರೆ, ಅದು ಎಲ್ಲ ಲಲಿತ ಕಲೆಗಳ ಸಂಗಮಕ್ಷೇತ್ರವೇ ಆಗಬೇಕೆಂದು ನೆರೆನಂಬಿ, ಸಾಹಿತ್ಯ, ಸಂಗೀತ, ನೃತ್ಯ, ದೃಶ್ಯಲಕ್ಷಣ ಪಾತ್ರ ವೈವಿಧ್ಯ ವೈಶಿಷ್ಟ್ಯಗಳಿಗೆ ತಮ್ಮ ನಾಟಕಗಳಲ್ಲಿ ಹದವರಿತು ಸ್ಥಳವಿತ್ತರು. ಅದರಿಂದಾಗಿ ಅವರ ನಾಟಕ, ಭಿನ್ನರುಚಿಯ ಜನರಿಗೆ ಏಕ ಸಮಾರಾಧನೆಯಾಯಿತು. ಅದು 'ಟೋಟಲ್ ಥಿಯೇಟರ್!' ಇಂದಿನವರು ಆಡುವ ಮಾತನ್ನು ಮಾಡಿತೋರಿದ ಪವಾಡ ವೀರಣ್ಣನವರು ಇಂತು, ಹುಟ್ಟು ನಟನಾದ ಒಬ್ಬ ಧೀಮಂತನಿಗೆ ಇಂತಹ ಅರಿವು ತೀಡಿ ಬಂದಮೇಲೆ ಕನ್ನಡ ರಂಗಕ್ಕೆ ಕೋಡು ಮೂಡಿದಂತಾಯಿತು. ಮೈಸೂರು ರಂಗಭೂಮಿಯ ಈ ನಲವತ್ತು ವರುಷಗಳ ಇತಿಹಾಸ, ಗುಬ್ಬಿಸಂಸ್ಥೆಯ ಇತಿಹಾಸವೇ ಆಯಿತು; ವೀರಣ್ಣನವರ ಆತ್ಮವೃತ್ತವೇ ಆಯಿತು.

"ನಾನೇನೂ ಅರಿಯದವರ-ಹುಂಬ" ಎಂದು ವೀರಣ್ಣನವರು ಹತ್ತಾರು ಬಾರಿ ಬೇರೆ ಬೇರೆ ಸಂದರ್ಭಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ, ಮಿತ್ರ ಕೂಟಗಳಲ್ಲಿ ಹೇಳಿದುದನ್ನು ಕೇಳಿದ್ದೇನೆ. ಮೊದಮೊದಲು, ಅದು ಅವರ ಶ್ರೀಮಂತ ನಮ್ರತೆಯ ಪಡಿನುಡಿ ಎಂದು ನಿಜವಾಗಿ ನಂಬಿಕೆ ಹುಟ್ಟಲಿಲ್ಲ. "ಏನೋ ದೇವರು ನಡೆಸಿದ, ನಡೆದುಹೋಯಿತು" ಎಂದು ಹಲವಾರು ಬಾರಿ ಹೇಳಿದಾಗ, ಇದೂ ಅಹಂಭಾವದ ಒಂದು ಮುಖವೇನೋ ಎಂದೂ ಯೋಚಿಸಿದುದುಂಟು. ಆದರೆ ಅವರ ನಡೆನುಡಿಯನ್ನು ಮತ್ತೆ ಮತ್ತೆ ನೋಡಿದ ಮೇಲೆ ನನ್ನ ಭಾವನೆಯನ್ನು ತಿದ್ದಿಕೊಳ್ಳಲೇಬೇಕಾಯಿತು. ಕಾಲೇಜಿನಲ್ಲಿ ಕುಳಿತು ಓದದಿದ್ದರೇನಾಯಿತು? ಅವರ ಆ ಸಂಸ್ಕೃತಿ, ವಿನಯ, ಸಮಯಪ್ರಜ್ಞೆ ಇವು ಓದಿ ಬರುವಂಥವಲ್ಲ! ಅಂಥ ಆ ಆಸ್ತಿಯನ್ನು ಅನುದಿನವೂ ಬಳಸಿ ಬಳಸಿ ಬೆಳೆಯಿಸಿಕೊಳ್ಳುತ್ತಿರುವ ವೀರಣ್ಣನವರು ಧನ್ಯರೆನಿಸುತ್ತಾರೆ. ಕಾಲೇಜು ವಿದ್ಯೆಯ ಎದುರಿಗೆ ಶ್ರೀಮಂತಿಕೆಯ ಎದುರಿಗೆ, ಅಧಿಕಾರ-ಅಹಂಕಾರಗಳ ಎದುರಿಗೆ, ಕಡೆಗೆ ಕಾಲಿಟ್ಟವನಿಗೇ ಎರಡು ಬಗೆಯುವ ಕುಟಿಲತೆಯ ಎದುರಿಗೆ ಕೂಡ. ವೀರಣ್ಣನವರ ವಿನಯ ವಿಜಯಭೇರಿ ಹೊಡೆದಿದೆ. ಎಂದೇ ಅವರು ಬೆಟ್ಟದಂತಹ ಅಡಚಣೆಗಳನ್ನು ಗಾಳಿಯಂತೆ ಏರಿ ಹೋಗಲು ಸಾಧ್ಯವಾಯಿತು. ಎಂದೇ ಅವರು, ಕನ್ನಡ ನಾಟ್ಯ ರಂಗದಲ್ಲಿ, ಚಲನಚಿತ್ರ ವ್ಯವಸಾಯದಲ್ಲಿ,

ದಕ್ಷಿಣ ದಿಗ್ವಿಜಯದಲ್ಲಿ ಮೊದಲಿಗರೆನಿಸಿ, ಅರಮನೆ–ಗುರುಮನೆಗಳಿಂದ ಸನ್ಮಾನಗೊಂಡರು. ರಾಜ್ಯಪ್ರಶಸ್ತಿ, ರಾಷ್ಟ್ರಪ್ರಶಸ್ತಿಗಳನ್ನು ಗಳಿಸಿದ ಕನ್ನಡ ವೃತ್ತಿ ರಂಗಭೂಮಿಯ ಪ್ರವರ್ತಕರಲ್ಲಿ ಮೊದಲಿಗರಾದರು. ಅದೆಂತಹ ಸನ್ಮಾನ, ಪ್ರಶಸ್ತಿಗಳು ಅಲಂಕರಿಸಿ ಬಂದಾಗಲೂ ಅವರ ವಿನಯ ಅವರನ್ನು ಬಿಡಲಿಲ್ಲ. ಹತ್ತು ಮಂದಿ ಪದವೀಧರರಿಗೆ, ನೂರು ಮಂದಿ ವಿಮರ್ಶಕರಿಗೆ ನಿಲುಕದ ಸಚಿವ ಬುದ್ಧಿಯ ಶ್ರೀಮಂತಿಕೆ ಕರಗಲಿಲ್ಲ. ಅಂಥ ಸಂಸ್ಕೃತಿಯಿಂದಾಗಿಯೇ ಅವರು ಮುಟ್ಟಿದುದೆಲ್ಲ ಚಿನ್ನವಾಯಿತು. ಮಾಡಿಕೊಂಡ ಚಿನ್ನವನ್ನು ಹತ್ತೂ ಮಂದಿಯಲ್ಲಿ ಹಂಚಿಯೂ ಹಂಚಿದರು. ಹೀಗೆ, ಜನತೆಗೆ ರಂಗದ ಮೂಲಕ ಅವರು ಕೊಟ್ಟ ಮಹದಾನಂದವೂ, ನೂರಾರು ಮಂದಿಯನ್ನು ಹತ್ತಾರುಕಾಲ ಸಾಕಿ ಸಲುಹಿದ ಪುಣ್ಯವೂ ಅವರ ಪಾಲಿಗಿದೆ. ಅದರ ಬಲದಿಂದಲೇ, ತಮ್ಮ ಜೀವನ ಸಂಧ್ಯೆಯಲ್ಲಿ ಎರಗಿ ಬಂದ ಆಘಾತಗಳಿಗೂ ಎದೆಕೊಟ್ಟು ಭೀಷ್ಮರಂತೆ, ತಮ್ಮೆಲ್ಲ ನೋವನ್ನು ನುಂಗಿಕೊಂಡು ನಿಂತಿದ್ದಾರೆ ವೀರಣ್ಣನವರು.

ಇಂತಹ 'ರಂಗಭೀಷ್ಮ'ರನ್ನು ಇನ್ನಾವ ಭೀತಿ ತಾನೆ ಮುಟ್ಟೀತು? ಎಂದೇ ಅವರು ತಮ್ಮ ಜೀವನದಲ್ಲಿಯೂ, ತಮ್ಮ ಈ ಸಾಹಿತ್ಯದಲ್ಲಿಯೂ ಪಾರದರ್ಶಕದಂತೆಯೇ ಇದ್ದಾರೆ. ಆದರೂ ಪುಸ್ತಕದ ಕೆಲವು ಪುಟಗಳಲ್ಲಿ ಯಾವುದೋ ಸಂಕೋಚ ತಲೆದೋರಿ, ಅವರ ಲೆಕ್ಕಣಿಯನ್ನು ಅಲ್ಲಲ್ಲಿ ತಡೆದಿಟ್ಟು ಬಿಟ್ಟಿದೆಯೆಂಬ ಭಾವನೆ ಬರುತ್ತದೆ. ಕೆಲವೊಂದು ಸಂಗತಿಗಳನ್ನು ಹೇಳಬಹುದೋ, ಬೇಡವೋ ಎಂಬ ಹೊಯ್ದಾಟದ ಹೊಳಹು ಎದ್ದೆದ್ದು ತೋರಿಕೊಳ್ಳುತ್ತದೆ. ಈ ಎಲ್ಲ ಸಂದೇಹ, ಸಂಕೋಚಗಳನ್ನು ಮೂಲೆಗೊತ್ತಿ ಅವರ ಮತ್ತೊಂದು ಪುಸ್ತಕವನ್ನು ಬರೆಯಬೇಕು. ಅದರಲ್ಲಿ ತಮ್ಮ ಕಾಲದ ಕಲಾವಿದರ ಬಗೆಗೆ, ತಮ್ಮೊಡನೆ ಸೆಣಸಾಡುತ್ತಿದ್ದ ಇತರ ವೃತ್ತಿ ಸಂಸ್ಥೆಗಳ ಬಗೆಗೆ. ನಾಟಕಕಾರರ ಬಗೆಗೆ, ತಾವು ಹೂಡಿದ. ಹೂಡಿ ಗೆದ್ದ ಅಥವಾ ಸೋತ ಸಂಘರ್ಷಗಳ ಬಗೆಗೆ ಇನ್ನೂ ನಿಚ್ಚಳವಾದ ಚಿತ್ರ ಮೂಡಿಬರಬೇಕು. ಎಂತಹ ಕಹಿ ಸಂಗತಿಯನ್ನು ಬರೆಯಬೇಕಾದರೂ, ವೀರಣ್ಣನವರಂತಹ ಸುಸಂಸ್ಕೃತರಿಗೆ ಸಾಹಿತ್ಯ ಶೀಲ ಒದಗಿ ಬಂದೇ ಬರುತ್ತದೆ. ಅದರಿಂದಾಗಿ ಅವರಿಂದ ಅಂತಹ ಮತ್ತೊದು ಪುಸ್ತಕ ಬರಬೇಕು. 'ಕಲೆಯೇ ಕಾಯಕ' ಓದುಗರಿಗೆ ರಂಜಕವಾಗಿ, ಅಭ್ಯಾಸಿಗಳಿಗೆ ಸಾಹಿತ್ಯವಾಗಿ, ವ್ಯವಸಾಯಿಗಳಿಗೆ ಮಾರ್ಗದರ್ಶಕವಾಗಲಿ. ಇನ್ನುಳಿದ ಅನೇಕ ಕನ್ನಡ ಕಲಾವಿದರಿಗೆ ನಾಟಕಕಾರರಿಗೆ ತಂತಮ್ಮ ಆತ್ಮವೃತ್ತಗಳನ್ನು ಬರೆಯುವ ಸ್ಫೂರ್ತಿಯನ್ನು ವೀರಣ್ಣನವರ ಈ ಆತ್ಮವೃತ್ತ ಕೊಡಲಿ ಎಂದು ಹಾರೈಸುತ್ತಿದ್ದೇನೆ.

ನವದೆಹಲಿ **–ಎಚ್. ಕೆ. ರಂಗನಾಥ**

ನನ್ನ ನಾಲ್ಕು ನುಡಿಗಳು
(ಪ್ರಥಮ ಮುದ್ರಣ)

ನಾನು ನನ್ನ ಜೀವನ ಚರಿತ್ರೆಯನ್ನು ಬರೆಯಬೇಕೆಂಬ ಅಭಿಲಾಷೆಯು ಸುಮಾರು ಹತ್ತು ಹನ್ನೆರಡು ವರುಷಗಳಿಂದಲೂ ಮನಸ್ಸಿನಲ್ಲಿಯೇ ತೊಳಲಾಡುತ್ತಿತ್ತು.

೧೯೫೫ ನೇ ಇಸವಿ ಜೂನ್ ಮಾಹೆಯಲ್ಲಿ 'ದಶಾವತಾರ' ನಾಟಕವನ್ನು ಪ್ರದರ್ಶಿಸಿದ ನಂತರ 'ಅಣ್ಣ - ತಮ್ಮ' ಎಂಬ ಸಾಮಾಜಿಕ ನಾಟಕವನ್ನು ಪ್ರದರ್ಶಿಸಿದೆವು. ಆಗ ನನ್ನ ಆತ್ಮಕಥೆಯನ್ನು ಬರೆಯಬೇಕೆಂಬ ಹಂಬಲ ಹೆಚ್ಚಾಯ್ತು. ಆರಂಭಿಸಿದೆನಾದರೂ ಬರೆಯುವ ಅಭ್ಯಾಸವಿಲ್ಲದೆಯೂ ಕಾಲಾವಕಾಶವಾಗದೆಯೂ ಬರವಣಿಗೆಯು ಕುಂಟುತ್ತಾ ನಡೆಯಿತು.

ನಾನು ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕಮಂಡಳಿಗೆ ಸೇರಿದಾಗಿನಿಂದ ಅದೇ ಕಂಪನಿಯ ಎಲ್ಲಾ ವಿಭಾಗಗಳಲ್ಲಿಯೂ ಕ್ರಮವಾಗಿ ಕೆಲಸ ಮಾಡಿಕೊಂಡು ಬಂದೆನು.

ಹಿಂದೆ ಒಂದು ಊರಿನಿಂದ ಮತ್ತೊಂದು ಊರಿಗೆ ಹೋದ ದಿನವೇ ನಾಟಕ ವಾಡಲು ರಾತ್ರಿ ೮ ಗಂಟೆಯೊಳಗೆ ನಾಟಕಶಾಲೆಯನ್ನು ತಯಾರುಮಾಡಲು ಡೇರಾ ಹೊಡೆಯುವುದಕ್ಕೆ ಗುಣಿ ತೋಡಿ ಮರಗಳನ್ನು ನೆಟ್ಟು ಅಡ್ಡ ಮರಗಳನ್ನು ಕಟ್ಟಿಕೊಂಡು ಡೇರಾದ ಬಟ್ಟೆ ತುಂಡುಗಳನ್ನು ಅಡ್ಡ ಮರದ ಮೇಲೆಳೆದುಕೊಂಡು ಒಳಗೆ ಅಟ್ಟವೊಂದನ್ನು ಕಟ್ಟಿ ಪರದೆ ವಗೈರೆ ಸೀನರಿ ಕಟ್ಟಿ ತಯಾರಾಗುತ್ತಿದ್ದೆವು.

ಊರೊಳಗೆ ಒಬ್ಬ ತಮಟೆಯವನನ್ನು ಹಿಂದಿಟ್ಟುಕೊಂಡು ಹೋಗಿ ಅಲ್ಲಲ್ಲಿ ನಿಂತು ತಮಟೆ ಬಾರಿಸುವುದನ್ನು ಬಾಯಿಂದ ಶೀಟಿಹಾಕಿ ನಿಲ್ಲಿಸಿ ಕಂಪನಿ, ನಾಟಕ, ಆಡುವ ಸ್ಥಳ, ಟಿಕೀಟು ದರ ಇತ್ಯಾದಿಗಳನ್ನು ಬಾಯಲ್ಲಿ ಕೂಗಿ ಹೇಳಿ ಪುನಃ ಶೀಟಿ ಹಾಕಿ ತಮಟೆ ಬಾರಿಸಿಕೊಂಡು ಪ್ರಚಾರಕಾರ್ಯವನ್ನು ಮುಗಿಸುತ್ತಿದ್ದೆ.

ನಾಟಕಕ್ಕೆ ದೀಪ ವ್ಯವಸ್ಥೆಗೆ ಆಗ್‌ಲ್ಯಾಂಪುಗಳ ಚಿಮಣಿ ಒರೆಸಿ ಶುಭ್ರಮಾಡಿ ಸೀಮೆಯೆಣ್ಣೆ ಹಾಕಿ ಉರಿಸಿ ಅಣಿ ಮಾಡುತ್ತಿದ್ದೆನು.

ಕ್ರಮೇಣ ಗ್ರೀನ್ ರೂಂನಲ್ಲಿ ಕಸಗುಡಿಸಿ ಹೊಸದಾಗಿ ಬಂದ ನಟರಿಗೆ ಮುಖಕ್ಕೆ ಬಣ್ಣ ಹಾಕುವುದಲ್ಲದೆ ಅವರಿಗೆ ನಾಟಕದ ಉಡುಪುಗಳನ್ನು ಕೊಡುವುದು ನಾಟಕವಾದ ನಂತರ ಉಡುಪುಗಳನ್ನು ಸರಿಯಾಗಿ ಮಡಿಸಿ ಇಡುವುದು ಅಂದರೆ ಡ್ರೆಸ್‌ಕೀಪರ್ ಕೆಲಸದ ಮಟ್ಟಕ್ಕೇರಿದೆ.

ಕೆಲವು ಕಾಲ ನನಗೆ ನನ್ನ ಯಜಮಾನರು ಸ್ಟೋರ್‌ಕೀಪರ್ ಕೆಲಸಕ್ಕೆ ನೇಮಿಸಿದ್ದರು. ಅದನ್ನು ಬಜಾರ್ ಮಾಸ್ಟರ್ ಎಂದೂ ಕರೆಯುತ್ತಿದ್ದರು. ಈ ಕೆಲಸ ಮಾಡುತ್ತಿದ್ದುದೇ ಅಲ್ಲದೆ ಅಡಿಗೆ ಭಟ್ಟರಿಗೆ ಅಸಿಸ್ಟೆಂಟ್ ಆಗಿ ಊಟಕ್ಕೆ ಬಡಿಸುವುದು. ಸಂದರ್ಭಾನುಸಾರ ನೀರು ತರುವುದು, ಅಡಿಗೆಯವನು ಖಾಯಿಲೆ ಬಿದ್ದಾಗ 'ಸೌಟ್ ರೈಟರ್' ಆಗಿ ಅಡಿಗೆ ಕೆಲಸವನ್ನೂ ಮಾಡಿರುತ್ತೇನೆ.

ಗೇಟ್ ಕೀಪರ್, ಬುಕ್ಕಿಂಗ್ ಕ್ಲಾರ್ಕು ಮತ್ತು ವ್ಯವಸ್ಥಾಪಕರ ಕೆಲಸಗಳನ್ನೂ ಸಂದರ್ಭಾನುಸಾರ ಮಾಡಿದೆನಲ್ಲದೆ ವಾದ್ಯದವರ ಗೈರುಹಾಜರಿಯಲ್ಲಿ ತಬಲಾ, ಹಾರ್ಮೋನಿಯಂ, ಪಿಟೀಲು ವಾದ್ಯಗಳನ್ನು ನಾಟಕಗಳಿಗೆ ನುಡಿಸುತ್ತಿದ್ದ ಸಂದರ್ಭಗಳಿಗೂ ಕಮ್ಮಿಯಿರುತ್ತಿರಲಿಲ್ಲ.

ನಾನು ನಾಟಕಮಂಡಳಿಯನ್ನು ಸೇರಿದಾಗಿನಿಂದ ಎಲ್ಲಾ ವಿಧವಾದ ಪಾತ್ರಗಳನ್ನು ಅಭಿನಯಿಸುತ್ತಾ ಬಂದೆನು. ಸ್ತ್ರೀ ಪಾತ್ರವಾಗಲೀ ಗಂಡು ಪಾತ್ರವಾಗಲೀ ಬೇರೆ ಯಾರಾದರೂ ನಟವರ್ಗದವರ ಗೈರು ಹಾಜರಿಯಲ್ಲಿ ನನ್ನ ಪಾಲಿಗೆ ಬರುತ್ತಿತ್ತು.

ಕಂಪನಿಯ ಖಜಾಂಚಿಯೂ ನಾನೇ ಆಗಿದ್ದು ದುಡ್ಡಿನ ಆಡಳಿತ ನೋಡಿಕೊಳ್ಳಲು ನನ್ನನ್ನೇ ನೇಮಿಸಿದ್ದರು.

ಹೀಗೆ ಪ್ರತಿನಿತ್ಯವೂ ಕೊಂಚವೂ ವಿರಾಮವಿಲ್ಲದೆ ನನ್ನ ಸ್ವಂತ ಕೆಲಸದಂತೆ ಪ್ರತಿಯೊಂದು ವಿಭಾಗದಲ್ಲಿಯೂ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದೆನು.

ಈ ರೀತಿ ಎಲ್ಲಾ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದರೂ ಸಹ ನನ್ನ ಧಣಿಯಿಂದ ಆಕ್ಷೇಪಣೆ, ಅಷ್ಟೋತ್ತರ, ಸಹಸ್ರನಾಮ ಪೂಜೆ ತಪ್ಪುತ್ತಿರಲಿಲ್ಲ. ಒಂದು ದಿನ ನಾನು ನ್ಯಾಯವಾಗಿ, ಯಾರಿಗೂ ಅನ್ಯಾಯವಾಗದಂತೆ ನಡೆದಾಗ್ಯೂ ಮಿತಿಮೀರಿದ ಆಕ್ಷೇಪಣೆ, ಕೇಳಲಾಗದ ಮಾತನ್ನು ಕೇಳಿ ಮನಸ್ಸಿಗೆ ತುಂಬಾ ನೋವು, ವ್ಯಥೆಯನ್ನನುಭವಿಸಿದೆ. ಆಗ ಎಷ್ಟೇ ತೊಂದರೆಯಾಗಲಿ ಇಂತಹ ಗುಲಾಮಗಿರಿಯುಕ್ತವಾದುದಲ್ಲ. ಇದೇ ಕಷ್ಟವನ್ನು ಸ್ವಂತಕ್ಕಾಗಿ ಉಪಯೋಗಿಸಿಕೊಂಡರೆ ಬಹು ಜನರಿಗೆ ಉಪಕಾರಮಾಡಲು ಅವಕಾಶವಾಗುವುದೆಂಬ ಯೋಚನೆಯಿಂದ ತರೀಕೆರೆಯಲ್ಲಿದ್ದ ನನ್ನ ಸ್ನೇಹಿತರುಗಳಲ್ಲಿ ಸ್ವಂತವಾಗಿ ಕಂಪೆನಿ ಮಾಡಬೇಕೆಂದು ಯೋಚಿಸಿದೆ. ಆಗಿನ ಕಾಲದಲ್ಲಿ ನಾಟಕ ಕಂಪೆನಿ ಪ್ರಾರಂಭಿಸಲು ಒಂದೂವರೆ ಎರಡು ಸಾವಿರ ರೂಪಾಯಿಗಳ ಬಂಡವಾಳವಿದ್ದರೆ ಸಾಕಾಗುತ್ತಿತ್ತು. ನಾಟಕ ಸಂಘದ ಅನುಭವ ಆ ವೇಳೆಗೆ ಪೂರ್ಣವಾಗುದ್ದುದರಿಂದಲೂ, ನನ್ನ ಬಗ್ಗೆ ನಾಟಕದ ಜನರೇ ಅಲ್ಲದೆ ಹೊರಗಿನ ಜನಗಳೂ ಸಹ ತುಂಬಾ ಅನುರಾಗ, ವಿಶ್ವಾಸಗಳಿಂದ ಕಾಣುತ್ತಿದ್ದು ಸಂದರ್ಭಾನುಸಾರ ಧನಸಹಾಯವನ್ನೂ ಮಾಡಲು ಸಿದ್ಧರಾಗುತ್ತಾರೆಂಬ ಭರವಸೆಯಿದ್ದುದರಿಂದಲೂ ಬಂಡವಾಳದ ಹಣ ಹೂಡುವುದು ಅಸಾಧ್ಯವೆಂದು ನನಗೆ ತೋರಲಿಲ್ಲ. ಆದ್ದರಿಂದ ದೇವರಲ್ಲಿ ನಂಬಿಕೆಯಿಟ್ಟು ತರೀಕೆರೆಯಲ್ಲಿನ ಸ್ನೇಹಿತರಿಂದ ಐದುನೂರು ರೂಪಾಯಿಗಳ ಸಾಲ ತಂದು ಅಲ್ಲಿಯೇ ನಾಟಕದ ಸಾಮಾನುಗಳನ್ನು ತಯಾರಿಸಲು ಯೋಚಿಸಿ ಒಬ್ಬ ಪೆಯಿಂಟರನ್ನು ಗೊತ್ತುಮಾಡಿ ಅಂಕದ ಪರೆಯನ್ನು ಬರೆಯಲು ಬಣ್ಣ ಬಟ್ಟೆ ಕೊಡಿಸಿದೆ. ಅಂಕದ ಪರದೆ ಬರೆಯಲು ಪ್ರಾರಂಭವಾಯಿತು.

ಗುಬ್ಬಿ ಕಂಪನಿ ಆ ಸಮಯದಲ್ಲಿ ದಾವಣಗೆರೆಯಲ್ಲಿದ್ದು ಮಾಲೀಕರು ಗುಬ್ಬಿಗೆ ಹೋಗಿದ್ದರು. ಅನಿರೀಕ್ಷಿತವಾಗಿ ಖಾಯಿಲೆ ಬಿದು ಉಲ್ಬಣವಾಗಿ ಸ್ವರ್ಗಸ್ಥರಾದರು. ಅನಂತರ ದಾವಣಗೆರೆಯ ವರ್ತಕರುಗಳೆಲ್ಲರೂ ಸೇರಿ ಗುಬ್ಬಿ ಶ್ರೀ ಚನ್ನಬಸವೇಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿಗೆ ತಾ.೧೩-೭-೧೯೧೭ರಲ್ಲಿ ನನ್ನನ್ನು ಮಾಲೀಕನನ್ನಾಗಿ ನೇಮಿಸಿದರು. ಆಗಿನಿಂದ ಸಂಘದ ಒಡೆಯನಾಗಿ ಕಷ್ಟಸುಖಗಳನ್ನು ಅನುಭವಿಸುತ್ತ ಬಂದೆ.

ನಾಟಕದವರೆಂದರೆ ಜನಗಳು ಬಹಳ ಹೀನವಾಗಿ ಕಾಣುತ್ತಿದ್ದುದರಿಂದ ಅದನ್ನು ತಪ್ಪಿಸಬೇಕಾದರೆ ಸಂಘಗಳಲ್ಲಿ ನಿಷಾ ಮಾಡುವವರನ್ನೂ, ವಿಷಯಾಸಕ್ತ ಜನರನ್ನೂ ದುರ್ಗುಣಿಗಳನ್ನೂ ಸೇರಿಸಿಕೊಳ್ಳದೆ ಉತ್ತಮರಾದವರನ್ನೂ, ಸಾಧ್ಯವಾದಷ್ಟೂ ವಿದ್ಯಾವಂತರನ್ನೂ, ಸದ್ಗುಣಿಗಳನ್ನು ಸೇರಿಸಿಕೊಳ್ಳಬೇಕೆಂದು ತೀರ್ಮಾನ ಮಾಡಿಕೊಂಡೆನು. ಅದರಂತೆಯೇ ಉತ್ತಮ ಯೋಗ್ಯವಾದ ನಟವರ್ಗದವರನ್ನು ಸೇರಿಸಿಕೊಳ್ಳುತ್ತ ಬಂದೆನು.

೧೯೧೭ನೇ ಇಸವಿಯಿಂದ ೧೯೨೪ರೊಳಗೆ ಸಂಘದೊಂದಿಗೆ ಮೈಸೂರು, ಮದರಾಸು, ಮಹಾರಾಷ್ಟ್ರ ನಾಡುಗಳಲ್ಲಿ ಎರಡು ಮೂರು ಸಾರಿ ಸಂಚಾರಮಾಡಿ ನಾಟಕಗಳನ್ನಾಡಿಸಿದೆ.

೧೯೨೩ರಿಂದ ೧೯೪೩ರವರೆಗೆ ಸಂಘದ ಸುವರ್ಣಯುಗ ನಡೆಯಿತೆಂದೇ ಹೇಳಬಹುದು. ಆ ಯುಗದಲ್ಲಿ ನಾನು ಏನೇನು ನಡೆಯಬೇಕೆಂದು ಬಯಸಿದೆನೋ ಎಲ್ಲ ಕಾರ್ಯಗಳೂ ಸುಲಲಿತವಾಗಿ ನಡೆದುಹೋದುವು.

ಪ್ರಥಮವಾಗಿ ಉತ್ತಮವಾದ ಸಂಸ್ಥೆಯನ್ನು ತಯಾರಿಸಬೇಕಲ್ಲಾ ದೇವರೆ ಎಂದು ಅಂದುಕೊಂಡಿದ್ದೆ. ನಾಟಕ ಸಂಘವೇ ನನ್ನ ಸ್ವಾಧೀನಕ್ಕೆ ಬಂದಿತು. ಸಂಘವು ನೆರೆ ನಾಡುಗಳಲ್ಲಿ ಸಂಚರಿಸಿ ಮದರಾಸು, ಬೊಂಬಾಯಿ ಹೈದರಾಬಾದ್, ಕಲ್ಕತ್ತಾ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನಾಟಕಗಳನ್ನು ಪ್ರದರ್ಶಿಸಬೇಕೆಂದುಕೊಂಡೆ. ಅದರಂತೆಯೇ ಕಲ್ಕತ್ತ ಒಂದು ವಿನಾ ಬಾಕಿ ಎಲ್ಲಾ ಊರುಗಳಲ್ಲಿಯೂ ನಾಟಕಗಳನ್ನು ಪ್ರದರ್ಶಿಸಿ ಒಳ್ಳೆ ಕೀರ್ತಿಯನ್ನು ಗಳಿಸಿದೆ.

ಒಂದು ಜಟಕಾಗಾಡಿ ಸ್ವಂತವಾಗಿ ಇಡಬೇಕೆಂದು ಯೋಚಿಸಿದೆ. ಜಟ್ಕಾ ಬಂದುದಲ್ಲದೆ ಆಗ ವಿಶೇಷವಾದ ಗಾಡಿಯೆಂದೆನಿಸಿದ್ದ 'ಗೌರ್ನರ್ ಕಾರ್ಟ್' ಎಂಬ ಗಾಡಿಯನ್ನು ಸಾಹುಕಾರರೊಬ್ಬರು ಬಹುಮಾನವಾಗಿತ್ತರು.

ಮೈಸೂರಿನ ಅರಸರ ಸಮ್ಮುಖದಲ್ಲಿ ಅಭಿನಯಿಸಿ ಬಹುಮಾನ ಪಡೆಯಬೇಕೆಂದು ನಿರ್ಧರಿಸಿದೆ. ಅದರಂತೆ ೧೯೨೩ರಲ್ಲಿ ಆಳಿದ ಮಹಾಸ್ವಾಮಿಯವರಾದ ಶ್ರೀಕೃಷ್ಣರಾಜಒಡೆಯರ್‌ರವರು ಅರಮನೆಯಲ್ಲಿ ಅನೇಕ ನಾಟಕಗಳನ್ನಾಡಿಸಿ 'ವರ್ಸಟೈಲ್ ಕಮೆಡಿಯನ್' ಎಂಬ ಬಿರುದನ್ನು ಬಂಗಾರದ ಪದಕದೊಡನೆ ದಯಪಾಲಿಸಿ ಆರ್ಶೀವದಿಸಿದರು.

೧೯೪೨ರಲ್ಲಿ ಆಳಿದ ಅರಸರಾದ ಶ್ರೀ ಜಯಚಾಮರಾಜ ಒಡೆಯರ್‌ರವರು ರತ್ನ ಖಚಿತವಾದ ತೋಡಾದೊಂದಿಗೆ 'ನಾಟಕರತ್ನಂ' ಎಂಬ ಬಿರುದನ್ನಿತ್ತು ಆರ್ಶೀವದಿಸಿದರು.

ನಾಟಕ ಸಂಘವಿದ್ದ ಮೇಲೆ ಸ್ವಂತ ನಾಟಕ ಶಾಲೆ ಇಡಬೇಕೆಂದು ಯೋಚಿಸಿದೆ. ೧೯೨೪ನೇ ಇಸವಿಯಲ್ಲಿ ಬೆಂಗಳೂರು ಸುಬೇದಾರ್ ಛತ್ರಂ ರೋಡಿನಲ್ಲಿ ಶ್ರೀ ಸರ್ಪ ಭೂಷಣಸ್ವಾಮಿಗಳ ಮಠಕ್ಕೆ ಸೇರಿದ ಜಾಗದಲ್ಲಿ ನಾಟಕ ಮಂದಿರವನ್ನು ನಿರ್ಮಿಸಿ ದಿವಾನ್ ಬಹದ್ದೂರ್ ಸರ್ ಕೆ.ಪಿ. ಪುಟ್ಟಣ್ಣಚೆಟ್ಟಿಯವರಿಂದ ಪ್ರಾರಂಭೋತ್ಸವವನ್ನು ನೆರವೇರಿಸಿ ಅದರಲ್ಲಿ ನಾಟಕಗಳನ್ನಾಡಿದೆ. ಈಗ ಅದೇ ಥಿಯೇಟರ್ ಗೀತಾಟಾಕೀಸ್ ಎಂದು ಪರಿವರ್ತಿತಗೊಂಡಿದೆ.

ಹತ್ತು ಹದಿನೈದು ವರ್ಷವಯಸ್ಸಿನ ಬಾಲಕರ ನಾಟಕ ಸಂಘವನ್ನು ತಯಾರು ಮಾಡಬೇಕೆಂದುಕೊಂಡೆ. ಬಹಳ ಸುಲಭವಾಗಿ ೧೯೨೫ನೇ ಇಸವಿಯಲ್ಲಿ ಬಾಲಕಲಾವಿವರ್ಧಿನಿ ಎಂಬ ಹೆಸರಿನಲ್ಲಿ ಪ್ರಾರಂಭವಾಗಿ ಹತ್ತು ವರ್ಷಗಳ ಕಾಲ ಅವಿಚ್ಛಿನ್ನವಾಗಿ ದೊಡ್ಡ ಕಂಪೆನಿಗೆ ಸಮನಾಗಿ ಅದ್ದೂರಿಯಿಂದ ನಡೆಯಿತು. ಅದರಲ್ಲಿ ಸುಮಾರು ೭೦-೮೦ ಜನ ಕೆಲಸ ಮಾಡುತ್ತಿದ್ದು ಅವರ ಜೀವನಾಧಾರವಾಗಿತ್ತು.

ಉಡುಪಿಯ ಗುರು ಮನೆಯಲ್ಲಿ ಸ್ವಾಮಿಗಳವರ ಆಶೀರ್ವಾದ ಬಯಸಿದೆ. ಅದರಂತೆಯೇ ೧೯೩೦ ನೆಯ ಇಸವಿಯಲ್ಲಿ ಉಡುಪಿಯ ಅಷ್ಟ ಮಠದ ಸ್ವಾಮಿಗಳಲ್ಲಿ ಇಬ್ಬರಾದ ಅದಮಾರು ಮಠದ ಸ್ವಾಮಿಗಳು ಮತ್ತು ಕಾಣೂರು ಮಠದ ಶ್ರೀಗಳವರು 'ರಸಿಕ ಶಿಖಾಮಣಿ' ಎಂಬ ಬಿರುದನ್ನು ಬಂಗಾರದ ಪದಕದೊಡನೆ ಕೊಟ್ಟು ಆಶೀರ್ವಾದ ಮಾಡಿದರು.

ಇಷ್ಟೆಲ್ಲಾ ಆದ ನಂತರ ಫಿಲಂ ಸ್ಟೂಡಿಯೋ ಮಾಡಬೇಕೆಂದು ಬಯಸಿದೆ. ಸ್ಟೂಡಿಯೋ ಮಲ್ಲೇಶ್ವರದಲ್ಲಿ ಪ್ರಾರಂಭವಾಗಿ ಪೂರ್ತಿಯಾಗದಿದ್ದರೂ ಆಗಿದ್ದ ಅರ್ಧದಷ್ಟು ಸ್ಟೂಡಿಯೋದಲ್ಲಿ 'ಹರಿಮಾಯ' ಮತ್ತು 'ಹಿಸ್ ಲೌ ಅಫೇರ್' (His Love Affair) ಎಂಬ ಎರಡು ಮೂಕ ಚಿತ್ರಗಳನ್ನು ತೆಗೆದದ್ದಾಯಿತು.

೧೯೩೦ನೇ ಇಸವಿಯಲ್ಲಿ ಸುಬೇದಾರ್ ಛತ್ರಂ ರೋಡಿನಲ್ಲಿ ಶ್ರೀ ಸಿ.ವಿ. ನರಸಿಂಹೈಯಂಗಾರ್‌ರವರಲ್ಲಿ ಸ್ಥಳವನ್ನು ಗುತ್ತಿಗೆಗೆ ತೆಗೆದುಕೊಂಡು ಮತ್ತೊಂದು ನಾಟಕ ಶಾಲೆಯನ್ನು ನಿರ್ಮಿಸಿ ಮೈಸೂರು ದಿವಾನ್‌ರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರ ನೇತೃತ್ವದಲ್ಲಿ ಪ್ರಾರಂಭಿಸಿ ನಾಟಕಗಳನ್ನಾಡಲುಪಕ್ರಮಿಸಿದೆ. ಅದೇ ಈಗಿನ ಮೂವಿಲ್ಯಾಂಡ್ ಚಿತ್ರಮಂದಿರ.

೧೯೩೨ರಲ್ಲಿ ದಕ್ಷಿಣ ದೇಶದ ಪುಣ್ಯಕ್ಷೇತ್ರಗಳ ದೇವರ ದರ್ಶನವನ್ನು ಸಂಘದವರೆಲ್ಲರಿಗೂ ತೋರಿಸಿಕೊಂಡು ಬಂದ ನಂತರ ಮಹಾಭಾರತದ ಕಥೆಯನ್ನು ಹಿಂದೆ ಯಾರೂ ಮಾಡಿರದಷ್ಟು ವೈಭವದಿಂದ ರಂಗದ ಮೇಲೆ ಪ್ರದರ್ಶಿಸಬೇಕೆಂಬ ಹೆಬ್ಬಯಕೆಯುಂಟಾಯಿತು.

ಅದರ ತಯಾರಿಕೆ ಎರಡು ವರ್ಷಗಳ ಕಾಲ ನಡೆಯಿತು. ಹೆಸರಾಂತ ಕವಿಗಳಾದ ಶ್ರೀ ಬಿ. ಪುಟ್ಟಸ್ವಾಮಯ್ಯನವರಿಂದ ನಾಟಕದ ಸಾಹಿತ್ಯ ರಚನೆಯಾಯಿತು. ಮದರಾಸು, ಕುಂಭಕೋಣಂ, ಮಧುರೈ ಕಡೆಯಿಂದ ಚಿತ್ರ ಕೆಲಸದ ಕಲಾವಿದರನ್ನೂ, ಮರಕೆಲಸದವರನ್ನೂ ಕರೆಸಿ ರಂಗಸಜ್ಜಿಕೆಗಳನ್ನು ಮಾಡಿಸಿದೆ. ಆಗಿನ ಕಾಲದಲ್ಲಿ ಸುಮಾರು ಎಪ್ಪತ್ತೈದು ಸಾವಿರ ರೂಪಾಯಿಗಳ ವೆಚ್ಚದಲ್ಲಿ 'ಕುರುಕ್ಷೇತ್ರ' ನಾಟಕವು ತಯಾರಾಯಿತು. ಆಳಿದ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್‌ರವರು ಸಂಘಕ್ಕೆ ಮಾವಟಿಗನ ಜೊತೆಯಲ್ಲಿ 'ತಾರಾ' ಎಂಬ ಆನೆಮರಿಯನ್ನೂ, ಎರಡು ಶ್ವೇತ ಕುದುರೆಗಳನ್ನೂ ದಯಪಾಲಿಸಿದರು ತಾ|| ೩೧-೧೨-೧೯೩೪ ರಲ್ಲಿ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರವರ ಘನ ಅಧ್ಯಕ್ಷತೆಯಲ್ಲಿ 'ಕುರುಕ್ಷೇತ್ರ' ನಾಟಕದೊಂದಿಗೆ ಸಂಘದ ರಜತಮಹೋತ್ಸವವನ್ನು ವೈಭವದಿಂದ ಆಚರಿಸಲಾಯಿತು. ಮೈಸೂರಿನ ಚಾಮುಂಡೇಶ್ವರಿ ನಾಟಕಮಂಡಳಿಯವರು. ದತ್ತಾತ್ರೇಯ ನಾಟಕ ಮಂಡಳಿಯವರು ಮದರಾಸಿನ

ರಾಜಮಾಣಿಕ್ಯಂ ಕಂಪೆನಿಯವರು, ಅಂಬಾ ಪ್ರಸಾದಿಕ ಸಂಘದವರು ಮತ್ತು ಇತರ ಅನೇಕ ಸಂಘಗಳವರು ಆಗಮಿಸಿ ಸಮಾರಂಭದಲ್ಲಿ ಭಾಗವಹಿಸಿದ್ದರು. ಆ ದಿನದ ಉತ್ಸಾಹ, ಆನಂದ, ಮಹಾಜನಗಳ ಆಶೀರ್ವಾದದ ಹರ್ಷೋದ್ಗಾರಗಳು ನಾನು ಹಿಂದೆ ಯಾವಾಗಲೂ ಅನುಭವಿಸಿರಲಿಲ್ಲ.

ನಾನು ಸಂಘದ ಒಡೆಯನಾದಾಗ ಅಂದರೆ ೧೯೧೭ರಲ್ಲಿ ಸಂಘವು ಇದ್ದುದಕ್ಕೂ, 'ಕುರುಕ್ಷೇತ್ರ' ನಾಟಕದ ನಂತರ ಇದ್ದ ಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಾಗಿದ್ದಿತು. ದೈವಕೃಪೆಯಿಂದ ದಿನೇ ದಿನೇ ಅಭಿವೃದ್ಧಿ ಹೊಂದಿಕೊಂಡು ಬಂದಿದ್ದಿತು.

ಅರಿದಾಳ, ಇಂಗ್ಲೀಕ, ಸಪೇದ, ಕಾಗೆ ಬಂಗಾರಗಳಿಂದ ಮೇಕಪ್ ಮಾಡುತ್ತಿದ್ದ ಕಾಲ ಹೋಗಿ ಮ್ಯಾಕ್ಸ್ ಫ್ಯಾಕ್ಟರ್ ಬಣ್ಣಗಳನ್ನು ಮತ್ತು ಕ್ರೇಪ್ ಹೇರ್‌ಗಳನ್ನುಪಯೋಗಿಸು ವವರೆಗೂ ಬಂದಿತು.

ರಂಗಮಂದಿರಕ್ಕೆ ಈಚಲ ಚಾಪೆಗಳನ್ನು ಹಾಸುತ್ತಿದ್ದದು ಹೋಗಿ ೫೦೦-೬೦೦ ರೂಪಾಯಿಗಳ ರತ್ನಗಂಬಳಿಗಳನ್ನು ಹಾಸುತ್ತಿದ್ದೆವು.

ಎರಡು ರೂಪಾಯಿಗೆ ಒಂದು ಗಜದಂತೆ ಸಿಗುವ 'ಅಲ್ಪಾಕು' 'ಮರೀನ' ಎಂಬ ಬಟ್ಟೆಯ ಮೇಲೆ ಗಿಲೀಟಿನ ದೊಡ್ಡ ದೊಡ್ಡ ಚಂಕಿ ಹಾಕಿ ಹೊಲೆಸಿದ ಕೋಟು ಶರಾಯಿ. ೩೦-೪೦ ರೂಪಾಯಿಗಳ ಕೋಟ ಕಲಾಪತ್ತಿನ ಸೀರೆಗಳಿಗೆ ಪ್ರತಿಯಾಗಿ ೫೦೦-೬೦೦ ರೂಪಾಯಿನ ಕಿನ್‌ಕಾಪಿನ ಡ್ರೆಸ್‌ಗಳಿಗೆ ೮೦೦-೯೦೦ ರೂ.ಗಳ ಡೈಮಂಡ್ ಕಟ್ಟಿನ ಸಾಚಾ ಕಲಾಪತ್ತಿನ ಸೀರೆಗಳಿಗೇರಿತು.

ಕೇವಲ ೧ ಪಿಟೀಲು ೧ ತಬಲ. ೧ ಸೋಟಾ (ಶೃತಿಗಾಗಿ ತಂಬೂರಿ ಆಕಾರ ದಂತೆ ಜಾಯಿಕಾಯಿ ಮರದ ಹಲಗೆಯಲ್ಲಿ ತಯಾರುಮಾಡಿದ ವಾದ್ಯ) ವಾದ್ಯಗಳಿಗೆ ಬದಲಾಗಿ ಪಿಯಾನೋ ಹಾರ್ಮೋನಿಯಂ, ೩-೪ ಪಿಟೀಲುಗಳು, ಡೋಲಕ್, ತಬಲಗಳು ಕೇವೇಯೊಲಿನ್, (೩-೨ ಬಗೆಯ ವಾದ್ಯಗಳ ರೀತಿ ನುಡಿಸಬಹುದಾದಂಥ ವಿದ್ಯುತ್ತಿನ ಸಹಾಯದಿಂದ ನುಡಿಸಬಹುದಾದ ವಾದ್ಯ)ಗಳಿಗೇರಿತು.

ಆರೇಳು ಎತ್ತಿನಗಾಡಿಗಳಲ್ಲಿ ಇಡೀ ಸಂಘವೇ ಊರಿಂದ ಊರಿಗೆ ಪ್ರಯಾಣ ಮಾಡುತ್ತಿದ್ದ ಕಾಲ ಹೋಗಿ ಸಾಮಾನುಗಳಿಗಾಗಿ ೬ ವ್ಯಾಗನ್, ಪ್ರಾಣಿಗಳು ಅಂದರೆ ಆನೆ, ಕುದುರೆ, ಜಿಂಕೆ, ಮೊಲ ಮೊದಲಾದವುಕ್ಕೆ ೨ ವ್ಯಾಗನ್, ನಟವರ್ಗದವರಿಗೆ ಮ್ಯಾನೇಜ್ ಮೆಂಟ್‌ನವರಿಗೆ ಮಾಲೀಕರ ಮನೆಯವರಿಗೆ ೧ ಫಸ್ಟ್ ಕ್ಲಾಸ್, ೧ ಸೆಕೆಂಡ್‌ಕ್ಲಾಸ್, ೪ ಥರ್ಡ್‌ಕ್ಲಾಸ್ ಕ್ಯಾರೇಜ್‌ಗಳನ್ನುಳ್ಳ ಸ್ಪೆಷಲ್ ಟ್ರೈನ್ ಬಳಸುತ್ತಿದ್ದೆವು. ಸ್ಟೇಷನ್ನಿನಿಂದ ಥಿಯೇಟರಿಗೆ ಸಾಮಾನುಗಳನ್ನು ಜನಗಳನ್ನು ಸಾಗಿಸಲು ಸುಮಾರು ೧೦೦ ಎತ್ತಿನಗಾಡಿಗಳು ಬೇಕಾಗುವ ಮಟ್ಟಕ್ಕೆ ಬಂದಿತ್ತು.

ತಿಂಗಳೊಂದಕ್ಕೆ ಒಂದು ಸಾವಿರದಿನ್ನೂರು ರೂಪಾಯಿಗಳ ಖರ್ಚು ಹದಿನೈದು ಹದಿನಾರು ಸಾವಿರರೂಪಾಯಿಗಳಿಗೇರಿತ್ತು.

ಹಳ್ಳಿ ಹಳ್ಳಿಗಳಲ್ಲಿಯೂ ತಾಲ್ಲೂಕುಗಳಲ್ಲಿ ಮಾತ್ರ ಸಂಚರಿಸುತ್ತಿದ್ದ ಸಂಘವು

ಬೆಂಗಳೂರು, ಮೈಸೂರು, ಬೊಂಬಾಯಿ, ಹೈದರಾಬಾದ್, ಮದ್ರಾಸ್‌ಗಳಂತಹ ದೊಡ್ಡ ಪಟ್ಟಣಗಳಲ್ಲಿ ಸಂಚಾರ ಮಾಡಲಾರಂಭವಾಗಿತ್ತು.

ವಿದ್ಯಾಬಲವಾಗಲೀ, ಜನಬೆಂಬಲವಾಗಲೀ, ಧನಬೆಂಬಲವಾಗಲೀ ಇಲ್ಲದ ಹಳ್ಳಿಯವನಾದ ನನಗೆ ದೆಹಲಿಯಲ್ಲಿ ರಾಷ್ಟ್ರಪತಿಗಳಿಂದ ಪ್ರಶಸ್ತಿ ಬರುವ ಸ್ಥಿತಿಗೆ ಬಂದಿತೆಂದರೆ ಯಾವ ಕನ್ನಡಿಗನಿಗೆ ತಾನೆ ಆಶ್ಚರ್ಯವಾಗದಿರದು! ಹೆಮ್ಮೆಯಾಗದಿರದು!! ಆನಂದವಾಗದೆ ಇರದು!! 'ನೀನೊಲಿದರೆ ಕೊರಡು ಕೊನರುವುದಯ್ಯಾ! ನೀನೊಲಿದರೆ ಬರಡುಹಯನಹುದಯ್ಯಾ' ಎಂಬಂತೆ ದೇವರ ದಯೆ ಇದ್ದಲ್ಲಿ ಕನಸು ನನಸಾಗುವುದು ಅತಿಶಯವಲ್ಲವೆಂಬುದಕ್ಕೆ ನನ್ನ ಈ ಆತ್ಮಕಥೆಯೇ ನಿದರ್ಶನ.

೧೮೮೪ರಲ್ಲಿ ಸ್ಥಾಪಿತಗೊಂಡು ಈವರೆಗೂ ಅವಿಚ್ಛಿನ್ನವಾಗಿ ಸಂಘವು ನಡೆದುಕೊಂಡು ಬರುತ್ತಿರುವುದಕ್ಕೆ ನಮ್ಮ ಸಂಸ್ಥೆಯ ಅಧಿದೇವತೆಯಾದ ಶ್ರೀ ಚನ್ನಬಸವೇಶ್ವರ ಸ್ವಾಮಿಯ ಕೃಪಾಬಲ, ನಟರಾಜನ ಆಶೀರ್ವಾದಬಲ. ನನ್ನ ಪೂರ್ವ ಜನ್ಮದ ಪೂಜಾಫಲ ಮತ್ತು ಸಂಸ್ಥೆಯನ್ನು ಪ್ರಾರಂಭಿಸಿದ ಘಳಿಗೆಯ ಅಂದರೆ ಶುಭ ಮುಹೂರ್ತದ ಬಲವೆಂದು ನನ್ನ ದೀರ್ಘಕಾಲದ ಅನುಭವದಿಂದ ಖಂಡಿತ ಹೇಳಬಲ್ಲೆ.

ನಮ್ಮ ಸಂಸ್ಥೆಯು ಏಳಿಗೆಗೆ ಬರಲು ತುಂಬಾ ಶ್ರಮಿಸಿದವರೆಂದರೆ ನನ್ನ ಮೊದಲನೆ ಉಪಪತ್ನಿ ಜಿ. ಸುಂದರಮ್ಮ ಮತ್ತು ಮಕ್ಕಳಾದ ಸ್ವರ್ಣಮ್ಮ, ಮಾಲತಮ್ಮ ಮತ್ತು ಎರಡನೆಯ ಉಪಪತ್ನಿ ಬಿ. ಜಯಮ್ಮ ಇವರುಗಳು ಎಂದು ಬರೆದರೆ ಉತ್ಪ್ರೇಕ್ಷೆಯಾಗಲಾರದೆಂದು ನನ್ನ ಭಾವನೆ.

ನನ್ನ ಈ ಆತ್ಮಕಥೆಯಲ್ಲಿ ಬರೆದಿರುವ ಕೆಲವು ಘಟನೆಗಳನ್ನೊದಿ ಯಾವ ಸಂಘಸಂಸ್ಥೆಗಳೇ ಆಗಲಿ ವ್ಯಕ್ತಿಗಳೇ ಆಗಲೀ ಅನ್ಯಥಾ ಭಾವಿಸಬಾರದಾಗಿ ವಿನಂತಿ.

ಈ ಆತ್ಮಕಥೆಗೆ ಅಭಿಮಾನದಿಂದ ಮೆಚ್ಚುಗೆಯನ್ನು ಸೂಚಿಸಿರುವ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪದ್ಮಶ್ರೀ ಶ್ರೀ ವಿ.ಕೆ. ಗೋಕಾಕ್‌ರವರಿಗೂ, ಮುನ್ನುಡಿಯನ್ನು ಬಹು ಆದರ, ಅಭಿಮಾನವಿಟ್ಟು ಬರೆದುಕೊಟ್ಟಿರುವ ಡಾ. ಹೆಚ್.ಕೆ. ರಂಗನಾಥ್‌ರವರಿಗೂ, ಅನಂತಾನಂತ ವಂದನೆಗಳನ್ನು ಸಲ್ಲಿಸುವುದಲ್ಲದೆ ಅವರುಗಳಿಗೆ ಚಿರಋಣಿಯಾಗಿರುತ್ತೇನೆ.

ಈ ಪುಸ್ತಕವನ್ನು ಇಷ್ಟು ಶೀಘ್ರವಾಗಿ ಪ್ರಕಾಶಿಸಲು ಆನಂದದಿಂದ ಒಪ್ಪಿ ನನ್ನಿಂದ ಬರೆಸಿ ಕಾರ್ಯಕೈಗೊಡಲು ಬದ್ಧಕಂಕಣರಾಗಿ ಶ್ರಮಿಸಿದ ಸುರುಚಿ ಪ್ರಕಾಶನದ ಒಡೆಯರಿಗೆ ಕೃತಜ್ಞತೆಗಳನ್ನು ಸಲ್ಲಿಸಬೇಕಾದ್ದು ನನ್ನ ಮುಖ್ಯ ಕರ್ತವ್ಯವಾಗಿರುತ್ತೆ.

ಈ ಪುಸ್ತಕ ಪ್ರಕಟನೆಗಾಗಿ ಕೆಲವು ಪಡಿಯಚ್ಚುಗಳನ್ನು ಒದಗಿಸಿ ಸಹಕರಿಸಿದ 'ಸುಧಾ' ವ್ಯವಸ್ಥಾಪಕರಿಗೆ ನನ್ನ ಕೃತಜ್ಞತೆಗಳು.

ಇದನ್ನು ಅಂದವಾಗಿ ಮುದ್ರಿಸಿದ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್ ಮಾಲೀಕರಾದ ಶ್ರೀ ಜಿ.ಎಚ್. ರಾಮರಾವ್ ಅವರಿಗೆ ನನ್ನ ವಂದನೆಗಳು

– ಜಿ. ಹೆಚ್. ವೀರಣ್ಣ




ನಾಟಕ ರಂಗ



ಸದಾರಮೆ.... ಕಳ್ಳ



ಪಾಂಡವ ವಿಜಯ.... ಉತ್ತರ



ರುಕ್ಮಿಣಿ ಸ್ವಯಂವರ.... ಮಕರಂದ



ಶುಭದ್ರಾ.... ಬ್ರಾಹ್ಮಣ



ಪ್ರಹ್ಲಾದ ಚರಿತ್ರೆ.... ಸಾಬು



ಸದಾರಮೆ.... ವೈಶ್ಯ



ಗುಣಸಾಗರಿ.... ಬಿ. ಜಯಮ್ಮ ಮತ್ತು ಇತರರರೊಡನೆ



ಸ್ವಲೀಲಾ.... ಮಕರಂದ



ಪಾಂಡವ ವಿಜಯ.... ಟೀಲುಗಾರ



ಕಬೀರ್ .... ಶೆಟ್ಟಿ



ಸದಾರಮೆ.... ಆದಿಮೂರ್ತಿ



ಸದಾರಮೆ.... ಕಳ್ಳ



ಪ್ರಭಾಮಣಿ ವಿಜಯ ವಿರೋಚನ



ದಶಾವತಾರ.... ಹಾವಾಡಿಗ

ಚಿತ್ರ ಪ್ರಪಂಚ





ಮೂಕ ಚಿತ್ರ – ಹಿಸ್ ಲವ್ ಅಫೇರ್



ಸುಭದ್ರಾ.... ವಿದೂಷಕ



ಜೀವನ ನಾಟಕ : ಬಿ. ಜಯಮ್ಮನವರೊಡನೆ



ಸ್ವಾಮಿನಿಷ್ಠೆ.... ಕಾಸೀಮ



ಕರ್ಣಾಟಕ ಕೃಷ್ಣ



ಕಬೀರ್.... ಶೆಟ್ಟಿ



ಸಂಸ್ಥೆಯ ಸುವರ್ಣಮಹೋತ್ಸವ ಸಂದರ್ಭದಲ್ಲಿ ಸರ್ ಮಿರ್ಜಾ ಸಾಹೇಬರೊಡನೆ



ಶ್ರೀ ಜಯಚಾಮರಾಜ ಒಡೆಯರಿಂದ ದೊರೆತ ' ನಾಟಕ ರತ್ನ ' ಪ್ರಶಸ್ತಿಯ ತೋಡಾ



ಮಗಳು : ಸ್ವರ್ಣಮ್ಮ



ಮಗಳು : ಮಾಲತಮ್ಮ



ಅಳಿಯ : ದಿ. ಬಸವರಾಜ್



ಮಗ : ಚನ್ನಬಸವಣ್ಣ



ಮಗ : ರಾಜಶೇಖರ್



ಮಗ : ಶಿವಾನಂದ

ಕಲಾವಿದರ ಕುಟುಂಬ



ಪತ್ನಿ : ದಿ. ಜಿ. ಸುಂದರಮ್ಮ



ಪತ್ನಿ : ಬಿ. ಜಯಮ್ಮ



ಮಗಳು : ಲಕ್ಷ್ಮೀಪ್ರಭಾ ಮಗ : ಗುರುಸ್ವಾಮಿ




ಮಗಳು : ಲತಾದೇವಿ



ಮಗ : ದಿ. ಶಿವರಾಜ




ಕುಟುಂಬ ವರ್ಗದೊಂದಿಗೆ



ಸಂಸ್ಥೆಯ ವಜ್ರಮಹೋತ್ಸವ ಸಂದರ್ಭದಲ್ಲಿ
ಮೈಸೂರು ಪುರಸಭೆಯವರು ನೀಡಿದ ನಟರಾಜ ಹಾರ



ರಾಷ್ಟ್ರ ಪ್ರಶಸ್ತಿಯೊಡನೆ



ರಾಷ್ಟ್ರ ಪ್ರಶಸ್ತಿ ಫಲಕ



ಸಂಸ್ಥೆಯ ೬೧ನೆಯ ವಾರ್ಷಿಕೋತ್ಸವದ ಅಂಗವಾಗಿ ದಶಾವತಾರ ನಾಟಕದ

ಪ್ರಶಸ್ತಿ





ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರಿಂದ ದೊರೆತ ' ವರ್ಸಟೈಲ್ ಕಮೆಡಿಯನ್ '
ಪ್ರಶಸ್ತಿ ಪದಕದ ಎರಡು ಮುಖಗಳು

ಪರಿವಿಡಿ

ಬಾಲ್ಯ-ಬಾಲನಟ

ತುಮಕೂರು ಡಿಸ್ಟ್ರಿಕ್ಟಿನ ಗುಬ್ಬಿ ತಾಲ್ಲೂಕಿನಲ್ಲಿ ನನ್ನ ತಂದೆಯವರಾದ ಹಂಪಣ್ಣನವರು ಚಿಲ್ಲರೆ ಅಂಗಡಿ ಅಂದರೆ ದಿನಸಿ, ಕಬ್ಬಿಣದ ಸಾಮಾನುಗಳ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಅಲ್ಲದೆ ಅವರೇ ಸ್ವತಃ ಬೀಗಗಳನ್ನು ತಯಾರು ಮಾಡುತ್ತಿದ್ದರು. ಅವು ಗುಬ್ಬಿ ಬೀಗಗಳೆಂದೇ ಹೆಸರಾಗಿದ್ದವು.

ನನ್ನ ಮಾತೋಶ್ರೀಯವರಾದ ರುದ್ರಾಂಬೆಯವರೊಂದಿಗೆ ಗುಬ್ಬಿಯ ಆನೆ ಪೇಟೆಯಲ್ಲಿರುವ ಸ್ವಂತ ಮನೆಯಲ್ಲಿ ಅವರು ವಾಸಮಾಡುತ್ತಿದ್ದಾಗ ನಾನು ಹುಟ್ಟಿದುದಾಗಿ ತಿಳಿಯಿತು. ನಾನು ಹುಟ್ಟಿದನಂತರ ನನ್ನ ಮಾತೋಶ್ರೀಯವರು ಅನಾರೋಗ್ಯ ಹೊಂದಿದುದರಿಂದ ನನ್ನ ತೀರ್ಥರೂಪುರವರು ಎರಡನೇ ಲಗ್ನವಾದರು. ಅವರು ಎರಡನೇ ಲಗ್ನವಾದಾಗ ಅವರಿಗೆ ನನ್ನ ಇಬ್ಬರು ಅಕ್ಕಂದಿರು ಮತ್ತು ನಾನು ಒಟ್ಟು ಮೂರು ಜನ ಮಕ್ಕಳಿದ್ದೆವು. ಎರಡನೇ ಲಗ್ನವಾದನಂತರ ತೀರ್ಥರೂಪುರವರು ನನ್ನ ತಾಯಿಯವರ ಆರೋಗ್ಯ ಸರಿಹೋಗದಿದ್ದುದರಿಂದಲೂ ತಮ್ಮ ಎರಡನೇ ಕುಟುಂಬದ ಪ್ರೇಮಪಾಶಕ್ಕೆ ಸಿಕ್ಕದ್ದರಿಂದಲೂ ನನ್ನ ಮಾತೋಶ್ರೀಯವರ ಮತ್ತು ನಮ್ಮಗಳ ಪೋಷಣೆಯನ್ನು ಸರಿಯಾಗಿ ಮಾಡದೆ ಕೈಬಿಟ್ಟರು.

ನನ್ನ ಮಾತೋಶ್ರೀಯವರು ನಮ್ಮಗಳನ್ನು ಸಾಕಿ ಸಲಹಲು ಬಂಧು ಬಳಗದವರಲ್ಲಿ ಬೇಡಿ, ಕೂಲಿ ಕಂಬಳಿ ಮಾಡಿ ಜೀವಿಸಬೇಕಾಗಿ ಬಂದಿತು. ಹೀಗೆ ಮೂರುನಾಲ್ಕು ವರ್ಷಗಳವರೆಗೆ ಸಾಗಿತು. ನಾನು ಕೂಲಿಮಠಕ್ಕೆ ಸೇರಬೇಕಾಗಿ ಬಂದಿತು. ಬೆಳಿಗ್ಗೆ ಕೂಲಿಮಠಕ್ಕೆ ಹೋಗಬೇಕಾದರೆ ರಾಗಿಮುದ್ದೆ ಮಾಡಿದ ಪಾತ್ರೆಯಲ್ಲಿ ತಳದಲ್ಲಿದ್ದ ಸೀಕುಬಾಕನ್ನು ನನ್ನ ಜೇಬಿಗೆ ತುಂಬಿ ಕಳುಹಿಸುತ್ತಿದ್ದರು.

ಆ ವೇಳೆಗಾಗಲೇ ಗುಬ್ಬಿ ಶ್ರೀ ಚೆನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಸಭಾ ಎಂಬ ಹೆಸರಿನಲ್ಲಿ ೧೮೮೪ನೇ ಇಸವಿಯಲ್ಲಿ ಪ್ರಾರಂಭವಾಗಿದ್ದ ನಾಟಕ ಸಂಸ್ಥೆಯು ಗುಬ್ಬಿಯ ಹತ್ತಿರ ಹತ್ತಿರವೇ ಪರಸ್ಥಳದಲ್ಲಿ ನಾಟಕವಾಡಿಕೊಂಡು ಮಳೆಗಾಲ ಬಂದರೆ ನಾಲ್ಕು ತಿಂಗಳು ಸಂಸ್ಥೆ ನಿಲ್ಲಿಸಿ ಬೇಸಿಗೆ ಕಾಲದಲ್ಲಿ ಪುನಃ ಆರಂಭ ಮಾಡಿ ಪರಸ್ಥಳಕ್ಕೆ ಹೋಗುತ್ತಿತ್ತು. ಆ ಸಂಸ್ಥೆಯನ್ನು ಗುಬ್ಬಿಯ ಕೆಲವು ವರ್ತಕರು ಚಂದಾ ವಸೂಲು ಮಾಡಿ, ಐನೂರು ರೂಪಾಯಿಗಳನ್ನು ಸಂಗ್ರಹಿಸಿ, ಶ್ರೀ ವೀರಪ್ಪಶಾಸ್ತ್ರಿಗಳೆಂಬ ಕವಿಗಳ ಸಹಾಯದಿಂದ ಪ್ರಾರಂಭಿಸಿದರು. ಸಂಸ್ಥೆ ಪ್ರಾರಂಭವಾದ ಮುಹೂರ್ತ ಶುಭ ಮುಹೂರ್ತವಾದುದರಿಂದಲೂ ಬೇರೆ ಯಾವ ಕನ್ನಡ ನಾಟಕ ಸಂಘಗಳು ಇಲ್ಲದುದರಿಂದಲೂ, ತುಮಕೂರು ಜಿಲ್ಲೆಯಲ್ಲಿಯೇ ಸಂಚಾರ ಮಾಡುತ್ತಾ ಪ್ರಸಿದ್ಧಿಗೆ ಬರಲು ಅವಕಾಶವಾಯಿತು. ಅದೇ ಸಂಸ್ಥೆಯಲ್ಲಿ ನನ್ನ ಚಿಕ್ಕಪ್ಪನವರಾದ ಶ್ರೀ ವೀರಣ್ಣನೆಂಬುವರು ವ್ಯವಸ್ಥಾಪಕರಾಗಿ ನೌಕರಿಗೆ ಸೇರಿಕೊಂಡಿದ್ದರು. ಆ ಸಂಘದಲ್ಲಿ ಆಗ ನಟರು, ವಾದ್ಯಗಾರರು, ವ್ಯವಸ್ಥಾಪಕರು,

ಕೆಲಸಗಾರರು, ಅಡಿಗೆ ಭಟ್ಟರು, ಸಂಘದ ಯಜಮಾನರೂ ಸೇರಿ ಇಪ್ಪತ್ತೈದು ಜನಕ್ಕೆ ಮೀರಿರಲಿಲ್ಲ.

ಆಗ ಗುಬ್ಬಿಯಲ್ಲಿ ಮುನಿಸಿಪಾಲಿಟಿ ಲಾಂದ್ರಗಳಿಗೆ ಎಣ್ಣೆ ಹಾಕಿ ದೀಪಗಳನ್ನು ಹಚ್ಚಲು ತಿಂಗಳಿಗೆ ಹದಿನೈದು ರೂಪಾಯಿಗಳಿಗೆ ಒಪ್ಪಿಕೊಂಡು, ಹೆಗಲ ಮೇಲೆ ಏಣಿ ಕೈಯಲ್ಲಿ ಸೀಮೆಯೆಣ್ಣೆ ಡಬ್ಬ ಹಿಡಿದುಕೊಂಡು ಮೇಲ್ಕಂಡ ಕಂಟ್ರಾಕ್ಟ್ ಕೆಲಸವನ್ನು ಮಾಡುತ್ತಿದ್ದ ಚಂದಣ್ಣ ಎಂಬುವರು ಕಂಪೆನಿಯನ್ನು ಸೇರಿದರು. ಅವರು ಅವಿದ್ಯಾವಂತರಾದರೂ, ತುಂಬಾ ಧೈರ್ಯಶಾಲಿಗಳು, ಸಾಹಸವಂತರು; ಯಾವ ಗಲಾಟೆಗಳಿಗೂ ಹೆದರುವವರಲ್ಲ. ಇದನ್ನು ಕಂಡು ಕಂಪೆನಿಯ ಜವಾಬ್ದಾರಿಯನ್ನು ಗುಬ್ಬಿಯ ವರ್ತಕರು ಚಂದಣ್ಣನವರಿಗೇ ವಹಿಸಿಕೊಟ್ಟರು. ತುಮಕೂರು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲೂ ಹೋಬಳಿಗಳಲ್ಲೂ ಸಂಚಾರ ಮಾಡಿಕೊಂಡು ಗುಬ್ಬಿ ನಾಟಕವೆಂದು ಪ್ರಚಾರಕ್ಕೆ ತಂದು ಚಂದಣ್ಣನವರು ಐದಾರು ವರುಷ ನಡೆಸಿಕೊಂಡು ಬಂದರು. ಸಂಸ್ಥೆಯು ಸಂಚಾರ ಮಾಡುತ್ತ ಅದರ ಕಷ್ಟ ಸುಖಗಳ ಅನುಭವವಾಗುತ್ತ ಆಗುತ್ತ ವ್ಯವಸ್ಥಾಪಕರಾಗಿದ್ದ ಚಂದಣ್ಣನವರೇ ಕ್ರಮೇಣ ಮಾಲೀಕರಾದರು.

ಅದೇ ಸಮಯದಲ್ಲಿ ನನ್ನ ಚಿಕ್ಕಪ್ಪನವರು, ನನ್ನ ತಾಯಿಯವರು ನಮ್ಮನ್ನು ಸಾಕಲು ನೆರೆಹೊರೆಯವರ ಮನೆಗಳಲ್ಲಿ ಕೂಲಿಕೆಲಸಗಳನ್ನು ಮಾಡುತ್ತಿರುವ ದುಸ್ಥಿತಿಯನ್ನು ನೋಡಲಾರದೆ ನನ್ನನ್ನು ಶ್ರೀ ಚೆನ್ನಬಸವೇಶ್ವರಸ್ವಾಮಿ ನಾಟಕ ಸಂಸ್ಥೆಗೆ ಸೇರಿಸಿದರು. ಆಗ್ಗೆ ನನಗೆ ಸುಮಾರು ೫-೬ ವರುಷ ವಯಸ್ಸಾಗಿತ್ತು. ಸಂಘದಲ್ಲಿ ನನಗೆ ಅಕ್ಷರಾಭ್ಯಾಸ ಮಾಡಿಸಲು ಪ್ರಾರಂಭಿಸಿ ಕೆಲವು ತಿಂಗಳು ಕಳೆದ ನಂತರ ನನಗೆ ರಂಗಭೂಮಿಗೆ ಪ್ರವೇಶಿಸಲು ಅಭ್ಯಾಸ ಮಾಡಿಸಿ, ಲಂಗೋಟಿ ಹಾಕಿ ರಂಗಭೂಮಿಗೆ ಕಳುಹಿಸುತ್ತಿದ್ದರು. ಅಲ್ಲದೆ ಪುಟ್ಟ ಪುಟ್ಟ ಮಕ್ಕಳ ಪಾತ್ರ ಕೊಡುತ್ತ ಬಂದರು, ಆಗ ಸಂಘದಲ್ಲಿ 'ಚಿತ್ರಶೇಖರ—ಸೋಮಶೇಖರ' 'ಸಿರಿಯಾಳ ಚರಿತ್ರೆ', 'ಸತ್ವರಥನ ಚರಿತ್ರೆ', ಜಗನ್ಮೋಹನ ಚರಿತ್ರೆ (ಕರಿಭಂಟನ ಕತೆ)' 'ಹರಿಶ್ಚಂದ್ರ' ನಾಟಕಗಳನ್ನು ಆಡುತ್ತಿದ್ದರು. ಮೇಲ್ಕಂಡ ನಾಟಕಗಳನ್ನೆಲ್ಲಾ ಕವಿಗಳಾದ ಶ್ರೀ ವೀರಪ್ಪ ಶಾಸ್ತ್ರಿಗಳೇ ಬರೆದು ಕೊಟ್ಟು ಅಭ್ಯಾಸಮಾಡಿಸುತ್ತಿದ್ದರು. ಈ ನಾಟಕಗಳಲ್ಲಿ 'ಚಿತ್ರಶೇಖರ – ಸೋಮಶೇಖರ' ನಾಟಕದಲ್ಲಿ ಹೆಚ್ಚು ಹಾಸ್ಯಕ್ಕೆ ಅವಕಾಶವಿದ್ದುದರಿಂದ ಜನರ ಮೆಚ್ಚುಗೆ ಪಡೆದು ಪ್ರಾಶಸ್ತ್ಯಕ್ಕೆ ಬಂದು ಬಹು ಮುಖ್ಯ ನಾಟಕವಾಗಿತ್ತು. ಅದರಲ್ಲಿ ನಾನು ಅಗಸನ ಮಗ 'ಡೋಲ' ಎಂಬ ಹುಡುಗನ ಪಾತ್ರವನ್ನಲ್ಲದೆ ಬಾಲ ಚಿತ್ರಶೇಖರ, ಬಾಲಚಿಲ್ಲಾಳ, ಸತ್ಯರಥ, ರೋಹಿತಾಶ್ವ, ಬ್ರಾಹ್ಮಣ ಹುಡುಗನ ಪಾತ್ರಗಳನ್ನು ಕ್ರಮೇಣ ಅಭಿನಯಿಸಲು ಪ್ರಾರಂಭಿಸಿದೆ. ನಾನು ಚಿಕ್ಕ ಮಗುವಾದುದರಿಂದಲೂ, ಚಟುವಟಿಕೆಯಿಂದ ಇದ್ದುದರಿಂದಲೂ ಜನಗಳು ನನ್ನ ಪಾತ್ರಗಳನ್ನು ಬಹುವಾಗಿ ಮೆಚ್ಚುತ್ತಿದ್ದರು.

ಎರಡು ಮೂರು ವರ್ಷಗಳನಂತರ ಮೋಟಗಾನ ಹಳ್ಳಿಯ ವಿದ್ವಾನ್ ಶಂಕರಶಾಸ್ತ್ರಿಗಳಿಂದ ವಿರಚಿತವಾದ ಮಹಾಭಾರತದ ಭಾಗವಾದ 'ಪಾಂಡವ ವಿಜಯ' ವೆಂಬ ನಾಟಕವನ್ನು ಅಭ್ಯಾಸಮಾಡಿ ಪ್ರದರ್ಶಿಸಲು ಪ್ರಾರಂಭಿಸಿದರು. ಈ ನಾಟಕದಲ್ಲಿ ನನಗೆ ಸೂರ್ಯನ ಪಾತ್ರವನ್ನು ಕೊಟ್ಟಿದ್ದರು. ಸೂರ್ಯನ ಪಾತ್ರವನ್ನು ನೆಲದ ಮೇಲೆ

ನಿಂತು ಮಾತನಾಡುವಂತಿರದೆ ಅಂತರಿಕ್ಷದಲ್ಲಿಯೇ ಮಾತು, ಹಾಡುಗಳನ್ನು ಹಾಡಿ ಹಾಗೆಯೇ ರಂಗದ ಮೇಲುಗಡೆಗೆ ನಿಷ್ಕ್ರಮಿಸಬೇಕಾಗಿತ್ತು—ಅದಕ್ಕಾಗಿ ಕ್ರಾಸ್ ಕಪಿಯೊಂದನ್ನು ಕಟ್ಟಿ ಅದರ ಮೇಲೆ ನನ್ನನ್ನು ಕೂರಿಸಿ ಮೇಲಕ್ಕೆಳೆದು ಪಾತ್ರದ ಸಂದರ್ಭ ಬಂದಾಗ ಅರ್ಧಕ್ಕೆ ಇಳಿಸಿ ನನ್ನ ಪಾತ್ರ ಮುಗಿದನಂತರ ಪುನಃ ನನ್ನನ್ನು ಮೇಲಕ್ಕೆಳೆದು, ದೃಶ್ಯ ಮುಗಿದು ಮುಂದಿನ ಪರದೆ ಬಿದ್ದಾಗ ನನ್ನನ್ನು ಕೆಳಕ್ಕಿಳಿಸುತ್ತಿದ್ದರು. ಮೊದಲನೇ ದಿನ ನನ್ನನ್ನು ಮೇಲಕ್ಕೆಳೆದಾಗ ಭಯದಿಂದ ಕೂಗಿಕೊಳ್ಳಲೂ ಆಗದೆ ನನಗೆ ಅಲ್ಲಿಯೇ ಆಗದೆ ಇದ್ದುದೆಲ್ಲವೂ ಆಗಿತ್ತು. ಅದೇನೆಂದು ನೀವೇ ಊಹಿಸಿಕೊಳ್ಳಬಹುದು.

ಪಾಂಡವವಿಜಯ ನಾಟಕದ ಆರಂಭದಲ್ಲಿ ಕೆಲವು ದಿನಗಳು ಸಂಘದ ನಟರುಗಳಲ್ಲಿ ದ್ವೇಷ ಹುಟ್ಟಿತ್ತು. ನಟರುಗಳೆಲ್ಲರೂ ಅವಿದ್ಯಾವಂತರಾಗಿದ್ದುದರಿಂದ ಆ ನಾಟಕದಲ್ಲಿ ಪಾಂಡವರ ಗುಂಪಿನ ಪಾತ್ರಧಾರಿಗಳಿಗೂ, ಕೌರವರ ಗುಂಪಿನ ಪಾತ್ರಧಾರಿಗಳಿಗೂ ಸಹಜವಾಗಿ ದ್ವೇಷವೇ ಬೆಳೆದು ಬಂದಿತ್ತು. ಒಂದು ದಿನ ಅದೇ ನಾಟಕದಲ್ಲಿ ದ್ರೌಪದಿಯ ಸೀರೆಯನ್ನು ದುಶ್ಯಾಸನನು ಸೆಳೆಯುವ ಕಾಲದಲ್ಲಿ ಭೀಮನು ಕುಪಿತನಾಗಿ ತಾವುಗಳು ಕುಳಿತಿದ್ದ ಬೆಂಚನ್ನೆತ್ತಿ ಹೊಡೆದ ದೃಶ್ಯವಂತೂ ಬಹಳ ವಿನೋದವಾಗಿತ್ತು. ಕ್ರಮೇಣ ನಟರುಗಳು ವಿವೇಕ ತಿಳಿದುಕೊಂಡು ಸರಿಪಡಿಸಿಕೊಂಡರು. ಪಾಂಡವ ವಿಜಯ ನಾಟಕವು ಬಹುಕಾಲ ನಡೆದು ಒಳ್ಳೇ ಕೀರ್ತಿಯನ್ನು ಪಡೆದುದೂ ಅಲ್ಲದೆ ಸಂಘವು ತುಂಬಾ ಪ್ರಸಿದ್ಧಿಗೆ ಬರಲವಕಾಶ ವಾಯಿತು. ನಂತರ ಬೇರೆ ಬೇರೆ ಜಿಲ್ಲೆಗಳ ತಾಲ್ಲೂಕುಗಳು, ಅಂದರೆ ನೆಲಮಂಗಲ, ದೊಡ್ಡಬಳ್ಳಾಪುರ, ಬೆಳವಂಗಲ, ಕಾಡನೂರು, ಕರೆಕಲ್ ತುಮಕೂರು, ಕಾನಕಾನಹಳ್ಳಿ (ಕನಕಪುರ), ಕ್ಲೋಸ್‌ಪೇಟೆ (ರಾಮನಗರ), ಹಾರುವಹಳ್ಳಿ, ಆನೇಕಲ್, ಥಳಿವಗ್ಗೆರೆ ಗ್ರಾಮಗಳಲ್ಲಿ ಸಂಚರಿಸಲು ಸಂಘವು ಪ್ರಾರಂಭ ಮಾಡಿತು. ಸಾಮಾನ್ಯವಾಗಿ ಶ್ರಾವಣ ಮಾಸದ ಕೊನೆಗೆ ಮಳೆಗಾಲದ ಪ್ರಯುಕ್ತ ಸಂಘವನ್ನು ನಿಲ್ಲಿಸಿ ಮಾರ್ಗಶಿರ ಮಾಸದ ಕೊನೆಯಲ್ಲಿ ಪುನಃ ಪ್ರಾರಂಭ ಮಾಡುತ್ತಿದ್ದರು. ಸಂಘವನ್ನು ನಿಲ್ಲಿಸಿದಾಗ ಹೊಸ ಹೊಸ ನಾಟಕಗಳನ್ನು ಅಭ್ಯಾಸ ಮಾಡುತ್ತಿದ್ದರು. ಪಾಂಡವ ವಿಜಯ ನಾಟಕ ನಂತರ ಗುಲೇಬಕಾವಲಿ, ಇಂದ್ರಸಭಾ, ಪ್ರಭಾವತಿ ದರ್ಬಾರ್ ನಾಟಕಗಳನ್ನು ಅಭ್ಯಾಸ ಮಾಡಿದೆವು.

ಆಗಿನ ಕಾಲದಲ್ಲಿ ಪ್ರತಿನಿತ್ಯವೂ ನಾಟಕವಿರುತ್ತಿರಲಿಲ್ಲ. ವಾರಕ್ಕೆ ಮೂರು, ಸಂತೆಯ ದಿನ ಒಂದು ಒಟ್ಟು ವಾರಕ್ಕೆ ನಾಲ್ಕು ದಿನ ಮಾತ್ರ ನಾಟಕವಿರುತ್ತಿತ್ತು.

ಸಂಘದಲ್ಲಿ ವೀರಪ್ಪ ಶಾಸ್ತ್ರಿಗಳು, ರಾಜಾಪಾರ್ಟು ಹನುಮಂತರಾವ್, ಗುಬ್ಬಿ ಸಂಜೀವಯ್ಯನವರು, ಗುಬ್ಬಿ ಸುಬ್ಬಯ್ಯ, ರೇವಣ್ಣನವರು, ಕೊಳಾಲದಪ್ಪ, ದೊಡ್ಡಕಣ್ಣಯ್ಯ, ಚನ್ನಬಸವಯ್ಯ, ಹಾಸ್ಯಗಾರ ದೊಡ್ಡನಂಜಪ್ಪ, ದೊಡ್ಡಯ್ಯನವರು, ರಾಮಚಂದ್ರರಾವ್, ರಾಣೀಪಾರ್ಟು ಶಂಕರಪ್ಪ, ಕೋರದ ಮಲ್ಲಪ್ಪ, ಕೋರದ ಗುರುಸಿದ್ಧಯ್ಯ, ರುದ್ರಯ್ಯ, ಯಜಮಾನ್ ಅಣ್ಣಯ್ಯಪ್ಪ, ಓಲೇಶ್ವರಸ್ವಾಮಿ, ಅರ್ಚಕ ಚನ್ನಬಸವಣ್ಣ, ಮುರಿಗೆಪ್ಪ, ಚೇಳೂರು ನಾಗರಾಜು ಭಜಂತ್ರಿ, ಗುಬ್ಬಿ ಪಿಟೀಲು ಕಿಟ್ಟಪ್ಪ, ತಬಲಕ್ಕೆ ಗುಬ್ಬಿ ಹುಚ್ಚವೀರಪ್ಪ, ಪರದೆ ಎಳೆಯಲು ಗುಬ್ಬಿ ಚನ್ನಮಲ್ಲಯ್ಯ, ಹುಚ್ಚಪ್ಪ ಮತ್ತು ಇತರರೆ ಅಡಿಗೆಯವರು,

ಟಿಕೆಟ್ಟು ಮಾರುವವನೊಬ್ಬ, ಗೇಟು ಕೆಲಸಕ್ಕೆ ಮೂರು ಜನ-ಒಟ್ಟಿನಲ್ಲಿ ಮೂವತ್ತು ಜನಕ್ಕೆ ಮೀರಿರಲಿಲ್ಲ.

ರಾಜ, ರಾಣಿ ಮತ್ತು ನಕಲಿ ಪಾತ್ರಧಾರಿಗಳಿಗೆ ಹದಿನೈದು-ಇಪ್ಪತ್ತು ರೂ. ಸಂಬಳ, ವಾದ್ಯದವರಿಗೆ ಹದಿನೈದರಿಂದ ಇಪ್ಪತ್ತು ರೂಪಾಯಿ, ಇತರೆಯವರಿಗೆ ಹತ್ತರಿಂದ ಹನ್ನೆರಡು ರೂಪಾಯಿ, ಸ್ಟೇಜು, ಗೇಟಿನವರಿಗೆ ಎಂಟರಿಂದ ಹತ್ತು ರೂ. ಗಳವರೆಗೆ ಸಂಬಳಗಳನ್ನು ಕೊಡುತ್ತಿದ್ದರು. ಆಗ ನನಗೆ ಐದು ರೂ. ಸಂಬಳ ಗೊತ್ತು ಮಾಡಿದ್ದರು. ಹೊಸದಾಗಿ ಬರುವ ಕೆಲವರಿಗೆ ಸಂಬಳವಿಲ್ಲ—ಬರೀ ಉಂಬಳ. ಕಾಲ ಕ್ರಮೇಣ ಅವರಿಗೆ ಯೋಗ್ಯತಾನುಸಾರ ಸಂಬಳ ಗೊತ್ತುಮಾಡುತ್ತಿದ್ದರು.

ಸಂಘವನ್ನು ಬೇಸಿಗೆ ಕಾಲದಲ್ಲಿ ನಡೆಯಿಸಿ ಮಳೆಗಾಲದಲ್ಲಿ ನಿಲ್ಲಿಸಿ ಪುನಃ ಪ್ರಾರಂಭಿಸುತ್ತಿದ್ದರು. ನಾನು ನಾಟಕ ಸಂಘದ ಜೊತೆಯಲ್ಲಿಯೆ ಇದ್ದು ಕನ್ನಡ ಅಕ್ಷರಗಳನ್ನು ಕಲಿತು, ಮಳೆಗಾಲದಲ್ಲಿ ಸಂಘವನ್ನು ನಿಲ್ಲಿಸಿದಾಗ ಪಾಠಶಾಲೆಯ ಉಪಾಧ್ಯಾಯರಿಗೆ ಹೇಳಿಕೊಂಡು ಓದಲು ನಾಲ್ಕು ತಿಂಗಳು ಮಾತ್ರ ಹೋಗಿ ಹುಡುಗರ ಜೊತೆಯಲ್ಲಿಯೇ ಸೇರುತ್ತಿದ್ದೆ. ವಿದ್ಯೆಯ ಮೇಲೆ ಹೆಚ್ಚು ಆಸಕ್ತಿಯಿರುತ್ತಿರಲಿಲ್ಲ. ಜೊತೆಗಾರರೊಡನೆ ಹೊಂಗೆ ಮರದಲ್ಲಿ ಮರಕೋತಿ ಆಡಲು ಹೋಗುತ್ತಿದ್ದೆ. ಆ ಮರವು ಈಗಲೂ ಇದೆ. ಅಲ್ಲದೆ ಶಾಲೆಯಲ್ಲಿ ಉಪಾಧ್ಯಾಯರೂ, ಇತರ ಹುಡುಗರೂ ಸಹ ನನ್ನಿಂದ ಹಾಡುಗಳನ್ನು ಹೇಳಿಸುವುದರಲ್ಲೇ ಕಾಲಕಳೆಯುತ್ತಿದ್ದರು. ಮಳೆಗಾಲದ ನಂತರ ಪುನಃ ನಾಟಕ ಸಂಸ್ಥೆಯ ಜೊತೆಯಲ್ಲಿ ಹೋಗುತ್ತಿದ್ದೆ. ಹೀಗಾಗಿ ನನಗೆ ವಿದ್ಯಾಭ್ಯಾಸಕ್ಕೆ ಅವಕಾಶವೇ ಇಲ್ಲವಾಯಿತು.

ಆಗ ಶ್ರೀ ಚಂದಣ್ಣನವರು ನನಗೆ ಕೆಲವು ದಿನಗಳು ಅಕ್ಷರಾಭ್ಯಾಸ ಮಾಡಿಸಿದರು. ಆಗ ಗುಬ್ಬಿಯಲ್ಲಿ ಪ್ರೈಮರಿ ಮಿಡಲ್ ಸ್ಕೂಲುಗಳಿರಲಿಲ್ಲ. ಕೂಲಿ ಮಠವೊಂದಿತ್ತು. ಅದರಲ್ಲಿ ಅವರು ಎರಡನೇ ತರಗತಿಯವರೆಗೂ ಓದಿದ್ದರೋ ಏನೋ—ಅಕ್ಷರಗಳನ್ನು ಸ್ಲೇಟಿನ ಮೇಲೆ, ಮೇಲ್ಬಂಗ್ತಿಯನ್ನು ಹಾಕಿ ನನ್ನಿಂದ ತಿದ್ದಿಸುತ್ತಿದ್ದರು. ಒಂದು ನೂರರವರೆಗೂ ತಿದ್ದಿಸುತ್ತಿದ್ದರು. ನನ್ನನ್ನು ಅವರ ಸ್ವಂತ ಮಗನಂತೆ ನೋಡುತ್ತಿದ್ದರು. ಅವರು ಜೈನಮತದವರಾದರೂ ಮೊಹರಂಹಬ್ಬದಲ್ಲಿ ಹುಲಿವೇಷ ಹಾಕಿಕೊಂಡು ಊರಿನಲ್ಲಿ ದೊಡ್ಡ ದೊಡ್ಡ ಮನುಷ್ಯರ ಮುಂದೆ ಹೋಗಿ ಕುಣಿಯುತ್ತಿದ್ದರು. ಅವರ ಜೊತೆ ನನಗೂ ಹುಲಿವೇಷ ಹಾಕಿಸಿ ಅವರಿಗೆ ಆಯಾಸವಾದಾಗ ನನ್ನನ್ನು ಕುಣಿಸುತ್ತಿದ್ದರು. ನಾನೂ ಉತ್ಸಾಹದಿಂದ ಸಂತೋಷದಿಂದ ಚೆನ್ನಾಗಿ ಕುಣಿಯುತ್ತಿದ್ದೆ. ಹೀಗೆ ಅವರು ತಮ್ಮ ಐವತ್ತನೆಯ ವಯಸ್ಸಿನವರೆಗೂ ಹುಲಿವೇಷ ಹಾಕಿ ಆಡುತ್ತಿದ್ದರು.

ಆ ಕಾಲದ ನಾಟಕ ಕಂಪನಿಗಳು

ಕೆಲವು ವರ್ಷಗಳು ಕಳೆದು ನನಗೆ ಸುಮಾರು ಹದಿನಾಲ್ಕು ಅಥವಾ ಹದಿನೈದು ವರುಷ ವಯಸ್ಸಾದಾಗ ಅದಕ್ಕೆ ಅನುಗುಣವಾಗಿ ಶಾರೀರ ಒಡೆದು ದಪ್ಪನಾಗಿ ಪುತ್ರನ ಪಾತ್ರಕ್ಕೆ ಸರಿಹೋಗದೆ. ಸಖಿಪಾತ್ರ, ಚಿಲ್ಲರೆ ಪಾತ್ರಗಳನ್ನು ಮಾಡಲು ನಿಯಮಿಸಲ್ಪಟ್ಟೆನು. ಇದೇ ಸಂಸ್ಥೆಯಲ್ಲಿ ಪಿಟೀಲು ವಾದನಕಾರರಾದ ವಿ|| ದಾನಪ್ಪಯ್ಯ ಎಂಬುವರು ನನಗೆ ಗುರುಗಳಾಗಿ ಸಂಸ್ಥೆಯಲ್ಲಿ ವಿದ್ಯೆ ಹೇಳುತ್ತಿದ್ದು, ಪಾತ್ರಗಳನ್ನು ಹೇಳಿಕೊಟ್ಟು ಪಾತ್ರಮಾಡಲು ಅರ್ಹನನ್ನಾಗಿ ಮಾಡಿದರು. ಇಂದಿಗೂ ನಾನು ಸದಾ ಅವರನ್ನು ಸ್ಮರಿಸಿಕೊಳ್ಳಬೇಕಾದ್ದು ನನ್ನ ಕರ್ತವ್ಯ. ದಾನಪ್ಪಯ್ಯನವರೆಂದರೆ ಬೆಂಗಳೂರಿನ ಸಂಗೀತವಿದ್ವಾನ್ ಶ್ರೀ ಡಿ. ಸುಬ್ಬ ರಾಮಯ್ಯನವರ ತಂದೆಯವರು. ಅವರೇ ನನ್ನ ವಿದ್ಯಾಗುರುಗಳು. ಇವರೂ, ಇವರ ತಮ್ಮಂದಿರಾದ ಶ್ರೀ ಪುಟ್ಟಣ್ಣಯ್ಯನವರೂ ನಾಟಕದಲ್ಲಿ ಕೇವಲ ಪಿಟೀಲು ಬಾರಿಸುವುದು ಮಾತ್ರವಲ್ಲದೆ ಸಂಸ್ಥೆಯ ಲೆಕ್ಕಪತ್ರಗಳನ್ನು ಬರೆಯುವುದು, ಲೈಸೆನ್ಸ್ ತರುವುದು ಮೊದಲಾದ ಜವಾಬ್ದಾರಿ ಕೆಲಸಗಳನ್ನು ಮಾಡುತ್ತಿದ್ದರು. ನಾನು ಶ್ರೀ ಪುಟ್ಟಣ್ಣಯ್ಯನವರಲ್ಲಿ ಸಂಗೀತ ಪಾಠವನ್ನು ಅಭ್ಯಾಸ ಮಾಡಿದೆ. ದೊಡ್ಡ ನಂಜುಂಡಪ್ಪ, ಚಿಕ್ಕ ನಂಜುಂಡಪ್ಪ ಎಂಬ ಅವಳಿ ಸೋದರರೂ ಸಹ ಕಂಪನಿಯಲ್ಲಿ ವಾದ್ಯಗಳನ್ನು ಮೇಲ್ಕಂಡ ದಾನಪ್ಪಯ್ಯ ಪುಟ್ಟಣ್ಣಯ್ಯನವರ ಗೈರು ಹಾಜರಿಯಲ್ಲಿ ನುಡಿಸುತ್ತಿದ್ದರಲ್ಲದೆ ನನಗೆ ಸಂಗೀತಪಾಠವನ್ನು, ತಬಲ ಸಹ ನುಡಿಸುವುದನ್ನು ಹೇಳಿಕೊಡುತ್ತಿದ್ದರು.

ಕೆಲವು ಕಾಲಾನಂತರ ನಾಟಕ ಕಂಪನಿಗಳು ಮೈಸೂರು, ಬೆಂಗಳೂರುಗಳಲ್ಲಿ ಮಾತ್ರವಲ್ಲದೆ ಬೇರೆ ಕಡೆಗಳಲ್ಲಿಯೂ ಹೆಚ್ಚು ಹೆಚ್ಚಾಗಿ ಪ್ರಾರಂಭವಾದವು. ಆಗ ನಮ್ಮ ಸಂಘದ ರಾಜಾಪಾರ್ಟು ಹನುಮಂತರಾಯರು ಶ್ರೀ ವರದಾಚಾರ್ಯರ ಕಂಪನಿಗೆ ಹೋಗಿ ಅಲ್ಲಿ ಕೆಲಕಾಲವಿದ್ದು ಅನಂತರ ಮೈಸೂರು ಅರಮನೆಯ ಕಂಪನಿಗೆ ಹೋಗಿ ಸೇರಿಕೊಂಡರು. ರಾಣಿಪಾರ್ಟು ಶಂಕರಪ್ಪನವರು ಮಳವಳ್ಳಿ ಕಂಪನಿಗೆ ಸೇರಿದರು. ನಮ್ಮ ಸಂಘದಲ್ಲಿ ರಾಣಿಪಾರ್ಟು ಮಾಡುತಿದ್ದ ಇನ್ನೊಬ್ಬ ನಟ ರೇವಣ್ಣನೆಂಬುವರು ರಾಜ ಪಾರ್ಟಿಗೆ ನಿಂತರು. ರಾಣಿಪಾತ್ರಕ್ಕೆ ತುಮಕೂರಿನ ಗೋವಿಂದರಾಜು, ಉಗ್ರಯ್ಯ ಎಂಬುವರು ಬಂದರು. ಅಲ್ಲದೆ ಮೈಸೂರಿನಿಂದ ಅಣ್ಣಯ್ಯಪ್ಪ. ಬಸಪ್ಪ ಎಂಬ ಉತ್ತಮ ಪಾತ್ರಧಾರಿಗಳು ಬಂದು ಸೇರಿದರು.

ಆಗಿನ ಕಾಲದಲ್ಲಿ ನಾಟಕ ಕಲೆಗೆ ಹೆಚ್ಚು ಪ್ರಾಶಸ್ತ್ಯವಿರಲಿಲ್ಲ. ನಾಟಕದ ಕಲೆ ಕೀಳು ಕಲೆಯೆಂದೂ ನಾಟಕದ ಜನ ಕೀಳು ಜನರೆಂದೂ ಜನರು ಪರಿಗಣಿಸುತ್ತಿದ್ದರು. ಅವರಿಗೆ ಸರಿಯಾದ ಸ್ಥಾನಮಾನಗಳೇ ಇರುತ್ತಿರಲಿಲ್ಲ. ನಾಟಕದ ಜನ ನೀರು, ಸುಣ್ಣ ಕೇಳಿದರೂ ಕೊಡದೆ ಬಾಗಿಲು ಹಾಕಿಕೊಳ್ಳುತ್ತಿದ್ದರು. ಹಾಗಿದ್ದರೂ ಶ್ರೀ ಚಂಡಣ್ಣ ನವರು ಕಂಪನಿಯನ್ನು ಧೈರ್ಯದಿಂದ ನಡೆಸಿಕೊಂಡು ಹೋಗುತ್ತಿದ್ದರು. ನಂತರ 'ಸಾರಂಗ ಧರಚರಿತ್ರೆ' ನಾಟಕವನ್ನು ಕಲಿತು ಆಡುವಾಗ ರಾಣಿ ಪಾತ್ರಕ್ಕೆ ಕಲ್ಲೂರು ಬೇಲೂರಯ್ಯ ತಿಮ್ಮಯ್ಯ ಎಂಬ ಉತ್ತಮ

ನಟರು ಬಂದನಂತರ ಧೈರ್ಯದಿಂದ ನಮ್ಮ ಸಂಘ ದೂರ ಸಂಚಾರ ಮಾಡಲು ಅವಕಾಶವಾಯಿತು. ನನ್ನ ಚಿಕ್ಕಪ್ಪನವರಾದ ವೀರಣ್ಣನವರು ಸಂಸ್ಥೆಯನ್ನು ಬಿಟ್ಟನಂತರ ಕುಣಿಗಲ್ ರಂಗರಾಯರು ವ್ಯವಸ್ಥಾಪಕರಾದರು. ಸಂಸ್ಥೆಯು ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಹಿರಿಯಾಳು, ಮೊಳಕಾಲ್ಮೂರು, ಗೌರಸಂದ್ರ ವಗ್ಯೆರೆ ಸಂಚಾರಮಾಡಿ ಬಳ್ಳಾರಿಯ ಜೈನ ಮತಸ್ಥರಾದ ದೊಡ್ಡವರ್ತಕರಾದ ಪದ್ಮರಾಜಯ್ಯನವರ ಸಲಹೆಯ ಮೇರೆಗೆ ಬಳ್ಳಾರಿಗೆ ಹೋಯಿತು.

ಬಳ್ಳಾರಿಯಲ್ಲಿ ಅಲ್ಲಿಯ ಆಂಧ್ರ ಪಿತಾಮಹ ಶ್ರೀ ಕೃಷ್ಣಮಾಚಾರ್ಯರ ಸರಸ ವಿನೋದಿನಿ ಸಭಾ ಸಂಘದಲ್ಲಿ ಬಹು ಚೆನ್ನಾಗಿ ಉಷಾಪರಿಣಯ, ಸುಭದ್ರಾಪರಿಣಯ ನಾಟಕಗಳನ್ನು ತೆಲುಗಿನಲ್ಲಿ ಆಡುತ್ತಿದ್ದರು. ಈ ಪೌರಾಣಿಕ ನಾಟಕಗಳನ್ನು ರಾವ್ ಬಹದೂರ್ ಹನುಮಂತೇಗೌಡರಿಂದ ಕನ್ನಡಕ್ಕೆ ಭಾಷಾಂತರ ಮಾಡಿಸಿ ಅಭ್ಯಾಸ ಮಾಡಿ, ತೆಲುಗು ಹಾಡಿನ ಧಾಟಿಗಳನ್ನೇ ಕನ್ನಡ ಹಾಡುಗಳಿಗೂ ಹಾಕಿ ಬಳ್ಳಾರಿಯಲ್ಲಿಯೇ ಅಭಿನಯಿಸಿದೆವು. ನಾವು ಶ್ರೀ ಕೃಷ್ಣಮಾಚಾರ್ಯರು ಆಡುತ್ತಿದ್ದ ನಾಟಕ ಮಂದಿರವನ್ನು ಬಾಡಿಗೆಗೆ ತೆಗೆದುಕೊಂಡಿದ್ದೆವು. ಅದೇ ಊರಿನಲ್ಲಿ ಛೇರ್ಮನ್ನರಾಗಿದ್ದ ಕೊಲಾಚಲ ವೆಂಕಟರಾವ್ ಎಂಬುವರು ಮತ್ತೊಂದು ಸಂಸ್ಥೆಯನ್ನು ಮಾಡಿ, ವಾಣಿ ವಿಲಾಸ ಥಿಯೇಟರ್ ಎಂಬ ಹೆಸರಿನ ನಾಟಕಮಂದಿರವನ್ನು ಕಟ್ಟಿದ್ದರು. ನಾವು ಬಳ್ಳಾರಿಗೆ ಮೊಟ್ಟಮೊದಲು ಹೋದಾಗ ಸುಮಾರು ೧೯೦೨-೧೯೦೩ ನೇ ಇಸವಿಯಿರಬಹುದು.

ಆಗ ಬಳ್ಳಾರಿಯಲ್ಲಿ ವಿನಾ ಮತ್ತೆಲ್ಲಿಯೂ ಥಿಯೇಟರ್ ಇರಲಿಲ್ಲ. ಈಚೆಗೆ ಬೆಂಗಳೂರಿನಲ್ಲಿ ತುಳಸಿತೋಟದಲ್ಲಿ ಒಂದು ಸಣ್ಣ ಥಿಯೇಟರ್ ಇತ್ತು. ಬೇರೆ ಊರುಗಳಲ್ಲಿ ನಾವೇ ಡೇರಾ ಹಾಕಿಕೊಂಡು ನಾಟಕಗಳನ್ನಾಡುತ್ತಿದ್ದೆವು. ಸುಮಾರು ಐವತ್ತು ಅರವತ್ತು ಅಡಿ ಉದ್ದ ಮೂವತ್ತು ಅಡಿ ಅಗಲದಲ್ಲಿ ಡೇರಾ ಹಾಕಿ ಹದಿನೆಂಟು ಅಡಿ ರಂಗ ಭೂಮಿಗೆ ಇಟ್ಟುಕೊಂಡು ಹದಿನಾಲ್ಕು ಅಡಿ ಕುರ್ಚಿಕ್ಲಾಸಿನ ಹಳ್ಳ, ಹನ್ನೆರಡು ಅಡಿ ಚಾಪೆ ತರಗತಿ, ಹದಿನಾಲ್ಕು ಅಡಿ ಎರಡಾಣೆ ತರಗತಿಗೆಂದು ವಿಂಗಡಿಸಿ ಅದಕ್ಕೆ ತಕ್ಕಂತೆ ಅಳತೆಗೆ ಸರಿಯಾಗಿ ಸರ್ವೆ ಮರಗಳನ್ನು ಹೂಳಿಕೊಂಡು ಮೇಲಿನ ಛಾವಣಿಗೆ ಅಳತೆ ಪ್ರಕಾರ ಮರಗಳನ್ನು ಕಟ್ಟಿಕೊಂಡು ಡೇರಾ ಎಳೆದುಕೊಂಡು ಡೇರಾದ ತುಂಡು ತುಂಡಿಗೂ ಮೂಟೆ ಹುರಿಯಿಂದ ಚಿಟಕ (ಟಾಕ) ಅಂದರೆ ಹೊಲಿಗೆ ಹಾಕಿ ಸುತ್ತಲೂ ಗೋಣಿ ತಟ್ಟನ್ನು ಹೊಲೆದು ಅದಕ್ಕೆ ಎಂಟು -ಹತ್ತು ಅಡಿಗೆ ಒಂದೊಂದು ಗಳುವಿನಂತೆ ಹೊಲೆದು ಸುತ್ತಲೂ ಕಾಂಪೌಂಡಿನಂತೆ ಕಟ್ಟಿಕೊಳ್ಳುತ್ತಿದ್ದರು.

ಗೇಬಿಲ್ ಭಾಗಕ್ಕೆ ಗೋಣೀ ತಟ್ಟನ್ನು ಕಟ್ಟಿ ಮುಚ್ಚಿಕೊಳ್ಳುತ್ತಿದ್ದೆವು. ಮೊದಲನೆ ತರಗತಿಗೆ ಕುರ್ಚಿಗಳನ್ನು ಹಾಕಲು ೧ಳ೩ಗ೨೩೨ ಅಳತೆಯ ಹಳ್ಳ ತೆಗೆದು ಅದೇ ಮಣ್ಣನ್ನು ರಂಗಸ್ಥಳಕ್ಕೆ ಹಾಕಿ ನಟರು ಮತ್ತು ಅವರ ಅಭಿನಯ ಕಾಣಲು ಎತ್ತರ ಮಾಡಿಕೊಳ್ಳುತ್ತಿದ್ದರು. ಈ ಹದಿನಾಲ್ಕು ಅಡಿ ಹಳ್ಳದಲ್ಲಿ ಆರು ಅಡಿ ಕುರ್ಚಿಗಳನ್ನು ಹಾಕಲು, ಎಂಟು ಅಡಿಗೆ ಬೆಂಚಿನ ತರಗತಿಗೆ ಹಲಗೆ ಹಾಕಲು ಏರ್ಪಾಡು ಮಾಡಿತ್ತು. ಹಲಗೆ

ಹಾಕಲು ಮಧ್ಯೆ ಮಧ್ಯೆ ಮಣ್ಣಿನ ದಿಂಡನ್ನು ಬಿಟ್ಟುಕೊಂಡು ಅವುಗಳ ಮೇಲೆ ಹಲಗೆ ಹಾಕಿ ಅದನ್ನೆ ಬೆಂಚಿನ ತರಗತಿ ಎಂದು ಕರೆಯುತ್ತಿದ್ದೆವು-ಕ್ಲಾಸು ವಾರು ವಿಂಗಡಿಸಲು ಬೊಂಬುಗಳನ್ನು ಕಟ್ಟುತ್ತಿದ್ದೆವು.

ಆಗಿನ ಕಾಲದಲ್ಲಿ ೧೯೦೧-೧೯೦೨ ರಲ್ಲಿ ಒಂದು ನಾಟಕ ಶಾಲೆಗೆ ಬಂಡವಾಳ: ಹತ್ತು ಥಾನು ಬಟ್ಟೆ (ಏಳು ಕತ್ತಿಯ ಗುರುತಿನ ಒಂದೂವರೆ ಗಜ ಪನ್ನ ಉಳ್ಳ ನಲವತ್ತು ಗಜದ ಒಂದು ಥಾನಿನ ಬೆಲೆ ಎಂಟು ರೂಪಾಯಿ) ಎಂಭತ್ತು ರೂ, ಹಗ್ಗಕ್ಕೆ ಇಪ್ಪತ್ತೈದು ರೂ., ಹೊಲೆಯಲು ಹತ್ತು ರೂ., ಸರ್ವೆ ಮರಕ್ಕೆ ಹದಿನೈದು ರೂ. ಇಪ್ಪತ್ತೈದರಿಂದ ಮೂವತ್ತು ಅಡಿಯ ಒಂದು ಮರಕ್ಕೆ ನಾಲ್ಕಾಣೆ ಮಾತ್ರವಿತ್ತು. ನಮ್ಮ ತಿಯೇಟರಿಗೆಲ್ಲಾ ಸುಮಾರು ಅರವತ್ತು ಮರ ಬೇಕಾಗುತ್ತಿತ್ತು. ಕಾಂಪೌಂಡು ಕಟ್ಟುಗಳಿಗೆ, ಮತ್ತು ಸ್ಟೇಜಿನ ಅಟ್ಟಕ್ಕೆ, ಅಡಿಟೋರಿಯಂ ಮೇಲ್ಭಾಗಕ್ಕೆ ಬೇಕಾಗುವ ಬೊಂಬುಗಳುಗಳಿಗೆ ನೂರರಿಂದ-ನೂರಿಪ್ಪತ್ತು ರೂಪಾಯಿ. ಒಟ್ಟು ಥಿಯೇಟರ್ ಸಾಮಾನುಗಳಿಗೆ ಇನ್ನೂರರಿಂದ ಇನ್ನೂರ ಇಪ್ಪತ್ತೈದು ರೂ. ಗಳು ಬೇಕಾದಷ್ಟಾಗುತ್ತಿತ್ತು. ಇವೇ ಸಾಮಾನುಗಳು ಒಂದು ಸರ್ಕೀಟ್ ಅಂದರೆ ಎಂಟು ತಿಂಗಳು ಆಗಿ ಡೇರಾ ಮಾತ್ರ ಹರಿದು ಮರದ ಸಾಮಾನು ಉಳಿಯುತ್ತಿತ್ತು. ಈಗಿನ ಕಾಲದಲ್ಲಿ ಎರಡು ಸಾವಿರದ ಐನೂರರಿಂದ ಮೂರು ಸಾವಿರದವರೆಗೆ ಖರ್ಚು ಮಾಡಿದರೂ ಒಂದೇ ಕ್ಯಾಂಪು ಎರಡರಿಂದ ಮೂರು ತಿಂಗಳು ಮಾತ್ರ ಆಡಬಹುದು. ಆಗ ಒಂದು ಕ್ಯಾಂಪು ಮಾಡಿಕೊಂಡು ಮತ್ತೊಂದು ಕ್ಯಾಂಪನ್ನು ಹದಿನೈದು-ಇಪ್ಪತ್ತು ಮೈಲಿಗಳಿಗಿಂತ ಹೆಚ್ಚು ದೂರ ಮಾಡುತ್ತಿರಲಿಲ್ಲ. ಒಂದು ಕ್ಯಾಂಪಿನಲ್ಲಿ ಕೊನೇ ನಾಟಕ ವಾಡಿಕೊಂಡು ಬೆಳಿಗ್ಗೆ ಸುಮಾರು ಒಂಬತ್ತು ಗಂಟೆಗೆ ಥಿಯೇಟರ್ ಬಿಚ್ಚಲು ಪ್ರಾರಂಭಿಸಿ ಸಾಯಂಕಾಲ ಐದು ಗಂಟೆಯೊಳಗೆ ಪೂರ್ತಿ ಬಿಚ್ಚಿ ಬಂಡಿಗಳಿಗೆ ಭರ್ತಿಮಾಡಿ ರಾತ್ರಿ ಒಂಭತ್ತು ಗಂಟೆಗೆ ಪ್ರಯಾಣಮಾಡಿ ಮರುದಿನ ಬೆಳಿಗ್ಗೆ ಏಳು ಗಂಟೆಗೆ ಬೇರೆ ಕ್ಯಾಂಪಿಗೆ ಬಂದು ನಿತ್ಯ ಕರ್ಮಗಳನ್ನು ಮುಗಿಸಿ ಸಾಮಾನುಗಳನ್ನು ಗಾಡಿಯಿಂದ ಇಳಿಸಿ ಡೇರಾ ಹಾಕಲು ಪ್ರಾರಂಭಿಸಿ, ಲೈಸೆನ್ಸಿಗೆ, ಅಡ್ವರ್‌ಟೈಸ್‌ಮೆಂಟಗೆ ಕಳುಹಿಸುತ್ತಿದ್ದರು. ಆ ದಿನವೇ ಆರು ಅಥವಾ ಏಳು ಗಂಟೆಯೊಳಗೆ ರಂಗಮಂಟಪದ ತಯಾರ್‍ಮಾಡಿ, ಕುರ್ಚಿ ಹಳ್ಳ ಎಲ್ಲಾ ತೆಗೆದು ಸಿದ್ಧಮಾಡಿ ರಾತ್ರಿ ಹತ್ತು ಗಂಟೆಗೆ ನಾಟಕವಾಡಲು ಸಜ್ಜುಮಾಡುತ್ತಿದ್ದರು. ಕ್ಯಾಂಪು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಾಗಿದ್ದರೆ ಅಮಲ್ದಾರರನ್ನು ಕರೆದು ಅವರ ಸಮಕ್ಷಮ ಆಡುತ್ತಿದ್ದರು. ಹೋಬಳಿ, ಅಥವಾ ಸಮ್ಮತುಗಳಾದರೆ ಅಲ್ಲಿ ಜಮಾದಾರರು, ದಫೇದಾರರೇ ಹೈ ಆಫೀಸರರುಗಳಾದ್ದರಿಂದ ಅವರ ಮುಂದಾಳತ್ವದಲ್ಲಿ ನಾಟಕಗಳನ್ನಾಡುತ್ತಿದ್ದೆವು—ರಾತ್ರಿ ಹತ್ತು ಗಂಟೆಗೆ ಪ್ರಾರಂಭಿಸಿದ ನಾಟಕ ಬೆಳಗಿನ ಐದು ಗಂಟೆಗೆ ಮುಗಿಯುತ್ತಿತ್ತು.

ನಟರುಗಳಿಗೆ ವಾಸಕ್ಕೆ ಮನೆಗಳನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಆಗ್ಗೆ ಅನೇಕ ಊರುಗಳಲ್ಲಿ ಪೂರ್ಣಯ್ಯನವರ ಛತ್ರಗಳಿರುತ್ತಿದ್ದುವು. ಅವುಗಳಲ್ಲಿಯೂ, ಮುಸಾಫಿರ್ ಖಾನೆಗಳಲ್ಲಿಯೂ ಇಳಿದುಕೊಳ್ಳುತ್ತಿದ್ದೆವು. ಸಂದರ್ಭಾನುಸಾರ ಥಿಯೇಟರಿನಲ್ಲಿಯೇ ವಾಸಮಾಡುತ್ತಲೂ ಇದ್ದೆವು. ಏಕೆಂದರೆ ನಟರುಗಳು, ವಾದ್ಯಗಾರರು, ಗೇಟಿನವರು 'ಲ್ಲರೂ ಸೇರಿ ಮರಗಳನ್ನು ಹೂಳಲು ಗುಣಿಗಳನ್ನು ತೋಡಿ ಮರಗಳನ್ನು ನೆಟ್ಟು ಅಡ್ಡ

ಮರಗಳನ್ನು ಹೂಳಲು ಗುಣಿಗಳನ್ನು ತೋಡಿ ಮರಗಳನ್ನು ನೆಟ್ಟು ಅಡ್ಡ ಮರಗಳನ್ನು ಕಟ್ಟಿ ಡೇರಾ ಎಳೆದು ಸಾಯಂಕಾಲದೊಳಗೆ ಥಿಯೇಟರ್ ಕಟ್ಟಿ ಕ್ಯಾಂಪಿಗೆ ಬಂದ ದಿನವೇ ನಾಟಕವನ್ನಾಡುತ್ತಿದ್ದರು. ನಟವರ್ಗದವರು, ವಾದ್ಯಗಾರರು, ಗೇಟಿನವರು ಎಲ್ಲರೂ ಸೇರಿ ಕೆಲಸ ಮಾಡಿದ ಮೆಹನತ್ತಿಗೆ ಆರು ಸೇರು ಅವಲಕ್ಕಿ ಐದು ಸೇರು ಬೆಲ್ಲ ತರಿಸಿ ಅವಲಕ್ಕಿಯನ್ನು ನೆನೆಸಿ ಬೆಲ್ಲ ಪುಡಿಮಾಡಿ ಹಾಕಿ ತೆಂಗಿನಕಾಯಿ ತುರಿದು ಎಲ್ಲವನ್ನೂ ಬೆರೆಸಿ ಒಂದೊಂದು ಉಂಡೆಮಾಡಿ ತಿನ್ನಲು ಕೊಡುತ್ತಿದ್ದರು. ಈಗಿನಂತೆ ಎಲ್ಲೆಲ್ಲೂ ಹೋಟೆಲ್‌ಗಳಿರುತ್ತಿರಲಿಲ್ಲ. ಕಾಫಿಕೊಡ ಇರುತ್ತಿರಲಿಲ್ಲ ಅವಲಕ್ಕಿ ಉಂಡೆಯನ್ನು ತಿಂದು ಮಧ್ಯಾಹ್ನ ಒಂದೂವರೆ ಗಂಟೆಯವರೆಗೂ ಕೆಲಸ ಮಾಡಿ ಅನಂತರ ಊಟಕ್ಕೆ ಹೋಗುತ್ತಿದ್ದರು.

ಮಧ್ಯಾಹ್ನ ಎರಡು ಘಂಟೆಯ ಮೇಲೆ ಒಬ್ಬ ತಮಟೆಯನ್ನು ಕರೆಸಿ ಅವನ ಜೊತೆ ಊರಿನಲ್ಲಿ ನಾಟಕದ ಪ್ರಚಾರ ಮಾಡಲು ಒಬ್ಬನನ್ನು ಕಳುಹಿಸುತ್ತಿದ್ದರು. ತಮಟೆಯವನು ತಮಟೆ ಬಾರಿಸುತ್ತಾ ಮುಂದೆ ಮುಂದೆ ಹೋಗುತ್ತಿರುವಾಗ್ಗೆ ಚೌಕಗಳಲ್ಲಿ ಸೀಟಿ ಹಾಕಿ ತಮಟೆ ಬಾರಿಸುವುದನ್ನು ನಿಲ್ಲಿಸಿ ಹೀಗೆ ಜೋರಾಗಿ ಕೂಗಿ ಪ್ರಚಾರಮಾಡುತ್ತಿದ್ದನು—'ಈ ದಿನ ರಾತ್ರಿ ಹತ್ತು ಘಂಟೆಗೆ ಗುಬ್ಬಿ ನಾಟಕ ಕಂಪನಿಯವರು ಈ ಊರಿನ ಸಂತೆ ಮೈದಾನದಲ್ಲಿ ಹಾಕಿರುವ ಡೇರಾದಲ್ಲಿ ಪಾಂಡವ ವಿಜಯವೆಂಬ ನಾಟಕ ಆಡ್ತಾರೆ. ಟಿಕೇಟುದರ, ಕುರ್ಚಿ ಒಂದ್ರುಪಾಯಿ, ಬೆಂಚು ಎಂಟಾಣೆ, ಚಾಪೆ ನಾಲ್ಕಾಣೆ, ನೆಲ ಎರಡಾಣೆ, ಹೆಂಗಸರಿಗೆ ಬೇರೆ ಸ್ಥಳ ಏರ್ಪಾಟು ಮಾಡಿದಾರೆ, (ಸಂಸ್ಥೆಯಲ್ಲಿ ಹೆಂಗಸರು ಪಾರ್ಟು ಮಾಡಲು ಸೇರಿದ ನಂತರ ಹೆಂಗಸರೂ ಸಹ ಪಾರ್ಟು ಮಾಡುತ್ತಾರೆ ಎಂದು ಹೇಳುತ್ತಿದ್ದರು) ಹೀಗೆ ಬಾಯಿಯಲ್ಲಿ ಹೇಳಿಕೊಂಡು ಒಂದು ಸೀಟಿ ಹೊಡೆದ ಕೂಡಲೇ ತಮಟೆ ಬಾರಿಸಿಕೊಂಡು ಮುಂದೆ ಹೋಗುತ್ತಿದ್ದು, ಪುನಃ ಸೀಟಿ ಹೊಡೆದಾಗ ನಿಲ್ಲಿಸುತ್ತಿದ್ದನು. ಹೀಗೆ ಪಬ್ಲಿಸಿಟಿ ನಡೆಯುತ್ತಿದ್ದು ಬೇರೆ ನೋಟೀಸು ಕೊಡುತ್ತಿರಲಿಲ್ಲ. ಕ್ರಮೇಣ ಊರು, ಸ್ಥಳ ನಾಟಕದ ಹೆಸರು ಬರೆಯಲು ಜಾಗ ಬಿಟ್ಟು ನೋಟೀಸು ಪ್ರಿಂಟು ಮಾಡಿಸಿ (ಸುಮಾರು ಎರಡು ಸಾವಿರ ಪ್ರಿಂಟ್ ಮಾಡಿಸಿ) ಪೆಟ್ಟಿಗೆಯಲ್ಲಿಟ್ಟುಕೊಂಡು ತಮಟೆಯವನೊಡನೆ ಸಾರಲು ಹೋಗುವಾಗ ಮಾತ್ರ ಹದಿನೈದು-ಇಪ್ಪತ್ತು ನೋಟೀಸುಗಳನ್ನು ತೆಗೆದು ಅದರಲ್ಲಿ ನಾಟಕದ ಹೆಸರು ತಾರೀಖು, ಊರುಗಳನ್ನೇ ಬರೆದು ಹಂಚುತ್ತಿದ್ದರು. ಅದೂ ತಾಲ್ಲೂಕುಗಳಾದರೆ ಇಪ್ಪತ್ತೈದು-ಮೂವತ್ತು ನೋಟೀಸು, ಹೋಬಳಿಗಳಾದರೆ ಎಂಟು ಹತ್ತು ನೋಟೀಸು ಮಾತ್ರ ಹಂಚುತ್ತಿದ್ದರು.

ಕುರ್ಚಿ ದರ ಒಂದು ರೂಪಾಯಿಯೆಂದು ಬಾಯಲ್ಲಿ ಹೇಳುತ್ತಿದ್ದರೇ ವಿನಹ ಕಂಪನಿಯಲ್ಲಿ ಒಂದು ಕುರ್ಚಿಯೂ ಇರುತ್ತಿರಲಿಲ್ಲ–ಕುರ್ಚಿ ಟಿಕೇಟು ಕೇಳುವವರೂ ಬರುತ್ತಿರಲಿಲ್ಲ.

ಅಮಲ್ದಾರ್ ಸಾಹೇಬರನ್ನು ನಾಟಕ ನೋಡಲು ಕರೆಯಲು ಹೋದಾಗ್ಗೆ–

"ಸ್ವಾಮಿ ಇವತ್ತು ನಮ್ಮ ನಾಟ್ಕ ನೋಡೋಕೆ ತಾವು ದಯಮಾಡಿಸ್ಬೇಕು ಸ್ವಾಮಿ"— ಎಂದರೆ, ಅಮಲ್ದಾರರು:

"ಏನು ನಾಟಕವಯ್ಯ ನಿಮ್ಮದು?"

"ಸ್ವಾಮಿ ನಾವು ಗುಬ್ಬಿ ನಾಟಕದವರು. ಇವತ್ತು ಪಾಂಡವ ವಿಜಯ; ಚೆನ್ನಾಗಿರುತ್ತೆ ಸ್ವಾಮಿ"

"ಎಷ್ಟೊತ್ತಿಗೆ ಪ್ರಾರಂಭವಯ್ಯ?

"ಸ್ವಾಮಿ, ಸವಾರಿ ಬಂದ ಕೂಡ್ಲೆ ಷುರುಮಾಡ್ಬಿಡ್ತೀವಿ ಸ್ವಾಮಿ"

"ಒಳ್ಳೇದಪ್ಪ ನೋಡ್ತೀನಿ, ಅವಕಾಶವಾದ್ರೆ ಬರ್ತೀನಿ"

"ಅಯ್ಯೋ! ಆಗಲ್ಲ ಸ್ವಾಮಿ, ಮೊದ್ಲನೇ ನಾಟ್ಕಕ್ಕೆ ತಾವ್ ಖಂಡಿತ ಬರ್ಲೇಬೇಕು ಸ್ವಾಮಿ".

"ಆಗಲಪ್ಪ ಬರ್ತೀನಿ".

"ಸ್ವಾಮಿ ತಾವ್ಬರ್ತ್ವಾಗ ಒಂದ್ಕುರ್ಚಿ ತೆಗೆಸ್ಕೊಂಡ್ಬರ್ತೀವಿ".

"ಒಳ್ಳೇದಪ್ಪ!"

"ಸ್ವಾಮಿ ಅಂಗೆ 'ಅಮ್ಮಾ' ವರ್ನ ಕರ್ಕೊಂಡ್ಬರ್ಬೇಕು ಸ್ವಾಮಿ."

ಈ ರೀತಿಯಾಗಿ ನಾಟಕ ನೋಡಲು ಬರುವವರಿಗೆ ಆಹ್ವಾನ ಕೊಡುತ್ತಿದ್ದರಲ್ಲದೆ ಆಹ್ವಾನ ಪತ್ರಿಕೆಯ ಪದ್ಧತಿಯಾಗಲೀ, ಕಾಂಪ್ಲಿಮೆಂಟರಿ ಪಾಸಾಗಲೀ ಕೊಡುವ ರೀತಿಯಿರಲಿಲ್ಲ. ಹೀಗೆ ಸಂಘವನ್ನು ಹನ್ನೆರಡು ವರುಷ ಕಾಲ ಚಂದಣ್ಣನವರು ಧೈರ್ಯದಿಂದ ತುಂಬಾ ಕಡಿಮೆ ಖರ್ಚಿನಲ್ಲಿ ನಡೆಸಿಕೊಂಡು ಬಂದರು.

ಮಳೆಗಾಲದಲ್ಲಿ ಕೊಂಚ ಮೋಡವಾದರೆ ಸಾಕು, ಕೂಡಲೆ ಪರದೆ ಸೈಡು ವಿಂಗ್ಸ್‌ಗಳನ್ನು ಬಿಚ್ಚಿ ಕೆಳಗಿರಿಸಿ ನೆನೆಯದೆ ಹಾಗೆ ಚಾಪೆಗಳಿಂದ ಮುಚ್ಚಿ ಭದ್ರಪಡಿಸುತ್ತಿದ್ದರು. ಮೋಡ, ಮಳೆ ಕಡಿಮೆಯಾದರೆ ಪುನಃ ಪರದೆ ಸೈಡ್ವಿಂಗ್ಸ್‌ಗಳನ್ನು ಕಟ್ಟುತ್ತಿದ್ದರು. ನಾಟಕ ನಡೆಯುತ್ತಿದ್ದಾಗ ಮಳೆ ಬಂದರೆ ವೇಷಧಾರಿಗಳೇ ಪರದೆ ಅಟ್ಟದ ಮೇಲೆ ಡ್ರೆಸ್ ಸಮೇತ ಹತ್ತಿ ಪರದೆ ಬಿಚ್ಚಿ ಮಳೆ ಕಡಿಮೆಯಾದನಂತರ ಪುನಃ ಕಟ್ಟಿ ನಾಟಕ ಮುಂದುವರಿಸುತ್ತಿದ್ದರು. ಒಂದೊಂದು ಸಾರಿ ಒಂದು ದಿನಕ್ಕೆ ಎರಡು-ಮೂರು ಸಾರಿ ಬಿಚ್ಚುವುದು ಕಟ್ಟುವುದು ನಾಟಕವಾಡುವುದು ಹೀಗೂ ನಡೆಯುತ್ತಿತ್ತು. ಪ್ರೇಕ್ಷಕರೂ ಸಹ ಹಾಗೇ ಇದ್ದರು. ಎರಡು-ಮೂರು ಸಾರಿ ಪರದೆ ಬಿಚ್ಚಿ-ಕಟ್ಟಿ ನಾಟಕವಾಡಿ ಪುನಃ ಬಿಚ್ಚಿದ್ದರೂ ಪುನಃ ಕಟ್ಟಿಸಿ ಪೂರ್ತಿ ನಾಟಕ ನೋಡಿಕೊಂಡು ಹೋಗುತ್ತಿದ್ದರಲ್ಲದೆ ಅರ್ಧ ನಾಟಕ ಬಿಟ್ಟು ಹೋಗುತ್ತಿರಲಿಲ್ಲ. ಆಗ ಹೆಚ್ಚು ಸೀನರಿ ಇರಲಿಲ್ಲವಾಗಿ ಹತ್ತು-ಹದಿನೈದು ನಿಮಿಷಗಳಲ್ಲಿ ಬಿಚ್ಚಿ ಪುನಹ ಹತ್ತು ನಿಮಿಷಗಳಲ್ಲಿ ಕಟ್ಟುತ್ತಿದ್ದರು. ಒಂದು ದಿನ ಮೊಳಕಾಲ್ಮೂರು ಕ್ಯಾಂಪಿನಲ್ಲಿ ವಿಪರೀತ ಗಾಳಿ ಬಂದು, ಮೇಲೆ ಹೊದಿಕೆಯಾಗಿದ್ದ ಡೇರಾಪೀಸು ಎಲ್ಲಾ ಚಿಂದಿ ಚಿಂದಿಯಾಗಿ ಹರಿದು ಹಾರಿಹೋಗಿ ಡೇರಾಕ್ಕೆ ಹೊಲೆದಿದ್ದ ನೂಲು ಹಗ್ಗಗಳೇ ನಿಂತಿದ್ದು

ರಾತ್ರಿಯೆಲ್ಲಾ ಮಳೆಬಿದ್ದು ಕುರ್ಚಿ ಹಳ್ಳದ ತುಂಬಾ ನೀರು ತುಂಬಿತ್ತು. ನಟರುಗಳು, ಕಂಪನಿಯವರೆಲ್ಲಾ ಡ್ರೆಸ್ ಪೆಟ್ಟಿಗೆಗಳನ್ನು ಆಕಡೆ ಈಕಡೆ ಒಂದೊಂದು ಇಟ್ಟು ಅವುಗಳ ಮೇಲೆ ಪರದೆ ಸೀನರಿಗಳನ್ನಿಟ್ಟು ಚಾಪೆ ಹೊದೆಸಿ ಅವುಗಳ ಕೆಳಗೆ ವಾಸಮಾಡಿದ್ದ ದೃಶ್ಯ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಮಾರನೆ ದಿನ ಬೆಳಿಗ್ಗೆ ರಾಯದುರ್ಗಕ್ಕೆ ಹೋಗಿ ಬಟ್ಟೆ ತಂದು ಡೇರಾ ಹೊಲಿದು ಹೊದಿಕೆ ಮುಚ್ಚಿ ಅನಂತರ ನಾಟಕವಾಡಿದೆವು. ನಾಟಕಗಳು ಸಾಮಾನ್ಯವಾಗಿ ಬೆಳಗಿನ ಐದು ಗಂಟೆಗೆ ಮುಗಿಯುತ್ತಿದ್ದು ಒಂದು ವೇಳೆ ಮುಂಚಿತವಾಗಿ ಮುಗಿದರೆ–'ಏನ್ರಪ್ಪಾ ಇಷ್ಟು ಜಾಗ್ರತೆ ನಾಟ್ಕ ಮುಗಿಸಿದಿರಿ ಏಕೆ?' ಎಂದು ಪ್ರೇಕ್ಷಕರಿಂದ ಆಕ್ಷೇಪಣೆಗಳು ಬರುತ್ತಿದ್ದವು. ಆಗಿನ ಕಾಲದಲ್ಲಿ ಧಾರಣೆವಾಸಿಗಳು ತುಂಬಾ ಕಡಿಮೆಯಾಗಿದ್ದುದರಿಂದಲೂ ಸಂಬಳಗಳು ಬಹಳ ಕಮ್ಮಿಯಿದ್ದುದರಿಂದ ನಷ್ಟಕ್ಕೆ ಅವಕಾಶವೇ ಇರಲಿಲ್ಲ. ಕಂಪೆನಿಯು ಸ್ಥಿರವಾಗಿ ಹನ್ನೆರಡು–ಹದಿಮೂರು ವರ್ಷಗಳು ನಡೆದುದರಿಂದ ಸಂಘಕ್ಕೆ ಪರಸ್ಥಳದವರು ಸೇರಲು ಪ್ರಾರಂಭವಾಗಿ ಬ್ರಾಹ್ಮಣರೂ ಸಹ ಬಂದು ಸೇರಿದರು. ಆಗ ಸಂಘದಲ್ಲಿ ಲಿಂಗಾಯಿತರು, ಜೈನ ಮತಸ್ಥರು ಮತ್ತು ಬ್ರಾಹ್ಮಣರು ಈ ಮೂರು ಪಂಗಡಗಳಿಗೆ ಬೇರೆ ಬೇರೆ ಅಡಿಗೆಯವರನ್ನಿಟ್ಟು ಅಡಿಗೆ ಮಾಡಿಸುತ್ತಿದ್ದರು.

ನಾಟಕ ಪ್ರದರ್ಶನ

೧೯೦೦ ರರ ವೇಳೆಯಲ್ಲಿಯೂ ಗ್ರಾಮಾಂತರಗಳಲ್ಲಿ ಜನಗಳಲ್ಲಿ ಅನಾಗರಿಕತೆ ತುಂಬಿತ್ತು. ಪರದೆ ಮೇಲಕ್ಕೆ ಸುತ್ತಿಕೊಂಡು ಹೋಗುತ್ತಿದ್ದರೆ ಆಶ್ಚರ್ಯದಿಂದ ಬಾಯಿ ಬಿಟ್ಟುಕೊಂಡು ಪರದೆ ಮೇಲೆ ಹೋಗುವುದನ್ನು ನೋಡುತ್ತಿದ್ದರು. ಆಗ ಸೈಡು ವಿಂಗ್ಸ್‌ಗಳಿಗೆ ರೀಪರ್ಸ್ ಕೂಡ ಇರುತ್ತಿರಲಿಲ್ಲ. ಮೇಲಿನ ಎರಡು ತುದಿಗಳಿಗೆ ದಾರ ಕಟ್ಟಿ ಇಳಿ ಬಿಡುತ್ತಿದ್ದರು–ರಾಜ, ರಾಣಿ ಮುಂತಾದ ಪಾತ್ರಗಳು ಪ್ರವೇಶಿಸುವಾಗ್ಗೆ ಇವು ಅವರ ಭುಜದ ಮೇಲೆಯೇ ರಂಗಭೂಮಿಯ ಮಧ್ಯದವರೆಗೂ ಬಂದು ವಾಪಸ್ ಬರುತ್ತಿದ್ದುವು. ಆಗ ಸಂಘದಲ್ಲಿ ಒಂದು ಅಂಕದ ಪರದೆ, ಒಂದು ಸೂತ್ರಧಾರಿ ಪರದೆ (ರೋಡು ಪರದೆ), ಒಂದು ಅಂತಃಪುರ, ಒಂದು ಕಾಡು ಪರದೆ, ಮೂರು ಜೊತೆ ಮೇಲೆ ತಿಳಿಸಿದಂತೆ ಸೈಡು ವಿಂಗ್ಸ್, ಒಂದು ಕಾಡುವಿಂಗ್ಸ್, ಒಂದು ಜೊತೆ ಉದ್ಯಾನವನದ ವಿಂಗ್ಸ್, ಒಂದು ಜೊತೆ ಜೊತೆ ಮುಂದಿನ ಎರಡು ಕಡೆ ಪಕ್ಕದ ಗೋಡೆ ವಿಂಗ್ಸ್ (ಫ್ರೇಂನ ಭಾಗ), ಮೇಲೆ ತ್ರಿಕೋಣಾಕಾರದ ಫ್ರೇಂ. (ಅದರಲ್ಲಿ ಈಶ್ವರನ ಚಿತ್ರ) ಇದ್ದವು. ಒಂದು ಪರದೆಯನ್ನು ಎರಡು ಭಾಗ ಮಾಡಿ ಟ್ರಾನ್ಸ್‌ಫರ್ ಸೀನಿಗೆ ಉಪಯೋಗಿಸುತ್ತಿದ್ದರು (ಅದಕ್ಕೆ ಒಡೆಯುವ ಪರದೆ ಎಂದೇ ಕರೆಯುತ್ತಿದ್ದರು). ಒಂದು ಜೊತೆ ಕಟಕಟೆ (ದರ್ಬಾರ್ ಸೀನಿಗೆ) ಒಂದು ಸಿಂಹಾಸನ ಅಂದರೆ ಮರದ ಚೌಕಟ್ಟು ಮಾಡಿ ಅದರ ಮೇಲೆ ಹಲಗೆಗಳನ್ನು ಜೋಡಿಸಿ ಹಿಂಭಾಗಕ್ಕೆ ಸಿರಾಣಿ (Back of the Chair) ಮಾಡಿ ಜೋಡಿಸುತ್ತಿದ್ದರು ಮೇಲಕ್ಕೆ ಹತ್ತಲು ಎರಡು ಮೆಟ್ಟಲು ಮಾಡಿ ಹತ್ತುತ್ತಿದ್ದರು. ಕಾಡು ಸೀನ್ ತೋರಿಸುವಾಗ್ಗೆ ಕಾಡಿನ ಪರದೆ ಬಿಟ್ಟು ಪಕ್ಕಕ್ಕೆ ದರ್ಬಾರಿನ ವಿಂಗ್ಸನ್ನೇ ಉಪಯೋಗಿಸುತ್ತಿದ್ದರು. ಹೀಗೆ ಎಲ್ಲಾ ದೃಶ್ಯಗಳಿಗೂ ದರ್ಬಾರ್ ವಿಂಗ್ಸ್ ಇದ್ದೇ ಇರುತ್ತಿತ್ತು. ಉದ್ಯಾನವನದಲ್ಲಿ ಮಧ್ಯೆ ಗಿಡಗಳು ಬೇಕಾದರೆ ಯಾವುದಾದರೂ ಸಣ್ಣ ಸಣ್ಣ ಗಿಡಗಳನ್ನು ಕಿತ್ತು ತಂದು ಇಡುತ್ತಿದ್ದರು. ಕ್ರಮೇಣ ಮೋಡದ ಬಣ್ಣದ ಜಾಲರುಗಳನ್ನು ಬರೆಯಿಸಿ ಮೇಲೆ ಕಟ್ಟಲು ಪ್ರಾರಂಭಿಸಿದರು.

ಸ್ಟೇಜು ಮುಂಭಾಗದಲ್ಲಿ ನಲವತ್ತನೇ ನಂಬರ್‌ನ ಮೂರು ಲ್ಯಾಂಪುಗಳನ್ನು ಕಟ್ಟುತ್ತಿದ್ದರು. ಫುಟ್ ಲೈಟಿಗೆ ಉಪಯೋಗಿಸುವ ದೀಪಗಳಿಗೆ ನಾಲ್ಕು ಅಂಗುಲ ದಪ್ಪ ಎರಡು ಅಡಿ ಉದ್ದದ ಡಬ್ಬಿಗಳನ್ನು ಮಾಡಿಸಿ ಒಂದೊಂದು ಡಬ್ಬಿಗೂ ಮೂರು ಮೂರು ಬರ್ನಲ್ ಮಾಡಿ ಗಾಜಿನ ಚಿಮಣಿಯನ್ನಿಟ್ಟು ಹತ್ತಿಸುತ್ತಿದ್ದರು. ಇಂತಹ ನಾಲ್ಕು ಡಬ್ಬಿಗಳೇ ಫುಟ್‌ಲೈಟು. ಕುರ್ಚಿ ಕ್ಲಾಸು, ಚಾಪೆ ಕ್ಲಾಸು, ಎರಡು ಆಣೆ ಕ್ಲಾಸುಗಳಿಗೆ ತಲಾ ಒಂದೊಂದು ಸಿಲ್ವರ್ ಲ್ಯಾಂಪು ಕಟ್ಟ ಇಳಿಬಿಡುತ್ತಿದ್ದರು. ಇದು ಗಾಳಿಗೆ ತೂರಾಡಿ ಆಗಾಗ ಆರಿಹೋಗುತ್ತಿತ್ತು. ಒಂದು ದೊಡ್ಡದಾಗಿ ಅಂದರೆ ಎರಡು ಸೀಸೆ ಸೀಮೆಯೆಣ್ಣೆ ಹಿಡಿಸುವಂತಹ ತಗಡಿನ ಡಬ್ಬ ಮಾಡಿ ಅದಕ್ಕೆ ನೂಲಿನ ದಾರದ ಬತ್ತಿ ಹಾಕಿ ತಳದಲ್ಲಿ ಸಣ್ಣ 'ಗಳು' ಹಿಡಿಯುವ ಹಾಗೆ ಕೊಳವೆ ಮಾಡಿ–ಅದರಲ್ಲಿ ಗಳುವನ್ನು ಹಾಕಿ ನೆಲದಲ್ಲಿ ಹೂಳಿ ಬತ್ತಿಯನ್ನು ಹಚ್ಚುತ್ತಿದ್ದರು. ಕಲರ್ ಲೈಟು ಬೇಕಾದಾಗ ಹಸಿರು, ಕೆಂಪು ಮತಾಪು ಕಡ್ಡಿಗಳನ್ನು ಹಚ್ಚುತ್ತಿದ್ದರು. ಕೆಲವು ವರ್ಷಗಳು ಕಳೆದ ನಂತರ (೧೯೧೧) ಗ್ಯಾಸ್ ಲೈಟು ತಂದು ಹಚ್ಚಲು ಪ್ರಾರಂಭವಾಯಿತು.

ಲೈಟು ಡಿಮ್ ಮಾಡಲು ಗ್ಯಾಸು ಲೈಟಿಗೆ ತಗಡು ಕಟ್ಟಿ ಅದಕ್ಕೆ ಹಗ್ಗ ಹಾಕಿ ಮುಚ್ಚುವುದು ತೆಗೆಯುವುದು ಮಾಡುತ್ತಿದ್ದರು.

ಸಂಘದಲ್ಲಿ ಮೂವತ್ತೈದು ನಲವತ್ತನೇ ವಯಸ್ಸಿನವರೆಗೂ ಹೆಣ್ಣು ಪಾತ್ರಗಳನ್ನು ಗಂಡಸರೇ ಅಭಿನಯಿಸುತ್ತಿದ್ದರು. ತಲೆಗೆ ಟೋಫನ್ ಹಾಕಿಕೊಂಡು ಸ್ತನಗಳಿಗೆ ಆಕಾರಕ್ಕೆ ತಕ್ಕಂತೆ ಬಟ್ಟೆಯಿಟ್ಟುಕೊಳ್ಳುತ್ತಿದ್ದರು ಅಭಿನಯಿಸುವಾಗ್ಗೆ ಅವು ಮೇಲೊಂದು ಕೆಳಗೊಂದರಂತೆ ಜಾಗ ಬದಲಾವಣೆಯಾಗಿ ಅಭಾಸವುಂಟಾಗುತ್ತಿದ್ದುದೂ ಉಂಟು. ಮಳೆಗಾಲದಲ್ಲಿ ನಾಟಕವಾಡುವ ಸಮಯದಲ್ಲಿ ಲ್ಯಾಂಪಿನ ಬೆಳಕಿಗೆ ಪತಂಗದ ಹುಳುಗಳು ಸ್ವಾಭಾವಿಕವಾಗಿ ವಿಪರೀತವಾಗಿ ಮುತ್ತಿ ಹಾಡುಗಳನ್ನು ಹಾಡಲೂ ಕೂಡ ಅವಕಾಶ ಕೊಡದೆ ತುಂಬಾ ತೊಂದರೆ ಕೊಡುತ್ತಿದ್ದುವು. ಒಂದೊಂದು ಸಮಯದಲ್ಲಿ ಬಾಯೊಳಗೆಯೂ ತೂರಿ ಹೋಗುತ್ತಿದ್ದುವು. ಮೈಮೇಲೆ ಹಾರಾಡಲು ಪ್ರಾರಂಭಿಸಿ ರಾಣಿ ಪಾರ್ಟಿನವನು ಹಾಕಿಕೊಂಡಿದ್ದ ಟೋಫನ್‌ನೊಳಗೆ ತೂರಿ ಒಳಗೆ ಮುಲು ಮುಲು ಓಡಾಡಿ, ರಾಣಿ ಪಾತ್ರಧಾರಿಯು ಈ ತೊಂದರೆಯನು ಸಹಿಸಿ ತಲೆ ಕೆರೆದುಕೊಂಡೇ ಮಾತನಾಡಬೇಕಾಗಿತ್ತು. ಅಲ್ಲದೆ ತಲೆಯೊಳಗೆ ಪತಂಗದ ಹುಳು ಮುಲುಗುಟ್ಟತ್ತಿರುವಾಗ್ಗೆ ಪಾತ್ರಧಾರಿಯು ಮುಖವನ್ನು ಅಷ್ಟಾವಕ್ರಮಾಡಿಕೊಂಡು ಗಾಬರಿಯಾಗಿ ಹುಳುವಿನ ಹಿಂಸೆ ತಡೆಯಲಾರದೆ ತಲೆ ಕೆರೆದುಕೊಂಡು ಟೋಫನ್ನನ್ನು ಹಿಂದೆ ಮುಂದೆ ಎಳೆಯುವಾಗ್ಗೆ ಅವನ ಕ್ಷೌರ ಮಾಡಿಸಿಕೊಂಡಿದ್ದ ಬೋಳು ತಲೆ ಕಂಡು ಜನಗಳೂ ನಕ್ಕು ಆಭಾಸವಾದುದೂ ಉಂಟು.

ಕೆಲವು ಊರುಗಳಲ್ಲಂತೂ ವಾದ್ಯಗಾರರು ತಲೆ ತಪ್ಪಿಸಿಕೊಳ್ಳುತ್ತಿದ್ದರು. ಆಗ ಆ ಊರಿನಲ್ಲಿರುವ ವಾದ್ಯಗಾರರನ್ನೇ ಕರೆದು ಕೂರಿಸಿಕೊಂಡು ನಾಟಕವಾಡುತ್ತಿದ್ದೆವು. ಆಗ ಆಡುವ ನಾಟಕದ ಹಾಡಿನ ಹೊಂದಾಣಿಕೆ ನಟನಿಗೂ ವಾದ್ಯ ನುಡಿಸುವವನಿಗೂ ಹೇಗಿರಬಹುದ? ಆದರೂ ಪ್ರತಿ ನಾಟಕದಲ್ಲೂ ಒಂದೇ ರೀತಿಯ ರಾಗಗಳೂ, ಶೈಲಿಯೂ ಇರುವುದರಿಂದ ಅಷ್ಟು ಕಷ್ಟವೆನಿಸುವುತ್ತಿರಲಿಲ್ಲ.

ಆಗಿನ ಕಾಲದಲ್ಲಿ ನಾಟಕ ನೋಡಲು ಬಂದಿದ್ದ ಸ್ತ್ರೀಯರು ಕಣ್ಣಿಗೆ ಚೆನ್ನಾಗಿ ಕಾಣಿಸುವ ಆಭರಣ ಅಂದರೆ ಅಡ್ಡಿಕೆ, ಜೋಮಾಲೆ, ಗುಂಡಿನ ಸರ ವಗೈರೆ ಆಭರಣಗಳನ್ನು ಹಾಕಿಕೊಂಡು ಬಂದಿದ್ದರೆ ಅವುಗಳನ್ನು ಸಹ ತರಿಸಿಕೊಂಡು ಧರಿಸಿ ಪಾತ್ರ ಮಾಡುತ್ತಿದ್ದೆವು. ಆಗ ಅದನ್ನು ಕೊಟ್ಟಿದ್ದ ಸ್ತ್ರೀಯರು ರಂಗಭೂಮಿಯಲ್ಲಿ ನಾವು ಧರಿಸಿದ್ದ ಅವರ ಆಭರಣಗಳನ್ನು ನೋಡಿ ಪಕ್ಕದಲ್ಲಿದ್ದ ಇತರರಿಗೆ ಅವುಗಳನ್ನು ತೋರಿಸಿ ಹೆಮ್ಮೆ ಪಡುತ್ತಿದ್ದರು. ಈಗಿನಂತೆ ಆಗ ಹೇರಳವಾಗಿ ನಾಟಕದ ಆಭರಣಗಳು ದೊರೆಯುತ್ತಿರಲಿಲ್ಲ.

ರಾಜನಿಗೆ ದೊಡ್ಡ ದೊಡ್ಡ ಚಮ್‌ಕಿ ಹಾಕಿ ಮಕಮಲ್‌ನಲ್ಲಿ ಕೋಟು ಷರಾಯಿ ಹೊಲೆಸಿ, ಮಂತ್ರಿ ಸೇನಾಧಿಪತಿಗಳಿಗೆ ಸಣ್ಣ ಚಂಕಿ ಹಾಕಿಸಿ ವೆಲ್‌ವೆಟ್ಟಿನಲ್ಲಿ ಹೊಲೆಸುತ್ತಿದ್ದರು. ಇತರೆ ಚಿಲ್ಲರೆ ಪಾತ್ರಗಳಿಗೆ ಮೂರನೆ ತರಗತಿ ಡ್ರೆಸ್ಸು ಕೊಡುತ್ತಿದ್ದರು. ಸಂಘದ ಯಜಮಾನನ ಪ್ರೀತಿಗೆ ಪಾತ್ರನಾಗಿದ್ದವನು ಸಾಧಾರಣ ಪಾತ್ರ ಮಾಡಿದರೂ ಮೊದಲನೇ ದರ್ಜೆ ಉಡುಪನ್ನು ಹಾಕಿಕೊಳ್ಳುತ್ತಿದ್ದನು. ಪಾತ್ರದ ಯೋಗ್ಯತೆಗೆ ತಕ್ಕ ಉಡುಪು ತೊಡದೆ ತಮ್ಮ

ವ್ಯಕ್ತಿತ್ವದ ಮೇಲೆ ಉಡುಪು ಧರಿಸುತ್ತಿದ್ದನು. ಸಂಘದಲ್ಲಿ ನಟರು ಕಮ್ಮಿಯಿದ್ದುದರಿಂದ ಒಂದನೇ ಪ್ರವೇಶದಲ್ಲಿ ಮಂತ್ರಿ, ಸೇನಾಧಿಪತಿ ಪಾತ್ರ ಮಾಡಿದ್ದ ನಟರು ಎರಡನೇ ಪ್ರವೇಶದಲ್ಲಿ ಬ್ರಾಹ್ಮಣನ ಪಾತ್ರಕ್ಕೆ ಬಂದು ಮೂರನೇ ಪ್ರವೇಶಕ್ಕೆ ಬೇಡನಾಗಿಯೋ ಬೆಸ್ತನಾಗಿಯೋ ಪಾತ್ರ ಮಾಡಬೇಕಾಗುತ್ತಿತ್ತು. ಬ್ರಾಹ್ಮಣನ ಪಾತ್ರಕ್ಕೆ ಬರುವಾಗಲೂ ಮುಖದ ಬಣ್ಣ ಕುತ್ತಿಗೆಗೆ ಕಟ್ಟಿದ ಮುತ್ತಿನ ಸರ, ಮೈಗೆ ಹಾಕಿದ್ದ ಶರಟು, ಕಾಲು ಚೀಲ ಸಹ ತೆಗೆಯದೆ ಹಾಗೆಯೇ ಬರುತ್ತಿದ್ದರು. ಪುನಃ ಮಂತ್ರಿಪಾತ್ರಕ್ಕೆ ಚಂಕಿ ಡ್ರೆಸ್ ಹಾಕಿಕೊಂಡು ಹೋಗುತ್ತಿದ್ದರು. ಹೆಣ್ಣು ಪಾತ್ರಗಳಿಗೂ ಕಾಲು ಚೀಲ ಹಾಕುತ್ತಿದ್ದರು. ಕಾರಣ ಯಾರಿಗೂ ಗೊತ್ತಿಲ್ಲ. ಅಂತೂ ಕಾಲು ಚೀಲ ಹಾಕಬೇಕು. ಬಹುಶಃ ಕಾಲುಗಳಿಗೆ ಬಣ್ಣ ಹಾಕುವುದನ್ನು ತಪ್ಪಿಸಲೋ ಅಥವಾ ಬಣ್ಣವನ್ನು ಮಿತವಾಗಿ ಖರ್ಚುಮಾಡಲೋ ಇರಬಹುದು. ಶರಟು ಹಾಕಿಕೊಂಡು ಹೆಣ್ಣು ಪಾತ್ರ ಮಾಡುತ್ತಿದ್ದುದೂ ಉಂಟು.

ಉದ್ಯಾನವನದ ದೃಶ್ಯದಲ್ಲಿ ವರ್ಣಿಸುವಾಗ ಗಂಡು, ಹೆಣ್ಣು ಪಾತ್ರದವರು ಹಿಂದೂಸ್ಥಾನೀ ಪದಗಳನ್ನು ಹಾಡುತ್ತಿದ್ದುದೂ ಉಂಟು. ಉದಾಹರಣೆಗೆ "ದೇಖೊ ಚಮನ್ಕೆ ಬಹಾರ್, ಬಹಾರ್ ಮೇರೆ ಸಖಿಯೋಂ ದೇಖೊ ಚಮನ್ಕೆ ಬಹಾರ್॥ ಬೊಂಬಾಯ್ ಬಜಾರ್ ಮೆ ಕ್ಯಾಕ್ಯಾ ಬಿಕಾತೆ ಹೈ! ನಿಂಬೂ ನಾರಂಗಿ ಅನಾರ್ । ಅನಾರ್ ಮೇರಿ ಪ್ಯಾರೀ। ದೇಖೊ ಚರ್ಮಕೆ ಬಹಾರ್ ॥" ಎಂದು ಹಿಂದೂಸ್ಥಾನಿ ಹಾಡಿ 'ಸಖೀ! ಈ ಉದ್ಯಾನವನವು ಎಷ್ಟು ರಮಣೀಯವಾಗಿರುವುದು' ಎಂದು ಮಾತನಾಡುತ್ತಿದ್ದರು.

ಆಗ ಸಂಘದಲ್ಲಿ ಕೆಲವು ಕಾಲ ಒಂದೇ ಪಿಟೀಲು, ಒಂದು ತಬಲ ಮಾತ್ರ ಇದ್ದು ನಂತರ ಶ್ರುತಿಗೋಸ್ಕರ ಸೋಟಾ ಎಂಬ ಹೊಸ ವಾದ್ಯವನ್ನು ತಯಾರ್‍ಮಾಡಿಕೊಂಡರು. ಸೋಟಾ ಅಂದರೆ ತಂಬೂರಿಗೆ ಪ್ರತಿಯಾಗಿ ತೆಳುವಾದ ಜಾಯಿಕಾಯಿ ಹಲಗೆಯಲ್ಲಿ ತಯಾರುಮಾಡಿ ಅದಕ್ಕೆ ಬಿರಟೆಗಳನ್ನು ಮಾಡಿ ಬುರುಡೆಯಿಲ್ಲದ ತಂಬೂರಿಯ ಆಕಾರ ಮಾಡಿ, ತಂತಿಹಾಕಿ ಶೃತಿಗೆ ಮೀಟುತ್ತಿದ್ದರು. ಕೆಲವು ಕಾಲದನಂತರ ಸಂಘದಲ್ಲಿ ಜೋಡಿ ಪಿಟೀಲುಗಳಾದವು. ಒಬ್ಬರು ಒಳಗೆ ಒಂದೇ ಸ್ಥಳದಲ್ಲಿ ನಿಂತು ಪಿಟೀಲು ಬಾರಿಸಿದರೆ, ಮತ್ತೊಬ್ಬರು ಪಾತ್ರಧಾರಿ ಹೇಗೆ ಹೇಗೆ ಹೋಗುತ್ತಾನೆಯೋ ಹಾಗೆ ಪರದೆ ಹಿಂದುಗಡೆ ಹೋಗುತ್ತಾ ಬಾರಿಸುತ್ತಿದ್ದರು. ತಬಲದವರಿಗೂ, ಸೋಟಾ ಮೀಟುವವರಿಗೆ ಮಾತ್ರ ಒಂದು ಪೆಟ್ಟಿಗೆಯ ಮೇಲೆ ಕೂಡ್ರಿಸುತ್ತಿದ್ದರು. ಒಂದು ಪ್ರವೇಶ ಮತ್ತೊಂದು ಪ್ರವೇಶದ ತೆರೆ ಮೇಲೆ ಹೋಗುವವರೆಗೂ ಒಳಗೆ ಜಾವಡಿಗಳು, ಹಿಂದೂಸ್ಥಾನೀ ಹಾಡುಗಳನ್ನು ಹೇಳುತ್ತಲೇ ಇದ್ದರು. ಪಾತ್ರಧಾರಿ ಸಿದ್ಧವಾದನಂತರ ತೆರೆ ಮೇಲೆ ಏಳುತ್ತಿತ್ತು.

ಪಾತ್ರಧಾರಿಗೆ ಹಾಡುವ ಜ್ಞಾನವಿರಲಿ, ಇಲ್ಲದಿರಲಿ, ಮಟ್ಟುಗಳನ್ನು ಕಂದಗಳನ್ನು ಹಾಡಿಯೇ ತೀರಬೇಕು. ೧೯೦೫ ರಲ್ಲಿ ಹಾರ್ಮೋನಿಯಂ ಬಂದನಂತರ ಸೋಟಾವಾದ್ಯದ ಬಳಕೆ ಕಡಿಮೆಯಾಗುತ್ತಾ ಬಂದಿತು. ಹಾರ್ಮೋನಿಯಂ ಬಂದಾಗ್ಗ ಅದರಲ್ಲಿ ಹಾಡುಗಳನ್ನು ಬಾರಿಸಬಹುದು ಎಂಬುದೇ ಸಂಸ್ಥೆಯಲ್ಲಿ ಒಬ್ಬರಿಗೂ ತಿಳಿದಿರಲಿಲ್ಲ-ಹಾರ್ಮೋನಿಯಂನಲ್ಲಿ ಶೃತಿಗಾಗಿ ಎರಡನೆಯ ಮನೆಯ ಪಟ್ಟಿಯ ಸಂದಿನಲ್ಲಿಟ್ಟಿದ್ದ ಬೆಂಕಿಕಡ್ಡಿಯನ್ನು ಐದು-ಆರು

ವರುಷದವರೆಗೂ ತೆಗೆಯಲೇ ಇಲ್ಲ. ಗಂಡಸರಾಗಲೀ, ಹೆಂಗಸರಾಗಲೀ ಒಂದೇ ಶೃತಿಯಲ್ಲಿ ಹಾಡಬೇಕು.

ಆಗ ಕವಿಗಳು ಒಂದು ನಾಟಕದಲ್ಲಿ ಒಂದುನೂರು ಹಾಡುಗಳು, ನಲವತ್ತು-ಐವತ್ತು ಕಂದ ಪದ್ಯಕ್ಕಿಂತಲೂ ಕಡಿಮೆ ಬರೆಯುತ್ತಿರಲಿಲ್ಲ. ಹಾಡು ಎಂದರೆ ಪಲ್ಲವಿ, ಅನುಪಲ್ಲವಿ, ಮೂರು ಚರಣಗಳಿರುತಿದ್ದುವು. ಸೇವಕನು (ಚಾರ) ಸ್ವಾಮಿ 'ಯಾರೊವಿಪ್ರರು ತಮ್ಮ ಸಂದರ್ಶನಕ್ಕಾಗಿ ದಯಮಾಡಿಸಿರುವರು' ಎಂದು ಹೇಳುವನು:

ಆರೊ ಪ್ರಭುವೆ ದ್ವಾರದ ಬಳಿ ಬಂದು ನಿಂತಿಹನ್ನೈ
ಮೋರೆ ನೋಡಲು ಪಾರ್ವನಂದದಿ ತೋರುವನ್ನೈ ॥೧॥

ಕೋರಿ ನಿಮ್ಮ ದರ್ಶನವನು ಸಾರಿಬಂದಿಹನ್ನೈ
ಮಾರ ಜನಕನಾಜ್ಞೆಯಿತ್ತರೆ ಸಾರಿಬಿಡುವೆನ್ನೈ ॥೨॥

ಅದಕ್ಕೆ ಉತ್ತರವಾಗಿ ರಾಜನು

ಕರೆದು ತರಲುಯಿತ್ತಲವರ ಪೋಗು ನೀ ಬರ
ಪರಿ ಪರಿ ಮರ್ಯಾದೆಯಿಂದ ವಿಪ್ರವರ್ಯರಾ ॥

ಹೀಗೆಯೇ ಬೆಟ್ಟದಂತಹ ಹಾಡು ಚೋಟುದ್ದದ ಮಾತು ಎನ್ನುವ ಹಾಗೆ ಬರುವುದಕ್ಕೊಂದು ಹಾಡು, ಹೋಗುವುದಕ್ಕೊಂದು ಹಾಡು-ಹೀಗೆ ಕವಿಗಳು ನಾಟಕಗಳನ್ನು ಬರೆಯುತ್ತಿದ್ದರು. ಅಲ್ಲದೆ ಪ್ರಾಸಬದ್ಧವಾಗಿ ಬಹು ಚೆನ್ನಾಗಿಡುತ್ತಿದ್ದರು. :

ಮಾತನಾಡೈ ಪ್ರಾಣಕಾಂತನೆ
ಪ್ರೀತಿಯಿಲ್ಲಾವೇಕೆ ಶಾಂತನೆ॥
ಕಾತಾರಿಸೂತರ್ಪ ಪ್ರೀತಾಳೆಂದೆನೂ
ಖಾತೀಯನೆನ್ನೊಲು ತೋರುವೆ
ಜಾರ ಚೋರ ಶೂರ ನೀನೆ ಮಾರ ಬಾರೊ ಪ್ರಾಣಕಾಂತನೇ
ಹಾರೀ ಮಿತಿಮಾರಿ ಸುಖ ತೋರಿ ತವ ನಾರೀಯ ದೂರಿ ಪೋದ ಕಾಂತನೇ ॥೨॥

ಗುಬ್ಬಿ ಕಂಪನಿ-ಸದಾರಮೆಯಲ್ಲಿ ಕಳ್ಳನ ಪಾತ್ರ

೧೯೦೧-೧೯೦೨ರಲ್ಲಿ ಸಂಘಕ್ಕೆ ಹಾಸನದ ವೆಂಕಟರಾಮಯ್ಯ (ರಾಜಾಪಾರ್ಟು) ಹಾಸನದ ರಂಗಪ್ಪ, ಕಲ್ಲೂರು ವೆಂಕಟರಮಣಯ್ಯ, ಹಾಸ್ಯಪಾತ್ರಕ್ಕೆ ನಾರಣಪ್ಪ, ಎಲ್ಲಾಪುರಿ ರಂಗಪ್ಪ, ಮೈಸೂರು ಬಸಪ್ಪ, ಅಣ್ಣಯ್ಯಪ್ಪ ಜಟ್ಟಿಯಪ್ಪ, ಕೃಷ್ಣಯ್ಯಂಗಾರಿ ಮತ್ತು ಪಾಪುಡು, ಹೀಗೆ ಅನೇಕರು ಬಂದು ಸೇರಿದರು. ಅನೇಕ ನಟರು ಬರುವುದು ಹೋಗುವುದರಿಂದ ಹೆಚ್ಚಿನ ಬದಲಾವಣೆಗೆ ಪ್ರಾರಂಭವಾಯಿತು. ಸಂಘದಲ್ಲಿ ಖಾಯಂ ಆಗಿ ಮೂವತ್ತು-ಮೂವತ್ತೈದು ಜನರು ಇರುತ್ತಿದ್ದು ಖರ್ಚು ಒಂದು ಸಾವಿರ ರೂ.ವರೆಗೂ (ತಲಬು, ಊಟ ಎಲ್ಲಾ ಸೇರಿ) ಹೆಚ್ಚಿತು. ಈಗ ೧೮,೦೦೦ ರೂ. ಆಗುತ್ತದೆ.

೧೯೦೩ನೇ ಇಸವಿಯಲ್ಲಿ ಶ್ರೀ ಚಂದಣ್ಣನವರು ಸಂಘಕ್ಕೆ ಹೊಳೆನರಸೀಪುರದ ಪಾರ್ವತಾಸಾನಿಯೆಂಬ ವೇಶ್ಯೆಯನ್ನೂ, ಆಕೆಯ ಕುಮಾರಿಯಾದ ಶೇಷಾಸಾನಿಯೆಂಬ ಹುಡುಗಿಯನ್ನೂ ಸೇರಿಸಿಕೊಂಡರು. ಪಾರ್ವತಾಸಾನಿಗೆ ಆಗ ಸುಮಾರು ಮೂವತ್ತೈದು ಮೂವತ್ತೆಂಟು ವಯಸ್ಸು, ಶೇಷಾಸಾನಿಗೆ ಹನ್ನೊಂದು-ಹನ್ನೆರಡು ವರ್ಷ ವಯಸ್ಸಾಗಿತ್ತು. ತಾಯಿಯು ಸಾಧಾರಣ ವಿದ್ಯಾವಂತೆ, ರೂಪವಂತೆ. ಮಹಾಭಾರತ ವಾಚನ ಮಾಡುತ್ತಿದ್ದಳು (ಗಮಕಿ), ಸಂಗೀತಪಾಠ ಕೂಡ ತಕ್ಕಮಟ್ಟಿಗೆ ಆಗಿತ್ತು. ಚಂದಣ್ಣನವರು ಆಕೆಯನ್ನು ತಮ್ಮ ಉಪಪತ್ನಿಯನ್ನಾಗಿ ಮಾಡಿಕೊಂಡು ಪಾತ್ರವಹಿಸಲು ತಯಾರ್ಮಾಡಿದರು. ಸಂಘದಲ್ಲಿ ಮುಖ್ಯ ರಾಣಿಪಾತ್ರಕ್ಕೆ ಭದ್ರವಾಗಿ ಆಕೆಯೆ ಸ್ಥಿರವಾದಳು. ಮಗಳು ಶೇಷಾಸಾನಿಯೂ ಸಹ ಪುತ್ರನ ಪಾತ್ರಕ್ಕೂ ಚಿಕ್ಕ ಚಿಕ್ಕ ಹೆಣ್ಣು ಪಾತ್ರಕ್ಕೂ ನೆರವಾದಳು. ಅಲ್ಲಿಂದೀಚೆಗೆ ಸಂಘಕ್ಕೆ ಹೆಣ್ಣು ಮಕ್ಕಳು ಸೇರಲು ಪ್ರಾರಂಭಿಸಿದರು. ಹೊಳೆನರಸೀಪುರದಲ್ಲಿ ವೇಶ್ಯೆಯರ ಮನೆಗಳು ಹೆಚ್ಚಾಗಿದ್ದುದರಿಂದ ಅಲ್ಲಿಯವರೇ ನಾಲ್ಕು ಜನ ಹೆಂಗಸರು ಸೇರಿದರು. ನಾರಾಯಣಸಾನಿ, ನಂಜಾಸಾನಿ, ಸುಬ್ಬಾಸಾನಿ, ಇವರುಗಳು ಸೇರಿದರು.

ಆಗ ಸಂಘದಲ್ಲಿ ವಾದ್ಯದ ಸೆಟ್ಟು ಚೆನ್ನಾಗಿದ್ದು, ಚೆನ್ನಾಗಿ ಹಾಡುತ್ತಿದ್ದ ಕಾಲಾಪಿಲ್ಲಯ್ಯ, ಪಾರ್ವತಾಸಾನಿ, ಶೇಷಾಸಾನಿ, ಶಾಮಾಸಾನಿ, ಹಾಸ್ಯಪಾತ್ರಕ್ಕೆ ಸುಬ್ಬಣ್ಣ, ಮುಂತಾದ ಉತ್ತಮ ಪಾತ್ರದವರಿದ್ದುದರಿಂದ ಸಂಘವು ಪುನಃ ಮದ್ದಗಿರಿ, ಹಿಂದೂಪುರ, ಬಳ್ಳಾರಿ, ಆದವಾನಿ, ರಾಯಚೂರು ಪ್ರಾಂತ್ಯ ಸರ್ಕಿಟು ಮಾಡಲು ಹೊರಟಿತು. ರಾಯಚೂರಿಗೆ ಹೋದಾಗ ಅಲ್ಲಿ ಕಾಲರಾ ಪ್ರಾರಂಭವಾಗಿ, ಅದರ ಸೋಂಕು ಸಂಸ್ಥೆಗೂ ವ್ಯಾಪಿಸಿತು. ಸಂಘದಲ್ಲಿ ನಟರಾಗಿದ್ದ ಕೋರದ ಮಲ್ಲಯ್ಯ, ಶಂಕರಪ್ಪ ಎಂಬ ನಟರುಗಳು ಕಾಲರಾಕ್ಕೆ ಆಹುತಿಯಾದರು. ಎಲ್ಲರೂ ಹೆದರಿ, ಕ್ಯಾಂಪು ವಾಪಸ್ ಹೊರಟು ಗುಬ್ಬಿಗೆ ಬಂದೆವು. ಕಾಲರಾ ಇದ್ದ ಸ್ಥಳನಿಂದ ಸಂಘವು ಬಂದಿದೆಯೆಂದು ಹತ್ತುದಿನಗಳು ನಮ್ಮಗಳನ್ನು ಊರಿನೊಳಕ್ಕೆ ಹೋಗಲು ಅವಕಾಶ ಕೊಡಲಿಲ್ಲ.

ಕೆಲವು ದಿನಗಳ ನಂತರ ಪುನಃ ಸಂಘವು ಸಂಚಾರ ಹೊರಟಿತು. ಈ ಸಾರಿ ನನಗೆ ಏಳು-ಎಂಟು ರೂಪಾಯಿ ಸಂಬಳ ಕೊಡಲು ಪ್ರಾರಂಭಿಸಿದರು. ಚಿಕ್ಕ ಪಿಟೀಲು ಒಂದನ್ನು ಕೊಡಿಸಿದರು; ಸಂಗೀತ ಅಭ್ಯಾಸ ಮಾಡುತ್ತಿದ್ದೆ. ಪಿಟೀಲು ವಾದನವನ್ನು ಅಭ್ಯಾಸ ಮಾಡಲು ಪ್ರಾರಂಭಿಸಿ ಸರಳೆ, ಸಪ್ತಸ್ವರ, ಹೆಚ್ಚು ಸ್ವರಗಳ ಸರಳೆ, ಜಂಟಿ ಸ್ವರಗಳು, ಅಲಂಕಾರ, ಗೀತ, ಸ್ವರಜತಿ, ವರ್ಣಕ್ಕೆ ಪ್ರಾರಂಭವಾಗಿ ಎರಡು ವರ್ಣ ಪಾಠವಾಗಿ ಅಲ್ಲಿಗೆ ನನ್ನ ಸಂಗೀತ ಪಾಠ ಮುಕ್ತಯವಾಯಿತು. ಪಿಟೀಲು ಬಾರಿಸುವವರ ಜೊತೆ ಕೊಂಚ ಕೊಂಚ ನಾಟಕಕ್ಕೆ ಪಿಟೀಲು ಬಾರಿಸುತ್ತಿದ್ದೆ. ಸಂಸ್ಥೆಗೆ ಬೆಂಗಳೂರಿನ ರಾಜಾ ಪಾರ್ಟು ಚಿಕ್ಕಣ್ಣಪ್ಪ, ಅರಸಪ್ಪ, ಸೂರಪ್ಪ, ಹಾಸನದ ಹೊಸೂರಪ್ಪ (ತಬಲ), ತಮ್ಮಯ್ಯ (ಪಿಟೀಲು), ಶೇಷಪ್ಪ ಮುಂತಾದವರು ಸೇರಿದರು. ಆಗ ಭ್ರಾಂತಿಯಾಮಿನ, ನಳಚರಿತ್ರೆ ನಾಟಕಗಳನ್ನು ಅಭ್ಯಾಸ ಮಾಡಿಸಿದರು. ನಳಚರಿತ್ರೆ ನಾಟಕ ಆಡುವಾಗ್ಗೆ ಮುಖ್ಯಪಾತ್ರ ಮಾಡುತ್ತಿದ್ದ ಪಾರ್ವತಾಸಾನಿ ಸ್ವರ್ಗಸ್ಥಳಾದಳು. ಆಕೆಯ ಸ್ಥಾನಕ್ಕೆ ಮಗಳಾದ ಶೇಷಾಸಾನಿ ಬಂದಳು. ಆಕೆಗೆ ಆಂಧ್ರದೇಶದ ವಿದ್ವಾಂಸರಾದ ವಿಶ್ವನಾಥ ಶಾಸ್ತ್ರಿಯವರಿಂದ ಸಂಗೀತ ಪಾಠ ಹೇಳಿಸುತ್ತಿದ್ದರು. ಪಾಠ ಹೇಳುವ ಕಾಲದಲ್ಲಿ ಬೇರೆಯವರನ್ನು ಒಳಗೆ ಸೇರಿಸಿದರೆ ಅವರೂ ಸಂಗೀತವನ್ನು ಕಲಿತುಬಿಟ್ಟಾರೆಂಬ ಸಂಕುಚಿತ ಸ್ವಭಾವದಿಂದ ಯಾರನ್ನೂ ಒಳಗೆ ಸೇರಿಸುತ್ತಿರಲಿಲ್ಲ. ಶೇಷಾಸಾನಿಯು ಪಾತ್ರದಲ್ಲಿಯೂ, ಭರತನಾಟ್ಯ, ಸಂಗೀತದಲ್ಲಿಯೂ ತಯಾರಾದಳು.

ಸಂಘವು ನೈಜಾಂ ಆಡಳಿತಕ್ಕೆ ಸೇರಿದ ಗದ್ವಾಲ್ ಸಂಸ್ಥಾನಕ್ಕೆ ಹೋಯಿತು. ಅಲ್ಲಿಯ ಮಹಾರಾಣಿಯವರ ದಸರಾ ಕಾಲದಲ್ಲಿ ದೊಡ್ಡ ದೊಡ್ಡ ಸಂಗೀತ ವಿದ್ವಾಂಸರನ್ನು ಕರೆಸಿ, ಸಭೆಯಲ್ಲಿ ಹಾಡಿಸಿ, ಅವರವರ ಯೋಗ್ಯತೆಯನ್ನನ್ನುಸರಿಸಿ ಬಹುಮಾನಗಳನ್ನು ಕೊಡುತ್ತಿದ್ದರು. ಆಗ ನಮ್ಮ ಸಂಘದ ಶೇಷಾಸಾನಿಗೆ ಭರತನಾಟ್ಯ ಕಡೆ ಬಂದಿತು. ಆಕೆಯ ಜೊತೆ ಪಿಟೀಲು ನುಡಿಸಲು ಯಾರೂ ಹೋಗಲಿಲ್ಲ. ಪಿಟೀಲು ನುಡಿಸುತ್ತಿದ್ದ ಬ್ರಾಹ್ಮಣ ಮತದ ವೆಂಕಟರಾಮಯ್ಯ ಎಂಬುವರು ತಾವು ಹೋಗುವುದಿಲ್ಲವೆಂದು ಘಂಟಾ ಘೋಷವಾಗಿ ಹೇಳಿದರು. ಆಕೆಯ ಜೊತೆಯಲ್ಲಿ ಪಿಟೀಲು ನುಡಿಸಲು ಆಸ್ಥಾನಕ್ಕೆ ಯಾರೂ ಹೋಗದಿದ್ದಲ್ಲಿ ಸಂಘಕ್ಕೆ ಅನನುಕೂಲ, ಅವಮಾನವಾಗುತ್ತೆಂದು ಯಜಮಾನರು ನನಗೆ ಹೇಳಿದ್ದರಿಂದ ನಾನೇ ಹೋಗಬೇಕಾಯಿತು. ಆಸ್ಥಾನದಲ್ಲಿ ನಾನೇ ಹೋಗಿ ನಟುವನಾಗಿ ಪಿಟೀಲು ನುಡಿಸಿದೆ. ಆಗಿನಿಂದ ಮಾಲೀಕರಾದ ಚಂದಣ್ಣನವರಿಗೆ ನನ್ನ ಬಗ್ಗೆ ಹೆಚ್ಚು ಅಭಿಮಾನ ಹುಟ್ಟಿತು. ಇದರಿಂದ ನನಗೆ ಎರಡು ರೂಪಾಯಿ ಸಂಬಳ ಹೆಚ್ಚಾಯಿತು.

ಆಗಿನ ಕಾಲದಲ್ಲಿ ಹಾಡುವುದೇ ಮುಖ್ಯ. ನನಗಾದರೊ ಶಾರೀರ ಸಂಪತ್ತಿಲ್ಲದೆ ಸರಿಯಾದ ಪಾತ್ರ ಮಾಡಲು ಅವಕಾಶವಿಲ್ಲ. ನನಗೆ ಮುಂಚಿನಿಂದಲೂ ಹಾಸ್ಯ ಪಾತ್ರ ಮಾಡುವ ಹಂಬಲ ವಿಪರೀತವಿತ್ತು. ಆದರೆ ಇತರ ಕೆಲಸ ಕಾರ್ಯಗಳೊಡನೆ ಚಿಲ್ಲರೆ ಪಾತ್ರಗಳನ್ನು ಮಾಡುವುದಷ್ಟೆ ನನ್ನ ಕೆಲಸವಾಗಿತ್ತು. ಒಂದು ಸಾರಿ ಕಂಪನಿ ಆದವಾನಿಯಲ್ಲಿದ್ದಾಗ, ಮೊಹರಂ ಹಬ್ಬದ ಕಾರಣದಿಂದಲೂ ಅಲ್ಲಿ ಮಹಮ್ಮದೀಯರು

ಹೆಚ್ಚಾಗಿದ್ದುದರಿಂದಲೂ ಸಂಘದ ಲೈಸೆನ್ಸ್ ರದ್ದು ಮಾಡಲಾಯಿತು. ಸಂಘವು ಆದವಾನಿ ತಾಲ್ಲೂಕು ಒಳಗುಂದಿಗೆ ಹೋಯಿತು. ಆ ಸಮಯದಲ್ಲಿ ಊರಿಗೆ ಹೋಗಿದ್ದ ಹಾಸ್ಯ ನಟ ಸುಬ್ಬಯ್ಯ ಬರಲಿಲ್ಲ. ಸದಾರಮೆ ನಾಟಕದಲ್ಲಿ ಆತ ಕಳ್ಳನ ಪಾತ್ರ ಮಾಡುತ್ತಿದ್ದ. ಬೇರೆಯವನಿಂದ ಮಾಡಿಸಿದರು ; ಸರಿಹೋಗಲಿಲ್ಲ. ಆನೇಕಲ್ ಮುನಿಸ್ವಾಮಿ ಎಂಬ ನಟನಿಂದಲೂ ಮಾಡಿಸಿದರೂ ಸರಿ ಬೀಳಲಿಲ್ಲ. ಆಗ ನಾನು ಯಜಮಾನ ಬಳಿಗೆ ಹೋಗಿ ನನಗೆ ಒಂದು ದಿನ ಕಳ್ಳನ ಪಾತ್ರವನ್ನು ಮಾಡಲು ಅವಕಾಶ ಕೊಡಿ, ಸರಿಯಾಗಿ ಮಾಡದಿದ್ದರೆ ಮುಂದೆ ಕೊಡಬೇಡಿ ಎಂದು ಪ್ರಾರ್ಥಿಸಿದನಂತರ ಒಳ್ಳೇದು-ಮಾಡಯ್ಯ ಎಂದರು. ಒಂದು ದಿನ ಸದಾರಮೆಯಲ್ಲಿ ಕಳ್ಳನ ಪಾತ್ರ ಮಾಡಿದೆ. ಒಳ್ಳೆಯ ಮುಹೂರ್ತದಲ್ಲಿ ಮಾಡಿದೆನೆಂದು ತೋರುತ್ತೆ. ಬಹಳ ಚೆನ್ನಾಗಿ ಬಂದು, ಯಜಮಾನರು ಬಹಳ ಸಂತೋಷ ಪಟ್ಟು, ಚೆನ್ನಾಗಿ ಆಯಿತಯ್ಯ, ಬಹಳ ಸಂತೋಷ, ಇನ್ನು ಮೇಲೆ ನೀನೇ ಕಳ್ಳನಾಗು ಎಂದು ಆಶೀರ್ವಾದ ಮಾಡಿ ಹದಿನೈದು ರೂಪಾಯಿ ಸಂಬಳ ಮಾಡಿದರು ಅಂದಿನಿಂದ ನನಗೆ ಕಳ್ಳನ ಪಾತ್ರ ಖಾಯಂ ಆಯಿತು.

ವಿದ್ವಾನ್ ಶಂಕರಪ್ಪನವರು ಪ್ರತಿನಿತ್ಯವೂ ಪಿಟೀಲು ಬಾರಿಸುತ್ತಾ ನನಗೆ ತಬಲಾ ಬಾರಿಸಲು ಹೇಳುತ್ತಿದ್ದರು. ಆ ಸಮಯದಲ್ಲಿ ನಾನು ಸಾಧಾರಣವಾಗಿ ತಬಲಾ ನುಡಿಸುವುದನ್ನು ಕಲಿತುಕೊಂಡೆ,

ಗ್ಯಾಸ್ ಲೈಟಿಗೆ ಏರಿತು

ಸಂಘವು ಪುನಃ ಆದವಾನಿಗೆ ಬಂದು ಅಲ್ಲಿಂದ ಶಿರಹಟ್ಟಿ ಕ್ಯಾಂಪು ಮಾಡಿದಾಗ ಥಿಯೇಟರಿಗೆ ಬೆಂಕಿ ಬಿದ್ದು ಪೂರ್ಣವಾಗಿ ಉರಿದು ಹೋಗಿ ಮಾಲೀಕರಾದ ಶ್ರೀ ಚಂದಣ್ಣನವರು ಬರಿಕೈ ಆದರು. ಆಗ ಅವರಿಗೆ ಬುದ್ಧಿ ಭ್ರಮಣೆಯಾಗಿ, ಬಹಳ ದುಃಖಕ್ಕೀಡಾಗಿ ಸಂಘದ ಜನರಿಗೆ ಊಟ ಉಪಚಾರಕ್ಕೆ ತೊಂದರೆಯಾಗಿ ಉಪವಾಸ ಬೀಳಬೇಕಾದ ಸಂದರ್ಭ ಬಂದಿತು. ಆಗ ಆದವಾನಿಯಲ್ಲಿ ಮಿಠಾಯಿ ಚನ್ನಬಸವಯ್ಯ ಎಂಬ ಶ್ರೀಮಂತರು ನನಗೆ ಸ್ನೇಹಿತರಾಗಿದ್ದರಿಂದ ಅವರ ಸಹಾಯ ಪಡೆದು ಅವರಿಂದ ಐದುನೂರುರುಪಾಯಿಗಳನ್ನು ತೆಗೆದುಕೊಂಡು ಅನಂತಪುರ ಜಿಲ್ಲೆಯ ಉರುವಕೊಂಡದ ಶ್ರೀಮಂತರಾದ ಹಂಪಣ್ಣನವರ ಹತ್ತಿಯ ಗಿರಣಿಯಲ್ಲಿ, ಬೇರೆ ಕಡೆಯವರಿಂದ ಮೂರು ನಾಲ್ಕು ಪರದೆಗಳನ್ನು ಬಾಡಿಗೆಗೆ ತಂದು ಕಟ್ಟಿ ನಾಟಕವಾಡಲು ಪ್ರಾರಂಭಿಸಿ ಎರಡು ಮೂರು ತಿಂಗಳು ಅಲ್ಲಿಯೇ ಇದ್ದು, ಸೇಲಂ ಪೇಯಿಂಟರ್ ಅಳಗಿರಿಸ್ವಾಮಿ ಎಂಬುವರನ್ನು ಕರೆಸಿ ಸೀನರಿ ವಗೈರೆಗಳನ್ನು ತಯಾರ್ಮಾಡಿಸಿಕೊಂಡು ರಾಯದುರ್ಗಕ್ಕೆ ಬಂದು ಅಲ್ಲಿಂದ ಬಳ್ಳಾರಿಗೆ ಹೋದೆವು. ಆ ಕ್ಯಾಂಪು ದೊಡ್ಡದಾಗಿದ್ದುದರಿಂದಲೂ, ಹೊಸಸೀನರಿ ಒಳ್ಳೆಯ ನಟರಿದ್ದುದರಿಂದಲೂ ಕಲೆಕ್ಷನ್ ಚೆನ್ನಾಗಿ ಆಗುತ್ತಿತ್ತು.

ಆಗ ನನಗೆ ಲಗ್ನದ ಸಂದರ್ಭ ಬಂದುದರಿಂದ ಚಂದಣ್ಣನವರಿಂದ ಲಗ್ನಕ್ಕೆ ಹಣ ಸಹಾಯ ಪಡೆದು ಗುಬ್ಬಿಗೆ ಹೊರಟು ಬಂದು ಲಗ್ನಕಾರ್ಯ ಮುಗಿಸಿ ಗದಗಿನ ಕ್ಯಾಂಪಿಗೆ ಬಂದು ಸೇರಿದೆ. ಅಲ್ಲಿ ಒಬ್ಬ ಶ್ರೀಮಂತರ ಗಿರಣಿಯಲ್ಲಿ ನಾಟಕವಾಡುತ್ತಿದ್ದ ನಂತರ ಬಾಗಿಲಕೋಟೆಗೆ ಬಂದು ಅಲ್ಲಿ ಗಣೇಶ ನಾಟಕ ಶಾಲೆಯಲ್ಲಿ ನಾಟಕವಾಡುತ್ತಿದ್ದೆವು. ಆಗ ಅಲ್ಲಿಗೆ ಮರಾಠಿ ಕಂಪೆನಿ "ಸಂಗೀತ ನಾಟಕ ಸಭಾ" ಎಂಬ ಸಂಸ್ಥೆ ಬಂದಿತ್ತು. ಆಗ ನಾವು ಭೋಜಪ್ರಬಂಧ, ಸದಾರಮೆ, ಗುಲೇಬಕಾವಲಿ, ಪ್ರಭಾವತೀದರ್ಬಾರ್ ಪಾಂಡವ ವಿಜಯ, ಸುಭದ್ರ ಇವನ್ನೇ ಮುಖ್ಯವಾಗಿ ಆಡುತ್ತಿದ್ದೆವು. ಹನುಮದ್ವಿಲಾಸ ಎಂಬ ಯಕ್ಷಗಾನದಿಂದ ಪದ್ಯ, ಹಾಡು, ಸಂದರ್ಭಾನುಸಾರ ಮಾತುಗಳನ್ನೂ ಆರಿಸಿಕೊಂಡು ರಾಮಾಯಣ ನಾಟಕವನ್ನು ಆಡುತ್ತಿದ್ದೆವು. ನಾವು ರಾಮಾಯಣ ಹಾಕಿದ ದಿನ ರಂಗಮಂದಿರವು ಭರ್ತಿಯಾಗಿಬಿಡುತ್ತಿತ್ತು (ಹೌಸ್‌ಫುಲ್). ರಾತ್ರಿ ಒಂಬತ್ತೂವರೆ ಗಂಟೆಗೆ ನಾಟಕ ಪ್ರಾರಂಭಿಸಿ ಸೂರ್ಯೋದಯವಾಗಿ ಚೆನ್ನಾಗಿ ಬಿಸಿಲು ಬಂದು ಏಳು ಗಂಟೆಗೆ ಮಂಗಳ ಹಾಡಿ ನಾಟಕ ಮುಗಿಸುತ್ತಿದ್ದೆವು. ಪ್ರೇಕ್ಷಕರು ನಾಟಕವನ್ನು ನೋಡಿ ಮೆಚ್ಚಿ ಮನಸಾರೆ ಹರಸಿ ಹೋಗುತ್ತಿದ್ದರು.

ಈ ರಾಮಾಯಣ ನಾಟಕದಲ್ಲಿ ಹನುಮಂತನು ಸಮುದ್ರವನ್ನು ಹಾರುವಾಗ್ಗೆ ಸಮುದ್ರವನ್ನು ತೋರಿಸಲು ಚೀಟಿ ಸೀರೆ ಕಟ್ಟಿ ದೃಶ್ಯವನ್ನು ಏರ್ಪಡಿಸಲಾಗುತ್ತಿತ್ತು. ಅಶೋಕವನದ ದೃಶ್ಯಕ್ಕೆ ಸಣ್ಣ ಮಾವಿನ ಕೊಂಬೆಯನ್ನು ಕಡಿದು ತಂದು ರಂಗಭೂಮಿಯಲ್ಲಿ ನೆಟ್ಟು ಅದಕ್ಕೆ ಎರಡುಮೂರು ಬಾಳೆಹಣ್ಣುಗಳ ಗೊಂಚಲು ಕಟ್ಟುತ್ತಿದ್ದುದಲ್ಲದೆ ಅದೇ

ಮಾವಿನ ಕೊಂಬೆಗಳಿಗೆ ಎಳೆನೀರು ಒಂದನ್ನು ಕಟ್ಟಿ ಇಳಿಬಿಟ್ಟು ಆಂಜನೇಯನು ಅಶೋಕವನವನ್ನು ಹಾಳುಮಾಡುವಾಗ ಮಾವಿನ ಮರದಲ್ಲಿದ್ದ ಬಾಳೆಹಣ್ಣನ್ನು ತಿನ್ನುವುದೇ ಅಲ್ಲದೆ ಎಳನೀರುಗಳನ್ನು ಕುಡಿಯುತ್ತಿದ್ದನು. ಇದನ್ನು ನೋಡಿ ಜನಗಳು ತುಂಬಾ ಹೊಗಳುತ್ತಿದ್ದರು.

ರಾಮಾಯಣ ನಾಟಕದಂತೆಯೇ ಪಾಂಡವ ವಿಜಯವೂ ಜನಪ್ರಿಯವಾಗಿತ್ತು ಎಂದು ಹಿಂದೆಯೇ ಹೇಳಿದ್ದೆನಷ್ಟೆ. ಪಾಂಡವ ವಿಜಯ ಎಂದಾಗಲೆಲ್ಲ ಆ ನಾಟಕದಲ್ಲಿ ಒಂದು ದೃಶ್ಯ ಬಹಳವಾಗಿ ನನ್ನ ಗಮನವನ್ನು ಸೆಳೆದು ಅದರಿಂದಾದ ಪರಿಣಾಮ ವಿಚಿತ್ರವಾಯಿತು. ಅದರ ವಿವರ ಹೀಗಿದೆ. ಪಾಂಡವರು ಅರಣ್ಯವಾಸವನ್ನು ಪೂರೈಸಿ ಅಜ್ಞಾತವಾಸವನ್ನು ಕಳೆಯಲು ವಿರಾಟನಗರದಲ್ಲಿ ಮಾರು ವೇಷದಲ್ಲಿದ್ದಾರೆ. ಅಡಿಗೆಯ ಭಟ್ಟ ವಲಲನಾಗಿ ಭೀಮಸೇನನಿರುವಾಗ ದ್ರೌಪದಿ ಬಂದು ಕೀಚಕನ ಹಿಂಸೆಯಿಂದ ಪಾರುಮಾಡುವಂತೆ ಕೇಳಿಕೊಳ್ಳಲು ಬರುತ್ತಾಳೆ. ಆಗ ಭೀಮಸೇನನು ಅಡಿಗೆ ಪೂರ್ತಿ ಮಾಡಿ ತಾನು ಭೋಜನ ಮಾಡುತ್ತಿರುತ್ತಾನೆ. ಇದು ಬಹಳ ವಿನೋದವಾಗಿಯೂ, ಪ್ರೇಕ್ಷಕರಿಗೆ ಮೆಚ್ಚಿಕೆಯಾಗಿಯೂ ಇದ್ದಂತಹ ದೃಶ್ಯ.

೫ ಸೇರು ಅಕ್ಕಿ ಬೇಯುವ ತಪ್ಪಲೆಗೆ ೬ ಸೇರು (ಕಡಲೆ ಪುರಿ) ಮಂಡಕ್ಕಿ ಹಾಕಿಕೊಂಡು ಅದಕ್ಕೆ ದೊಡ್ಡ ಸೌಟನ್ನು ಹಾಕಿ ಅದರಿಂದ ಪುರಿಯನ್ನು ಬಾಯಿಯಲ್ಲಿ ಹಾಕಿಕೊಂಡು ತಿನ್ನುತ್ತಿದ್ದನು. ಪ್ರೇಕ್ಷಕರಿಗೆ ಭೀಮಸೇನನು ಅನ್ನವನ್ನೇ ತಿನ್ನುತ್ತಿದ್ದಾನೆಂಬ ಭಾವನೆ ಬರುತ್ತಿದ್ದಿತು. ನಂತರ ಒಂದು ಸಣ್ಣ ಬಿಂದಿಗೆ ತುಂಬ ನೀರನ್ನು ಪುರಿ ತಿಂದ ನಂತರ ಎರಡು ಕೈಗಳಿಂದಲೂ ಬಿಂದಿಗೆಯನ್ನು ಮೇಲಕ್ಕೆತ್ತಿಕೊಂಡು ನೀರನ್ನೆಲ್ಲಾ ಕುಡಿದು ಬಿಡುತ್ತಿದ್ದನು. ಜನರಿಗೆಲ್ಲಾ ಬಹಳ ಆಶ್ಚರ್ಯವಾಗುತ್ತಿತ್ತು.

ನನಗೂ ಸಹ ಬಹಳ ಆಶ್ಚರ್ಯ ಆನಂದವಾಗಿ ನಾನೂ ಅಷ್ಟು ನೀರನ್ನು ಕುಡಿಯಲಾಗುವುದಿಲ್ಲವೇ? ನೋಡಲೇ ಬೇಕೆಂಬ ಭಾವನೆ ಬಂದಿತು. ಒಂದು ಮಧ್ಯಾಹ್ನ ಎಲ್ಲರೂ ಮಲಗಿರುವಾಗ್ಗೆ ಅಡಿಗೆ ಮನೆಗೆ ಹೋಗಿ ಒಂದು ತಂಬಿಗೆ ತುಂಬಾ ನೀರನ್ನು ತೆಗೆದುಕೊಂಡು ಭೀಮನ ಪಾತ್ರಧಾರಿ ಕುಡಿದಂತೆ ಕೈಮೇಲೆತ್ತಿ ಕುಡಿದೇ ಬಿಟ್ಟೆ. ದೊಡ್ಡ ಕಾರ್ಯ ಮಾಡಿ ಜಯಿಸಿದೆನೆಂಬ ವಿಜಯೋತ್ಸಾಹದಲ್ಲಿ ಹೊರಬಂದೆ.

ಸುಮಾರು ೨೦-೨೫ ನಿಮಿಷ ಕಳೆದಿರಬಹುದು-ಯಾವುದೋ ಅವ್ಯಕ್ತ ಹಿಂಸೆ ಪ್ರಾರಂಭವಾಗಿ ಬಹಳ ತೊಂದರೆ ಅನುಭವಿಸಲಾರಂಭಿಸಿದೆ. ಯಾರಿಗೂ ಹೇಳುವಂತಿಲ್ಲ. ಹೇಳಿದರೆ ಬೈಗುಳವಾಗುತ್ತೆಂದು ಹೆದರಿ ಕೊಂಚಹೊತ್ತು ಸುಮ್ಮನಿದ್ದೆ. ತಡೆಯಲಾಗಲಿಲ್ಲ. ಆಗ ಒಬ್ಬೊಬ್ಬರಿಗೇ ಗುಟ್ಟಾಗಿ ಹೇಳಬೇಕಾಯಿತು. ಕ್ರಮೇಣ ಈ ಗುಟ್ಟು ಯಜಮಾನರ ಕಿವಿಗೂ ಬಿತ್ತು. ಪ್ರಾರಂಭವಾಯಿತು ಬೈಗುಳಿನ ಪದ. ದೊಡ್ಡ ಬಳ್ಳಾಪುರ ತಾಲ್ಲೂಕಿನ ದೊಡ್ಡ ಬೆಳವಂಗಳ ಕ್ಯಾಂಪು, ಅಲ್ಲಿದ್ದ ಸರ್ಕಾರದ ಆಫೀಸೆಂದರೆ ಅಲ್ಲಿದ್ದ ಸಣ್ಣ ಪೋಲೀಸ್ ಸ್ಟೇಷನ್. ದಫೇದಾರರೇ ದೊಡ್ಡ ಆಫೀಸರು. ಆಸ್ಪತ್ರೆಯೇ ಇರಲಿಲ್ಲ. ಆದ್ದರಿಂದ ವೈದ್ಯರನ್ನು

ಹುಡುಕಲು ಕಳುಹಿಸಿದರು. – ಕೆಲಹೊತ್ತಿನ ಮೇಲೆ ಒಳಕಲ್ ಪಂಡಿತರೊಬ್ಬರು ಬಂದು ಏನೇನೊ ಅರೆಸಿ ನನಗೆ ಕುಡಿಸಿದರು. ಕೊಡಲೇ ನನಗೆ ಜಲಬಾಧೆಗೆ ಪ್ರಾರಂಭವಾಗಿ ಕುಡಿದ ನೀರೆಲ್ಲಾ ಹೊರಗೆ ಬರುತ್ತಿರುವಂತೆಯೇ ನನಗೆ ಹೊಟ್ಟೆನೋವು ಕಡಿಮೆಯಾಗುತ್ತಾ ಬಂದಿತು.

ಸಾವಿರದ ಒಂಭೈನೂರ ಹನ್ನೊಂದನೇ ಇಸವಿಯಲ್ಲಿ ಬಾಗಿಲಕೋಟೆ, ಬಿಜಾಪುರ, ಸೊಲ್ಲಾಪುರಗಳಿಗೆ ಹೋಗಿ ನಾಟಕಗಳನ್ನಾಡುತ್ತಿದ್ದೆವು. ಅಲ್ಲಿ ಸಂಕ್ರಾತಿಹಬ್ಬದಲ್ಲಿ ಶ್ರೀ ಸಿದ್ಧರಾಮೇಶ್ವರಸ್ವಾಮಿ ಜಾತ್ರೆ ಬಹುದೊಡ್ಡದಾಗಿ ನಡೆಯುತ್ತಿತ್ತು, ಈಗಲೂ ಆ ಜಾತ್ರೆ ನಡೆಯುತ್ತದೆ. ನಾವು ಜಾತ್ರೆಗೆ ಒಂದು ತಿಂಗಳು ಮುಂಚೆಯೇ ಹೋಗಿದ್ದೆವು. ಅಲ್ಲಿ ಬಳೆ ಥಿಯೇಟರ್, ಮೆಕಾನಿಕ್ ಥಿಯೇಟರ್ ಎಂಬ ಎರಡು ರಂಗಮಂದಿರಗಳಿದ್ದವು. ಜಾತ್ರೆ ಸಮಯದಲ್ಲಿ ಆಡಲು ಕಿರ್ಲೋಸ್ಕರ್ ನಾಟಕ ಸಂಘದೊಡೆಯರಾದ ಅಣ್ಣಾಸಾಹೇಬ್ ಕಿರ್ಲೋಸ್ಕರ್‌ರವರು ಬಳೆಗಾರ್ ಥಿಯೇಟರನ್ನೂ, ವಸೀಕರ್ ಕಂಪನಿಯವರು ಮೆಕಾನಿಕ್ ಥಿಯೇಟರನ್ನು ಅಡ್ವಾನ್ಸ್ ಕೊಟ್ಟು ಕಾದಿರಿಸಿದ್ದರು.

ಜಾತ್ರೆ ಇನ್ನೂ ಒಂದು ತಿಂಗಳಿದ್ದುದರಿಂದ ನಾವು ಎರಡು ಥಿಯೇಟರುಗಳಲ್ಲೂ ತಲಾ ಹದಿನೈದು ದಿನಗಳಂತೆ ಆಡಿ ಜಾತ್ರೆಕಾಲದಲ್ಲಿ ಗಂಟು ಕಟ್ಟಿದ್ದ ನಮ್ಮ ಸಂಘದ ಡೇರಾಗಳನ್ನು ಬಿಚ್ಚಿ ನಾಟಕಗಳನ್ನಾಡಲು ಪ್ರಾರಂಭಿಸಿದೆವು. ಕಿರ್ಲೋಸ್ಕರ್ ಕಂಪನಿಯಲ್ಲಿ ಮಹಾರಾಷ್ಟ್ರದ ಹೆಸರಾಂತ ನಟರುಗಳಿದ್ದರು. ಮುಖ್ಯವಾಗಿ (ಹೀರೋಯಿನ್) ನಾಯಕಿಯ ಪಾತ್ರಕ್ಕೆ ಬಾಲಗಂಧರ್ವ (ನಾರಾಯಣರಾವ್) ನಾಯಕನ ಪಾತ್ರಕ್ಕೆ ಜೊಗ್ಳೆಕರ್, ಹಾಸ್ಯಪಾತ್ರಕ್ಕೆ ದಾಮಣ್ಣ, ಹಾರ್ಮೋನಿಯಂ ವಾದ್ಯಕ್ಕೆ ಟೆಂಬೆಕರ್ ಮುಂತಾದವರಿದ್ದರು. ವಸೀಕರ್ ಕಂಪನಿಯಲ್ಲ ದೊಡ್ಡ ದೊಡ್ಡ ಟ್ರಾನ್ಸ್‌ಫರ್ ಸೀನುಗಳು, ಒಳ್ಳೆಯ ಡ್ರೆಸ್ಸುಗಳು, ಉತ್ತಮ ನಟರುಗಳೂ ಇದ್ದರು. ಮಹಾರಾಷ್ಟ್ರದಲ್ಲಿಯೇ ಭಾರಿ ಕಂಪನಿಗಳಾಗಿದ್ದರಿಂದಲೂ ಸೊಲ್ಲಾಪುರದಲ್ಲಿ ವಿಶೇಷವಾಗಿ ಮರಾಠಿ ನಡೆ ನುಡಿ, ರೀತಿ ನೀತಿಗಳು ಹೆಚ್ಚಾಗಿದ್ದುದರಿಂದಲೂ, ಕನ್ನಡಿಗರಾದ ನಮ್ಮ ನಾಟಕ ಅಲ್ಲಿನ ಜನಕ್ಕೆ ರುಚಿಸದೆ ಹೋಗಿ ಉತ್ಪತ್ತಿ ಸರಿಯಾಗಿ ಆಗಲಿಲ್ಲ. ಜಾತ್ರೆ ಸಮಯದಲ್ಲಿ ಸಿದ್ಧರಾಮೇಶ್ವರ ಸ್ವಾಮಿಯ ದರ್ಶನಕ್ಕೆ ಬಂದಿದ್ದ ಕನ್ನಡದ ಜನ ಮಾತ್ರ ನಮ್ಮ ನಾಟಕಕ್ಕೆ ಬರುತ್ತಿದ್ದುದರಿಂದ ಉತ್ಪತ್ತಿ ಸ್ವಲ್ಪ ಮಾತ್ರ ಆಗುತ್ತಿತ್ತು. ಮರಾಠಿ ಕಂಪನಿಗಳಿಗೆ ಸಾವಿರದಐನೂರು ಆಗುತ್ತಿದ್ದರೆ ನಮಗೆ ನೂರಐವತ್ತು ರೂ.ಆಗುತ್ತಿತ್ತು. ನಾವು ಆಗ ವಾರಕ್ಕೆ ನಾಲ್ಕುದಿನ ಮಾತ್ರ ಆಡುತ್ತಿದ್ದೆವು. ಮರಾಠಿ ನಾಟಕಗಳಿದ್ದಾಗ ನಮ್ಮ ನಾಟಕಗಳಿರುತ್ತಿರಲಿಲ್ಲ. ನಮ್ಮ ನಾಟಕವಿದ್ದಾಗ ಅವರ ನಾಟಕಗಳಿರುತ್ತಿರಲಿಲ್ಲ. ಆದ್ದರಿಂದ ನಾವುಗಳು ಒಬ್ಬರೊಬ್ಬರ ನಾಟಕ ನೋಡಲು ಅವಕಾಶವಾಯಿತು. 'ಬಾಲಗಂದರ್ವ' ಮರಾಠಿ ಕಂಪನಿಯವರು ನನ್ನ ಅಭಿನಯ, ಹಾಡುವುದು, ನಕಲಿ ಪಾತ್ರವನ್ನು ನೋಡಿ ತುಂಬ ಮೆಚ್ಚಿ ನಮ್ಮ ಪ್ರತಿ ನಾಟಕವನ್ನೂ ನೋಡಲು ಬರುತ್ತಿದ್ದರು. ನಾವು ಅವರ ನಾಟಕ ನೋಡಲು ಹೋದಾಗ ಅವರ ಕಂಪನಿಯಲ್ಲಿದ್ದ ಗ್ಯಾಸ್ ಲೈಟು, ಡ್ರೆಸ್ಸು ವಗೈರೆ ನೋಡಿ, ಚಂದಣ್ಣನವರು ಅದೇ ಊರಿನ

ಜೈನ್ ಸಾಹುಕಾರರಲ್ಲಿ ಸ್ವಲ್ಪ ಹಣ ಸಾಲವಾಗಿ ತಂದು ಗ್ಯಾಸ್ ಲೈಟುಗಳು, ನಾಲ್ಕು ಕತ್ತಿಗಳು, ಸ್ವಲ್ಪ ಡ್ರೆಸ್ಸುಗಳನ್ನು ಬೊಂಬಾಯಿಂದ ತರಿಸಿದರು. ಶೋಲ್ಲಾಪುರದಿಂದ ದುದಿನಿ ಎಂಬ ಗ್ರಾಮಕ್ಕೆ ಹೋಗಿ ದಿನ್ ಚಂದು ಎಂಬ ಜೈನ್ ಗುಜ್ಜರ ಗೋಡೌನ್‌ನಲ್ಲಿ ಸೀನುಗಳನ್ನು ಕಟ್ಟಿಕೊಂಡು ನಾಟಕಗಳನ್ನು ಆಡಿಕೊಂಡು ಅಲ್ಲಿಂದ ಗುಲ್‌ಬರ್ಗಕ್ಕೆ ಬಂದು ಅಲ್ಲಿ ಶರಣಬಸವೇಶ್ವರಸ್ವಾಮಿ ಜಾತ್ರೆಯಲ್ಲಿ ನಾಟಕವಾಡುತ್ತಿದ್ದೆವು. ಅದೇ ಜಾತ್ರೆಯಲ್ಲಿ ಶ್ರೀ ಗರುಡ ಸದಾಶಿವರಾವ್‌ರವರು ಶ್ರೀ ದತ್ತಾತ್ರೇಯ ನಾಟಕ ಮಂಡಲಿ ಎಂಬ ಸಂಸ್ಥೆ ಮಾಡಿಕೊಂಡು ಗೋಣಿತಟ್ಟಿನ ಗುಡಾರಹಾಕಿಕೊಂಡು ಶರಣ ಬಸವೇಶ್ವರ ಎಂಬ ನಾಟಕವನ್ನು ಎರಡು ಆಣೆ ಟಿಕೀಟು ಮಾಡಿ ಆಡುತ್ತಿದ್ದರು. ಜಾತ್ರೆ ಮುಗಿದ ನಂತರ ಆ ಸಂಸ್ಥೆ ನಿಂತು ಹೋಗಿ ಅಲ್ಲಿದ್ದ ಕೆಲ ನಟರುಗಳು, ಸರಣಪ್ಪ ಎಂಬ ಸ್ತ್ರೀ ಪಾತ್ರಧಾರಿ, ವೀರಭದ್ರಯ್ಯ ಇತರರು, ನಮ್ಮ ಸಂಘಕ್ಕೆ ಬಂದು ಸೇರಿದರು. ಆಗ ದೀಪದ ವ್ಯವಸ್ಥೆ ಸ್ವಲ್ಪ ಉತ್ತಮವಾಗಿ ಗ್ಯಾಸ್‌ಲೈಟಿಗೆ ಏರಿತು. ಗ್ಯಾಸ್ ಲೈಟು ಹಚ್ಚಲು ದತ್ತೋಪಂತ್, ಕಾರ್‌ಪೆಂಟರ್ ಚೇತು, ಸೀನರಿಗಳನ್ನು ಜೋಡಿಸಲು ಎರಡು ಮೂರುಮಂದಿ ಮರಾಠಿಯವರೇ ಸೇರಿಕೊಂಡರು.

೧೯೧೨ರಲ್ಲಿ ಗೋಕಾಕ್ ಶಿವಮೂರ್ತಿಸ್ವಾಮಿಯವರ 'ಕೊಣ್ಣೂರು ಕಂಪನಿ' ಕೆಲವುದಿನಗಳು ನಡೆದು ನಿಂತು ಹೋಗಲು, ಅಲ್ಲಿನ ಕೆಲವು ನಟರುಗಳು ನಮ್ಮ ಸಂಘವನ್ನು ಸೇರಿದರು. ಆಗ ಮರಾಠಿ ದೇಶದ ಜನರಿಗಾಗಿ ಸಂಸ್ಥೆಯಲ್ಲಿ ಜೋಳದ ರೊಟ್ಟಿ ಮಾಡಲಾಯಿತು. ರಾಯಚೂರು, ಆದವಾನಿ, ಗೌರಿಬಿದನೂರಿಗೆ ಬಂದು ಧೈರ್ಯ ಮಾಡಿ ಮೊದಲನೆ ಸಾರಿಗೆ ಮೈಸೂರು ಕ್ಯಾಂಪು ಮಾಡಬೇಕೆಂದು ನಿರ್ಧರಿಸಿದರು.

ಮೈಸೂರು ಕ್ಯಾಂಪು-ಗೌರವ ಸಮಾರಂಭ

ಮೈಸೂರಿಗೆ ಬಂದು ಬನುಮಯ್ಯನವರ ಛತ್ರದ ಹಿಂಭಾಗದಲ್ಲಿ ಡೇರಾ ಹಾಕಿಕೊಂಡು ನಾಟಕಗಳನ್ನಾಡಲು ಪ್ರಾರಂಭಿಸಿದರು. ಈಗ ಮೋತಿಖಾನೆ ಇರುವ ಸ್ಥಳದಲ್ಲಿ ಡೇರಾ ಹಾಕಿತ್ತು. ಆಗ ಯಾವ ಕಟ್ಟಡವೂ ಇಲ್ಲದೆ ಕಳ್ಳಿಗಿಡಗಳು ಬೆಳೆದಿದ್ದವು. ಹೆಂಗಸರು ತೊಗರಿಕಾಳು ಒಣಗಿಸುತ್ತಿದ್ದರು. ಡೇರಾ ಹಾಕಿಕೊಂಡು ಗ್ಯಾಸ್ ಲೈಟಿನಲ್ಲಿ ನಾಟಕವಾಡುತ್ತಿದ್ದುದರಿಂದ ಹಳ್ಳಿ ನಾಟಕವೆಂದು ಸರಿಯಾದ ಪ್ರೇಕ್ಷಕರು ಯಾರೂ ಬಾರದೆ ಕೇವಲ ಐವತ್ತು ಅರವತ್ತು ರೂಪಾಯಿಯೊಳಗೆ ಉತ್ಪತ್ತಿಯಾಗುತ್ತಿತ್ತು.

ಮೈಸೂರು ಮಹಾರಾಜರಾದ ಚಾಮರಾಜ ಒಡೆಯರು 'ಚಾಮರಾಜೇಂದ್ರ ನಾಟಕಸಭಾ' ಎಂಬ ಹೆಸರಿಟ್ಟು ಸಂಘವನ್ನು ಸ್ಥಾಪಿಸಿದ್ದರು. ಒಳ್ಳೆಯ ವಿದ್ಯಾವಂತರುಗಳನ್ನು ಸೇರಿಸಿ ಅರಮನೆಯಲ್ಲಿರುವ ಕರಿಕಲ್ ತೊಟ್ಟಿಯಲ್ಲಿ ರಂಗಮಂದಿರವನ್ನು ರಚಿಸಿ, ಕುಶಲಮತಿಯಾದ ಬಾಬುನಾಯ್ಡು ಎಂಬ ಚಿತ್ರಗಾರನಿಂದ ಸೀನರಿಗಳನ್ನು ತಯಾರ್ಮಾಡಿಸಿ, ಉತ್ತಮ ನಟರುಗಳನ್ನು ನಾಟಕಕ್ಕೆ ತರಪೇತು ಮಾಡಲು ವಿದ್ವಾನ್ ಶ್ರೀ ಬಿಡಾರಂ ಕೃಷ್ಣಪ್ಪನವರನ್ನು ಮತ್ತು ಶ್ರೀ ಲಕ್ಷ್ಮಿಪತಿ ಶಾಸ್ತ್ರಿಗಳನ್ನು ಗೊತ್ತು ಮಾಡಿ ನಾಟಕವಾಡಿಸುತ್ತಿದ್ದರು. ಅದೇ ಸಂಘವನ್ನು ಶ್ರೀ ಕೃಷ್ಣರಾಜ ಒಡೆಯರು ಮುಂದುವರಿಸಿಕೊಂಡು ಬರುತ್ತಿದ್ದರು. ಆ ಸಂಘದಲ್ಲಿ ರಾಜಾಪಾರ್ಟು ಸುಬ್ಬಣ್ಣನವರು ರಾಚೋಟಪ್ಪಾನವರು, ಸರ್ಟನ್ ರಾಮರಾವ್, ದೊಡ್ಡ ಮಹಲಿಂಗಪ್ಪ, ಚಿಕ್ಕಮಹಲಿಂಗಪ್ಪ, ನಕಲಿ ಪುಟ್ಟಾರಿ ಶಾಸ್ತ್ರಿಗಳು, ಕೃಷ್ಣಯ್ಯರಸು, ರಾಣಿಪಾರ್ಟು ಸುಬ್ಬಣ್ಣ, ಚಿಕ್ಕರಾಮರಾಯರು, ಬೆಳಕವಾಡಿ ಶ್ರೀನಿವಾಸಯ್ಯಂಗಾರ್, ಗಿರಿಭಟ್ಟರ ತಮ್ಮಯ್ಯನವರು, ದೇವರಾಜು, ನಕಲಿ ಕೃಷ್ಣಮೂರ್ತಿಗಳೇ ಮುಂತಾದ ಉತ್ತಮ ಕಳಾವಿದರು ಇದ್ದರು. ಅವರುಗಳು ಶಾಕುಂತಲ, ಉತ್ತರ ಗೋಗ್ರಹಣ, ಮಹಾಭಾರತ, ಬಭ್ರುವಾಹನ, ದ್ರೌಪದಿ ಸ್ವಯಂವರ, ವೀರಸಿಂಹ ಚರಿತ್ರೆ, ಗಯೋಪಾಖ್ಯಾನ ಮುಂತಾದ ಪೌರಾಣಿಕ ನಾಟಕಗಳನ್ನು ಆಡುತ್ತಿದ್ದರು. ಮಹಾರಾಜರಿಗೆ ಮನಸ್ಸು ಬಂದಾಗ ಅವರ ಸಮೂಹವನ್ನು ಬರಮಾಡಿಕೊಂಡು ಅರಮನೆಯ ಕರಿಕಲ್ ತೊಟ್ಟಿಯಲ್ಲಿ ನಾಟಕವಾಡಿಸುತ್ತಿದ್ದರು. ದಸರಾ ಕಾಲದಲ್ಲಿ ಮಾತ್ರ ರಂಗಾಚಾರ್ಯ ಮೆಮೊರಿಯಲ್ ಹಾಲಿನಲ್ಲಿ ನಾಟಕಗಳನ್ನಾಡುತ್ತಿದ್ದರು. ಆ ಸಂಘದ ನಟರುಗಳ ವೇತನಗಳು ಹತ್ತರಿಂದ ಹದಿನೈದು ರೂಪಾಯಿವರೆಗೆ ; ಬಿಡಾರಂಕೃಷ್ಣಪ್ಪನವರಿಗೆ ಮಾತ್ರ ಇಪ್ಪತ್ತು ರೂಪಾಯಿ ಖಾಯಂ ಸಂಬಳಗಳು ಇರುತ್ತಿತ್ತು. ಬರೋಬ್ಬರಿ ತಿಂಗಳಿಗೆ ಸರಿಯಾಗಿ ಬಟವಾಡೆ ಮಾಡುತ್ತಿದ್ದರು. ಹಬ್ಬ ಹುಣ್ಣಿಮೆಗಳಲ್ಲಿ ನಾಟಕದ ಕಲಾವಿದರಿಗೆ ಭತ್ಯ ಕೊಡುತ್ತಿದ್ದರು. ನಾಟಕದ ಸಂಸ್ಥೆಯ ಮೇಲ್ವಿಚಾರಣೆಯನ್ನು ಸರ್ದಾರ್ ಗೋಪಾಲರಾಜೇ ಅರಸ್‌ರವರೇ ತುಂಬಾ ಶ್ರದ್ಧೆಯಿಂದ ನೋಡಿಕೊಳ್ಳುತ್ತಿದ್ದರು.

ನಮ್ಮ ನಾಟಕಗಳಲ್ಲಿ ಎಲ್ಲಾ ನಾಟಕಗಳಿಗಿಂತಲೂ ಸದಾರಮೆ ನಾಟಕಕ್ಕೆ ಉತ್ತಮವಾದ ಹೆಸರು ಬಂದಿತು. ಆದರೆ ನಾವು ಡೇರಾ ಹಾಕಿದ್ದುದರಿಂದ ಹಳ್ಳಿ

ನಾಟಕವೆಂತಲೂ, ದೊಡ್ಡ ದೊಡ್ಡ ಅಧಿಕಾರಿಗಳು, ದೊಡ್ಡ ದೊಡ್ಡ ಮನುಷ್ಯರು ಮೊದಮೊದಲು ಬರುತ್ತಿರಲಿಲ್ಲ. ನಾನು ಸದಾರಮೆಯಲ್ಲಿ ಆದಿಮೂರ್ತಿ (ವೈಶ್ಯ), ಕಳ್ಳ, ಮತ್ತು ಸಾಬಿ (ಜವಾನ)- ಈ ಮೂರು ಪಾತ್ರಗಳನ್ನು ಚೆನ್ನಾಗಿ ಮಾಡುತ್ತಿದ್ದೆನಾದ್ದರಿಂದ ಜನರಿಗೆ ನನ್ನ ಪಾತ್ರ ತುಂಬಾ ಮೆಚ್ಚಿಗೆಯಾಯಿತು. ಅಂತೆಯೇ ಶೇಷಾಸಾನಿಯ ಸದಾರಮೆ, ತಿಮ್ಮೋಟಯ್ಯನ ಕಲಹಂಸ-ಈ ಪಾತ್ರಗಳು ಜನಗಳಿಗೆ ಒಳ್ಳೇಪರಿಣಾಮವುಂಟು ಮಾಡಿದುವು. ಸಂಘವನ್ನು ವ್ಯವಸ್ಥೆಯಿಂದ ನಡೆಸಿಕೊಂಡು ಹೋಗಲು ನನಗೆ ಮಾಲಿಕರು ವಹಿಸಿದ್ದರು. ಅದರಂತೆ ಶ್ರದ್ಧೆಯಿಂದ ನಿರ್ವಂಚನೆಯಿಂದ ನಡೆಸಿಕೊಂಡು ಹೋಗುತ್ತಿದ್ದೆ. ಜನಗಳು ನನ್ನಲ್ಲಿ ತುಂಬಾ ವಿಶ್ವಾಸದಿಂದಿದ್ದರು. ನನ್ನ ಪಾತ್ರ ನೋಡಲು ಅರಮನೆಯಿಂದ ಜನರು ಬರಲು ಪ್ರಾರಂಭಿಸಿದರು. ನನ್ನ ಅಭಿನಯದ ವಿಚಾರ ಶ್ರೀ ಕೃಷ್ಣರಾಜ ಒಡೆಯರಿಗೆ ತಿಳಿದು ನಾಟಕ ನೋಡಲು ಸರದಾರ್ ಗೋಪಾಲರಾಜ ಅರಸರನ್ನು ಕಳುಹಿಸಿದರು. ಅವರು ನನ್ನ ಅಭಿನಯವನ್ನೂ, ನಾಟಕವನ್ನೂ ನೋಡಿ ತುಂಬಾ ಸಂತೋಷಪಟ್ಟರು. ಅದೇ ಸಮಯದಲ್ಲಿ ಮೈಸೂರಿನಲ್ಲಿ ಸ್ಯಾಂಡೊ ಕೆಲಸಮಾಡುವ ತಾರಾಬಾಯಿಯ ಗ್ರೂಪ್ ಇದ್ದಿತ್ತು. ಮತ್ತು ಆಂಜನೇಯ ಗೋವಿಂದಸ್ವಾಮಿ ಕಂಪನಿ ಸಹ ಇದ್ದಿತು. ಗೋವಿಂದಸ್ವಾಮಿ ಕಂಪನಿಯ ಹಾಸ್ಯಪಾತ್ರಧಾರಿಗೂ, ನನಗೂ ಪೈಪೋಟಿ ಬಿದ್ದುದೇ ಅಲ್ಲದೆ ಸ್ಯಾಂಡೊ ತಾರಾಬಾಯಿಯ ಜೊತೆ ಇಬ್ಬರದೂ ಹಾಸ್ಯ ಪಾತ್ರ ಬಿದ್ದು ನಾನೇ ಗೆದ್ದೆನು. ತಾರಾಬಾಯಿ ಸರ್ಕಸ್ಸಿನಲ್ಲಿ ಕೂದಲಿಗೆ ಕಲ್ಲು ಮೊದಲಾದ ಭಾರವಾದ ವಸ್ತುಗಳನ್ನು ಕಟ್ಟಿ ಎತ್ತುವುದು ಇನ್ನೂ ಅನೇಕ ವಿಧವಾದ ಕಸರತ್ತುಗಳನ್ನು ಮಾಡಿ ತೋರಿಸುತ್ತಿದ್ದಳು. ನಮ್ಮ ಸಂಘ ಮೊದಲನೆ ಬಾರಿಗೆ ಮೈಸೂರಿಗೆ ಹೋಗಿದ್ದಿತು. ನನ್ನ ಹಾಸ್ಯವನ್ನು ನೋಡಿ ಮೆಚ್ಚಿದ್ದ ಕಲಾಭಿಮಾನಿಗಳೂ, ವರ್ತಕರೂ ಒಂದು ಸಾರಿ ಮೈಸೂರಿನ ಟೌನ್ ಹಾಲಿನಲ್ಲಿ ಸ್ಯಾಂಡೊ ತಾರಾಬಾಯಿಯ ಕಸರತ್ತುಗಳ ಪ್ರದರ್ಶವನ್ನೇರ್ಪಡಿಸಿ ಗೋವಿಂದ ಸ್ವಾಮಿಯವರನ್ನೂ, ನನ್ನನ್ನೂ ಪ್ರದರ್ಶನ ಸಮಯದಲ್ಲಿ ಪೂರ್ತಿಯಾಗಿ ಹಾಸ್ಯಾಭಿನಯದಿಂದ ಪ್ರೇಕ್ಷಕರನ್ನು ರಂಜಿಸಬೇಕೆಂದು ತಿಳಿಸಿದರು. ಪ್ರದರ್ಶನದಲ್ಲಿ ಆಕೆ ದೊಡ್ಡ ಕಲ್ಲು ಚಪ್ಪಡಿಗೆ ಹಗ್ಗ ಕಟ್ಟಿ ಅದನ್ನು ಹಲ್ಲಿನಲ್ಲಿ ಕಟ್ಟಿ ಎತ್ತುತ್ತಿದ್ದ ಸಮಯದಲ್ಲಿ ನಾನೂ ಸಹ ದೊಡ್ಡ ಕಲ್ಲು ಚಪ್ಪಡಿಯ ಮೇಲೆ ನಿಂತು ಹಲ್ಲಿನಲ್ಲಿ ಹಗ್ಗವನ್ನು ಕಚ್ಚಿಕಷ್ಟ ಪಟ್ಟು ಹೆಬ್ಬೆರಳು ಗಾತ್ರದ ಕಲ್ಲನ್ನೆತ್ತಿ ವಿಜಯೋತ್ಸಾಹದಲ್ಲಿ ಪ್ರೇಕ್ಷಕರಿಗೆ ಬಾಗಿ ವಂದಿಸಿದೆ-ಹೀಗೆ ಪ್ರದರ್ಶನದುದ್ದಕ್ಕೂ ಒಂದೇ ಸಮನೆ ಪ್ರೇಕ್ಷಕರನ್ನು ಹಾಸ್ಯದ ಹೊನಲಿನಲ್ಲಿ ಮುಳುಗಿಸಿದೆ. ಈ ಪ್ರದರ್ಶನದಿಂದ ಮೈಸೂರು ನಗರದಲ್ಲಿ ನನ್ನ ಹಾಸ್ಯದ ವಿಚಾರ ಹರಡಿತು. ಅರಮನೆಯಿಂದ ಶ್ರೀ ಗೋಪಾಲರಾಜೇ ಅರಸ್‌ರವರು ನನ್ನ ಅಭಿನಯವನ್ನು ನೋಡಲು ಬಂದರು. ಆಗ ಸದಾರಮೆ ನಾಟಕವನ್ನು ಹಾಕಿಕೊಂಡಿದ್ದೆವು. ಅದರಲ್ಲಿ ನನ್ನ ಆದಿಮೂರ್ತಿ, ಸಾಬಿ, ಮತ್ತು ಕಳ್ಳ ಮೂರು ಪಾತ್ರಗಳನ್ನೂ ನೋಡಿ ಬಹುವಾಗಿ ಮೆಚ್ಚಿದರು. ಸರದಾರ್ ಗೋಪಾಲರಾಜೇ ಅರಸರು ನನ್ನನ್ನು ಅರಮನೆಯ ಸಂಸ್ಥೆಗೆ ಸೇರಿಸಿಕೊಳ್ಳಲು ತುಂಬಾ ಪ್ರಯತ್ನ ಪಟ್ಟರು. ಅದಕ್ಕೆ ನಾನು ಸಮ್ಮತಿಸಲಿಲ್ಲ. ಏಕೆಂದರೆ ಹದಿನೈದು ರೂಪಾಯಿ ಸಂಬಳ ಮತ್ತು ಮೈಸೂರಿನಲ್ಲಿಯೇ ಖಾಯಂ ಆಗಿರಬೇಕು ಎಂದು ಹೇಳಲು ಮೈಸೂರಿನಲ್ಲಿ ಹದಿನೈದು ರೂಪಾಯಿಗಳಲ್ಲಿ

ಸಂಸಾರ ಸಾಗಿಸಲು ಸಾಧ್ಯವಾಗುವುದಿಲ್ಲವೆಂದು ಒಪ್ಪಿಕೊಳ್ಳಲಿಲ್ಲ. ನಂತರ ಅರಮನೆಯಲ್ಲಿ ನಮ್ಮ ನಾಟಕವನ್ನು ಆಡಿಸಬೇಕೆಂಬ ಸದುದ್ದೇಶದಿಂದ ಗೋಪಾಲ ರಾಜೇ ಅರಸರು ಯೋಚಿಸಿದರೂ, ನಮ್ಮ ಸಂಸ್ಥೆಯಲ್ಲಿ ಹೆಂಗಸರು ಪಾತ್ರ ಮಾಡುತ್ತಿದ್ದಾರೆಂದು ಕೆಲವು ಕುಹಕಿ ಜನರು ಅರಮನೆಯಲ್ಲಿ ನಾಟಕ ಆಡಲು ಅವಕಾಶ ಕೊಡಲಿಲ್ಲ.

ಆಗ ಮೈಸೂರಿನ ಗಣ್ಯಪುರುಷರಾದ ಕ್ರೌನ್ ಪ್ರೆಸ್ (ಗಳುವಿನಂಗಡಿ) ಮಾದಪ್ಪನೆಂಬುವರು ನನಗೆ ಬಹುಮಾನ ಕೊಡಬೇಕೆಂದು ಯೋಚನೆಮಾಡಿ, ನಮ್ಮ ಡೇರಾದಲ್ಲಿಯೇ ಈ ಸಮಾರಂಭ ಮಾಡಿದರೆ ದೊಡ್ಡ ಮನುಷ್ಯರು ಯಾರೂ ಬರುವುದಿಲ್ಲವೆಂದು ರಂಗಾಚಾರ್ಯ ಮೆಮೊರಿಯಲ್ ಹಾಲಿನಲ್ಲಿ ಕೊಡುವುದು ಸೂಕ್ತವೆಂದು, ಆ ಹಾಲನ್ನು ಒಂದು ದಿವಸಕ್ಕೆ ಮಾತ್ರ ಗೊತ್ತು ಮಾಡಿಕೊಂಡು, ದೊಡ್ಡ ದೊಡ್ಡ ಅಧಿಕಾರಿಗಳು, ವರ್ತಕರು, ಅರಸು ಮನೆತನದವರೆಲ್ಲರಿಗೂ ಆಹ್ವಾನ ಪತ್ರವನ್ನು ಕಳುಹಿಸಿ ಅವರ ಸಮ್ಮುಖದಲ್ಲಿ ನಮ್ಮಿಂದ ಸದಾರಮೆ ನಾಟಕವನ್ನು ಆಡಿಸಿದರು. ಆ ದಿನ ಟವನಹಾಲ್ ಭರ್ತಿಯಾಗಿ ಬಹುಜನರು ಟಿಕೇಟಿಲ್ಲದ ಹಿಂದಕ್ಕೆ ಹೋದರು. ಶ್ರೀ ಮಾದಪ್ಪನವರು ಆ ದಿನ ನಗೆ ಮೂರು ತೊಲ ಬಂಗಾರದ ಈಶ್ವರನ ವಿಗ್ರಹವನ್ನು ಕೆತ್ತಿರುವ ಮೆಡಲನ್ನು ಸರದಾರ್ ಗೋಪಾಲರಾಜೇ ಅರಸರ ಅಮೃತ ಹಸ್ತದಿಂದ ಕೊಡಿಸಿದರು. ಸಮಾರಂಭವು ವಿಜೃಂಭಣೆಯಿಂದ ನಡೆಯಿತು. ನನಗೆ ಪ್ರಪ್ರಥಮವಾಗಿ ಮೆಡಲು ಬಂದು, ಗೌರವ ಸಮಾರಂಭ ನಡೆದುದು ಮೈಸೂರಿನಲ್ಲಿಯೇ. ಅದೇ ನನ್ನ ಮುಂದಿನ ಶ್ರೇಯಸ್ಸು, ಏಳಿಗೆಗೆ ಕಾರಣವಾಯಿತು. ನಂತರ ಮೈಸೂರಿನ ವರ್ತಕಮಂಡಳಿಯವರು ಒಂದು ಬಂಗಾರದ ಪದಕವನ್ನು ಬಹುಮಾನ ಮಾಡಿದರು. ಈಗಲೂ ಶ್ರೀ ಕ್ರೌನ್‌ಪ್ರೆಸ್ ಮಾದಪ್ಪನವರನ್ನೂ, ವರ್ತಕಮಂಡಳಿಯವರನ್ನೂ ಸ್ಮರಿಸಿಕೊಳ್ಳುತ್ತೇನೆ. ನನ್ನ ಮಾಲೀಕರಾದ ಶ್ರೀ ಚಂದಣ್ಣನವರು ಸಹ ಬಹಳ ಸಂತೋಷಪಟ್ಟು ನನ್ನ ಸಂಬಳವನ್ನು ಹದಿನೈದು ರೂ.ಗಳಿಂದ ಇಪತ್ತೆರಡು ರೂಪಾಯಿ ಎಂಟು ಆಣೆಗೆ ಏರಿಸಿದರು. ಅಲ್ಲದೆ ಅದುವರೆಗೂ ನಟರುಗಳಿಗೆ ಏನಾದರೂ ಬಹುಮಾನ ಬಂದರೆ ಅದು ಮಾಲೀಕರನ್ನು ಸೇರುವ ಪದ್ಧತಿಯಿತ್ತು. ಅದು ತಪ್ಪಿಹೋಗಿ ಸಾವಿರದ ಒಂಭೈನೂರ ಹದಿಮೂರರಿಂದ ನಟರಿಗೆ ಸಿಕ್ಕ ಬಹುಮಾನ ನಟರಿಗೇ ಸೇರಬೇಕೆಂದು ನಿಷ್ಕರ್ಷೆಯಾಯಿತು. ಅಂದಿನಿಂದ ನಮ್ಮ ಸಂಘದಲ್ಲಿ ಸದಾರಮೆ ನಾಟಕವೇ ಉತ್ತಮ ನಾಟಕವೆಂದು ಪ್ರಸಿದ್ಧಿಯಾಯಿತು. ನನ್ನ ಅದೃಷ್ಟ ಸ್ವಲ್ಪ ಬದಲಾವಣೆಯಾಯಿತು. ನಾನು ಒಬ್ಬ ಉತ್ತಮ ಹಾಸ್ಯನಟನೆಂದು ಕರೆಯಲ್ಪಡುತ್ತಿದ್ದೆ.

ತುಮಕೂರಿನ ಘಟನೆ

ಆಗಿನ ಕಾಲದಲ್ಲಿ ನಾಟಕ ಸಂಸ್ಥೆಗಳಲ್ಲಿ ದುಶ್ಚಟಗಳ ಅಭ್ಯಾಸದವರು ಕೆಲವರು ಇದ್ದೇ ಇರುತ್ತಿದ್ದರು. ನಮ್ಮ ಸಂಘದಲ್ಲೂ ಭಂಗಿಸೇದುವ ಭಕ್ತರು,ಮದಿರಾದೇವತೆಯ ಆರಾಧಕರು ಇದ್ದರು. ಅದರಲ್ಲಿಯೂ ಮುಖ್ಯಪಾತ್ರ ವಹಿಸುತ್ತಿದ್ದ ಕಾಲಾಪಿಲ್ಲಿ ಎಂಬ ನಟನಲ್ಲಂತೂ ಎಲ್ಲಾ ವಿಧವಾದ ದುಶ್ಚಟಗಳಿದ್ದುವು. ಎಷ್ಟೋ ಸಾರಿ ಅವನನ್ನು ರಾತ್ರಿ ಸಮಯದಲ್ಲಿ ಮದ್ಯದ ಅಂಗಡಿಯಿಂದ ನೇರವಾಗಿ ರಂಗಮಂದಿರಕ್ಕೆ ಕರೆದುಕೊಂಡು ಬಂದಿರುವುದೂ ಉಂಟು. ಮದ್ಯಪಾನ ಮಾಡದೆ ರಂಗಮಂದಿರಕ್ಕೆ ಹೆಜ್ಜೆಯೆ ಇಡುತ್ತಿರಲಿಲ್ಲ. ಬಂದನಂತರ ಮುಖಕ್ಕೆ ಬಣ್ಣ ಬಳಿದುಕೊಂಡು ಡ್ರೆಸ್ ಮಾಡಿಕೊಂಡು ನಂತರ ಎರಡು ದಂ ಭಂಗಿ ಸೇದಿಕೊಂಡೇ ರಂಗಭೂಮಿಗೆ ಪ್ರವೇಶಿಸುತ್ತಿದ್ದನು.ಇದನ್ನೇ ಅನುಸರಿಸುತ್ತಿದ್ದ ಕೆಲ ನಟರು ಸಂಘದಲ್ಲಿದ್ದರು. ಪ್ರತಿದೃಶ್ಯಕ್ಕೆ ಹೋಗುವಾಗಲೂ ಭಂಗಿಸೇದಿಯೇ ಹೋಗುತ್ತಿದ್ದನು.

ಮೈಸೂರು ಕ್ಯಾಂಪಿನಲ್ಲಿ ನಾಟಕಗಳಿಗೆ ಒಳ್ಳೆ ಹೆಸರನ್ನು ಪಡೆದುಕೊಂಡು ತುಮಕೂರು ಕ್ಯಾಂಪು ಗೊತ್ತುಮಾಡಿ ಡೇರಾ ಹೊಡೆದು, ಪ್ರಾರಂಭ ದಿನ 'ಸದಾರಮೆ' ನಾಟಕವನ್ನೇ ಇಟ್ಟು ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷತೆ ವಹಿಸಬೇಕೆಂದು ಕೇಳಿಕೊಂಡು ಅವರೂ ಸಹ ಬರಲು ಒಪ್ಪಿಕೊಂಡರು. ಅಂದು ನಡೆದು ಘಟನೆ ಇನ್ನೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ.

ಜಿಲ್ಲಾಧಿಕಾರಿಗಳೂ ಇತರೇ ದೊಡ್ಡದೊಡ್ಡ ವರ್ತಕರೂ ನಾಟಕಾವಲೋಕನಕ್ಕೆ ಬಂದಿದ್ದಾರೆ. ಸದಾರಮೆ ನಾಟಕ ಬಹಳ ಚೆನ್ನಾಗಿ ಆಡುತ್ತಾರಂತೆ ಎಂಬ ವದಂತಿ ಹಬ್ಬಿದ್ದರಿಂದ ಜನಗಳೂ ಹೆಚ್ಚು ಸಂಖ್ಯೆಯಲ್ಲಿ ನೆರೆದು ಹೌಸ್‌ಫುಲ್ ಆಗಿ ಬಹುಜನರು ಹಿಂತಿರುಗಿದ್ದಾರೆ. ಆ ದಿನ ಕಾಲಾಪಿಲ್ಲಿಯು ಕುಡಿದು ಮತ್ತನಾಗಿ ಥಿಯೇಟರಿನ ಹೊರಗಡೆ (ಗೋಣಿತಟ್ಟು) ಕಾಂಪೌಂಡು ಪಕ್ಕದಲ್ಲಿ ತನ್ನ ಪಾತ್ರ ಬರುವ ಸಮಯದಲ್ಲಿ ಎದ್ದರಾಯಿತು ಎಂಬ ಉದಾಸೀನ ಭಾವನೆಯಿಂದ ಮಲಗಿದ್ದಾನೆ. ಇನ್ನು ಹದಿನೈದು ಇಪ್ಪತ್ತು ನಿಮಿಷಗಳಲ್ಲಿ ಅವನ ಪಾತ್ರ ಬರುತ್ತೆ ಎನ್ನುವ ಸಂದರ್ಭದಲ್ಲಿ ಆತನನ್ನು ಎಷ್ಟು ಎಚ್ಚರಿಸಿದರೂ ಪ್ರಯೋಜನವಾಗಲಿಲ್ಲ. ಇನ್ನು ತಡ ಮಾಡಿದಲ್ಲಿ ಕೆಲಸ ಕೆಡುತ್ತೆಂದು ತಿಮ್ಮೋಟಯ್ಯ ಎಂಬ ಬೇರೆ ನಟನನ್ನು ಆ ಪಾತ್ರಕ್ಕೆ ಸಿದ್ಧಗೊಳಿಸಿದ್ದಾಯ್ತು. ಅಷ್ಟರಲ್ಲಿ ಕಾಲಾಪಿಲ್ಲಿ ಎಚ್ಚರಗೊಂಡು ಒಳಗೆ ಬಂದು ನೋಡಿ, ತನ್ನ ಪಾತ್ರವನ್ನು ಬೇರೆಯವರು ಮಾಡುವುದೂ ಒಂದೇ ನಾನು ಸಾಯುವುದೂ ಒಂದೇ ಎಂದು ಮೈ ಮೇಲೆ ಎಚ್ಚರವಿಲ್ಲದಿದ್ದರೂ ಗ್ರೀನ್ ರೂಂ ಒಳಗೆ ಬಂದು ಮುಖಕ್ಕೆ ಯದ್ವಾತದ್ವಾ ಬಣ್ಣ ಬಳಿದುಕೊಂಡು ಡ್ರೆಸ್ ಹಾಕಿದ್ದವನನ್ನು ಬಿಚ್ಚಿಸಿ ತಾನು ಡ್ರೆಸ್ ಮಾಡಿಕೊಂಡು ಪಾತ್ರಮಾಡಲು ರಂಗಭೂಮಿಗೆ ಬಂದು ಅಲ್ಲಿ ಹಾಕಿದ್ದ ಪೀಠದಲ್ಲಿ ಕುಳಿತೇಬಿಟ್ಟ. ಅವನು ಮಾಡುತ್ತಿದ್ದುದು ಕಲಹಂಸ ಮಹಾರಾಜನ ಪಾತ್ರ. ಆ ಪಾತ್ರವು ಕರವಸ್ತ್ರವು ಎಂಬ ಹಾಡಿನಿಂದ ಪ್ರಾರಂಭವಾಗುತ್ತೆ. ಪರದೆ ಮೇಲಕ್ಕೆ

ಹೋಯಿತು. ಇವನ ಹಾಡು ಪ್ರಾರಂಭವಾಯಿತು. ಪಿಟೀಲಿನವನು ಮೊದಲಿನ ಧಾಟಿಯಂತೆ ಹಾಡನ್ನು ಬಾರಿಸಿದ. ಆದರೆ ಕಾಲಾಪಿಲ್ಲಿಯು ಮಾಮೂಲು ಧಾಟಿಯನ್ನು ಬಿಟ್ಟು ಹೊಸ ದಾಟಿಯಲ್ಲಿ ಹಾಡಲು ಪಕ್ರಮಿಸಿದ- ಅದುವರೆಗೂ ಹೊರಗಡೆ ತಂಪಾದ ಗಾಳಿಯಲ್ಲಿ ಕತ್ತಲಿನಲ್ಲಿ ಮಲಗಿದ್ದವನು ಇದ್ದಕ್ಕಿದ್ದಂತೆ ಒಳಗೆ ಬಂದು ತುಂಬಾ ಬೆಳಕಿದ್ದ, ಬಿಸಿಯಾದ ಉಸಿರಿನ ಶಬ್ದದಿಂದ ಕೂಡಿದ ಗ್ಯಾಸು ಲೈಟು ಮುಂಭಾಗಕ್ಕೆ ಬಂದು ನಿಂತಿದ್ದರಿಂದ ಮದ್ಯದ ಅಮಲ ಏರಿದಂತಾಗಿ, ಗ್ಯಾಸು ದೀಪಗಳು ಒಂದಕ್ಕೆ ಎರಡಾಗಿ, ಎರಡಕ್ಕೆ ನಾಲ್ಕಾಗಿ ನಾಲಿಗೆ ಒಣಗಿ ಮಾತು ಬದಲಾಗಲಾರಂಭಿಸಿತು. ಕರವಸ್ತ್ರ ಎಂಬ ಹಾಡು ಕರ್ರವಸ್ತ್ರವಾಯ್ತು, ಖಾರವಸ್ತ್ರವಾಯಿತ್ತು, ಕರೀವಸ್ತ್ರವೂ ಆಗಿ ಪಾತ್ರಧಾರಿಯು ತೂರಾಡಲು ಪ್ರಾರಂಭವಾಯಿತು. ಇದರ ಸೂಕ್ಷ್ಮ ಕಂಡು ಬಂದು ನಮಗೆಲ್ಲಾ ಗಾಬರಿಯಾಯಿತು. ಒಳಗಡೆಯಿಂದ ಕೈಸನ್ನೆ ಮಾಡಿ. ಚಿಟಿಕಿ ಹೊಡೆದು ಒಳಗೆ ಬರುವಂತೆ ಕೂಗಿದರೂ ಬರಲಿಲ್ಲ. ಉಸ್-ಉಸ್-ಒಳಗಡೆ ಬಾರಯ್ಯ ಎಂದು ಕರೆದುದೂ ಆಯಿತು. ಈ ಕಡೆ ಜ್ಞಾನವೇ ಇಲ್ಲ. ಆಗ ಪರದೆ ಬಿಡುವವನಿಗೆ ಪರದೆ ಬಿಡಲು ಹೇಳಿದೆವು. ಆದರೆ ಪರದೆ ಅರ್ಧಭಾಗ ಇಳಿದು ಕೆಳಕ್ಕೆ ಬರುತ್ತಿರುವಾಗ ಪಾತ್ರಧಾರಿಯು ಅದರ ಕೆಳಗಡೆಯಿಂದ ನುಸುಳಿಕೊಂಡು ಮುಂದೆ ಬಂದು ತನ್ನ ಪಾತ್ರ ಮುಂದುವರಿಸಲು ಪ್ರಾರಂಭಿಸಿದ. ಅದಕ್ಕೆ ಮುಂದೆ ಬಿಡಬೇಕಾದ ಪರದೆಯೆಂದರೆ ಅಂಕದ ಪರದೆ ಮಾತ್ರ ಇತ್ತು. ಅಂಕದ ಪರದೆಯನ್ನು ನಾಟಕಪ್ರಾರಂಭಕ್ಕೆ ಮೇಲಕ್ಕೆತ್ತಿ ನಾಟಕ ಮುಗಿದನಂತರವೇ ಬಿಡುತ್ತಿದ್ದುದು. ಆ ದಿನ ಬೇರೆ ಗತ್ಯಂತರವಿಲ್ಲದೆ ವಿಶ್ರಾಂತಿಗೆಂದು ತಿಳಿಸಿ ಬೆಲ್ ಹೊಡೆದು ಅಂಕದ ಪರದೆಯನ್ನು ಬಿಟ್ಟುದಾಯಿತು. ಈ ಅವ್ಯವಸ್ಥೆಯನ್ನು ನೋಡಿ ಜಿಲ್ಲಾಧಿಕಾರಿಗಳೇ ಮೊದಲಾಗಿ ಬಂದಿದ್ದ ಆಫೀಸರುಗಳು ಎದ್ದು ಹೊರಟುಹೋದರು. ಈ ರೀತಿಯಾಗಿ ಅವ್ಯವಸ್ಥೆಗಳು ಆಗಾಗ್ಗೆ ನಡೆಯುತ್ತಲೇ ಇದ್ದುದರಿಂದಲೂ ಇಂತಹ ಅನೇಕ ದುಶ್ಚಟಗಳು ನಟರಲ್ಲಿ ಮಾಮೂಲಾಗಿ ಇರುತ್ತಿದ್ದುದರಿಂದಲೂ ನಾಟಕ ಸಂಘದವರಿಗೆ ಸರಿಯಾದ ಸ್ಥಾನಮಾನಗಳು ಸಿಕ್ಕುತ್ತಿರಲಿಲ್ಲ. ಉತ್ತಮ ಜನರ ಸಹವಾಸ ದೊರೆಯದೆ ನಾಟಕದ ಕಲೆಯನ್ನೇ ಜನರು ಹೀನಾಯವಾಗಿ ಕಾಣಲು ಅವಕಾಶವಾಯಿತೆನ್ನಬಹುದು.

ಮಾಲೀಕರ ನಡೆ

ದಿನಗಳು ಕಳೆದಂತೆಲ್ಲಾ ಮಾಲೀಕರ ನಡತೆ, ರೀತಿ ನೀತಿಗಳು ಕೊಂಚ ಕೊಂಚ ಬದಲಾಗುತ್ತ ಬಂದು, ನಟರುಗಳಿಗೆ ಸ್ವಲ್ಪ ಸ್ವಲ್ಪ ಬೇಸರವಾಗುತ್ತ ಬಂದಿತು. ಮಾಲೀಕರ ಅಣ್ಣಂದಿರಾದ ಜೈಕುಮಾರಪ್ಪನವರಿಗೆ ಮೇಲ್ವಿಚಾರಣೆಯ ಅಧಿಕಾರ ಸಿಕ್ಕಿತು. ಅವರ ಸ್ವಭಾವವಾದರೋ ಬಹಳ ನಿರ್ದಯ ಕಾಠಿಣ್ಯಗಳಿಂದ ಕೂಡಿತ್ತು. ಸ್ಥೂಲಕಾಯ, ಸ್ವಕಾರ್ಯಧುರಂಧರ. ಅಧಿಕಾರವು ಅವರ ಕೈಗೆ ಬಂದದ್ದು ಯಮಧರ್ಮ ಕೋಲುಹಿಡಿದು ನಿಂತಂತಾಯ್ತು. ಇದರಿಂದ ಜನಗಳಿಗೆ ತುಂಬಾ ತೊಂದರೆಯಾಯಿತು. ನಟರುಗಳ ಊಟ ಉಪಚಾರಗಳಲ್ಲಿ, ಸಂಬಳವಗೈರೆ ಕೊಡುವುದರಲ್ಲಿ, ಯೋಗಕ್ಷೇಮ ವಿಚಾರಿಸುವುದರಲ್ಲಿ ತುಂಬಾ ಉದಾಸೀನ ಮಾಡುತ್ತ ಬಂದರು. ಮೊದಮೊದಲು ಸೌಮ್ಯಸ್ವಭಾವದವರಂತೆ ನಟಿಸಿ, ಬರುಬರುತ್ತಾ ಹೆಬ್ಬುಲಿಯಂತೆ ವರ್ತಿಸುತ್ತಾ ಬಂದರು. ಆಗ ಸಂಘದಲ್ಲಿ ನಾನು ಮೊದಲೇ ತಿಳಿಸಿದಂತೆ ಲಿಂಗಾಯತರ ಅಡಿಗೆ, ಬ್ರಾಹ್ಮಣ ಗುಂಪಿನವರ ಅಡಿಗೆ, ಮತ್ತು ಮಾಲೀಕರಿಗೆ ಜೈನಮತದವರ ಅಡಿಗೆ-ಈ ರೀತಿ ಮೂರು ಅಡಿಗೆ ನಡೆದುಕೊಂಡು ಬಂದಿತ್ತು. ಲಿಂಗಾಯತರ ಗುಂಪಿನಲ್ಲಿ ಲಿಂಗಾಯತರು ಮಾತ್ರವಲ್ಲದೆ ಇತರಜನಗಳುಸೇರಿ ಇಪ್ಪತ್ತೈದು ಜನ, ಬ್ರಾಹ್ಮಣರ ಗುಂಪಿನಲ್ಲಿ ಏಳು - ಎಂಟು ಜನ, ಜೈನರ ಗುಂಪಿನಲ್ಲಿ ಮಾಲೀಕರು, ಅವರ ಅಣ್ಣಂದಿರು, ಶಾಮಲಮ್ಮ ಮತ್ತು ಶೇಷಮ್ಮ ಮತ್ತು ಅಡಿಗೆಯವನು ಮಾತ್ರ ಇದ್ದರು. ಇದು ಸಾವಿರದ ಒಂಬೈನೂರು ಹನ್ನೆರಡು-ಹದಿಮೂರರ ಮಾತು. ಒಂದು ರೂಪಾಯಿಗೆ ಹತ್ತು ಸೇರು ಅಕ್ಕಿ, ಎಂಟು ಸೇರು ಬೇಳೆ; ಒಂದು ಮಣ ಹಸನಾದ ತುಪ್ಪಕ್ಕೆ ಹತ್ತು ರೂಪಾಯಿ ಕೊಡುವಕಾಲವಾಗಿತ್ತು. ಒಂದು ರೂಪಾಯಿಗೆ ಆರು-ಏಳು ಸೇರು ಹಾಲು, ಎಂಟು-ಹತ್ತು ಸೇರು ಮೊಸರು ಬರುವ ಕಾಲವಾಗಿತ್ತು. ಹಾಗಿದ್ದು, ಜೈಕುಮಾರಪ್ಪನವರ ಆಡಳಿತದಲ್ಲಿ ಇಪ್ಪತ್ತೈದು ಜನ ಲಿಂಗಾಯತರಿರುವ ಗುಂಪಿಗೆ ಬೆಳಿಗ್ಗೆ ರಾತ್ರಿ ಊಟಕ್ಕೆ ಹತ್ತು ಹನ್ನೆರಡು ಸೇ. ಅಕ್ಕಿ, ಮುಕ್ಕಾಲು ಸೇ. ಬೇಳೆ, ಮುಕ್ಕಾಲು ಸೇ. ತುಪ್ಪ, ಎರಡು ಸೇ. ಮೊಸರು; ಏಳು-ಎಂಟು ಜನ ಬ್ರಾಹ್ಮಣರಿಗೆ ನಾಲ್ಕು ಸೇ. ಅಕ್ಕಿ, ಒಂದು ಪಾ. ಬೇಳೆ ಒಂದು ಪಾ. ತುಪ್ಪ, ಅರ್ಧ ಸೇರು ಮೊಸರು ಕೊಡಿಸುತ್ತಿದ್ದರು. ಲಿಂಗಾಯತರು ಮತ್ತು ಬ್ರಾಹ್ಮಣರಿಗೆ ತರಕಾರಿ, ಮೂಲಂಗಿ, ದಂಟು, ಸೊಪ್ಪು ವಿನಾ ಬದನೆಕಾಯಿ, ಆಲೂಗಡ್ಡೆ, ಹುರುಳಿಕಾಯಿಯಂತಹ ತರಕಾರಿ ಸ್ವಪ್ನದಲ್ಲೂ ಬರುತ್ತಿರಲಿಲ್ಲ. ಪರಸ್ಥಳದಲ್ಲಿ ಒಂದೊಂದು ಬಾರಿ ಮೊಸರು ಕೊಡಿಸದೆ ಅನ್ನ ಬಸಿದ ಗಂಜಿಗೆ ನೀರು ಹಾಕಿ ಉಪ್ಪು ಬೆರಸಿ ಊಟ ಮಾಡಿದುದೂ ಉಂಟು. ಸಾರು ಮಾಡುವ ಪಾತ್ರೆ ಕಲಾಯಿ ಮಾಡಿಸದೆ ತಿಂಗಳಗಟ್ಟಲೆ ಸೀಮೆಯೆಣ್ಣೆ ಡಬ್ಬದಲ್ಲಿ ಸಾರು ಮಾಡಲಾಗುತ್ತಿತ್ತು. ಈ ದೂರು ಮಾಲೀಕರಾದ ಚಂದಣ್ಣನವರಿಗೆ ಹೋದಾಗ ಹತ್ತು-ಹನ್ನೆರಡು ದಿನ ಸರಿಹೋಗಿ ಪುನಃಯಥಾಪ್ರಕಾರ ಜೈಕುಮಾರಪ್ಪನವರ ಆಡಳಿತ. ಬದನೆಕಾಯಿ, ಹುರುಳಿಕಾಯಿ, ಆಲೂಗಡ್ಡೆ, ಬೆಂಡೆಕಾಯಿ ಜೈಕುಮಾರಪ್ಪ, ಮಾಲೀಕರಿಗೆ ; ಅರಿವೆಸೊಪ್ಪು, ಅಣ್ಣೆಸೊಪ್ಪು, ದಂಟು, ಮೂಲಂಗಿ ಲಿಂಗಾಯತರು, ಬ್ರಾಹ್ಮಣರಿಗೆ. ಧೇಂಡಿ, ಕೆನೆಮೊಸರು ಅವರಿಗೆ;

ನೀರು ಮಜ್ಜಿಗೆ, ಉಪ್ಪುಬೆರೆತ ಗಂಜಿ ನಮಗೆ. ನಾಟಕ ಪ್ರಾರಂಭಕ್ಕೆ ಪೂಜೆಗಾಗಿ ಒಡೆದ ತೆಂಗಿನಕಾಯಿ ಮಾಲೀಕರ ಮನೆಯ ಚಟ್ನಿಗೆ ಹೋಗಬೇಕಲ್ಲದೆ ಬೇರೆಯೇನಾದರೂ ವಿಲೇಯಾದರೆ ಪೂಜೆ ಮಾಡಿದವನಿಗೆ ಸಹಸ್ರನಾಮ ಪೂಜೆಯಾಗುತ್ತಿತ್ತು. ಅಲ್ಲದೆ ಅವನು ಖರ್ಚಿಗೆ ಎರಡಾಣೆ ಬರೆದು ಅರ್ಧಾಣೆ ಕೊಟ್ಟು ಕಾಯಿ ತಂದು ಉಳಿದ ಒಂದೂವರೆಯಾಣೆ ಜೈಕುಮಾರಪ್ಪನವರ ಬೊಕ್ಕಸಕ್ಕೆ ಹೋಗಬೇಕು. ಮಾವಿನ ಹಣ್ಣಿನ ಕಾಲದಲ್ಲಿ ಕಸಿ ಮಾವಿನ ಹಣ್ಣು ಜೈಕುಮಾರಪ್ಪದವರಿಗೆ, ಕಂತ್ರಿಹಣ್ಣು ಲಿಂಗಾಯಿತರು, ಬ್ರಾಹ್ಮಣರ ಅಡಿಗೆಮನೆಗೆ. ಶಿವರಾತ್ರಿ, ಉಗಾದಿ ಹಬ್ಬಗಳಲ್ಲಿ ಮಾತ್ರ ನಟರಿಗೆ ಬಿಸಿನೀರಿನ ಸ್ಪರ್ಶ, ಬಾಕಿಯಂತೆ ಆಯಾ ಊರ ಹೊರಗಿನ ಭಾವಿಗಳಲ್ಲಿಯೇ ಸ್ನಾನ-ಈ ಅನ್ಯಾಯ, ದುರಾಚಾರಗಳನ್ನು ಕಂಡು, ಕೇಳಿ ನನಗೂ ಸಹ ತುಂಬಾ ಬೇಸರ ಬಂದಿತ್ತು. ಯತ್ನವಿಲ್ಲದೆ ಅನುಸರಿಸಿಕೊಂಡು ಬರುತ್ತಿದ್ದೆ.

ಒಂದು ಬಾರಿ ಚಿಕ್ಕಮಗಳೂರು ಕ್ಯಾಂಪು ಮಾಡಿ ನಾಟಕ ನಡೆಯುತ್ತಿದ್ದಾಗ, ಜೈಕುಮಾರಪ್ಪನವರು ಡ್ರೆಸ್ ಕೆಲಸ ಮಾಡುತ್ತಿದ್ದವನಿಗೆ ಮನುಷ್ಯತ್ವವನ್ನು ಮೀರಿ ಹೊಡೆದು ಕೈಗಳನ್ನು ತಿರುಚಿ ಕಂಭಕ್ಕೆ ಕಟ್ಟಿದರು. ಇದನ್ನು ನೋಡಿ ಕೆಲವರು ಭಯಪಟ್ಟರಲ್ಲದೆ, ಹಿಂದೆ ಒಬ್ಬ ನಟ ಭಾವಿಗೆ ಬಿದ್ದು ಮೃತಪಟ್ಟ ವಿಚಾರದಲ್ಲಿ ಮಾಲೀಕರ ಮೇಲೆ ಬಂದಿದ್ದ ಅಪವಾದದಿಂದಲೂ ಈಗ ನಡೆಯುತ್ತಿದ್ದ ಕೃತ್ಯಗಳಿಂದಲೂ ಭಯಪಟ್ಟ ನಟವರ್ಗದವರು, ಇತರೆ ಕೆಲಸದವರೆಲ್ಲರೂ ಸಂಘದಲ್ಲಿರುವುದಿಲ್ಲವೆಂದು ಹಟಹಿಡಿದರು. ಅದೇ ವೇಳೆಗೆ ಮಳೆಗಾಲವೂ ಸಮೀಪಿಸಿದುದರಿಂದ ಆ ಕ್ಯಾಂಪು ಮುಗಿಸಿ ರಜಾ ಕೊಟ್ಟು ಎಲ್ಲರನ್ನೂ ಅವರವರ ಊರಿಗೆ ಕಳುಹಿಸಿಕೊಟ್ಟು, ಮಾಲೀಕರು ಶೇಷಾಸಾನಿಯೊಂದಿಗೆ ಗುಬ್ಬಿಗೆ ಬಂದರು. ಆದರೆ ಶೇಷಾಸಾನಿಯು ತನ್ನನ್ನು ಮೈಸೂರಿಗೆ ಕಳುಹಿಸಿಕೊಡಿ, ಖಂಡಿತ ಇಲ್ಲಿ ತಾನು ಇರುವುದಿಲ್ಲ, ನಿಮ್ಮ ನಾಟಕದಲ್ಲಿ ತಾನು ಪಾರ್ಟು ಮಾಡುವುದಿಲ್ಲವೆಂದು ಹಠ ಹಿಡಿದಳು. ವಿಧಿಯಿಲ್ಲದೆ ಸ್ಟೇಜು ಕೆಲಸ ಮಾಡುತ್ತಿದ್ದ ವೆಂಕಟಪ್ಪ ಎಂಬುವನ ಜೊತೆ ಮನಸ್ಸಿಲ್ಲದಿದ್ದರೂ ಕಳುಹಿಸಿಕೊಟ್ಟರು. ಶೇಷಾಸಾನಿಯು ಮೈಸೂರಿಗೆ ಹೋಗಿ ಸಾಹುಕಾರ್ ಗ್ರಾಮಿಣಿ ಚಕ್ರವರ್ತಿ ಐಯ್ಯಂಗಾರ್‌ರವರಿಗೆ ಉಪಪತ್ನಿಯಾಗಿದ್ದುಕೊಂಡು ಒಂದು ಸಂಘವನ್ನು ಸ್ಥಾಪನೆ ಮಾಡಿಸಿದಳು.

ಶೃಂಗೇರಿಯಲ್ಲಿ ಪೇಚಾಟ

ನಮ್ಮ ಸಂಘವನ್ನು ಸ್ವಲ್ಪ ಕಾಲನಿಲ್ಲಿಸಿ ಕೆಲ ಹೊಸ ನಟರುಗಳನ್ನು ಸೇರಿಸಿಕೊಂಡು, ಹಿಂದೆ ಸಿರಾ ಕ್ಯಾಂಪಿನಲ್ಲಿ ಸೇರಿಸಿಕೊಂಡಿದ್ದ ಸುಂದರಮ್ಮ ಎಂಬ ನಟಿಗೆ ಪಾತ್ರವನ್ನು ಕಲಿಸುತ್ತಾ ಇದ್ದೆವು. ೧೯೧೪ರಲ್ಲಿ ಶೃಂಗೇರಿಯಲ್ಲಿ ನಡೆದ ಕುಂಭಾಭಿಷೇಕದ ಸಮಯದಲ್ಲಿ ಸಂಘ ಹೋಯಿತು. ಅಲ್ಲಿ ಒಂದು ಸ್ವಾರಸ್ಯಕರವಾದ ಘಟನೆ ಜರುಗಿತು. ಅಲ್ಲಿಗೆ ಮಂಗಳೂರಿನ ರಂಗನಾಥಭಟ್ಟರ ಅಂಬಾ ಪ್ರಾಸಾದಿಕ ಕಂಪೆನಿಯೂ ಬಂದಿತ್ತು. ನಾವು ಪಾಂಡವವಿಜಯ ನಾಟಕ ಹಾಕಿದ್ದೆವು. ಒಂದು ದಿನ ನಾಟಕಕ್ಕೆ ಶೃಂಗೇರಿ ಜಗದ್ಗುರುಗಳ ಮಠದಿಂದ ಸರ್ವಾಧಿಕಾರಿಗಳು, ಮಠದ ಮ್ಯಾನೇಜರ್ ಮೊದಲಾಗಿ ಎಲ್ಲರೂ ನಮ್ಮ ನಾಟಕ ನೋಡಲು ಬಂದಿದ್ದರು. ನಾಟಕ ಶಾಲೆ ಪ್ರೇಕ್ಷಕರಿಂದ ತುಂಬಿತ್ತು. ನಾಟಕದಲ್ಲಿ ೨-೩ ದೃಶ್ಯವಾದನಂತರ ಕೌರವರು ಪಾಂಡವರನ್ನು ದ್ಯೂತದಲ್ಲಿ ಸೋಲಿಸಿ, ದ್ರೌಪದಿ ವಸ್ತ್ರಾಪಹರಣವಾಗಿ ಪಾಂಡವರನ್ನು ಕಾಡಿಗೆ ಕಳುಹಿಸಿದ ಸಂದರ್ಭ. ಧರ್ಮರಾಯನೇ ಕಾಡಿಗೆ ಹೋದ ಮೇಲೆ ನಾವುಗಳು ತಾನೇ ಏತಕ್ಕಿರಬೇಕು, ನಾವೂ ಸಹ ಅವರೊಡನೆ ಹೋಗೋಣವೆಂದು ಪುರಜನರೂ ಹೊರಡುತ್ತಾರೆ. ಆಗ ನಾನು ಪಾಂಡವರ ಕುದುರೆ ಜವಾನ ಮುಸಲ್‌ಮಾನನಾಗಿ ವೇಷಮಾಡಿಕೊಂಡು ಪುರಜನರ ಜೊತೆ ಹಾಡಿಕೊಂಡು ಬರುತ್ತಿದ್ದೆ. ಬಾಕಿಯವರ ಹಾಡು ಬನ್ನಿ ಬನ್ನಿ ಪೋಗುವಾ, ಕಾನನವನು ಸೇರುವಾ।। ಎಂದಿತ್ತು. ನನ್ನ ಹಾಡು: - ಜಾತಹು ಮೈ ಜಂಗಲ್ಕು ರಾಜ ನೈಸೊ ಹೈ ಕಾಯ್ಕು. ಕೈಸ ಕರ್ನಾರೆ ಖಾನೇಕು ಭಗಾಯಿಸೊ ಉನ್ಕು ಆಹ್‌ಥೂ ।।೧।। ಎಂದು ಹೇಳಿ ಕೊಂಡು ಓ ಕರ್ವ (ಕೌರವ) ಹೈನಾ ನಂದು ದರಮ ರಾಜ ಸಾಮೀಕು ಜುವಾ ಕೇಲ್ಕೆಸೊಲಾಯ್ಸಿ ಬಿಟ್ಟೀ ರಾಜ್ಯ ಗೀಜ್ಯ ಸಬ್ ಕಿತ್ಕೊಂಡಿ ಜಂಗಲ್‌ಗೆ ಕಳ್ಸಿಬಿಟ್ಟಿದಾದೆ. ಅವರ್ ಇಲ್ಲದ್ಮೇಗೆ ನಾವೇಕೆ ಇರ್ಬೇಕೂ ಸಾಮೀ ಎಂದು ಹೇಳುತ್ತಿದ್ದೆ. ಆಗ ಪುರಜನರಲ್ಲಿ ಒಬ್ಬ ಬ್ರಾಹ್ಮಣನೊಡನೆ ನಡೆಯುತ್ತಿದ್ದ ಸಂವಾದ:

ಬ್ರಾಹ್ಮಣ:- ನಿಂಗೇನಯ್ಯಾ ಸಾಬ್ರೇ ಯಾರ್ದಾದ್ರೂ ಕುದ್ರೆಗಿದ್ರೆ ಉಜ್ಜಿಕೊಂಡಿದ್ರೂ ಜೀವನವಾಗುತ್ತೆ. ಬ್ರಾಹ್ಮಣರಾದ ನಮಗ್ತಾನೆ ಕಷ್ಟ. ನಿಮಗೇನು ತುರುಕರು ಭಯವಿಲ್ಲ.

ಸಾಬಿ: - ಅಲ್ಲೊ ಬೊಮ್ಮನ್. ನೀವೇ ಹೇಳಿದಾರೆ.

ಬ್ರಾಹ್ಮಣ:- ಏನೆಂದು ಹೇಳಿದಾರೊ ತುರ್ಕ.

ಸಾಬಿ:- ತುರುಕರಿಲ್ಲದ ಊರು ನರಕಭೋಜನ ಶಾಲಿ, ತುರುಕರಿದ್ದೂರು ರುಚಿಯುಂಟು, ಶುಚಿಯುಂಟು! ತುರುಕರಿಂದಲೆ ಸರ್ವ ಮೋಕ್ಷ ಕರ್ಕೊ.

ಬ್ರಾಹ್ಮಣ:- ಲೋ ಸಾಬಿ! ಹಾಗಲ್ವೊ ಅದರ ಅಭಿಪ್ರಾಯ ಕೇಳೊ-ತುರು ಅಂದರೆ ಹಸು, ಕರು ಅಂದರೆ ಅದರ ಕರು, ತುರುಕರು ನೀವಲ್ಲ ಹುಚ್ಚ ತಿಳಿತೋ. ಇಲ್ನೋಡು-ನಮ್ಮನ್ನು ಬೊಮ್ಮನ್ ಗಿಮ್ಮನ್ ಅನ್ಬೇಡ ಹುಷಾರಾಗಿರು.

ಸಾಬಿ :- ಅಲ್ಪೋ ಬೊಮ್ಮನ್-ನಿಂದು ಜಾತಿ ಎಲ್ಲಿ ಹುಟ್ಟಿತು ಹೇಳಿ. ಇಲ್ದೆ ಇದ್ರೆ ನಾವ್ಹೇಳಿ ಬಿಡ್ತಾರೆ ಕೇಳಿ.

ಬ್ರಾಹ್ಮಣ:- ಲೋ ಹೋಗ್ಲೋಗೋ ನೀನೇನ್ಹೇಳೋದು. ಎಲ್ರಿಗೂ ಗೊತ್ತೆ ಇದೆ-ನಮ್ ಜಾತಿ ಬ್ರಹ್ಮನಮುಖದಲ್ಲಿ ಪುಟ್ಟಿತೂಂತ. ಇವನೇನೋ ಹೇಳ್ತಾನಂತೆ.

ಸಾಬಿ:- ಅಲ್ಲ ಸಾಮಿ-ಅಲ್ಲಿ ಹುಟ್ಟಿಲ್ಲ-ನಾವೇಳ್ತಾರೆ ಕೇಳಿ. ನಮ್ಮ ಪೈಗಂಬರ್ ಗುಡಿಯಿದಾದೆಯಲ್ಲ ಅಲ್ಲಿ ಒಂದು ಖಿಲ್ಲಾಗೆ ಸಾಕಿದಾರೆ.

ಬ್ರಾಹ್ಮಣ:- ಖಿಲ್ಲಾ ಅಂದ್ರೆನೊ ಸಾಬಿ? ಅರ್ಥವಾಗ್ಲಿಲ್ಲ.

ಸಾಬಿ:- ಖಿಲ್ಲಾ ಅಂದ್ರೆ ಅರ್ಥ ಆಗ್ಲಿಲ್ಲಾ? ಖಿಲ್ಲಾ ಅಂದ್ರೇ ಗಂಡೆಮ್ಮೆ-ಕೋಣ. ಖಿಲ್ಲಗ ಕುತ್ಗೇಗೆ ಒಂದು ಗಂಟೆ ಕಟ್ಟಿದಾದೆ. ಗಂಟೆ-ಗಳ್ಗಂಟೆ. ಆ ಖಿಲ್ಲಗೆ ಹರೋಜ್ಜಿ ಅಂದ್ರೆ ದಿನಾಲು ಎಳ್ಳುಸೇರು ಖಿಲ್ತಿ ಹಾಕ್ತಾರೆ. ಓ ಖಿಲ್ಲಾ ಕುಲ್ತಿತಿಂದಿ ತಿಂದಿ ಪೇಟ್‌ಖರಾಬ್ ಹೋಕೆ ಪೀಚೆ ಬರಾಬರಾ ಕರ್ಕೊ ಪಾತೇತೆ ಗಂಟೇ ಸಾಮ್ನೆ ಮಣಮಣ ಕರ್ಕೆ ಹುಲ್ತೇತೆ. ಪಿಚ್ಚೆ ಬರಾ ಬರಾ ಮುಂದೆ ಮಣಾ ಮಣಾ. ಪಿಚ್ಚೆ ಬರಾ ಮುಂದೆ ಮಣಾ ಬರಾಮಣ-ಬರಾ ಮಣ ಹಂಗೆ ನಿಂದು ಜಾತಿ.

ಹೀಗೆ ಹೇಳಿದ ಕೂಡಲೇ ಪ್ರೇಕ್ಷಕವರ್ಗದಲ್ಲಿ ಕುಳಿತಿದ್ದ ಮಠದವರೆಲ್ಲಾ ಮತ್ತು ಊರಿನ ಬ್ರಾಹ್ಮಣ ಪ್ರೇಕ್ಷಕರೆಲ್ಲಾ ನಮಗಾಗಿ ಈ ಫಾರ್ಸು (ಹಾಸ್ಯ) ಮಾಡಿದ್ದಾರೆಂದು ಕೋಪಿಸಿಕೊಂಡು ಎದ್ದು ಹೊರಟುಹೋದರು. ಮಾರನೆದಿನ ಬೆಳಿಗ್ಗೆ ಗುಬ್ಬಿ ನಾಟಕ ಮಂಡಳಿಯವರು ಬ್ರಾಹ್ಮಣ ಜಾತಿಗೆ ಅವಮಾನ ಮಾಡಿರುವರಾದ್ದರಿಂದ ಯಾರೂ ಅವರ ನಾಟಕಗಳಿಗೆ ಹೋಗಬಾರದಾಗಿ ಪ್ರಚಾರಪತ್ರಿಕೆಗಳನ್ನು ಜಾತ್ರೆಯಲ್ಲಿ ಹಂಚಿಸಿದರು. ಆ ದಿನದಿಂದ ನಮ್ಮ ನಾಟಕಕ್ಕೆ ಯಾರೊಬ್ಬರೂ ಬಾರದೆ ನಾಟಕವನ್ನೆ ಆಡದೆ ನಾಟಕ ನಿಂತುಹೋಯಿತು. ಆಗ ಮಾಲೀಕರಾದ ಚಂದಣ್ಣನವರು ನಿನ್ನಿಂದ ಹೀಗಾಯ್ತು ಎಂದು ನನ್ನನ್ನೇ ಆಕ್ಷೇಪಿಸಿದರು. ನಾನೇನು ಸ್ವಂತವಾಗಿ ಮಾಡಿಕೊಂಡು ಮಾತನಾಡಿಲ್ಲ. ಅಲ್ಲದೆ ಯಾವಾಗಲೂ ಆಡುತ್ತಿದ್ದಂತೆ ಆಡಿದೆನೇ ವಿನಾ ಬೇರೆ ಹೆಚ್ಚೇನೂ ಆಡಿಲ್ಲವೆಂದು ಹೇಳಿದೆ. ಅದಕ್ಕೆ ನೀನೇ ಏನಾದರೂ ಉಪಾಯ ಹುಡುಕಿ ಆ ಜನಗಳನ್ನೆಲ್ಲಾ ಸರಿಮಾಡಿಕೋಬೇಕಯ್ಯ ಎಂದು ಹೇಳಿದರು. ಆಗ ನಮ್ಮ ಸಂಸ್ಥೆಯಲ್ಲಿ ಮುಖ್ಯಪಾತ್ರ ವಹಿಸುತ್ತಿದ್ದ, ಹೋದ ಕಡೆಗಳಲ್ಲೆಲ್ಲಾ ಗಣ್ಯವ್ಯಕ್ತಿಯೆನಿಸಿಕೊಂಡಿದ್ದ ಚಿನಗದ ಮೂರ್ತಿರಾಯರನ್ನು ನನ್ನ ಸಂಗಡ ಕರೆದುಕೊಂಡು ಹೋಗಿ ಬ್ರಾಹ್ಮಣ ಸಮೂಹದಲ್ಲಿ ಹೋಗಿ ಸಮಯಾನುಸಾರ ಮಾತನಾಡಿ ಮತ್ತು ಕ್ಷಮಾಪಣೆಯನ್ನು ಸಂಸ್ಥೆಗೋಸ್ಕರ ಕೇಳಿ ಸಮಾಧಾನಪಡಿಸಿ ನಮ್ಮ ನಾಟಕಗಳನ್ನು ನೋಡಲು ಬರವಂತೆ ಮಾಡಿ ನಾಟಕಗಳನ್ನು ಆಡಿದೆವು. ಮೊದಲಿನಂತೆ ಉತ್ಪತ್ತಿ ಆಗಲು ಪ್ರಾರಂಭವಾಯಿತು.

ಪತ್ನೀವಿಯೋಗ, ದುಃಖ-ಪರಂಪರೆ

ಅಲ್ಲಿಂದ ಕಂಪನಿಯು ಎಡೆಹಳ್ಳಿಗೆ (ನರಸಿಂಹರಾಜಪುರ) ಬಂದು ಅಲ್ಲಿ ಶಾಂತಪ್ಪ ಶೆಟ್ಟರ ಆಶ್ರಯದಲ್ಲಿ ಆಡಿ, ಲಕ್ವಳ್ಳಿಗೆ ಬಂದು ಅಲ್ಲಿ ಶ್ರೀ ಹನುಮಾಬೋವಿ, ಶ್ರೀ ಸಿದ್ದಾಬೋವಿಗಳ ನೆರವಿನಿಂದ ಆಡಿ ತರೀಕೆರೆಗೆ ಬಂದು ನೇರಲಕೆರೆ ಶಾನುಭೋಗ ಸುಬ್ಬರಾಯರ ಸ್ಥಳದಲ್ಲಿ ಡೇರಾ ಹೊಡೆದು ನಾಟಕವಾಡಿದೆವು. ಮಳೆಗಾಲ ಬಂದುದರಿಂದ ಸಂಸ್ಥೆಗೆ ರಜಾಕೊಟ್ಟು ಪುನಃ ೧೯೧೫ರ ಜನವರಿಯಲ್ಲಿ ಸಂಘವು ಹಾಸನಕ್ಕೆ ಬಂದಿತು. ಹಾಸನದಲ್ಲಿ ಜಾತ್ರೆ ಸೇರಿಸಲು ಆಗ ತಾನೇ ಪ್ರಾರಂಭವಾಗಿತ್ತು. ಆ ಕಾಲದಲ್ಲಿ ಸಂಸ್ಥೆಗೆ ಸಂಜೀವದಾಸರು, ಸೀತಾರಾಮಯ್ಯ, ಪಿಟೀಲು ಕೇಶವಮೂರ್ತಿಗಳು, ಸಂಕಿಘಟ್ಟದ ಗೋಪಾಲಯ್ಯ, ಮೈಸೂರು ಪುಟ್ಟಯ್ಯ, ತಬಲ ವಾಬು ಸಾಹೇಬರು, ಬೇಳೂರು ನಂಜುಂಡಯ್ಯ, ರಾಣಿ ಪಾತ್ರದ ಅಪ್ಪಾಜಿ ಮುಂತಾದ ನಟರುಗಳು ಸೇರಿದರು. ಹಾಸನದಿಂದ ಚುಂಚನಕಟ್ಟೆ ಜಾತ್ರೆ, ಅಲ್ಲಿಂದ ಕೊಡಗು ಪ್ರಾಂತ್ಯದ ವೀರಾಜೇಂದ್ರ ಪೇಟೆಗೆ ಹೋಗಿ ಅಲ್ಲಿ ನಾಟಕವಾಡಲು ಪ್ರಾರಂಭಿಸಿದೆವು. ಅಲ್ಲಿನ ಮುನ್ಸೀಫರಾದ ಕೊಡಗು ಮತದ ನಂಜಪ್ಪನವರು ನನಗೂ, ಸೀತಾರಾಮಯ್ಯನಿಗೂ ಒಂದೊಂದು ಸವರನ್ ತೂಕದ ಭಂಗಾರದ ಮೆಡಲನ್ನು ಕೊಟ್ಟರು. ಅಲ್ಲಿಂದ ಸಂಘವು ಮಡಕೇರಿಗೆ ಹೋಗಿ ಮಳೆಗಾಲ ಸಮೀಪಿಸಿದುದರಿಂದ ಸಾಮಾನುಗಳನ್ನು ಅಲ್ಲಿಯೇ ಬಿಟ್ಟು ಜನಗಳೆಲ್ಲರೂ ಊರುಗಳಿಗೆ ಹೋದರು.

ನಾನೂ ಸಹ ಊರಿಗೆ ಹೋದೆನು. ಆಗ ನನ್ನ ಪಿತ್ರಾರ್ಜಿತ ಸ್ವಗ್ರಾಮವಾದ ಗುರುಗಂಜಿ ಹಳ್ಳಿಯಲ್ಲಿ ನನ್ನ ತಾಯಿ, ನನ್ನ ಅರ್ಧಾಂಗಿಯಿದ್ದರು. ನನ್ನ ಪತ್ನಿಗೆ ನವಮಾಸತುಂಬಿ ಗಂಡು ಮಗುವು ಜನನವಾಯಿತು. ಆದರೆ ನನ್ನ ಗ್ರಹಚಾರ ಕ್ರೂರವಾಗಿ ನನ್ನ ಪತ್ನಿಗೆ ಬಾಣಂತಿಸನ್ನಿಯಾಗಿ ಮಗು ಹುಟ್ಟಿದ ಹತ್ತನೇ ದಿನಕ್ಕೆ ಮಗುವನ್ನು ಬಿಟ್ಟು ಪರಲೋಕಯಾತ್ರೆ ಮಾಡಿದಳು. ನನ್ನ ತಂದೆಯವರಿಗೂ ನನಗೂ ಪೂರ್ವಜನ್ಮ ಋಣಾನುಬಂಧ ಹೆಚ್ಚಿಗೆ ಇರಲಿಲ್ಲವಾಗಿ ಕಷ್ಟಕಾಲದಲ್ಲಿ ಅವರಿಂದ ನನಗೆ ಯಾವ ನೆರವೂ ಆಗದೆ ತುಂಬಾ ತೊಂದರೆಗೆ ಗುರಿಯಾದುದಲ್ಲದೆ ನಾಲ್ಕನೇ ಛಳಿಜ್ವರ ಪ್ರಾರಂಭವಾಯಿತು. ತಬ್ಬಲಿಯಾಗಿದ್ದ ಹತ್ತುದಿನದ ಮಗುವನ್ನು ಕಾಪಾಡುವುದೇ ಒಂದು ದೊಡ್ಡ ಗಂಡಾಂತರವಾಯಿತು. ಆಗ ಹನುಮಂತಪುರದಿಂದ ನನ್ನ ಅಕ್ಕನಾದ ಮಾ|| ಸಿದ್ಧವೀರಮ್ಮನನ್ನು ಕರೆಯಿಸಿಕೊಂಡು ನನ್ನ ಮಗುವನ್ನು ಸಾಕಲು ಅವರಿಗೆ ಒಪ್ಪಿಸಿ ಅವರಿಗೆ ಆಗ ಇದ್ದ ಒಂದು ವರ್ಷದ ಚನ್ನಪ್ಪನೆಂಬ ಮಗುವನ್ನು ಸಾಕಲು ನನ್ನ ತಾಯಿಯವರು ಒಪ್ಪಿ ಗುರುಗಂಜಿ ಹಳ್ಳಿಯಲ್ಲಿಯೇ ಇಟ್ಟುಕೊಂಡರು. ತಾಯಿಯಿಲ್ಲದ ಮಗುವಿಗೆ ನೀನೇ ತಾಯಿ ಎಂದು ನನ್ನ ಮಗುವನ್ನು ಅಕ್ಕನಾದ ಸಿದ್ವೀರಮ್ಮನಿಗೆ ಒಪ್ಪಿಸಿ ಹನುಮಂತಪುರಕ್ಕೆ ಕಳುಹಿಸಿಕೊಟ್ಟರು. ನನಗಾದರೋ ವಾಯಿದೆಯ ಛಳಿಜ್ವರ ಮೂರು ನಾಲ್ಕು ತಿಂಗಳು ಬಿಡದೆ ತುಂಬಾ ತೊಂದರೆಗೆ ಗುರಿಮಾಡಿ ವಿಪರೀತ ಕಷ್ಟ ನಷ್ಟಕ್ಕೆ ಸಿಲುಕಿ ಬಳಲಿ ಬೆಂಡಾಗಿ

ಜೀವನೋಪಾಯಕ್ಕೆ ಹಲ್ಲು ಹಲ್ಲು ಕಿರಿಯುವಂತಾಯ್ತು ನನ್ನ ಕತೆ. ನಾಲ್ಕು-ಆರು ತಿಂಗಳು ಛಳಿಜ್ವರ ಬಿಡದೆ ನಾಟಕದ ಸಂಸ್ಥೆಗೂ ಹೋಗಲು ಅವಕಾಶವಾಗದೆ ಗುರು ಗಂಜಿ ಹಳ್ಳಿಯಲ್ಲಿಯೇ ದಿನಗಳನ್ನು ನೂಕಿದೆ. ಅಲ್ಲಿಂದ ಹನುಮಂತಪುರಕ್ಕೆ ಹೊರಟು ಬಂದೆ-ನಾಲ್ಕು ಆಣೆ ಮೂರುಕಾಸು ಕೊಟ್ಟರೆ ನಿಡುವಂದ ರೈಲ್ವೆ ನಿಲ್ದಾಣಕ್ಕೆ ಬಂದು ಇಳಿಯಬಹುದಾಗಿತ್ತು ಆಗ. ಅಲ್ಲಿಂದ ನಾಲ್ಕು ಮೈಲಿ ನಡೆದುಕೊಂಡು ಹನುಮಂತ ಪುರವನ್ನು (ಮುಗುಳಿಹಳ್ಳಿ) ಸೇರಿದೆ. ಆಗ ನನ್ನ ಮಗುವನ್ನು ನೋಡಿ ಚೆನ್ನಾಗಿ ಸಾಕಿದ್ದ ನನ್ನ ಅಕ್ಕನಿಗೆ ಸಾಷ್ಟಾಂಗ ನಮಸ್ಕಾರವನ್ನು ಹಾಕಿದೆನೇ ವಿನಾ ಮತ್ತೇನನ್ನೂ ಅರ್ಪಿಸಲು ನಿಶ್ಶಕ್ತನಾಗಿದ್ದೆ. ಆದರೆ ನನ್ನ ಬೆನ್ನು ಹತ್ತಿದ್ದ ವಾಯಿದೆ ಛಳಿಜ್ವರ ನನ್ನನ್ನು ಬಿಟ್ಟಿರಲಿಲ್ಲ. ಆಗ ಅಲ್ಲಿಯೇ ಪಕ್ಕದ ಹಳ್ಳಿಯಿಂದ ಬಂದಿದ್ದ ಒಬ್ಬ ಹರಿಜನ ಮನುಷ್ಯ ನಾನು ಒಂದು ಹಸುರು ಕಟ್ಟುತ್ತೇನೆ, ನೀವು ಒಪ್ಪಿಕೊಳ್ಳಿರಿ ಎಂದು ನನ್ನನ್ನು ಒಪ್ಪಿಸಿ ನನ್ನ ಬಲಗೈ ರಟ್ಟೆಗೆ ಒಂದು ಬೇರನ್ನು ಚಚ್ಚಿ ಕಟ್ಟಿಹೋದ. ಅವನು ಹೋದ ಹತ್ತು ನಿಮಿಷಕ್ಕೆ ವಿಪರೀತ ಉರಿಯು ಪ್ರಾರಂಭವಾಗಿ ನಾನು ಬೊಬ್ಬೆ ಹಾಕಲು ಪ್ರಾರಂಭಿಸಿದೆ. ಕ್ರಮೇಣ ಬಾಧೆ ಕಡಿಮೆಯಾಗಿ ರಟ್ಟೆಯಲ್ಲಿ ದೊಡ್ಡ ಗಾಯವಾಯಿತು. ಛಳಿಜ್ವರ ಸಂಪೂರ್ಣ ನಿಂತು ಗಾಯವೂ ವಾಸಿಯಾಯಿತು. ಛಳಿಜ್ವರ ನಿಂತದ್ದು ನನ್ನಿಂದಲೇ ಎಂದು ನೆನಪು ಮಾಡುವಂತೆ ಈಗಲೂ ಗಾಯದ ಕುರುಹು ನಿಂತಿದೆ.

ನಾನು ಅಲ್ಲಿಯೇ ಕೆಲವು ದಿನಗಳಿದ್ದುದಾಯ್ತು. ಆಗ ಗುಬ್ಬಿ ಸಂಘದಲ್ಲಿ ರಾಣಿ ಪಾರ್ಟು ಮಾಡುತ್ತಿದ್ದ ಸೀತಾರಾಮು ಎಂಬಾತನು ಕೆಲವು ಉತ್ತಮ ಜನರ ಸಹಾಯದಿಂದ ಬೆಂಗಳೂರಿನ ತುಳಸಿ ತೋಟದಲಿ ಸೀತಾ ಮನೋಹರ ನಾಟಕ ಮಂಡಳಿ ಎಂಬ ಹೆಸರಿನಲ್ಲಿ ಸಂಸ್ಥೆಯನ್ನು ಸ್ಥಾಪಿಸಿ ನಾಟಕವನ್ನಾಡುತ್ತಿದ್ದನು. ಅಲ್ಲಿಗಾದರೂ ಹೋಗಿ ಸೇರಿಕೊಳ್ಳೋಣ ವೆಂದು ಯೋಚಿಸಿದೆ. ಆಗ ಬೆಂಗಳೂರಿಗೆ ಛಾರ್ಜು ಐದಾಣೆಯಿತ್ತು. ನನ್ನ ಅಕ್ಕನಲ್ಲಿ ಒಂದು ರೂಪಾಯಿ ತೆಗೆದುಕೊಂಡು ಬೆಂಗಳೂರಿಗೆ ಬಂದು ನನ್ನ ಸ್ಥಿತಿ ಗತಿಯನ್ನು ತೋಡಿಕೊಂಡೆ. ಆಗ ಆತನು ತನ್ನ ಸಂಸ್ಥೆಗೆ ಸರಿಯಾದ ನಟನು ದೊರೆತದ್ದಕ್ಕೆ ತುಂಬಾ ಸಂತೋಷಪಟ್ಟು ಒಪ್ಪಿಕೊಂಡು ಆತನು ಆಡುತ್ತಿದ್ದ ಲಂಕಾದಹನ ನಾಟಕದಲ್ಲಿ ಹಾಸ್ಯದ ಪಾತ್ರಮಾಡಲು ನನ್ನನ್ನುರಂಗಭೂಮಿಗೆ ಕಳುಹಿಸಿದರು. ಆಗ ನಾನಿನ್ನೂ ಬೆಂಗಳೂರನ್ನು ಚೆನ್ನಾಗಿ ನೋಡಿಯೇ ಇರಲಿಲ್ಲ. ಅಲ್ಲದೆ ಬೆಂಗಳೂರಿನಲ್ಲಿ ರಂಗಭೂಮಿಯ ಮೇಲೆ ಬಂದುದು ಅದೇ ಮೊದಲು. ಆ ದಿನ ಸೀತಾಮನೋಹರ ನಾಟಕ ಸಂಸ್ಥೆಯಲ್ಲಿ ಹಾಸ್ಯಪಾತ್ರ ಮಾಡಲು ಒಪ್ಪಿಕೊಂಡು ನನ್ನ ಆರಾಧ್ಯದೇವರಾದ ಶ್ರೀ ಚೆನ್ನಬಸವೇಶ್ವರ ಸ್ವಾಮಿಯ ಧ್ಯಾನವನ್ನು ಮನಸ್ಸಿನಲ್ಲಿಯೇ ಮಾಡಿ ವೇಷಹಾಕಿಕೊಂಡು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಭಯದಿಂದಲೂ ಗಾಬರಿಯಿಂದಲೂ, ಹಾಡನ್ನು ಹಾಡಿಕೊಂಡು ರಂಗಭೂಮಿಯನ್ನು ಪ್ರವೇಶಿಸಿದೆ. ನನ್ನ ಗ್ರಹಚಾರಕ್ಕೆ ಸರಿಯಾಗಿ ಹಾರ್ಮೋನಿಯಂ ಮಾಸ್ಟರಿಗೆ ನಾನು ಹಾಡುವ ಕೃತಿಯನ್ನು ತಿಳಿಸಿರಲಿಲ್ಲವಾಗಿ ಆತನು ನುಡಿಸುವ ಶೃತಿಗೂ ನಾನು ಹಾಡುವ ಶೃತಿಗೂ ಸರಿಹೋಗದೆ ಪ್ರೇಕ್ಷಕರು ಗಲಾಟೆ ಮಾಡಿ ನನಗೂ ಭಯದಿಂದ ನಡುಗು ಬಂದು ಮೈಯೆಲ್ಲಾ ಬೆವತು ಹೋಗಿದ್ದರೂ, ಮನಸ್ಸಿಗೆ ಕೊಂಚ ಧೈರ್ಯ ತಂದುಕೊಂಡು ಹಾಡನ್ನು ಜಾಗ್ರತೆ

ಪೂರೈಸಿದೆ. ಅದೇ ದೃಶ್ಯದಲ್ಲಿ ಬೇರೆ ಹಿಂದೂಸ್ತಾನಿ ಹಾಡನ್ನು ಹಾಡಿ ನರ್ತನ ಮಾಡಲು ಪ್ರಾರಂಭಿಸಿ ಒಳಗೆ ಬಂದಕೂಡಲೇ ಪ್ರೇಕ್ಷಕರ ಹರ್ಷ ಧ್ವನಿ, ಕರತಾಳದ ಪ್ರೋತ್ಸಾಹ ದೊರೆತು ಮನಸ್ಸಿಗೆ ಕೊಂಚ ಸಮಾಧಾನವಾಯಿತು. ಅದೇ ದಿನ ಬೇರೆ ದೃಶ್ಯದಲ್ಲಿ ಪುನಃ ಪ್ರವೇಶಮಾಡಿ ಅರ್ಧರ್ಧ ನಿಮಿಷಕ್ಕೆ ಒಂದೊಂದು ರಾಗದಂತೆ-ದೋಸೆ ತರ್ತಾರೆ ತಿನ್ನೋಕೆ । ಕಾಸಿಗೊಂದು ಎರಡು ಮೂರು ನಾಲ್ಕೈದು ತದಿಂಗಿಣತೊ ॥ ದೋಸೆ ತರ್ತಾರೆ ತಿನ್ನೋಕೆ ॥ ಎಂಬ ಪಲ್ಲವಿಯನ್ನು ಹಾಸ್ಯದ ರೀತಿ, ಅಳುವುದು, ನಗುವುದು ಹೀಗೆಲ್ಲಾ ಮುಖ ಬದಲಾವಣೆ ಮಾಡಿಕೊಂಡು ಎರಡು ಮೂರು ಆವರ್ತಸ್ವರ ಹಾಕಿಕೊಂಡು ಹಾಡಿದನಂತರ ಕರತಾಳ ಬಹುಜೋರಾದುದರಿಂದ ಮನಸ್ಸಿಗೆ ಸಮಾಧಾನವಾಗಿ ಸಂತೋಷಪಟ್ಟು ಧೈರ್ಯದಿಂದ ಕೆಲಸ ಮಾಡಿದೆ.

ಆಗ ಒನ್ಸ್ ಮೋರ್ ಸಹ ಬಿದ್ದು ಎರಡನೆಯ ಸಾರಿ ಹಾಡಲೂ ಪ್ರೇಕ್ಷಕರು ಚಪ್ಪಾಳೆ ಹಾಕಿ ಕೂಗಿ ರಂಗಸ್ಥಳಕ್ಕೆ ಬರಮಾಡಿಕೊಂಡರು. ಅವರ ಕೋರಿಕೆಯಂತೆ ಪುನಃ ಬಂದು ಅವರನ್ನು ಸಂತೋಷಪಡಿಸಿದೆ. ಆಗ ಮಾಲೀಕರಾದ ಸೀತಾರಾಮಯ್ಯ ಬಂದು ಸಂತೋಷಪಟ್ಟು ಐವತ್ತು ರೂಪಾಯಿ ಸಂಬಳ ಕೊಡಲೊಪ್ಪಿ ತಮ್ಮ ಸಂಸ್ಥೆಯಲ್ಲಿಯೆ ಇರಬೇಕೆಂದರು. ಅದಕ್ಕೆ ಒಪ್ಪಿ ನಾಲ್ಕೈದು ದಿನಗಳು ಕಳೆಯುವಷ್ಟರಲ್ಲಿ ಗುಬ್ಬಿ ಸಂಸ್ಥೆಯು ದೊಡ್ಡ ಬಳ್ಳಾಪುರ ಕ್ಯಾಂಪು ಹಾಕಿ ಸ್ವಯಂ ಮಾಲೀಕರಾದ ಚಂದಣ್ಣನವರೇ ಬಂದು ಸೀತಾರಾಮಯ್ಯನವರನ್ನು ಒಪ್ಪಿಸಿ ನನ್ನನ್ನು ದೊಡ್ಡಬಳ್ಳಾಪುರಕ್ಕೆ ಕರೆದುಕೊಂಡು ಬಂದರು. ಅದೇ ಸಮಯದಲ್ಲಿ ಪಟ್ಟಣದ ಗಂಗಾಧರಯ್ಯನವರು ಸೀತಾ ಮನೋಹರ ಕಂಪನಿಗೆ ಸೇರಿ ೧೫-೨೦ ದಿನಗಳಾಗಿದ್ದರೂ ಗುಬ್ಬಿ ನಾಟಕ ಮಂಡಳಿಗೆ ಸೇರಬೇಕೆಂಬ ಕುತೂಹಲದಿಂದ ದೊಡ್ಡಬಳ್ಳಾಪುರಕ್ಕೆ ಮೂವತ್ತು ರೂಪಾಯಿ ಸಂಬಳಕ್ಕೆ ಸೇರಿದರು ಮಾಲೀಕರು ನನಗೆ ಇದ್ದ ಇಪ್ಪತ್ತೆರಡುವರೆ ರೂಪಾಯಿಯಿಂದ ನಲವತ್ತು ರೂಪಾಯಿಗೆ ಸಂಬಳವನ್ನೇರಿಸಿದರು. ನನ್ನನ್ನು ಒಬ್ಬ ನಟನನ್ನಾಗಿ ಮಾಡಿದ ಸಂಸ್ಥೆಯೆಂದು ಒಪ್ಪಿಕೊಂಡೆ.

ಊರಿಂದ ಊರಿಗೆ

ಸಂಸ್ಥೆಯು ಕನ್‌ಟ್ರಾಕ್ಟ್ ಮೇಲೆ ಸಾವಿರದ ಒಂಬೈನೂರ ಹದಿನೈದನೇ ಡಿಸೆಂಬರ್ ತಿಂಗಳಲ್ಲಿ ತೀರ್ಥಹಳ್ಳಿಗೆ ಎಳ್ಳು ಅಮಾವಾಸ್ಯೆ ಜಾತ್ರೆಗೆ ಬಂದು ನಾಟಕವಾಡಲು ಪ್ರಾರಂಭಿಸಿತು. ಅದೇ ಸಮಯದಲ್ಲಿ ನಮ್ಮ ಮೈಸೂರು ನಾಡಿನ ಶ್ರೇಷ್ಠ ಕಲಾವಿದರಾದ ಶ್ರೀ ಎ.ವಿ. ವರದಾಚಾರ್ಯರ 'ರತ್ನಾವಳಿ' ನಾಟಕ ಸಂಸ್ಥೆಯು ನಾಟಕವಾಡುತ್ತಿದ್ದಿತು. ಆ ಸಂಘದವರು ಆಗ ರತ್ನಾವಳಿ, ಶಾಕುಂತಲ, ನಿರುಪಮೆ, ಪ್ರಹ್ಲಾದಚರಿತ್ರೆ, ರಾಮವರ್ಮಲೀಲಾವತಿ, ಮನ್ಮಥವಿಜಯ ನಾಟಕಗಳನ್ನಾಡುತ್ತಿದ್ದರು. ಅವರ ನಿರುಪಮೆ, ಪ್ರಹ್ಲಾದಚರಿತ್ರೆ, ಶಾಕುಂತಲ ನಾಟಕಗಳು ತುಂಬಾ ಹೆಸರು ಪಡೆದಿದ್ದವು. ತೀರ್ಥಹಳ್ಳಿಯಲ್ಲಿ ಅವರಿಗೆ ತುಂಬಾ ಪುರಸ್ಕಾರಗಳು ದೊರೆತದ್ದೂ ಅಲ್ಲದೆ ಉತ್ಪತ್ತಿ ಸಹ ಏಳುನೂರಐವತ್ತು ಎಂಟನೂರಐವತ್ತು ಆಗುತ್ತಿತ್ತು. ಆಗಿನ ಕಾಲಕ್ಕೆ ಅದು ತುಂಬ ಹೆಚ್ಚಿನ ಉತ್ಪತ್ತಿ. ನಾವು ಭೋಜ ಪ್ರಬಂಧ, ಸುಭದ್ರಾಪರಿಣಯ, ಗುಲೇ ಬಕಾವಲಿ, ಸದಾರಮೆ, ಪಾಂಡವ ವಿಜಯ, ಚೋರಕಥೆ, ರಾಮಾಯಣ ಮುಂತಾದ ನಾಟಕವಾಡುತ್ತಿದ್ದೆವು. ನಮಗೆ ಮಾತ್ರ ಎಪ್ಪತ್ತೈದು-ಎಂಭತ್ತು ರೂ.ಗಳಾಗುತ್ತಿದ್ದುವು.

ಅಲ್ಲಿಯೇ ವಾಮನರಾವ್ ಮಾಸ್ಟರ್‌ರವರ ವಿಶ್ವಗುಣಾದರ್ಶವೆಂಬ ಸಂಘವು ತೀರ್ಥಹಳ್ಳಿಗೆ ಬಂದು ಉತ್ಪತ್ತಿಯಿಲ್ಲದೆ ತುಂಬಾ ತೋದರೆಪಟ್ಟು ಅದೇ ಊರಿನ ಕಲಾಭಿಮಾನಿಗಳ ಸಹಾಯ, ಸಹಕಾರದಿಂದ ಮಲೆನಾಡನ್ನು ದಾಟಿ ಕೆಳಗಡೆಗೆ ಹೋದರು.

ರತ್ನಾವಳಿ ಕಂಪನಿಯವರು ಆಡುತ್ತಿದ್ದ ಪ್ರಹ್ಲಾದಚರಿತ್ರೆಯನ್ನು ನಾವು ಕಲಿಯೋಣವೆಂದು ನಮ್ಮ ಮಾಲೀಕರು ಒಂದು ರೂಪಾಯಿ ಕೊಟ್ಟು ಪ್ರಿಂಟಾದ ಪುಸ್ತಕವೊಂದನ್ನು ತರಿಸಿ ಪಾತ್ರಗಳನ್ನು ಬರೆಸಿ ಕಲಿಯಲು ಕೊಟ್ಟರು. ಪ್ರಿಂಟಾದ ಪುಸ್ತಕದಲ್ಲಿ ಕವಿಗಳ ಅನುಮತಿಯಿಲ್ಲದೆ ಈ ನಾಟಕಗಳನ್ನು ಯಾರೂ ಅಭಿನಯಿಸ ಕೂಡದು ಎಂದು ಸೂಚಿಸಿದ್ದರೂ ಅದನ್ನು ಗಣನೆಗೆ ತಾರದೆ ಕಲಿಯಲು ಕೊಟ್ಟರು.

ಅದೇ ಸಮಯದಲ್ಲಿ ಒಂದು ದಿನ ನಮ್ಮ ಸಂಘದಲ್ಲಿ ನಾಟಕವನ್ನು ನೋಡಲು ವರದಾಚಾರ್ಯರ ಸಂಘದವರನ್ನು ಬರಮಾಡಿಕೊಳ್ಳಬೇಕೆಂದು ಏರ್ಪಾಡು ಮಾಡಿ, ನಮ್ಮ ಸಂಘದ (ಮ್ಯಾನೇಜರ್) ವ್ಯವಸ್ಥಾಪಕರಾಗಿದ್ದ ಶ್ರೀ ಎಸ್. ನಾಗೇಶರಾಯರನ್ನು ಶ್ರೀ ಎ. ವಿ. ವರದಾಚಾರ್ಯರ ಬಳಿಗೆ ಕಳುಹಿಸಿ ಅವರ ಒಪ್ಪಿಗೆಯನ್ನು ತೆಗೆದುಕೊಂಡು ಬಂದು ಸುಭದ್ರಾಪರಿಣಯ ನಾಟಕ ಹಾಕಿ ಆ ಕಂಪನಿಯ ನಟರೆಲ್ಲರನ್ನೂ ಆಹ್ವಾನಿಸಿದೆವು- ಮುಂಚೆ ಟೀಪಾರ್ಟಿಯಿಟ್ಟುಕೊಂಡು ಟೀ ಆದನಂತರ ಅವರನ್ನೆಲ್ಲಾ ಸತ್ಕರಿಸಿ ಆಸನಗಳಲ್ಲಿ ಕೂರಿಸಿ ನಾಟಕವನ್ನಾರಂಭಿಸದರು. ೨-೩ ದೃಶ್ಯಗಳ ನಂತರ ಅದೇ ಊರಿನ ವರ್ತಕರಾದ ಲೆಬ್ಬೆ ಸಾಹೇಬರು ನಾಟಕ ನೋಡಲು ಬಂದರು. ಬಂದು ನಮಗೆ ಮೊದಲನೇ ಸಾಲಿನಲ್ಲಿ ಕುರ್ಚಿ ಹಾಕಿಸಿಕೊಡಬೇಕು, ಅಲ್ಲದೆ ನಾಟಕವನ್ನು ಮತ್ತೆ ಮೊದಲಿನಿಂದ ಪ್ರಾರಂಭಿಸಬೇಕು- ಹಾಗೆ ಮಾಡಿದರೆ ನಾವು ಬಂದಿರುವ ಹನ್ನೆರಡು ಜನರೂ ಒಂದು ರೂಪಾಯಿಯ

ಟಿಕೆಟ್ ತೆಗೆದುಕೊಳ್ಳುತ್ತೇವೆ, ಇಲ್ಲವಾದರೆ ಬೇಡಿ ಎಂದು ಹೇಳಿದರು. ಅದಕ್ಕೆ ನಮ್ಮ ಯಜಮಾನರು ಒಪ್ಪಿಕೊಂಡು ಒಳಗೆ ಬಂದು ನಮ್ಮ ಗಳಿಗೆ ಹೇಳಿದರು. ನಾವುಗಳೆಲ್ಲರೂ ಎಷ್ಟು ಬೇಡವೆಂದು ಹೇಳಿದರೂ ಕೇಳದೆ ಪುನಃ ಮೊದಲಿನಿಂದಲೇ ಆರಂಭಿಸುವಂತೆ ಹೇಳಿಯೇಬಿಟ್ಟರು. ಆಜ್ಞಾಧಾರಕರಾದ ನಾವುಗಳು ವಿಧಿಯಿಲ್ಲದೆ ಭೀಷ್ಮ. ದ್ರೋಣರಂತೆ ಒಪ್ಪಿ ಪ್ರಾರಂಭದಿಂದಲೇ ಅಭಿನಯಿಸಿದುದೇನೋ ಆಯಿತು. ಆದರೆ ಕುರ್ಚಿಗಳನ್ನು ಮೊದಲನೆಯ ಸಾಲಿಗೆ ಅಂದರೆ ವರದಾಚಾರ್ಯರೂ, ಅವರ ಅನುಯಾಯಿಗಳೂ ಕೂತಿದ್ದ ಸಾಲಿನ ಮುಂಭಾಗದಲ್ಲಿ ಹಾಕಿದರು. ಆಗಲೇ ಶ್ರೀ ವರದಾಚಾರ್ಯರೂ, ಅವರ ಇತರ ನಟರುಗಳೂ ಸಹ ತಮಗೆ ಅವಮಾನವಾಯಿತೆಂದು, ನಮ್ಮ ಸಂಘದ ಅವ್ಯವಸ್ಥೆಯನ್ನು ಕಂಡು ಎದ್ದು ಹೊರಟುಹೋದರು. ಆಗಿನಿಂದಲೂ ಕಲೆಯ ಬೆಲೆಯನ್ನು ಅರಿಯದ ನಮ್ಮ ಮಾಲೀಕರ ಮೇಲೆ ನಮ್ಮ ವಿಶ್ವಾಸ ಮತ್ತಷ್ಟು ಕಡಿಮೆಯಾಯಿತು. ತೀರ್ಥಹಳ್ಳಿಯಿಂದ ರತ್ನಾವಳಿ ಸಂಸ್ಥೆ ಉಡುಪಿಗೆ ಹೋದ ಮೇಲೆ ನಮ್ಮ ಸಂಘವು ಪ್ರಹ್ಲಾದಚರಿತ್ರೆ ನಾಟಕವನ್ನು ಅಭ್ಯಾಸ ಮಾಡಿ ತೀರ್ಥಹಳ್ಳಿಯಲ್ಲಿಯೇ ಅಭಿನಯಿಸಿದರು. ಹಿರಣ್ಯಕಶ್ಯಪನ ಪಾತ್ರವನ್ನು ನಟಭಯಂಕರ ಶ್ರೀ ಎಂ.ಎನ್. ಗಂಗಾಧರರಾಯರು ಅದೇ ಮೊದಲು ಚೆನ್ನಾಗಿ ಅಭಿನಯಿಸಿದರು. ನಾನು ನಾರದನ ಪಾತ್ರ ವಹಿಸಬೇಕಾಯ್ತು. ಆ ಪಾತ್ರಕ್ಕಾಗಿ ನನ್ನ ಹುರಿಯಾದ ಮೀಸೆಯನ್ನು ತೆಗೆಯಿಸಬೇಕಾಯ್ತು. ಆಗ ತೆಗೆಸಿದ ಮೀಸೆ ಈಗ ೭೦ ವರ್ಷ ಮೀರಿದ್ದರೂ ಬೆಳೆಯಲಿಲ್ಲ. ಒಟ್ಟಿನಲ್ಲಿ ಪ್ರಹ್ಲಾದಚರಿತ್ರೆ ನಾಟಕ ಚೆನ್ನಾಗಿ ನಡೆಯಿತು. ಅದೇ ಕ್ಯಾಂಪಿನಲ್ಲಿಯೇ ಮಾಲೀಕರೊಡನೆ ವಾದಮಾಡಿ ತುಂಬಾ ಛಳಿಗಾಲವಾದ್ದರಿಂದ ಬಿಸಿನೀರಿನ ಸ್ನಾನಕ್ಕೆ ಏರ್ಪಡಿಸಬೇಕೆಂದು ಹೇಳಿ ಗೊತ್ತುಮಾಡಿಸಿದೆ-ಮಾಲೀಕರು ಆಗಾಗ್ಗೆ ನನ್ನ ಮಾತಿಗೆ ಬೆಲೆ ಕೊಟ್ಟು ನಡೆಸುತ್ತಿದ್ದರು. ಆಗಿನಿಂದ ಪ್ರತಿದಿನ ಬಿಸಿ ನೀರಿನ ಸ್ನಾನ, ಚಟ್ನಿಗೆ ಒಂದು ತೆಂಗಿನಕಾಯಿ ಗೊತ್ತಾಯಿತು. ತೀರ್ಥಹಳ್ಳಿ ಜಾತ್ರೆ (ಜನವರಿ) ಪುಷ್ಯಮಾಸದಲ್ಲಿ ಬರುತ್ತದೆಯಾದ್ದರಿಂದ ತುಂಬಾ ಛಳಿಯಾಗುತ್ತಲೂ ಇದ್ದು ಅದುವರೆಗೆ ಕಾಫಿ ಕುಡಿಯದೆ ಇರುತ್ತಿದ್ದ ನನಗೆ ಆ ಕ್ಯಾಂಪಿನಿಂದ ಕಾಫಿ ಕುಡಿಯಲು ಅಭ್ಯಾಸವಾಯಿತು.

ತೀರ್ಥಹಳ್ಳಿಯಿಂದ ಸಂಘವು ಶಿವಮೊಗ್ಗಾ ಕ್ಯಾಂಪು ಮಾಡಿ ಡೇರಾ ಹೊಡೆದು ನಾಟಕಗಳನ್ನಾಡಲು ಪ್ರಾರಂಭಿಸಿತು. ಆಗ ಚಿಕ್ಕನಾಯಕನಹಳ್ಳಿಯ ಶ್ರೀ ಸಿ.ಬಿ. ಮಲ್ಲಪ್ಪನವರು ಸಂಘಕ್ಕೆ ಸೇರಿದರು. ಆಗ ಮಾಲೀಕರಾದ ಚಂದಣ್ಣನವರ ಹೆಸರು ಕೇಳಿದ ಎಲ್ಲಾ ನಟರೂ ಭಯಪಡುತ್ತಿದ್ದರು. ನನಗೆ ಎಲ್ಲಾ ಆಡಳಿತವನ್ನು ಮಾಲೀಕರು ವಹಿಸಿದ್ದುದರಿಂದ ನನ್ನ ಮಾತಿಗೆ ಬೆಲೆಕೊಟ್ಟು ನಟರುಗಳು ಸೇರುತ್ತಿದ್ದರು. ನಾನು ಹೊರಗಡೆ ಜನರ ವಿಶ್ವಾಸಕ್ಕೂ, ಪ್ರೀತಿಗೂ ಪಾತ್ರನಾಗಿದ್ದುದರಿಂದ ಮಾಲೀಕರು ಶಿವಮೊಗ್ಗ ಕ್ಯಾಂಪು ಬಿಡುವ ಸಮಯದಲ್ಲಿ ಜಿಂಕ್‌ಷೀಟ್‌ಗಳನ್ನು ಖರೀದಿಗೆ ತೆಗೆದುಕೊಂಡು ಹಣ ಸಾಲದೆ ಬಂದುದರಿಂದ ನನಗೆ ಯಾರಲ್ಲಿಯಾದರೂ ಇನ್ನೂರೈವತ್ತು ರೂಪಾಯಿಗಳನ್ನು ಕೈಬದಲು ತೆಗೆದುಕೊಂಡು ಬಾ, ಮುಂದಿನ ಕ್ಯಾಂಪಿನಲ್ಲಿ ಕೊಡೋಣವೆಂದು ಹೇಳಿದ ಮೇಲೆ ನಾನು ಶಿವಮೊಗ್ಗ ಸಣ್ಣತಮ್ಮಣ್ಣನವರಿಂದ ಇನ್ನೂರೈವತ್ತು ರೂಪಾಯಿಗಳನ್ನು ತಂದುಕೊಟ್ಟೆ. ಸಂಸ್ಥೆ

ಶಿವಮೊಗ್ಗೆಯಿಂದ ತರೀಕೆರೆಗೆ ಬಂದು ಮೂರು-ನಾಲ್ಕು ನಾಟಕಗಳಾಡಿದ ನಂತರ ನಾನು ಕೈಗಡ ತಂದಿದ್ದ ಹಣವನ್ನು ಸಣ್ಣ ತಮ್ಮಯ್ಯನವರಿಗೆ ಕೊಟ್ಟೆ. ಅದಕ್ಕೆ ಮಾಲೀಕರು ನನ್ನನ್ನು ಯದ್ವಾ ತದ್ವಾ ಹೀನಾಯವಾಗಿ ಮಾತನಾಡಿದರು. ಅಂದಿನಿಂದ ನನಗೆ ತುಂಬಾ ಮನಸ್ಸಿಗೆ ವ್ಯಥೆಯಾಗಿ ಎಷ್ಟು ನ್ಯಾಯ, ಧರ್ಮಗಳಿಂದ ನಡೆದರೂ ಇವರಲ್ಲಿ ನನಗೆ ಒಳ್ಳೆ ಹೆಸರು ಬರುವುದಿಲ್ಲ. ನಿಷ್ಠುರ ತಪ್ಪುವುದಿಲ್ಲ ಎಂದು ಗೊತ್ತಾಯಿತು. ಅದೂ ಅಲ್ಲದೆ ಮಾಲೀಕರಲ್ಲಿ ಸತ್ಯ, ಧರ್ಮ, ನೀತಿಗಳೆಲ್ಲಾ ಕ್ರಮೇಣ ದೂರವಾಗುತ್ತ ಬಂದಿತು. ಈ ಕಾರಣಗಳಿಂದ ನಟರುಗಳಿಗೆ ಬೇಸರವಾಗಿ ನಾವೇ ಕೆಲವರು ಸೇರಿ ಬೇರೆ ಸಂಸ್ಥೆ ಪ್ರಾರಂಭಿಸೋಣ, ಈ ದುರಾಚಾರಿಯ ಹತ್ತಿರ ಸೇವೆಮಾಡುವುದು ತರವಲ್ಲವೆಂದು ಕೆಲವು ನಟರು ಯೋಚಿಸಿ, ತರೀಕೆರೆಯ ಒಬ್ಬ ಸದ್ಗೃಹಸ್ಥನಲ್ಲಿ ಯೋಚಿಸಿ ಹಣದ ಏರ್ಪಾಡು ಮಾಡಿ ಪರದೆ ವಗೈರೆ ಬರೆಯಲು ಸಾಬ್ಜಾನ್ ಎಂಬ ಪೇಯಿಂಟರ್ ಗೊತ್ತುಮಾಡಿ ಅಂಕದ ಪರದೆ ಬರೆಯಲು ಗೊತ್ತುಮಾಡಿ ಮುಂಗಡ ಹಣವನ್ನೂ ಕೊಟ್ಟರು. ಕೆಲಸ ಮುಂದುವರಿಯಲು ಪ್ರಾರಂಭವಾಯಿತು.

ಚಂದಣ್ಣನವರ ಕೊನೆಯ ದಿನಗಳು

ನನ್ನ ಪತ್ನಿಯು ತೀರಿಹೋಗಿದ್ದರಿಂದ ಮಾಲೀಕರು ಶಿರಾದಲ್ಲಿ ಖರೀದಿಗೆ ಕೊಂಡುಕೊಂಡಿದ್ದ ಸುಂದರಮ್ಮ ಎಂಬ ನಟೀಮಣಿಯನ್ನು ನೀನು (ಲಗ್ನ) ಲೌಮ್ಯಾರೇಜ್ ಮಾಡಿಕೊ ಎಂದು ಪದೇ ಪದೇ ಹೇಳುತ್ತಿದ್ದರು. ನಾನು ನಿರಾಕರಿಸುತ್ತಲೇ ಬಂದೆ. ನನಗೂ, ನಟವರ್ಗದವರಿಗೂ ಮಾಲೀಕರಲ್ಲಿ ಅಂತರಂಗಶುದ್ಧವಾಗಿ ವಿಶ್ವಾಸವಿರಲಿಲ್ಲ. ಅಷ್ಟರಲ್ಲಿ ಸಂಸ್ಥೆ ಬೀರೂರಿಗೆ ಬಂದು ನಾಟಕವಾಡಲು ಪ್ರಾರಂಭಿಸಿತು. ನಾನು ಅಲ್ಲಿಂದ ೩-೪ ದಿನ ರಜಾ ತೆಗೆದುಕೊಂಡು ಊರಿಗೆ ಹೋಗಿದ್ದೆ. ನಾನು ಬರುವುದರೊಳಗೆ ಮಾಲೀಕರು ೬ ನಾಟಕಗಳನ್ನು ಆರುನೂರು ರೂಪಾಯಿಗಳಿಗೆ ಒಬ್ಬ ಹೆಣ್ಣು ಮಗಳಗೆ ಕನ್‌ಟ್ರಾಕ್ಟು ಕೊಟ್ಟು ಒಂದುನೂರು ರೂಪಾಯಿ ಮುಂಗಡ ತೆಗೆದುಕೊಂಡಿದ್ದರು. ನಾನು ಗುಬ್ಬಿಯಿಂದ ಬಂದು ಬೀರೂರು ಸ್ಟೇಷನ್ನಿನಲ್ಲಿಳಿದ ಕೂಡಲೆ ಬೀರೂರಿನವರೇ ಆಗಿದ್ದು, ಸಂಘದಲ್ಲಿದ್ದು ನನ್ನ ಆಪ್ತಗೆಳೆಯನಾದ ಗುಬ್ಬಿಶೆಟ್ಟಿಯಿಂದ ಆರುನೂರು ರೂ.ಗಳಿಗೆ ಆರು ನಾಟಕ ಕನ್‌ಟ್ರಾಕ್ಟ್ ಕೊಟ್ಟ ವಿಚಾರ ತಿಳಿಯಿತು. ಅಲ್ಲದೆ ಗುಬ್ಬಿಶೆಟ್ಟಿ ಅವರು ಇನ್ನೂ ಒಂದು ನೂರುರೂಪಾಯಿ ಹೆಚ್ಚಿಗೆ ಕೊಡುತ್ತೇವೆ,ನಮಗೇ ಕೊಡಿಸಿಕೊಡಿ ಎಂದು ಕೇಳಿದರು. ವಿಚಾರ ಮಾಡಿ ಹೇಳುತ್ತೇನೆಂದು ಹೇಳಿ ಮಾಲೀಕರಲ್ಲಿ ಹೋಗಿ ಕನ್‌ಟ್ರಾಕ್ಟ್ ಕೊಟ್ಟಿರುವ ವಿಚಾರ ನಿಜವೆಂದು ತಿಳಿದುಕೊಂಡು ಬೇರೆಯವರು ಒಂದುನೂರು ಹೆಚ್ಚಿಗೆ ಕೊಟ್ಟರೆ ಮೊದಲಿನ ಕನ್‌ಟ್ರಾಕ್ಟ್ ವಜಾ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಅವರು ಒಪ್ಪಿಕೊಂಡು ಅಡ್ವಾನ್ಸ್ ತೆಗೆದುಕೊಂಡು ಬರುವಂತೆ ಹೇಳಿ ಇನ್ನೂರುರೂಪಾಯಿ ಅಡ್ವಾನ್ಸ್ ತೆಗೆದುಕೊಂಡು ಮೊದಲಿನ ಕನ್‌ಟ್ರಾಕ್ಟ್ ಕ್ಯಾನ್ಸಲ್ ಮಾಡಿಯೇಬಿಟ್ಟರು-ಎರಡನೇ ಕನ್‌ಟ್ರಾಕ್ಟ್‌ನವರು ಚೆನ್ನಾಗಿ ಅಡ್ವರ್‌ಟೈಜು ಮಾಡಿದರು. ಮೊದಲನೇ ನಾಟಕಕ್ಕೆ ನೂರಿಪ್ಪತ್ತೈದು ರೂ. ಆಯಿತು. ಎರಡನೇ ನಾಟಕಕ್ಕೆ ನೂರೈವತ್ತು ರೂ. ಆಯಿತು. ಮೂರನೇ ನಾಟಕಕ್ಕೆ ಲಂಕಾದಹನ ನಾಟಕ ಹಾಕಿ, ಹಳ್ಳಿಹಳ್ಳಿಗೂ ಹ್ಯಾಂಡ್‌ಬಿಲ್ ಹಂಚಿ ಇನ್ನೂ ಜೋರಾಗಿ ಅಡ್ವರ್‌ಟೈಜು ಮಾಡಿದರು. ಆ ದಿನ ೩೦೦ ರೂಪಾಯಿಗಳಾಯಿತು. ಮಾಲೀಕರಿಗೆ ಕಲೆಕ್ಷನ್ ನೋಡಿ ಸಹನೆಯಾಗಲಿಲ್ಲ. ನಮ್ಮ ಜನಗಳೇ ನಮಗೆ ಮೋಸಮಾಡುತ್ತಾರೆ. ಗುಡಾರದಲ್ಲಿ ಕೂತು ಗುಡಾರದ ಹಗ್ಗವನ್ನೇ ಕೊಯ್ಯುತ್ತಾರೆ, ಲಿಂಗಾಯತರು ಕೊರಳುಕೊಯ್ಕರು, ನಂಬಿಕೆಗೆ ಅರ್ಹರೇ ಅಲ್ಲ ಎಂದು ಮಾತನಾಡಿಸಿದವರನ್ನೆಲ್ಲಾ ಬೈಯುತ್ತಾ, ತಪ್ಪಿಲ್ಲದವರನ್ನು ಬೈಯುತ್ತ ಹೊಡೆಯುತ್ತ ಬಂದರು. ಆ ದಿನ ಅವರ ಬಾಯಲ್ಲಿ ನಮ್ಮ ಮನೆಯ ಹೆಂಗಸರು ಮಕ್ಕಳುಗಳೆಲ್ಲರೂ ಆಕಾರವಿಲ್ಲದೆ ಪ್ರತ್ಯಕ್ಷವಾಗುತ್ತಿದ್ದರು. ಅವರ ಬಾಯಿಂದ ಹೊರಡುತ್ತಿದ್ದ ಅವಾಚ್ಯ ಶಬ್ದಗಳನ್ನು ವರ್ಣಿಸಲು ನನ್ನ ಲೇಖನಿಗೆ ಶಕ್ತಿಯಿಲ್ಲವಾಗಿ ಬಿಟ್ಟಿದ್ದೇನೆ.

ಇದಾದ ಹತ್ತು-ಹನ್ನೆರಡು ದಿನಗಳಲ್ಲಿ ಮತ್ತೊಂದು ಇಂತಹುದೇ ವಿಚಾರ ನಡೆಯಿತು. ಅದೇ ಬೀರೂರು ಕ್ಯಾಂಪಿನಲ್ಲಿ ಅದೇ ಊರಿನ ವರ್ತಕ ಗುಂಪಿನ ಅಮೆಚೂರ್‌ನವರಿಗೆ ನಮ್ಮ ನಾಟಕವಿಲ್ಲದ ದಿನ ನಮ್ಮ ನಾಟಕಮಂದಿರವನ್ನು ಒಂದುದಿನದ ಮಟ್ಟಿಗೆ ಇಪ್ಪತ್ತು ರೂಪಾಯಿ ಬಾಡಿಗೆಗೆ ಕೊಟ್ಟಿತ್ತು. ಆ ದಿವಸದ ಲೈಟುಗಳಿಗೆ

ಸೀಮೆಯೆಣ್ಣೆಯನ್ನು ಆ ತರುಣರೇ ತಂದುಕೊಡಬೇಕೆಂದು ನಾನೇ ಗೊತ್ತುಮಾಡಿದ್ದೆ. ಅದರಂತೆಯೇ ಲೈಟುಕೆಲಸದವನಿಗೂ ಹೇಳಿದ್ದೆ. ಇದೆಲ್ಲವೂ ಮಾಲೀಕರಿಗೆ ಗೊತ್ತಿದ್ದು ಅವರ ಅನುಮತಿಯಿಂದಲೇ ನಡೆದಿದ್ದವು. ಅದರಂತೆ ತರುಣರು ಸೀಮೆಯೆಣ್ಣೆಯನ್ನು ತಂದು ದೀಪಗಳಿಗೆ ಹಾಕಿಸಿ ಖಾಲಿಯಾದ ಡಬ್ಬವನ್ನು ಲೈಟ್ ಕೆಲಸದವನಿಂದ ಕೇಳಿ ವಾಪಸು ತೆಗೆದುಕೊಂಡುಹೋದರು, ಇದನ್ನು ತಿಳಿದ ಮಾಲೀಕರು ನನ್ನನ್ನೂ, ಲೈಟು ಕೆಲಸದವನನ್ನೂ ವಾಚಾಮಗೋಚರವಾಗಿ ಬೈದು ಅಷ್ಟಾರ್ಚನೆ ಮಾಡಿ ಮುಗಿಯಿಸಿ ಲೈಟು ಕೆಲಸದವನಿಗೆ ಐದು ರೂ. ದಂಡ ಹಾಕಿದರು. ಅಂದಿನಿಂದ ಈ ನೀಚವೃತ್ತಿಯು ಖಂಡಿತವಾಗಿ ಬೇಡವೆಂದು ನಿರ್ಧರಿಸಿದೆನು.

ಕೆಲವು ದಿನಗಳಲ್ಲಿ ಮಾಲೀಕರು ದೇಹಾಲಸ್ಯದಿಂದ ಗುಬ್ಬಿಗೆ ಹೋದರು. ಅವರು ಹೋದ ಒಂದು ವಾರದಲ್ಲಿ ಸಂಸ್ಥೆ ದಾವಣಗೆರೆ ಕ್ಯಾಂಪು ಮಾಡಿತು. ಆಗ ಸದಾರಮೆ, ಪ್ರಹ್ಲಾದಚರಿತ್ರೆಯೇ ಮುಖ್ಯ ನಾಟಕಗಳಾಗಿದ್ದವು. ಮದ್ರಾಸಿನ ಗೋವಿಂದಸ್ವಾಮಿ ನಾಯಕ್‌ರವರಿಗಾಗಿ ಹಾಕಿಸಿದ್ದ ಧನಲಕ್ಷ್ಮಿ ಥಿಯೇಟರನ್ನು ಬಾಡಿಗೆಗೆ ತೆಗೆದುಕೊಂಡು ಅದರಲ್ಲಿ ನಾಟಕವಾಡುತ್ತಿದ್ದೆವು. ಹಿಂದೆ ಬೀರೂರಿನ ಕನ್‌ಟ್ರಾಕ್ಟು ವಿಚಾರ, ಸೀಮೆಯೆಣ್ಣೆ ಖಾಲಿಡಬ್ಬದ ವಿಚಾರ ಇವುಗಳಲ್ಲಿ ನಾವು ನ್ಯಾಯವಾಗಿದ್ದರೂ ನಮ್ಮಗಳನ್ನು ಹೀನಾಯವಾಗಿ ಅಂದು ಲೈಟಿನವನಿಗೆ ದಂಡಹಾಕಿದ್ದುದು, ಮಾಲೀಕರ ವರ್ತನೆ ಇವುಗಳಿಂದ ಶೇ. ೯೦ ಭಾಗ ಜನರಿಗೆ ಮಾಲೀಕರಲ್ಲಿ ಅವಿಶ್ವಾಸಮೂಡಿತು. ಈಗಿನ ಕಾಲವಾಗಿದ್ದಿದ್ದರೆ ಅನೇಕ ಸಾರಿ ಹರತಾಳ (ಸ್ಟ್ರೈಕು)ವಾಗುತ್ತಿತ್ತು. ಆದ್ದರಿಂದ ಕೆಲವು ನಟರುಗಳು ಹಿಂದೆ ತರೀಕೆರೆಯಲ್ಲಿ ಸೀನರಿಗಳನ್ನು ಬರೆಸಲು ತ್ವರೆಮಾಡಿದರು. ಈ ಸಮಾಚಾರ ಸಂಸ್ಥೆಯಲ್ಲಿಯೇ ಇದ್ದ ಮೇಲ್ವಿಚಾರಣೆಯ ಜೈಕುಮಾರಪ್ಪನವರ ಮಕ್ಕಳಾದ ನಾಗರಾಜಪ್ಪನವರು ತಂದೆಯವರ ಡ್ಯೂಟಿಯಲ್ಲಿದ್ದುದರಿಂದ ಅವರಿಗೆ ತಿಳಿಯಿತು. ಅವರು ಮಾಲೀಕರಿಗೆ ನಮ್ಮ ಸಂಸ್ಥೆಯ ನಟವರ್ಗದವರು ಬೇರೆ ಸಂಸ್ಥೆಯನ್ನು ಬಿಟ್ಟು ಹೋಗುತ್ತಾರೆ, ನಮ್ಮ ಸಂಸ್ಥೆ ಖಂಡಿತ ನಿಂತುಹೋಗುವುದರಲ್ಲಿ ಏನೇನೂ ಸಂಶಯವಿಲ್ಲ. ಇದಕ್ಕೆಲ್ಲಾ ಮುಖ್ಯಕಾರಣ ವೀರಣ್ಣನೇ ಎಂಬುದಾಗಿ ಪ್ರತಿನಿತ್ಯವೂ ರಿಪೋರ್ಟು ಮಾಡುತ್ತಿದ್ದರು. ಮೊದಲೇ ಮಾಲೀಕರಿಗೆ ದೇಹಾಲಸ್ಯವಿದ್ದುದರಿಂದಲೂ, ನಟವರ್ಗದವರಲ್ಲಿ ಅವಿಶ್ವಾಸ ಮೂಡಿರುವುದರಿಂದಲೂ, ಮಾಲೀಕರ ದೊಡ್ಡ ಸಂಸಾರ ನಡೆಯಲು ನಾಟಕದ ವ್ಯವಹಾರವೇ ಮುಖ್ಯವಾದ ಆಧಾರವಾಗಿದ್ದುದರಿಂದಲೂ, ಈ ನಾಟಕ ಸಂಸ್ಥೆ ನಿಂತುಹೋದರೆ ಅವರ ಸಂಸಾರನೌಕೆ ನಡೆಯುವುದೇ ದುರ್ಲಭವೆಂಬ ಯೋಚನೆ ಬಲವಾಗಿ, ಖಾಯಿಲೆಯು ಉಲ್ಬಣವಾಗಿ ಕೂಡಲೇ ಗುಬ್ಬಿಗೆ ಬರುವಂತೆ ವೈರು ಮಾಡಿದರು. ನಾನು ಕೂಡಲೇ ಗುಬ್ಬಿಗೆ ಹೋಗಿ ಅಲ್ಲಿಯೇ ಒಂದು ವಾರ ಅವರ ಸೇವೆಯಲ್ಲಿಯೆ ಇದ್ದೆನು. ಆದರೆ ಅವರ ಖಾಯಿಲೆ ದ್ವಿಗುಣವಾಗಿ ದಿನೇ ದಿನೇ ಕ್ಷೀಣವಾಗಿ ನಶಿಸುತ್ತಾ ಬಂದು ಯಾವ ಔಷಧದಿಂದಲೂ ವಾಸಿಯಾಗದೆ ತಮ್ಮ ಐವತ್ತಾರನೇ ವಯಸ್ಸಿನಲ್ಲಿ ೨೬-೬-೧೯೧೭ರಲ್ಲಿ ಪರಂಧಾಮ ವನ್ನೈದಿದರು. ಮಾಲೀಕರ ಅಂತ್ಯಕರ್ಮಾದಿಗಳನ್ನು ನಡೆಸಿ, ಮುಂದಿನ ಏರ್ಪಾಡಿಗೆ ದಾವಣಗೆರೆ ಕ್ಯಾಂಪಿಗೆ ಬಂದು ಸೇರಿದೆನು.

ಜಂಟಿ ಮಾಲಿಕತ್ವ

ಮಾಲೀಕರಾದ ಚಂದಣ್ಣನವರು ಸ್ವರ್ಗಸ್ಥರಾದ ನಂತರ ಅವರ ಚಿರಂಜೀವಿಯಾದ ಪದ್ಮರಾಜಯ್ಯ ಎಂಬ ಹುಡುಗನನ್ನು ಕರೆದುಕೊಂಡು ಬಂದು ಕಬ್ಬಿಣದ ಪೆಟ್ಟಿಗೆಯಲ್ಲಿದ್ದ ಭಂಗಾರದ ಮೂರುಗೆಜ್ಜೆ ಅಡ್ಡಿಕೆ, ನಾಲ್ಕು ಜೊತೆ ಭಂಗಾರದ ಬಳೆ, ಕೆಂಪಿನ ಜಡೆಬಿಲ್ಲೆ, ಜರಿ ಸೀರೆಗಳು ಎಂಟು, ಒಟ್ಟು ಇಪ್ಪತ್ತು ಸವರನ್ ಭಂಗಾರದ ಸಾಮಾನುಗಳನ್ನು, ಇನ್ನೂರು ಜಿಂಕ್‌ಷೀಟುಗಳನ್ನೂ ದಾವಣಗೆರೆಯ ವರ್ತಕರಾದ ಬೇತೂರು ಗುರುಶಾಂತಪ್ಪ, ಮಡಿವಾಳಪ್ಪ, ಉರುವಕೊಂಡ ಚನ್ನಬಸಪ್ಪ, ಮತ್ತು ಮೋತಿ ದೊಡ್ಡಪ್ಪನವರ ಸಮಕ್ಷಮ ಮೇಲ್ಕಂಡ ಮಾಲೀಕರ ಮಗ ಪದ್ಮರಾಜಯ್ಯನ ವಶಕ್ಕೆ ಕೊಟ್ಟು, ಸಂಸ್ಥೆಯನ್ನು ನೀವೇ ವಹಿಸಿಕೊಳ್ಳಿರಿ, ನಾನು ಮತ್ತು ಕೆಲವರು ಬೇರೆ ಸಂಸ್ಥೆಯನ್ನು ಮಾಡಲು ಪ್ರಾರಂಭಿಸಿರುತ್ತೇವೆಂದು ಹೇಳಿದೆವು.

ಆಗ ಬಂದಿದ್ದ ವರ್ತಕಮಹಾಶಯರು ವೀರಣ್ಣನವರೇ, ಈಗ ನೀವುಗಳು ಈ ಸಂಸ್ಥೆಯನ್ನು ಬಿಟ್ಟು ಹೋದರೆ ಇವರ್‍ಯಾರೂ ನಡೆಸಿಕೊಂಡು ಹೋಗಲು ಸಾಧ್ಯವಿಲ್ಲ; ಸಂಸ್ಥೆ ನಿಂತುಹೋಗತ್ತೆಯಲ್ಲದೆ ಇದುವರೆಗೂ ನಡೆಸಿಕೊಂಡು ಬಂದದ್ದು ನಿಷ್ಪ್ರಯೋಜನ ವಾಗುತ್ತೆ. ಸುಮಾರು ಇಪ್ಪತ್ತೈದು ಮೂವತ್ತು ವರುಷಗಳಿಂದ ಬಾಳಿ ಬದುಕಿದ ನಾಟಕಸಂಸ್ಥೆ ಹೇಳಹೆಸರಿಲ್ಲದಂತಾಗುತ್ತೆಯಾಗಿ ಎಷ್ಟು ತೊಂದರೆಯಾದರೂ ಚಿಂತೆಯಿಲ್ಲ. ನೀವೇ ನಿಂತು ಸಂಸ್ಥೆಯನ್ನು ನಡೆಸಿಕೊಂಡು ಸಂಸ್ಥೆಯ ಹೆಸರನ್ನು ಕಳೆಯದೆ ಉಳಿಸಬೇಕೆಂದು ಬಹಳ ಒತ್ತಾಯ ಮಾಡಿ, ಮಾಲೀಕರ ಅಣ್ಣಂದಿರಾದ ಜೈಕುಮಾರಪ್ಪನವರಿಗೆ ಬಂದು ಭಾಗ, ಅವರೇ ಸಂಸ್ಥೆಯ ಮೇಲ್ವಿಚಾರಣೆ ನೋಡಿಕೊಳ್ಳಲಿ ಎಂದು ಹೇಳಿದ ಕೂಡಲೇ ಅವರ ಹೆಸರು ಹೇಳಿದರೆ- ನನಗೆ ಖಂಡಿತ ಇಷ್ಟವಿಲ್ಲ. ಅಪ್ಪಣೆಕೊಟ್ಟರೆ ನಾನು ಹೋಗುತ್ತೇನೆ, ಅವರ ಆಡಳಿತವಿದ್ದರೆ ನನಗೆ ಬೇಡವೆಂದು ಖಡಿತವಾಗಿ ಹೇಳಿದೆ-ನಟವರ್ಗದವರೆಲ್ಲರೂ ಹಾಗೇ ಹೇಳಿದರು. ಆಗ ಜೈಕುಮಾರಪ್ಪನವರ ಮಕ್ಕಳಿಗೆ ಒಂದು ಭಾಗವೆಂದೂ, ನನಗೆ ಒಂದು ಭಾಗವೆಂದು ಸಂಸ್ಥೆಯ ಸೀನರಿ ವಗೈರೆ ಸಾಮಾನುಗಳಿಗಾಗಿ ಒಂದು ತಿಂಗಳಿಗೆ ನೂರಿಪ್ಪತ್ತೈದು ರೂಪಾಯಿಗಳಂತೆ ಬಾಡಿಗೆ ಕೊಡಬೇಕೆಂದು ತೀರ್ಮಾನ ಮಾಡಿದರು.

ಆಗ ಸಂಸ್ಥೆಯಲ್ಲಿದ್ದ ಸೀನರಿ, ಇತರೆ ಸಾಮಾನುಗಳೆಂದರೆ:-

ಒಂದು ಸೂತ್ರಧಾರಿ ಪರದೆ	ನಾಲ್ಕು ಗ್ಯಾಸ್ ಲೈಟು
ಒಂದು ಅಂತಃಪುರ	ನಾಲ್ಕು ಕತ್ತಿ
ಒಂದು ಉದ್ಯಾನವನ	ಒಂದು ಲೆಗ್ ಹಾರ್ಮೋನಿಯಂ
ಒಂದು ದರ್ಬಾರ್	ಹತ್ತು-ಹದಿನೈದು ಕೆಲವು ಬಿಳಿ ಡ್ರೆಸ್
ಒಂದು ಕಾಡು ಪರದೆ.	ಹತ್ತು ಹದಿನೈದು ಮಹಾರಾಷ್ಟ್ರ ರೀತಿ ಡ್ರೆಸ್
ಐದು ಜೊತೆ ವಿಂಗ್ಸ್‌ಗಳು	ನಾಲ್ಕು-ಐದು ಫುಲ್ ಟೋಪನ್
ಎರಡು ಜೊತೆ ಕಟಕಟೆ	ನಾಲ್ಕು-ಐದು ಹಾಫ್ ಟೋಪನ್
	ಹನ್ನೆರಡು ಸುರುವಾಲ್
	ಮೂರು ರಾಕ್ಷಸರ ಡ್ರೆಸ್ಸು

ಐದಾರು ಸಾಧಾರಣ ಸೀರೆ, ಎಂಟು ಸೊಂಟದ ಬೆಲ್ಟು, ಡವಾಲಿಗಳು, ಐದು-ಆರು ಜೊತೆ ಹಳೆ ಚಂಕಿ ಸಾಮಾನುಗಳಿದ್ದುವು. ಇವೆಲ್ಲವನ್ನೂ ನಾಲ್ಕು ಐದು ಜಾಯಿಕಾಯಿ ಪೆಟ್ಟಿಗಳಲ್ಲಿಟ್ಟು ನಮ್ಮ ಸುಪರ್ದು ತೆಗೆದುಕೊಂಡು ಜೈಕುಮಾರಪ್ಪನವರನ್ನೂ, ಪದ್ಮರಾಜಯ್ಯನವರನ್ನೂ ಊರಿಗೆ ಕಳುಹಿಸಿಕೊಟ್ಟೆವು.

ಜೈಕುಮಾರಪ್ಪನವರ ಮಕ್ಕಳಾದ ನಾಗರಾಜೈಯ್ಯನವರು ಮಾಲೀಕರಿಗೆ ಅಡಿಗೆ ಮಾಡಿಕೊಂಡು ೩-೪ ವರ್ಷದಿಂದ ಸಂಸ್ಥೆಯ ಜೊತೆಯಲ್ಲಿಯೇ ಇದ್ದವರು. ಅವರೂ ಮತ್ತು ನಾನು ಮೇಲೆ ವಿವರಿಸಿದ ಸಾಮಾನುಗಳನ್ನು ನಮ್ಮ ವಶಕ್ಕೆ ತೆಗೆದುಕೊಂಡು ಜುಲೈ ೧೩, ೧೯೧೭ರಿಂದ ಮಾಲೀಕರಾದೆವು.

ತಾ. ೧-೮-೧೯೧೭ರಿಂದ ನಾಟಕವಾಡಲು ಪ್ರಾರಂಭಿಸಿ ಹಾವೇರಿ ಕ್ಯಾಂಪು ಮಾಡಿದೆವು. ಸಂಸ್ಥೆಯ ಅಭಿವೃದ್ಧಿಯನ್ನು ಮಾಡಬೇಕೆಂದು ಯೋಚಿಸಿ ಹೊಸದಾಗಿ ಪ್ರಭಾಮಣಿ ವಿಜಯ ನಾಟಕ ಕಲಿತು ಪುನಃ ದಾವಣಗೆರೆ ಕ್ಯಾಂಪನ್ನೇ ಮಾಡಿದೆವು ಡಿಸೆಂಬರ್ ೨೦-೧೯೭೧ರಲ್ಲಿ ವೀರಶೈವ ಮಹಾಸಭೆಯು ಶ್ರೀ ಪಿ. ಮಹದೇವಯ್ಯನವರ ನೇತೃತ್ವದಲ್ಲಿ ನಡೆಯುವ ಸಂದರ್ಭ ಬಂದಿತು. ಆಗ ಚಿತ್ರದುರ್ಗದ ಜಗದ್ಗುರುಗಳಾದ ಶ್ರೀ ಮುರುಘ ರಾಜೇಂದ್ರ ಸ್ವಾಮಿಯವರೂ ದಯಮಾಡಿಸಿ ಬಹು ಜನ ಸೇರಿದ್ದರು. ಅದೇ ಭರವಸೆಯ ಮೇಲೆ, ಉತ್ಪತ್ತಿ ಚೆನ್ನಾಗಿ ಆಗುತ್ತದೆಂದೇ ಅಲ್ಲಿಗೆ ಬಂದಿದ್ದೆವು. ದೀರ್ಘಕಾಲ ಅಲ್ಲಿಯೇ ನಿಂತು ಕಂಪನಿಯ ಅವ್ಯವಸ್ಥೆಯನ್ನು ಸರಿಪಡಿಸಿಕೊಂಡೆವು. ದಾವಣಗೆರೆ ವ್ಯಾಪಾರಸ್ಥಳವಾದ್ದರಿಂದ ರಾತ್ರಿ ಹತ್ತೂವರೆಗೆ ನಾಟಕವಾರಂಭಿಸಿ ಬೆಳಗಿನ ನಾಲ್ಕು-ನಾಲ್ಕುವರೆ ಗಂಟೆಗೆ ಮುಗಿಸುತ್ತಿದ್ದೆವು.

ಹುಬ್ಬಳ್ಳಿ, ಧಾರವಾಡ, ಬಾಗಲಕೋಟೆ, ಗದಗ, ಬಿಜಾಪುರ, ಬೆಳಗಾಂ, ಸೊಲ್ಲಾಪುರದ ಕಡೆಗಳಿಂದ ಬಹುಜನರು ಬಂದು ಸೇರಿದ್ದರು. ಅಲ್ಲದೆ ಸಿರಹಟ್ಟಿ ವೆಂಕೋಬರಾಯರ ಶ್ರೀ ಲಕ್ಷ್ಮೀ ಪ್ರಾಸಾದಿಕ ಸಂಸ್ಥೆ ಬಂದು ಹೊಸದಾಗಿ ಕೃಷ್ಣಲೀಲಾ ಪೌರಾಣಿಕ ನಾಟಕವನ್ನು ಹೊಸ ಸೀನರಿ, ಹೊಸ ಡ್ರೆಸ್ಸುಗಳಿಂದಲೂ ತಯಾರ್ಮಾಡಿಕೊಂಡು ಬಂದು ಆಡಲುಪಕ್ರಮಿಸಿದರು. ಹೊಸ ನಾಟಕವಾದುದರಿಂದ ಪ್ರೇಕ್ಷಕರ ಪ್ರೋತ್ಸಾಹ ಚೆನ್ನಾಗಿತ್ತು. ನಮ್ಮಲ್ಲಿ ಸೀನರಿಗಳು ನವೀನರೀತಿಯಲ್ಲಿಲ್ಲವಾದ್ದರಿಂದಲೂ, ೪-೫ ತಿಂಗಳಿಂದಲೂ ಇದ್ದು ಸ್ಥಳದ ಮಹಾಜನಗಳು ಹೆಚ್ಚಾಗಿ ನೋಡಿದುದ್ದರಿಂದ ಹೆಚ್ಚಿಗೆ ಪ್ರೋತ್ಸಾಹ ದೊರೆಯಲಿಲ್ಲ. ಆದ್ದರಿಂದ ಮುಂದೆ ಎಳ್ಳು ಅಮಾವಾಸ್ಯೆ ಜಾತ್ರೆಗೆ ತೀರ್ಥಹಳ್ಳಿಗೆ ಹೋಗಿ ಅಲ್ಲಿಂದ ಮುಂದೆ ಉಡುಪಿ, ಮಂಗಳೂರು ಕಡೆ ಹೋಗಬೇಕೆಂದು ಕುತೂಹಲದಿಂದ ನನ್ನ ಕೇವಲ ಸ್ನೇಹಿತರಾದ ಶ್ರೀ ಬೇತೂರು ಚನ್ನಬಸಪ್ಪನವರಲ್ಲಿ ಏಳುನೂರೈವತ್ತು ರೂ.ಗಳನ್ನು ಸಾಲವಾಗಿ ತೆಗೆದುಕೊಂಡೆನು. ಅದನ್ನು ತೀರ್ಥಹಳ್ಳಿಯಲ್ಲಿ ಥಿಯೇಟರ್ ಹಾಕಲು, ಪ್ರಯಾಣದ ಖರ್ಚು ಇವುಗಳಿಗಾಗಿ ಉಪಯೋಗಿಸಿದೆ. ತೀರ್ಥಹಳ್ಳಿಯಲ್ಲಿ ತುಂಬಾ ಛಳಿಯೆಂದು ಅನುಭವವಾಗಿದ್ದುದರಿಂದಲೂ ದಾವಣಗೆರೆ ಕಂಬಳಿಗಳು ಹೆಸರುವಾಸಿಯಾಗಿದ್ದುದರಿಂದಲೂ ಸಂಘದ ಪ್ರತಿಯೊಬ್ಬರಿಗೂ

ಒಂದೊಂದುಕಂಬಳಿಯನ್ನು ಕೊಡಿಸಿದೆ. ತೀರ್ಥಹಳ್ಳಿಯಲ್ಲಿ ಥಿಯೇಟರ್ ಹಾಕಲು ಆರುನೂರು ರೂ.ಗಳನ್ನು ಕನ್‌ಟ್ರಾಕ್ಟ್ ಮಾತನಾಡಿದೆ. ದಾವಣಗೆರೆಯಲ್ಲಿ ಪುರಜನರು ಕೊನೇ ದಿವಸ 'ಪ್ರಭಾಮಣಿ ವಿಜಯ' ಆಡಿಸಿ ಮೂರು ತೊಲದಭಂಗಾರದ ಮೆಡಲನ್ನು ಆಶೀರ್ವಾದ ಮಾಡಿ ಬೀಳ್ಕೊಟ್ಟರು. ಅದೇ ಸಮಯದಲ್ಲಿ ನಾನು ಪೂನಾ ನಗರಕ್ಕೆ ಹೋಗಿ ಹೊಸ ಸೀನರಿಗಳನ್ನು ಮಾಡಿಸಲು ದೇವದಾರು ರೀಪರ್‌ಗಳನ್ನು, ೪ ಗ್ಯಾಸ್ ಲೈಟುಗಳನ್ನು, ಕೆಲವು ಡ್ರೆಸ್ಸುಗಳನ್ನು ತೆಗೆದುಕೊಂಡು ಬಂದೆನು.

ತೀರ್ಥಹಳ್ಳಿಯಲ್ಲಿ ಪ್ರಹ್ಲಾದಚರಿತ್ರೆ, ಸುಧದ್ರಾಪರಿಣಯ, ಸದಾರಮೆ, ಪ್ರಭಾಮಣಿ ವಿಜಯ, ಗುಲೇಬಕಾವಲಿ ನಾಟಕಗಳನ್ನಾಡಿದೆವು. ಉತ್ಪತ್ತಿ ಐನೂರು, ಆರು ನೂರು ರೂಪಾಯಿಗಳಂತೆ ಆಯಿತು. ನಮ್ಮ ಸಂಘಕ್ಕೆ ಅದುವರೆಗೆ ಅಷ್ಟು ಹೆಚ್ಚು ಉತ್ಪತ್ತಿ ಆಗಿರಲೇ ಇಲ್ಲ. ಆ ಉತ್ಪತ್ತಿಯನ್ನು ನೋಡಿ ನನಗಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಈ ಆನಂದದ ಭರದಲ್ಲಿ ಸಂಸ್ಥೆಯನ್ನು ಅಭಿವೃದ್ಧಿಗೆ ತರಲೇಬೇಕೆಂಬ ಕುತೂಹಲ, ಉತ್ಸಾಹ ತುಂಬಾ ಹೆಚ್ಚಿತು. ಆಗ ಗುಬ್ಬಿಯಿಂದ ಚನ್ನಬಸಣ್ಣನೆಂಬ ಪೇಯಿಂಟರ್‌ನ್ನು ಕರೆಸಿ ಅಂಕದ ಪರದೆ (ಗಂಗಾವತರಣ) ಬರೆಯಲು ಕೊಟ್ಟದ್ದಾಯ್ತು. ತೀರ್ಥ ಹಳ್ಳಿಯಿಂದ ಕ್ಯಾಂಪು ಮುಗಿಯಿಸಿಕೊಂಡು ಕುಂದಾಪುರದಲ್ಲಿ ಥಿಯೇಟರ್ ಹಾಕಲು ದುಗ್ಗಪ್ಪ ಎಂಬುವನಿಗೆ ૩೦೦ ರೂ.ಗಳಿಗೆ ಹಾಕಿಕೊಡುವಂತೆ ಗೊತ್ತುಮಾಡಿದೆವು. ಅಲ್ಲದೆ ಮಂಗಳೂರು ಕಡೆ ಹೋಗಲು ನಟರುಗಳು ಸರಿಯಾದವರಿರಬೇಕೆಂದು ಬೆಂಗಳೂರಿನ ನಾಗೇಶರಾಯರ ಜೀವಾನಂದ ಕಂಪನಿಯು ನಿಂತುಹೋಗಿದ್ದುದರಿಂದ ಅಲ್ಲಿಯೇ ಇದ್ದ ಹೊದಳಿ ನಾರಾಯಣರಾವ್ ಎಂಬ ರಾಣೇಪಾರ್ಟಿನ ನಟನನ್ನು ತಿಂಗಳೊಂದಕ್ಕೆ ಐವತ್ತು ರೂಪಾಯಿಗಳಂತೆ ಸಂಬಳ ಗೊತ್ತುಮಾಡಿ ಕಂಪನಿಗೆ ಕರೆಯಿಸಿಕೊಂಡೆ. ಆತನಿಗೆ ಆಗ ಸುಮಾರು ೨೦ ವರ್ಷ ವಯಸ್ಸು, ಒಳ್ಳೆ ಮಧುರವಾದ ಕಂಠ, ಸಾಧಾರಣ ರೂಪು, ಹೆಣ್ಣುಪಾತ್ರಕ್ಕೆ ತಕ್ಕಂತೆ ಆಕಾರ. ಕುಂದಾಪುರಕ್ಕೆಹೋಗುವಾಗ್ಗೆ ಸಂಸ್ಥೆಯಲ್ಲಿ ನಲವತ್ತು-ನಲವತ್ತೈದು ಜನರಿದ್ದರು. ಕುಂದಾಪುರದಲ್ಲಿ ಉತ್ಪತ್ತಿ ೨೦೦-೨೫೦ರಂತೆ ಆಗುತ್ತಿದ್ದು ಅಲ್ಲಿಯೇ ತಿಂಗಳಿಗೆ ಹನ್ನೆರಡು-ಹದಿಮೂರು ನಾಟಕವನ್ನಾಡಿಕೊಂಡು, ಅಂಕದ ಪರದೆ, ಕೆಲವು ಹೊಸ ಸೀನರಿಗಳನ್ನು ತಯಾರ್‍ಮಾಡಿಕೊಂಡೆವು.

ದಕ್ಷಿಣ ಕನ್ನಡದಲ್ಲಿ

ಅನಂತರ ಉಡುಪಿ ಕ್ಯಾಂಪು ನಿಷ್ಕರ್ಷೆ ಮಾಡಲು ಹೊರಟು ನಾನು ನಾಗರಾಜಯ್ಯ ಇಬ್ಬರೂ ದೋಣಿಯನ್ನು ಹತ್ತಿದೆವು. ಕುಂದಾಪುರದಿಂದ ಉಡುಪಿಗಾಗಲೀ, ಉಡುಪಿಯಿಂದ ಮಂಗಳೂರಿಗಾಗಿಲೀ ಬರಬೇಕಾದರೆ ಮಧ್ಯೆ ಮಧ್ಯೆ ನಾಲ್ಕು-ಐದು ನದಿಗಳು ಸಿಕ್ಕುತ್ತವೆ. ಸೇತುವೆಗಳು ಆಗ ಇನ್ನೂ ತಯಾರಾಗಿರಲಿಲ್ಲವಾದ್ದರಿಂದ ಸಾಮಾನುಗಳು. ಮನುಷ್ಯರು ದೋಣಿಯ ಮೂಲ್ಕವೇ ಪ್ರಯಾಣ ಮಾಡಬೇಕಾಗಿತ್ತು. ಅಂತೆಯೇ ನಾವು ದೋಣಿ ಹತ್ತಿದ್ದಾಯ್ತು. ಸಮುದ್ರರಾಜ ತಾನೇ ತಾನು ತಾಂಡವವಾಡುತ್ತಿದ್ದಾನೆ. ಆ ಬೆಳದಿಂಗಳಿಗೂ, ಸಮುದ್ರರಾಜನು ಆನಂದದಿಂದ ಭೋರ್ಗರೆಯುವುದಕ್ಕೂ ದೃಶ್ಯ ಬಹುರಮಣೀಯವಾಗಿದ್ದು ನಾವು ತುಂಬಾ ಉಲ್ಲಾಸದಿಂದ ಅಲೆಗಳು ಮೇಲೆ ಮೇಲೆ ತುಂಬಾ ರಭಸದಿಂದ ಬರುವುದನ್ನು ನೋಡುತ್ತಾ ಹೋಗುತ್ತಿದ್ದೆವು. ದೋಣಿಯಲ್ಲಿ ಕುಳಿತು ಸಮುದ್ರದ ನೀರಿನೊಳಗೆ ಕೈಯಾಡಿಸುತ್ತಾ ಎಂದೆಂದಿಗೂ ಕಾಣದ ಆನಂದಸಾಗರದಲ್ಲಿಯೇ ತೇಲಿಹೋಗುತ್ತಿದ್ದಂತೆ, ಅಕಸ್ಮಾತ್ ಒಂದು ದೊಡ್ಡ ಗಾಳಿಯು ಬೀಸಿ ನಾವು ಕುಳಿತಿದ್ದ ದೋಣಿ ಕೊಂಚ ಹೊಯ್ದಾಡಲು ಪ್ರಾರಂಭವಾಯ್ತು. ತಕ್ಷಣವೇ ನಮ್ಮ ಆನಂದವೆಲ್ಲವೂ ಸಮುದ್ರದೊಳಗೆ ಮುಳುಗಿ, ತುಂಬಾ ಭಯಪಟ್ಟು ನಾವೆಲ್ಲಿ ಸಮುದ್ರದ ಪಾಲಾಗುತ್ತೇವೆಯೋ ಎಂಬ ಹೆದರಿಕೆಯಿಂದ ಒಬ್ಬರನ್ನೊಬ್ಬರು ತಬ್ಬಿಕೊಂಡು ಕಿರುಚಿಕೊಂಡುಬಿಟ್ಟೆವು-ಆಗ ದೋಣಿ ನಡೆಸುತ್ತಿದ್ದ ಅಂಬಿಗನು 'ಏಕೆ ಹೆದರ್‍ತೀರಿ? ನೀವು ಯಾವಾಗ್ಲೂ ದೋಣೀಲಿ ಹೋಗೀಲ್ಲಾಂತ ಕಾಣ್ತೈತೆ ನೀವು ಧೈರ್ಯವಾಗಿ ಇರಿ ಏನೂ ಆಗೋಲ್ಲ' ಎಂದು ಹೇಳಿದ. ನಮಗೇನೋ ತುಂಬಾ ಭಯದಿಂದ ಉಟ್ಟಿದ್ದ ಪಂಚೆಯೆಲ್ಲಾ ನೆನೆದುಹೋಗಿತ್ತು. ನಂತರ ಸುರಕ್ಷಿತವಾಗಿ ಉಡುಪಿಯನ್ನು ಸೇರಿ ಥಿಯೇಟರ್ ಹಾಕಿಸಿ ನಾಟಕಗಳನ್ನಾಡಲು ಪ್ರಾರಂಭಿಸಿದೆವು. ಅಲ್ಲಿಯ ಆರಾಧ್ಯದೇವತೆಯಾದ ಶ್ರೀ ಕೃಷ್ಣಪರಮಾತ್ಮನ ಆಶೀರ್ವಾದದಿಂದ ನಾಟಕಗಳಿಗೆ ಒಳ್ಳೆಯ ಹೆಸರು, ಕೀರ್ತಿಯು ಲಭಿಸಿತು. ಆ ಊರಿನ ಗಣ್ಯಪುರುಷರಾದ ಖಾನ್ ಬಹದ್ದೂರ್ ಸಾಹೇಬರಿಂದ (ಹೆಸರು ನೆನಪಿಲ್ಲ) ನನಗೆ ಮೂರು ಸವರನ್ ತೂಕದ ಮೆಡಲ್ ಬಹುಮಾನವಾಗಿ ದೊರಕಿತು. ಅದೇ ಊರಿನಲ್ಲಿ ಸಂಘಕ್ಕೆ ೪ ಜನ ನಟರು ಸೇರಿದರು. ಯು.ಕೆ. ವಾಸುದೇವರಾವ್, ಕೆ. ಗೋಪಾಲಾಚಾರ್ಯರು, ಸಕ್ಕರೆ ವಾಸುದೇವರಾಯರು ಮತ್ತು ಬಾಲ ಪಾರ್ಟಿಗೆ ಸುಂದರ ಎಂಬ ಹುಡುಗ. ಇವರನ್ನು ಸೇರಿಸಿಕೊಂಡು ಮುಂದೆ ಮಂಗಳೂರು ಕ್ಯಾಂಪು ಹಾಕಿದೆವು. ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರಸ್ಥಾನ-ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ರೂಲ್ಸು ವಗೈರೆ ತುಂಬಾ ಕಠಿಣವಾಗಿತ್ತು. ದಕ್ಷತೆಯುಳ್ಳ ಮ್ಯಾನೇಜರ್ ನಮ್ಮಲ್ಲಿದ್ದುದರಿಂದ ಯಾವ ತೊಂದರೆಯೂ ಇಲ್ಲದೆ ನಾಟಕಗಳು ನಡೆಯುತ್ತಿದ್ದುವು-ನಾಟಕಗಳು ಚೆನ್ನಾಗಿದ್ದರೂ ಅವಕ್ಕೆ ತಕ್ಕಂತೆ ಡ್ರೆಸ್ಸುಗಳು ನಮ್ಮಲ್ಲಿರಲಿಲ್ಲ.

ಆಗ ಮಂಗಳೂರಿನಲ್ಲಿ ಮಾಪಿಳ್ಳೆ ಜಾತಿಯ ಛಾಬು ಸಾಹೇಬರೆಂಬ ಧನಿಕರು ಒಂದು ನಾಟಕ ಸಂಸ್ಥೆಯನ್ನು ದೊಡ್ಡದಾಗಿ ತಯಾರ್ಮಾಡಿ ಉಡುಪಿಯಲ್ಲಿ ಖಾನ್

ಬಹದ್ದೂರ್ ಸಾಹೇಬರ ಸಮಕ್ಷಮದಲ್ಲಿಯೂ, ಕುಂದಾಪುರದಲ್ಲಿಯೂ ಆಡಿ ಮಂಗಳವನ್ನೂ ಹಾಡಿ ಮುಗಿಸಿಸೀನರಿ, ಡ್ರೆಸ್ಸು ವಗೈರೆ ಎಲ್ಲಾ ಸಾಮಗ್ರಿಗಳನ್ನು ಅವರ ಮನೆಯ ಗೌಡನ್‌ನಲ್ಲಿ ತುಂಬಿ, ಗತವೈಭವವನ್ನು ಸ್ಮರಿಸಿಕೊಂಡು ಆನಂದಪಡುತ್ತಿದ್ದರು. ಆಗಿನ ಕಾಲದಲ್ಲಿಯೇ ಅವರು ನಾಟಕದ ಸಾಮಾನುಗಳನ್ನು ತಯಾರಿಸಲು ೫೦-೬೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದರು. ನಮ್ಮ ಸಂಘದಲ್ಲಿ ಸರಿಯಾದ ಡ್ರೆಸ್ ಇಲ್ಲದ್ದರಿಂದ ನಾನೇ ಖುದ್ದು ಹೋಗಿ ನಾವು ನಾಟಕವಾಡಲು ಡ್ರೆಸ್ ಸಹಾಯ ಮಾಡಬೇಕೆಂದು ಕೇಳಿದೆ. ಒಡನೆಯೇ ಸಂತೋಷದಿಂದ ಏನು ಬೇಕಾದರೂ ತೆಗೆದುಕೊಂಡು ಹೋಗಲು ಸಂಕೋಚ ಪಡಬೇಡಿರೆಂದು ಹೇಳಿ ನಮಗೆ ತುಂಬಾ ಸಹಾಯ ಮಾಡಿದರು. ಅಲ್ಲದೆ ಮುಂದಿನ ಕ್ಯಾಂಪು ಕೊಯಮತ್ತೂರಿಗೂ ಸಹ ಡ್ರೆಸ್ಸುಗಳನ್ನು ಕೊಟ್ಟು ಸಹಾಯ ಮಾಡಿದುದನ್ನೂ ನಾನು ಎಂದಿಗೂ ಮರೆಯಲಾರೆ.

ಇದೇ ಮಂಗಳೂರು ಕ್ಯಾಂಪಿನಲ್ಲಿಯೇ ನಮ್ಮ ಸಂಘದವರೆಲ್ಲರೂ ಯೋಚನೆ ಮಾಡಿ, ನನ್ನ ಅನುಮತಿಯನ್ನು ಸಹ ಪಡೆದು ಕಂಪನಿಯಲ್ಲಿಯೇ ಏಳು ವರುಷದ ಮಗುವಿನಿಂದಲೂ ಬೆಳೆದು, ಗತಿಸಿದ ಮಾಲೀಕರ ಪ್ರೀತಿಗೆ ಪುತ್ರೀಸಮಾನವಿದ್ದು ಅವರ ಪ್ರೇರಣೆಯಿಂದಲೇ ಪಾತ್ರಗಳಿಗೆ ತಯಾರಾಗಿದ್ದ ಸುಂದರಮ್ಮ ಎಂಬ ನಟಿಯನ್ನು ಹಾಲಿ ಮಾಲೀಕರಾಗಿರುವ ಹಾಸ್ಯಪಾತ್ರಧಾರಿ ವೀರಣ್ಣನೆಂಬ ನಟನಿಗೆ ಸಂಘದವರು ಮತ್ತು ಆ ಊರಿನ ಅಂದರೆ ಮಂಗಳೂರಿನ ಸ್ನೇಹಿತರುಗಳು ಸೇರಿ ತುಂಬಾ ವೈಭವದಿಂದ ಗಾಂಧರ್ವ ವಿವಾಹವನ್ನು ನೆರವೇರಿಸಿದರು.

ನಮ್ಮ ಸಂಘದಲ್ಲಿ ಡ್ರೆಸ್ ಸರಿಯಾಗಿರಲಿಲ್ಲವಾದ್ದರಿಂದ ಮದ್ರಾಸಿನ ಡ್ರೆಸ್ ಮೇಕರ್ ಕ್ಯಾಟಲಾಗನ್ನು ನೋಡಿ ಸಾಚಾ ಚಂಕಿ ಕೋಟು ಒಂದಕ್ಕೆ ನೂರೈವತ್ತು ರೂ.ಗೆ ಆರ್ಡರ್ ಕೊಟ್ಟೆವು.

ಕರ್ಣಾಟಕದ ಹೊರಗೆ

ಮಂಗಳೂರು ಕ್ಯಾಂಪಿನಿಂದ ಕೊಯಮತ್ತೂರು ಕ್ಯಾಂಪು ಮಾಡಬೇಕೆಂದು ನಿರ್ಧರಿಸಿದೆನು. ಹಿಂದೆ ನಾವು ತೀರ್ಥಹಳ್ಳಿಯ ಕ್ಯಾಂಪು ಮಾಡಿ ಶ್ರೀವರದಾಚಾರ್ಯರ ಕಂಪನಿಯವರನ್ನು ಆಹ್ವಾನಿಸಿ ಅವರುಗಳು ಎಲ್ಲರೂ ತಮಗೆ ಅವಮಾನವಾಯಿತೆಂದು ಎದ್ದು ಹೋದ ಸಂದರ್ಭದಲ್ಲಿ ಮಾಲೀಕರ ರೀತಿನೀತಿಗಳು ಸರಿಯಿಲ್ಲವೆಂಬ ಕಾರಣದ ಮೇಲೆ ನಮ್ಮ ವ್ಯವಸ್ಥಾಪಕರಾಗಿದ್ದ ಎಸ್. ನಾಗೇಶರಾಯರು ಸಂಘವನ್ನು ಬಿಟ್ಟು ಹೋಗಿದ್ದರಿಂದಲೂ, ನನ್ನ ಭಾಗಸ್ಥನಾದ ನಾಗರಾಜಯ್ಯ ಹೊಟ್ಟೆನೋವಿನ ಬಾಧೆ ಸ್ಥಿರವಾಗಿ ನಿಂತದ್ದರಿಂದ ನಿದ್ರೆಗೆಡಲು ಸಾಧ್ಯವಾಗದೆ ಗುಬ್ಬಿಗೆ ಹೋಗಿ ಅಲ್ಲಿಯೇ ಇದ್ದುದರಿಂದಲೂ ಕೊಯಮತ್ತೂರಿಗೆ ನಾನೇ ಹೋಗಬೇಕಾಗಿ ಬಂತು. ಅಲ್ಲಿನ ವೆರೈಟಿ ಸಿನಿಮಾ ಮಾಲೀಕರಾದ ವಿನ್‌ಸೆಂಟ್ ಎಂಬುವರನ್ನು ನೋಡಿದೆ. ಅವರಿಗೆ ಕನ್ನಡ ಬರುತ್ತಿರಲಿಲ್ಲ. ನನಗೆ ಕನ್ನಡವಲ್ಲದೆ ಇಂಗ್ಲಿಷ್ ತಮಿಳು ಬರುತ್ತಿರಲಿಲ್ಲ. ಅವರಾದರೋ ಬಹಳ ಶಿಸ್ತಿನವರು, ಒಳ್ಳೆಯವರು. ನನ್ನ ವಿನಯಶೀಲತೆಗಳನ್ನು ನೋಡಿ ಒಂದು ಸಿನಿಮಾ ಷೋ ಆದನಂತರ ಥಿಯೇಟರನ್ನು ಒಂದು ನೂರು ರೂಪಾಯಿ ಬಾಡಿಗೆಗೆ ಒಂದು ಆಟವನ್ನು ಆಡಲು ಒಪ್ಪಿಕೊಟ್ಟರು. ಹಿಂದಿನ ವರ್ಷ ಅದೇ ಥಿಯೇಟರಿನಲ್ಲಿ ವರದಾಚಾರ್ಯರು ನಾಟಕಗಳನ್ನು ಆಡಿ ಕೀರ್ತಿಯನ್ನು ಸಂಪಾದಿಸಿ ಒಳ್ಳೆಯಹೆಸರು ಪಡೆದು ಹೋಗಿದ್ದುದರಿಂದ ಮೈಸೂರಿನ ಜನ ಒಳ್ಳೆಯವರೆಂದು ತಿಳಿದು ನಮಗೂ ಕೊಡಲೊಪ್ಪಿ ಒಂದು ಪಂಥವನ್ನು ಹಾಕಿದರು. ನಾಟಕವನ್ನು ಕಾಲಕ್ಕೆ ಸರಿಯಾಗಿ ಪ್ರಾರಂಭಿಸಿ, ಚೆನ್ನಾಗಿ ಆಡಿದರೆ ಮುಂದಕ್ಕೆ ಇನ್ನೂ ಕೆಲವುದಿನ ಕೊಡುವುದಾಗಿಯೂ, ಇಲ್ಲವಾದರೆ ಒಂದೇ ನಾಟಕಕ್ಕೆ ಮುಗಿಸಬೇಕೆಂದೂ ಹೇಳಿ ಮೊದಲನೆಯ ದಿನದ ಬಾಡಿಗೆಯನ್ನು ಮುಂಗಡವಾಗಿ ತೆಗೆದುಕೊಂಡು ರಸೀತಿ ಕೊಟ್ಟರು.

ತೀರ್ಥಹಳ್ಳಿ, ಕುಂದಾಪುರ, ಉಡುಪಿ, ಮಂಗಳೂರು ಈ ಕ್ಯಾಂಪುಗಳ ಸಂಚಾರ ಆರುತಿಂಗಳಾಗಿತ್ತು. ಆ ಸಮಯದಲ್ಲಿ ಹೊಸಪರದೆ, ಎರಡು ಸೀನರಿಗಳು, ಮದ್ರಾಸಿನಿಂದ ತಯಾರ್ಮಾಡಿಸಿ ತರಿಸಿದ್ದ ಹೊಸ ಡ್ರೆಸ್ಸು ಎಲ್ಲವೂ ಇದ್ದವು. ಅಲ್ಲದೆ ನಟರುಗಳೂ ಸಹ ಒಳ್ಳೆ ತರುಣವಯಸ್ಸಿನವರಾದುದರಿಂದಲೂ, ತುಂಬಾ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದೆವಾದುದರಿಂದ ನಾಟಕಗಳು ಚೆನ್ನಾಗಿ ಕಳೆಕಟ್ಟುತ್ತಿದ್ದವು. ಕೊಯಮತ್ತೂರಿನಲ್ಲಿ ಸಹ ಮೊದಲನೆ ನಾಟಕ ಸದಾರಮೆಯನ್ನೇ ಹಾಕಿದೆವು. ನಾಟಕ ಬಹಳ ಚೆನ್ನಾಗಿ ನಡೆಯಿತು. ಅಲ್ಲಿನ ಜನ ತಮಿಳು ನಾಡಿನವರಾದರೂ ತುಂಬಾ ಸಂತೋಷಪಟ್ಟರು. ವೆರೈಟಿ ಸಿನಿಮಾ ಮಾಲೀಕರಾದ ವಿನ್‌ಸೆಂಟ್‌ರವರು ನಾಟಕವನ್ನು ತುಂಬಾ ಮೆಚ್ಚಿಕೊಂಡು ನನಗೆ ಧನ್ಯವಾದಗಳನ್ನು ಹೇಳಿ, ನಿಮಗೆ ಎಷ್ಟು ದಿನಗಳು ಬೇಕಾದರೂ ಕೊಡುತ್ತೇನೆಂದು ಭರವಸೆಕೊಟ್ಟರು.

ಎರಡನೆಯ ದಿನ ಪ್ರಹ್ಲಾದಚರಿತ್ರೆ ನಾಟಕವನ್ನಾಡಿದೆವು.ಕಳೆದ ವರ್ಷ ವರದಾಚಾರ್ಯರು ಪ್ರಹ್ಲಾದಚರಿತ್ರೆ, ನಿರುಪಮೆ, ಶಾಕುಂತಲ ನಾಟಕಗಳನ್ನಾಡಿ ಕೀರ್ತಿ

ಸಂಪಾದಿಸಿದ್ದು ನಮಗೂ ಪ್ರೋತ್ಸಾಹ ದೊರಕಲು ಕಾರಣವಾಯಿತು. ಸಂಸ್ಥೆಯು ಪ್ರಾರಂಭವಾಗಿ ಮೂವತ್ತನಾಲ್ಕು ವರ್ಷಗಳಾದರೂ ಮೊದಲನೆಯ ನಾಟಕಕ್ಕೆ ಹದಿನೆಂಟು-ಇಪ್ಪತ್ತು-ಇಪ್ಪತ್ತೈದು ರೂ. ಚೆನ್ನಾಗಿ ಅಡ್ವರ್‌ಟೈಜು ಆದನಂತರ ನಲವತ್ತು ಐವತ್ತು ರೂಪಾಯಿಗಳ ಉತ್ಪತ್ತಿಯಾಗಿತ್ತು. ಜಾತ್ರೆ ಸಮಯದಲ್ಲಿ ತೀರ್ಥಹಳ್ಳಿಗೆ ನಾವುಹೋದಾಗ ಮಾತ್ರ ಐದುನೂರು-ಆರುನೂರರಂತೆ ಆಗಿತ್ತು. ಕೊಯಮತ್ತೂರಿನಲ್ಲಿ ಸದಾರಮೆಗೆ ಐದುನೂರು, ಪ್ರಹ್ಲಾದಚರಿತ್ರೆಗೆ ಆರುನೂರು ರೂ.ಆಗಿತ್ತು-ಹಿಂದೆ ಎಷ್ಟೋ ಬಾರಿ ನಾವು ನಾಟಕವೊಂದಕ್ಕೆ ನಲವತ್ತೈದು ಐವತ್ತು ರೂ.ಗಳಂತೆ ಗುತ್ತಿಗೆಗೆ ಕೊಟ್ಟಿರುವುದೂ ಉಂಟು. ತಿಂಗಳಿಗೆ ಹದಿಮೂರು ನಾಟಕಗಳ ಮೇಲೆ ಆಡುತ್ತಿರಲಿಲ್ಲ. ಮನೆ ಬಾಡಿಗೆ, ಪ್ರಯಾಣದ ಖರ್ಚು, ಊಟ ವಗೈರೆ ಎಲ್ಲ ಖರ್ಚುಗಳನ್ನು ಕನ್‌ಟ್ರಾಕ್ಟ್‌ದಾರರೇ ಕೊಡಬೇಕಾಗಿತ್ತು. ನಾಟಕಶಾಲೆ ಕಟ್ಟಲು ಡೇರಾಸಾಮಾನು ಸ್ವಂತವಾಗಿ ಮಾಡಿಕೊಂಡಿದ್ದರು. ಡೇರಾ ವಗೈರೆ ಸಂಘದಲ್ಲಿ ಜನಗಳೇ ಹಾಕುತ್ತಿದ್ದುರಿಂದ, ಡೇರಾ ಹಾಕುವಾಗ ಎಂಟು ಸೇರು ಅವಲಕ್ಕಿ, ಆರು ಸೇರು ಬೆಲ್ಲದ ಖರ್ಚಿನಲ್ಲಿ ಡೇರಾ ಹಾಕುವ ಕೆಲಸ ಮುಗಿದು ಹೋಗುತ್ತಿತ್ತು. ಆಗ್ಗೆ ಧಾರಣೆವಾಸಿಗಳು ಈಗಿನಂತರದೆ ತುಂಬಾ ಅಗ್ಗವಾಗಿರುತ್ತಿದ್ದವು. ಒಂದು ರೂಪಾಯಿಗೆ ಹದಿನಾರು ಸೇರು ಅವಲಕ್ಕಿ, ಒಂದು ರೂಪಾಯಿ ನಾಲ್ಕಾಣೆಗೆ ಒಂದು ಮಣ ಬೆಲ್ಲ, ಒಬ್ಬರಿಗೆ ಒಂದು ದಿನಕ್ಕೆ ಕೂಲಿ ಮೂರು ಅಥವಾ ನಾಲ್ಕಾಣೆ ಇತ್ತು. ಕುರ್ಚಿ ಹಾಕಲು ಹಳ್ಳ ತೆಗೆಯುವಾಗ ಮಾತ್ರ ನಾಲ್ಕು-ಐದು ರೂಪಾಯಿ ಕೊಡುತ್ತಿದ್ದರು. ಸಂದರ್ಭಾನುಸಾರ ಆ ಕೆಲಸವನ್ನೂ ನಟರು ಮತ್ತು ವಾದ್ಯಗಾರರು ಮಾಡಿರುವುದೂ ಉಂಟು. ಕಂಪನಿಯು ಸ್ಥಾಪನೆಯಾದ ಹತ್ತು-ಹನ್ನೆರಡು ವರ್ಷಗಳ ನಂತರವೇ ಒಂದು ನೂರು ರೂಪಾಯಿಗಳ ಮೇಲೆ ಉತ್ಪತ್ತಿ ನೋಡಿದ್ದು. ಅದೂ ಸಹ ರಾಮಾಯಣ ನಾಟಕ ಅಭ್ಯಾಸ ಮಾಡಿ ಆಡಿದ ನಂತರವೇ ನೂರು-ನೂರಿಪ್ಪತ್ತು ಆಗಿದ್ದಿತು. ಹಾಗಿದ್ದು ಈಗ ಐನೂರು, ಆರುನೂರು ರೂ.ಗಳ ಉತ್ಪತ್ತಿಯಾಗಬೇಕಾದರೆ ನಾಟಕಗಳ ಸ್ಥಿತಿ ಎಷ್ಟು ಅಭಿವೃದ್ಧಿಯಾಗಿರಬಹುದೆಂಬುದನ್ನು ಊಹಿಸಬಹುದು. ಕೊಯಮತ್ತೂರಿನಲ್ಲಿದ್ದಾಗ್ಗೆ ಡೆಂಕಣಿಕೋಟೆಯವನಾದ ವೆಂಕಟಗಿರಿಯಪ್ಪನೆಂಬ ಡ್ರೆಸ್ ಕೆಲಸದವನು ತನ್ನ ಮಗನಾದ ನಾರಾಯಣ ನಾಯ್ಡು ಎಂಬಾತನೊಡನೆ ಸಂಸ್ಥೆಗೆ ಸೇರಿದನು ನಾರಾಯಣ ನಾಯುಡುವು ಬಹುಚೆನ್ನಾಗಿ ಹಾಡುತ್ತಿದ್ದನು. ಆ ಸಮಯದಲ್ಲಿ ಸಂಘದಲ್ಲಿ ಐವತ್ತು-ಅರವತ್ತು ಜನ ಆಗಿದ್ದರು. ಪೇಯಿಂಟರ್ ಗುಬ್ಬಿ ತನ್ನ ಬಸವಣ್ಣನು ಸದಾ ಸೀನರಿಗಳನ್ನು ಬರೆಯುತ್ತಿದ್ದನು. ಡ್ರೆಸ್ ಮತ್ತು ಚಂಕಿ ಕೆಲಸವನ್ನು ವೆಂಕಟಗಿರಿಯಪ್ಪನೆಂಬಾತನು ಮಾಡುತ್ತಿದ್ದನು. ನಾನು ಯಾವಾಗಲೂ ಶ್ರದ್ಧೆವಹಿಸಿ ಸಂಘದ ಕೆಲಸ ಕಾರ್ಯಗಳನ್ನು ಮಾಡುತ್ತಾ ಡಾನ್ಸ್, ಹಾಡುಗಳ ಅಭ್ಯಾಸಗಳಲ್ಲಿ ನಿರತನಾಗಿದ್ದೆ. ಅಲ್ಲದೆ ಎಷ್ಟೇ ಉತ್ಪತ್ತಿ ಬಂದರೂ ಸಂಘದ ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿದ್ದೆ. ಕೊಯುಮತ್ತೂರಿನ ವಿನ್‌ಸೆಂಟ್‌ರವರು ಇದನ್ನು ಗಮನಿಸಿ ತುಂಬಾ ಸಂತೋಷಪಟ್ಟು ಕೊಯಮತ್ತೂರು ಕ್ಯಾಂಪು ಕ್ಲೋಸಿನ ಸಮಯದಲ್ಲಿ ಸಂಘದವರಿಗೆಲ್ಲಾ ಟೀಪಾರ್ಟಿಯನ್ನು ಏರ್ಪಡಿಸಿ ತುಂಬಾ ಗೌರವದಿಂದ ಸತ್ಕರಿಸಿ ಹಿರೋಡೆ ಕ್ಯಾಂಪಿಗೆ ಬೀಳ್ಕೊಟ್ಟರು.

ಹಿರೋಡೆ ಕ್ಯಾಂಪಿನಲ್ಲಿ ಭಾಷೆ ಚೆನ್ನಾಗಿ ತಿಳಿಯುತ್ತಿರಲಿಲ್ಲವಾದ್ದರಿಂದ ಉತ್ಪತ್ತಿ ಇನ್ನೂರು ಇನ್ನೂರಿಪ್ಪತ್ತೈದು ಆಗುತ್ತಿತ್ತು. ಆ ಮೊಕ್ಕಾಂ ಪ್ರಾರಂಭವಾದ ಎಂಟು-ಹತ್ತು ದಿನಗಳ ನಂತರ ಯುದ್ಧದ ಗಲಾಟೆ ಪ್ರಾರಂಭವಾಯ್ತು. ಆಗ ಮಿಲಿಟರಿಗೆ ಸೇರಿದ್ದ ರಿಕ್ರೂಟ್ ಗುಂಪನ್ನು ನಾಟಕ ನೋಡಲು ಫ್ರೀ ಬಿಡಲಿಲ್ಲವೆಂಬ ಹಟಮಾರಿತನದಿಂದ ತಮಿಳು ಜನರೆಲ್ಲರೂ ನಾಟಕ ಪ್ರಾರಂಭವಾದ ಕೂಡಲೇ ಪೋಲೀಸೀನವರೂ, ಮಿಲಿಟರಿಯವರು ಗುಂಪು ಸೇರಿಕೊಂಡು ಕಲ್ಲಿನ ಮಳೆಯನ್ನೇ ಸುರಿಸಿದರು. ಹೊರಗೆ ಬರಲು ಸಹ ಅವಕಾಶವಿಲ್ಲದಂತೆ ಭಯ ಹುಟ್ಟಿಸಿ ಥಿಯೇಟರ್ ಪಕ್ಕದಲ್ಲಿದ್ದ ಸೇತುವೆಯ ಇಟ್ಟಿಗೆಯನ್ನೂ ಕಿತ್ತು, ಥಿಯೇಟರ್ ಮೇಲೆಲ್ಲಾ ಎಸೆದು ಭಯಂಕರ ಗಾಬರಿಪಡಿಸಿ ಆ ದಿನ ನಾಟಕವೇ ನಡೆಯದಂತೆ ಮಾಡಿಬಿಟ್ಟರು. ಅನಂತರ ನಾನು ಕೊಯಮತ್ತೂರಿಗೆ ಹೋಗಿ ಅಲ್ಲಿನ ವೆರೈಟಿ ಹಾಲಿನ ಮಾಲೀಕರಾದ ವಿನ್‌ಸೆಂಟ್‌ರವರ ಸಹಾಯದಿಂದ ಜಿಲ್ಲಾಧಿಕಾರಿಗಳ ಸಿಫಾರಸ್ಸಿನ ಮೇಲೆ ರಿಜರ್ವ್‌ಪೋಲೀಸ್ ತಂದು ನಾಟಕ ನಡೆಸಿದೆವು ನಂತರ ಉತ್ಪತ್ತಿ ಸರಿಯಾಗಿ ಆಗಲಿಲ್ಲವಾದ್ದರಿಂದ ಆ ಊರನ್ನು ಜಾಗ್ರತೆ ಬಿಟ್ಟು ಗೋಪಿಚೆಟ್ಟಿ ಪಾಳ್ಯಕ್ಕೆ ಬಂದೆವು.

ಅಲ್ಲಿಯ ಧನಿಕರೊಬ್ಬರು ಹೊಸದಾಗಿ ಥಿಯೇಟರು ಕಟ್ಟಿಸಿದ್ದರು. ನಾವೇ ಆ ಥಿಯೇಟರಿನ ಪ್ರಾರಂಭಮಹೋತ್ಸವವನ್ನು ಜರುಗಿಸಿ ನಾಟಕವನ್ನು ಆರಂಭಿಸಿದೆವು-ಸುಭದ್ರಾಪರಿಣಯಕ್ಕೆ ಟ್ರಾನ್ಸ್‌ಫರ್‌ಸೀನ್ ಒಂದನ್ನು ಬಹುಚೆನ್ನಾಗಿ ಮಾಡಿಸಿದ್ದೆನು. ನಾಟಕದ ಕಥಾಸಾರಾಂಶವನ್ನು ತಮಿಳು ಭಾಷೆಯಲ್ಲಿ ಪ್ರಿಂಟ್ ಮಾಡಿಸಿ ನಾಟಕ ಪ್ರಾರಂಭದಲ್ಲಿ ಕೊಡುತ್ತಿದ್ದೆವು. ಅಲ್ಲದೆ ಅದು ಚಾಮರಾಜನಗರ, ಕೊಳ್ಳೇಗಾಲಗಳಿಗೆ ಸಮೀಪ, ಕನ್ನಡ ದೇಶದ ಗಡಿಯಾಗಿದ್ದುದರಿಂದ ಜನರು ಕಥೆಯನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಕೊನೆಯ ದೃಶ್ಯ ಶ್ರೀಕೃಷ್ಣನ ಟ್ರಾನ್ಸ್‌ಫರ್ ಸೀನರಿಯನ್ನು ನೋಡಿ ಹ! ಹ! ಹ! ಕೃಷ್ಣ!! ಪ್ರತ್ಯಕ್ಷ ವಂದುವಿಟ್ಟಾನೆ ಎಂದು ಹೇಳುತ್ತ ಕೈಮುಗಿದು ಕುಳಿತುಕೊಳ್ಳುತ್ತಿದ್ದರು. ಆ ಮೊಕ್ಕಾಂನಲ್ಲಿ ಉತ್ಪತ್ತಿ ಬಹಳ ಚೆನ್ನಾಗಿ ಆಗಿ ಖರ್ಚು ಕಳೆದು ೩,೦೦೦ ರೂ. ಲಾಭ ಉಳಿಯಿತು. ಆಗ ನನ್ನ ಭಾಗಸ್ಥನಾದ ನಾಗರಾಜಯ್ಯನವರನ್ನು ಕರೆಸಿ ಹಿಂದಿನ ಮಾಲೀಕರ ಮಕ್ಕಳಾದ ಪದ್ಮರಾಜಯ್ಯನವರಿಗೆ ನಾವು ಇದುವರೆವಿಗೂ ಕೊಡಬೇಕಾಗಿದ್ದ ಒಂದು ವರ್ಷದ ಬಾಡಿಗೆ ಒಂದು ಸಾವಿರದ ಐದು ನೂರು ರೂಪಾಯಿಗಳನ್ನು ಮತ್ತು ಸಾಮಾನಿನ ಖರೀದಿ ಬಾಬ್ತು ಒಂದುಸಾವಿರದ ಐದುನೂರು ರೂಪಾಯಿಗಳು ಒಟ್ಟು ಮೂರುಸಾವಿರ ರೂಪಾಯಿಗಳನ್ನು ಪದ್ಮರಾಜಯ್ಯನವರಿಗೆ ಕೊಟ್ಟು ಕಳುಹಿಸಿದೆನು. ನಾಗರಾಜಯ್ಯನವರು ಹಣವನ್ನು ತೆಗೆದುಕೊಂಡು ಗೋಪಿಚೆಟ್ಟಿ ಪಾಳ್ಯದಿಂದ ಬಂದು ಪದ್ಮರಾಜಯ್ಯನವರ ಬಾಬ್ತು ಹಣವನ್ನು ಅವರಿಗೆ ಕೊಡದೆ ತಮ್ಮ ಸ್ವಂತಕ್ಕೆ ಒಂದು ಮನೆಯನ್ನು ಸಾವಿರದೆಂಟನೂರಕ್ಕೆ ತೆಗೆದುಕೊಂಡು ಉಳಿದ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ಸಂಘಕ್ಕೆ ಬಾರದೆ ಗುಬ್ಬಿಯಲ್ಲಿಯೇ ನಿಂತುಬಿಟ್ಟರು. ಸಂಘವಾದರೋ ಗೋಪಿಚೆಟ್ಟಿ ಪಾಳ್ಯದಿಂದ ತಾಪತ್ರಯಪಟ್ಟುಕೊಂಡು ತಿರ್ಪೂರು ಮೊಕ್ಕಾಂ ಮಾಡಿತು. ಅಲ್ಲಿಯೂ ಉತ್ಪತ್ತಿ ಚೆನ್ನಾಗಿ ಆಯಿತು. ಆಗ ಯಳಂದೂರು ಶಾರದಾ ವಿಲಾಸ

ಕಂಪನಿಯು ಮೈಸೂರಿನಲ್ಲಿ ನಾಟಕವನ್ನು ಆಡುತ್ತಿರುವಾಗ್ಗೆ ಆ ಕಂಪನಿಯ ರಾಣಿ ಪಾರ್ಟಿನ ಮುನಿಸ್ವಾಮಿಯೆಂಬುವನು ಕಂಪನಿಯನ್ನು ಬಿಟ್ಟು ಹೋದುದರಿಂದ ಅಲ್ಲಿನ ಮ್ಯಾನೇಜರ್ ರಂಗನಾಥ ಮೊದಲಿಯಾರ್ ಎಂಬಾತ ತಿರ್ಪೂರಿಗೆ ಬಂದು ಟಿ.ಬಿ.ಯಲ್ಲಿ ೮ ದಿನವಿದ್ದು ಕಳ್ಳತನದಿಂದ ನಮ್ಮ ಕಂಪನಿಯ ರಾಣಿ ಪಾರ್ಟಿನ ನಾರಾಯಣರಾವ್ ಎಂಬಾತನನ್ನು ಸಾಗಿಸಿಕೊಂಡು ಹೋದನು. ಅದು ಬಹಳ ಗಲಾಟೆಯಾಗಿ ಪೋಲೀಸ್ ಕೇಸು ಮಾಡಿದ್ದೆವು. ಹೀಗಾದರೂ ಕಂಪನಿ ಅಭಿವೃದ್ಧಿ ಮಾತ್ರ ನಿಲ್ಲದೆ ನಡೆಯುತ್ತಲೇ ಇದ್ದಿತು. ಉತ್ಪತ್ತಿ ಆದಂತೆಲ್ಲಾ ಬಂದ ಆದಾಯವನ್ನು ಸಂಘದ ಬಂಡವಾಳಕ್ಕೆ ಉಪಯೋಗಿಸುತ್ತಿದ್ದೆ. ತಿರ್ಪೂರಿನಲ್ಲಿ ಪುರಜನರು ಸಂಘಕ್ಕೆ ಸನ್ಮಾನಮಾಡಿ ನನಗೆ ಬಂಗಾರದ ಪದಕವನ್ನಿತ್ತು ಗೌರವಿಸಿದರು. ಅಲ್ಲಿಂದ ಕರೂರು ಕ್ಯಾಂಪು ಪ್ರಾರಂಭವಾಯ್ತು. ಆಗ ಇನ್‌ಫ್ಲೂಯೆಂಜಾ ಗಲಾಟೆ ಪ್ರಾರಂಭವಾಗಿ ರೋಗವು ಪ್ರಬಲವಾಗಿ ಹರಡಿ ಆ ಊರಿನಲ್ಲಿ ದಿನಕ್ಕೆ ಇಪ್ಪತ್ತೈದು-ಮೂವತ್ತು ಜನರು ಮೃತ್ಯುವಶಕ್ಕೆ ಈಡಾಗುತ್ತಾ ಬಂದರು. ನಮ್ಮ ಸಂಘದಲ್ಲಿಯೂ ಎಲ್ಲರೂ ರೋಗಗ್ರಸ್ತರಾಗಿ ನಾಟಕ ನಡೆಯುವುದೇ ನಿಂತಿತು. ರಾಮಸಮುದ್ರದ ಮಲ್ಲಯ್ಯ ಎಂಬ ನಟನು ಮೃತಿಯನ್ನು ಹೊಂದಿದನು. ಸಂಘಕ್ಕೆ ತುಂಬಾ ತೊಂದರೆಯಾಗಿ ಹದಿನೈದು ದಿನಗಳು ನಾಟಕವನ್ನು ಆಡದೆ ಯತ್ನವಿಲ್ಲದೆ ಕುಳಿತು ದಿನಸಿ ಅಂಗಡಿಗಳಲ್ಲಿ ಸಾಲ ಮಾಡಿ ನನ್ನಲ್ಲಿದ್ದ ನಾಲ್ಕು-ಐದು ಮೆಡಲ್‌ಗಳನ್ನೂ ನನ್ನ ಉಪಪತ್ನಿ ಸುಂದರಮ್ಮನ ಅಡ್ಡಿಕೆಯನ್ನೂ ಗಿರಿವಿಯಿಟ್ಟು ದಿನದ ಖರ್ಚುಗಳನ್ನು ಪೂರೈಸುತ್ತಿದ್ದೆವು. ಹದಿನೈದು ದಿನಗಳು ಕಳೆದ ನಂತರ ರೋಗವು ಕಡಿಮೆಯಾಗಿ ನಾಟಕಗಳನ್ನಾಡಲು ಪ್ರಾರಂಭಿಸಿದೆವು. ಉತ್ಪತ್ತಿ ಮೂವತ್ತು-ನಲವತ್ತರ ಮೇಲೆ ಆಗುತ್ತಿರಲಿಲ್ಲ. ಆಗ ಕೊನೆಯ ನಾಟಕ ರಾಮಾಯಣ ಹಾಕಿ ಅಲ್ಲಿನ ಛೇರ್‌ಮನ್‌ರಾದ ನಾಟಕೋಟಿ ಚೆಟ್ಟಿಯಾರ್ ಎಂಬ ದೊಡ್ಡ ಧನಿಕರು ಅವರ ಅಧ್ಯಕ್ಷತೆಯಲ್ಲಿ ನಾಟಕವಾಡಿದೆವು. ಅದೇ ಕಡೇ ನಾಟಕವಾದ್ದರಿಂದ ಮೂನ್ನೂರಐವತ್ತು ರೂ.ಗಳ ಉತ್ಪತ್ತಿಯಾಗಿತ್ತು. ಚೆಟ್ಟಿಯಾರ್‌ರವರು ಇನ್ನೂರ ಐವತ್ತು ರೂ.ಗಳನ್ನೂ ಎರಡು ತೊಲದ ಒಂದು ಮೆಡಲನ್ನೂ ದಯಪಾಲಿಸಿದರು. ಅಲ್ಲಿದ್ದ ಆ ಊರಿನ (ಕಾಂಪ್ಲಿಮೆಂಟರಿ) ಮಹಾ ಜನಗಳು ಮೂನ್ನೂರಐವತ್ತು ರೂ.ಗಳನ್ನು ಬಹುಮಾನಿಸಿದರು. ಈ ಹಣದಿಂದ ಅಲ್ಲಿನ ಸಾಲ ತಾಪತ್ರಯಗಳನ್ನು ತೀರಿಸಿಕೊಂಡೆವು. ಆದರೆ ಗಿರವಿ ಮಾಲನ್ನು ಬಿಡಿಸಿಕೊಳ್ಳಲಾಗಲಿಲ್ಲ.

ಪರೀಕ್ಷಾ ಪ್ರಸಂಗ

ಅಲ್ಲಿಂದ ತಿರುಚನಾಪಳ್ಳಿಗೆ ಬಂದೆವು. ಅಲ್ಲಿನ ಥಿಯೇಟರನ್ನು ಬೇರೆಯವರು ಗೊತ್ತುಮಾಡಿಕೊಂಡಿದ್ದರಿಂದ ಅಲ್ಲಿನ ರೈಲ್ವೆ ಇನ್‌ಸ್ಟಿಟ್ಯೂಟ್‌ನಲ್ಲಿ ಎರಡು ನಾಟಕಕ್ಕೆ ಗೊತ್ತುಮಾಡಿ ನಾಟಕ ಒಂದಕ್ಕೆ ಇಪ್ಪತ್ತೈದು ರೂ.ನಂತೆ ಎರಡು ನಾಟಕದ ಅಡ್ವಾನ್ಸ್ ಐವತ್ತು ರೂ. ಕೊಟ್ಟು ಚೆನ್ನಾಗಿ ಅಡ್ವರ್‌ಟೈಜು ಮಾಡುವುದರೊಳಗಾಗಿ ನಮ್ಮಲ್ಲಿದ್ದ ಶಿಲ್ಕು ಹಣವೆಲ್ಲ ಖರ್ಚಾಗಿ ನನ್ನ ಕೈಯಲ್ಲಿದ್ದ ನಾಲ್ಕು ಸವರನ್ ಚೈನನ್ನು ಮಾರಿದ್ದಾಯ್ತು-ಇನ್‌ಸ್ಟಿಟ್ಯೂಟ್‌ನಲ್ಲಿ ಸಾಮಾನುಗಳನ್ನು ಕಟ್ಟಿಕೊಂಡು ಆ ಊರಿನ ದೊಡ್ಡ ಸಾಹುಕಾರರ ಛತ್ರದಲ್ಲಿ ಅಡಿಗೆ ಮಾಡಿಸಿ ಊಟ ತೀರಿಸಿಕೊಂಡು ರಾತ್ರಿ ನಟವರ್ಗದವರನ್ನು ಇನ್‌ಸ್ಟಿಟ್ಯೂಟ್‌ಗೆ ಮೇಕಪ್ ಮಾಡಿಕೊಳ್ಳಲು ಕರೆದುಕೊಂಡು ಹೋದೆನು. ಅಷ್ಟು ಹೊತ್ತಿಗೆ ಚೈನ್ ಮಾರಿ ತಂದಿದ್ದ ಹಣವೆಲ್ಲವೂ ಖರ್ಚಾಗಿ ನಾಲ್ಕಾಣೆ ಸಿಲ್ಕು ನಿಂತಿತ್ತು. ನಾಟಕಮಂದಿರದಲ್ಲಿ ಮೇಕಪ್ ಮಾಡಿಕೊಂಡು ರಾತ್ರಿ ಹತ್ತು ಗಂಟೆಗೆ ನಾಟಕವನ್ನಾಡಲು ಸರ್ವಸಿದ್ಧತೆಗಳನ್ನೂ ಮಾಡಿಕೊಂಡು ಒಂದನೇ ಬೆಲ್, ಎರಡನೇ ಬೆಲ್ ಆಗಿ ನಾಟಕ ಪ್ರಾರಂಭವಾಗುವ ಸಮಯಕ್ಕೆ ಸರಿಯಾಗಿ ಗ್ರಹಚಾರ ಕ್ರೂರವಾಗಿ ಬಿರುಸಾದ ಮಳೆ ಒಂದೇಸಮನೆ ಒಂದು ಗಂಟೆಯ ಕಾಲ ಸುರಿಯಿತು. ಆಗ ಪ್ರೇಕ್ಷಕರಾರೂ ಬಾರದೆ ನಾನೂ, ನಟವರ್ಗದವರೂ ಪೆಚ್ಚುಮೋರೆ ಹಾಕಿಕೊಂಡು ಬಣ್ಣ ಅಳಿಸಿಕೊಂಡು ನಾವು ಇಳಿದುಕೊಂಡಿದ್ದ ಛತ್ರಕ್ಕೆ ಬಂದೆವು. ಎಲ್ಲರೂ ಮಲಗಿದರೂ ಹೇಗೆ? ಈ ರಾತ್ರಿ ಕಳೆದು ಬೆಳಗಾದ ಕೂಡಲೇ ಹುಡುಗರಿಗೆ ಕಾಫಿಗೆ ಕಾಸಿಲ್ಲ. ಮುಂದೇನು ಗತಿ! ಏನು ಮಾಡಲಿ?! ಯಾರನ್ನು ಯಾಚಿಸಲಿ? ಪರಭಾಷೆ! ಅಲ್ಲದೆ ಅಪರಿಚಿತವಾದ ಸ್ಥಳ-ನಮ್ಮ ಕಷ್ಟಸ್ಥಿತಿ ನೋಡಿ ಮನ ಮರುಗಿ ಕರುಣಿಸಿ ಸಹಾಯ ಮಾಡುವಂಥ ಸ್ನೇಹಿತರು, ಬಂಧುಗಳು ಯಾರಿದ್ದಾರೆ ಎಂಬ ಯೋಚನೆಯೇ ಬಲವಾಗಿ ಬೆಳಗಿನವರೆಗೂ ಕಣ್ಣಿಗೆ ನಿದ್ದೆ ಹತ್ತಲಿಲ್ಲ. ಬೆಳಕು ಹರಿಯುವವರೆಗೂ ಇದೇ ಯೋಚನೆಯಿಂದ ಸಂಕಟ ಬಂದಾಗ ವೆಂಕಟರಮಣನೆನ್ನುವ ಹಾಗೆ ಶ್ರೀ ಚನ್ನಬಸವೇಶ್ವರಸ್ವಾಮಿಯನ್ನು ಧ್ಯಾನಿಸುತ್ತ ಬೆಳಕುಹರಿಸಿದೆ. ಬೆಳಗಾದ ಕೂಡಲೇ ಸ್ನಾನ ಮಾಡಿ, ಪೂಜೆ ತೀರಿಸಿಕೊಂಡು ನನ್ನ ಗೆಳೆಯನಾದ ಗುಬ್ಬಿಶೆಟ್ಟಪ್ಪನನ್ನು ಕರೆದುಕೊಂಡು, ನಮ್ಮ ಪರಿಚಯಸ್ಥರಲ್ಲಿ ಯಾರಾದರೂ ಸಿಕ್ಕುತ್ತಾರೋ ನೋಡೋಣವೆಂದು ಊರಿನೊಳಗೆ ಬಂದು, ಹಿಂದಿನ ದಿನ ರಾತ್ರಿ ನಮ್ಮಲ್ಲಿ ಉಳಿದಿದ್ದ ನಾಲ್ಕಾಣೆಯನ್ನು ಖರ್ಚುಮಾಡಿ ಇಬ್ಬರೂ ಕಾಫಿ ಕುಡಿದೆವು. ನಮ್ಮ ಜೇಬುಗಳೆಲ್ಲಾ ಖಾಲಿಯಾದಂತಾಯಿತು. ಆ ಟವನ್, ಬಜಾರುಗಳಲ್ಲೆಲ್ಲಾ ತಿರುಗಿದರೂ ಪರಿಚಯಸ್ಥರಾದ ದರ್ಶನವೂ ಲಭಿಸಲಿಲ್ಲ. ಹನ್ನೊಂದು ಗಂಟೆ ದಾಟಿತು. ಇತ್ತ ಛತ್ರದಲ್ಲಿ ಹುಡುಗರು ಅಡುಗೆಯ ಮನೆ ಕಡೆ ನೋಡುತ್ತಾರೆ. ಅಡಿಗೆಯವನಾದ ಸಂಗಪ್ಪ, ಭಟ್ಟರು ಇಬ್ಬರೂ ಅಡಿಗೆ ಮನೆ ಕಸ ಗುಡಿಸಿ ಪಾತ್ರೆಗಳನ್ನೆಲ್ಲಾ ಶುಭ್ರವಾಗಿ ತೊಳೆದು ಒಲೆ ಹಚ್ಚಲು ಸೌದೆ ಸಹ ಇಲ್ಲದೆ ನನ್ನ ದಾರಿಯನ್ನೇ ನೋಡುತ್ತ ಕುಳಿತಿದ್ದಾರೆ. ಹುಡುಗರುಗಳು ಹನ್ನೆರಡು ಗಂಟೆಯಾದರೂ ಕಾಫಿ, ಟಿಫನ್ ಯಾವದೂ ಹೊಟ್ಟೆಗೆ ಬೀಳದೆ ಕಣ್ಣುಕಣ್ಣು ಬಿಡುತ್ತಾ

ನನ್ನ ಬರುವಿಕೆಯನ್ನು ಕಾಯುತ್ತಿದ್ದಾರೆ. ಇದು ಸಾಲದೆಂಬಂತೆ ಬೆಳಗಿನ ಎಂಟುಗಂಟೆಯಿಂದ ಪ್ರಾರಂಭವಾದ ಮಳೆ ಬಿಡದೆ ಒಂದೇ ಸಮವಾಗಿ ಸುರಿಯುತ್ತಲಿದೆ. ಅತ್ತ ನಾನೂ ಗುಬ್ಬಿಶೆಟ್ಟಿಯೂ ನಮ್ಮ ಪರಿಚಯಸ್ಥರಾರೂ ಸಿಗದೆ ಒಬ್ಬರನ್ನೊಬ್ಬರು ತಬ್ಬಿಕೊಂಡು ಅಳುತ್ತಾ ಪುನಃ ನಾವಿಳಿದಿದ್ದ ಛತ್ರಕ್ಕೆ ಬಂದೆವು.

ಹಸಿದ ಹುಡುಗರನ್ನು ನೋಡಿದೊಡನೆ ಟಿಫನ್ ಕಾಫಿ ಕುಡಿದ ನಮಗೆ ಎಂದೂ ಇಲ್ಲದ ದುಃಖವುಂಟಾಯಿತು. ನಮ್ಮಲ್ಲಿ ಗಿರವಿ ಇಡುವಂತಹ ಪದಾರ್ಥಗಳೇನೂ ಇಲ್ಲ. ಇಟ್ಟರೆ ಹಾರ್ಮೋನಿಯಂ, ತಬಲಾಗಳನ್ನಿಡಬೇಕು. ಅವುಗಳನ್ನಿಟ್ಟರೆ ನಾಟಕವಾಡದೆ ನಿಲ್ಲಿಸಬೇಕು. ಹೀಗಾಗಿ ಮುಂದೆ ನಮ್ಮ ವೃತ್ತಿಯ ಗತಿಯೇನು ಎಂದು ಅತಿಯಾಗಿ ಯೋಚಿಸುತ್ತಿರುವಾಗ್ಗೆ ಒಂದು ಯೋಚನೆ ಹೊಳೆದು ಶ್ರೀಮತಿ ಸುಂದರಮ್ಮನ ಟ್ರಂಕನ್ನು ತೆಗೆದು ಹುಡುಕಲಾಗಿ ಚಿನ್ನದ ಕೈ ತೋಡಾ ಒಂದರ ಮುರಿದ ತುಂಡೊಂದು ಸಿಕ್ಕಿತು. ಅದನ್ನು ನೋಡಿದೊಡನೆ ಸಾಕ್ಷಾತ್ ಪರಮೇಶ್ವರನನ್ನೇ ಎದುರಿಗೆ ಕಂಡಷ್ಟುಸಂತೋಷವಾಗಿ ಕೂಡಲೇ ಗುಬ್ಬಿ ಶೆಟ್ಟಪ್ಪನನ್ನು ಇನ್ನೊಬ್ಬನನ್ನು ಜೊತೆಯಲ್ಲಿ ಕರೆದುಕೊಂಡು ಸರಾಫ್ ಅಂಗಡಿಗೆ ಹೋಗಿ ಅದನ್ನು ಮಾರಿ ಇಪ್ಪತ್ತೈದು ರೂ.ಗಳನ್ನು ತೆಗೆದುಕೊಂಡೆವು. ನಂತರ ಹುಡುಗರಿಗಾಗಿ ಹೋಟೆಲಿನಲ್ಲಿ ಕೊಂಚ ಟಿಫನ್ ಕಾಫಿ ಕಳುಹಿಸಿ, ನಾವು ಅಡುಗೆಗೆ ಬೇಕಾದ ಸಾಮಾನುಗಳನ್ನು ತೆಗೆಯಿಸಿಕೊಂಡು ಬಂದು ಅಡಿಗೆ ಮಾಡಿಸಿ ಎಲ್ಲ ಊಟ ಮುಗಿಯುವಾಗ್ಗೆ ಸಂಜೆ ಐದು ಗಂಟೆ ಆಗಿತ್ತು. ಅಲ್ಲಿಗೆ ನಮಗೆ ದೊಡ್ಡ ಗಂಡಾಂತರವೇ ಕಳೆದ ಹಾಗೆ ಆಯಿತು. ಆ ರಾತ್ರಿ ಇನ್‌ಸ್ಟಿಟ್ಯೂಟಿನಲ್ಲಿ ನಾಟಕವಾಗಿ ತೊಂಬತ್ತು ರೂ. ಕಲೆಕ್ಷನ್ ಆಗಿ ಎಷ್ಟೋ ಧೈರ್ಯವಾಯಿತು.

ಮರುದಿನದ ನಾಟಕಕ್ಕೆ ನೂರ ಇಪ್ಪತ್ತೈದು ರೂ.ಗಳ ಉತ್ಪತ್ತಿಯಾದುದೂ ಅಲ್ಲದೆ ನಾಟಕಕ್ಕೆ ಒಳ್ಳೆ ಹೆಸರೂ ಬಂದಿತು. ವಿದ್ಯಾವಂತರು ಆಫೀಸರುಗಳೇ ಬರುತ್ತಿದ್ದರು. ಅನಂತರ ತಿರುಚನಾಪಳ್ಳಿಯ ಪಾಲ್ಕೆರೆ ಥಿಯೇಟರನ್ನು ಒಂದು ತಿಂಗಳಿಗೆ ನಾನೂರು ರೂ.ಗಳಂತೆ ಗೊತ್ತುಮಾಡಿ ಎಪ್ಪತ್ತೈದು ರೂ. ಅಡ್ವಾನ್ಸ್ ಕೊಟ್ಟು ನಾಟಕವಾಡಲು ಆರಂಭಿಸಿದವು. ಆ ಊರಿನಲ್ಲಿ ನಾಟಕಕ್ಕೆ ಒಳ್ಳೆ ಹೆಸರಿದ್ದರೂ ಉತ್ಪತ್ತಿ ನೂರು-ನೂರಿಪ್ಪತ್ತೈದರ ಮೇಲೇರಲಿಲ್ಲ. ಎಷ್ಟಾದರೂ ಆ ಊರಿನಲ್ಲಿ ಒಂದು ವಾರಕ್ಕೆ ನಾಲ್ಕು ನಾಟಕಕ್ಕಿಂತಲೂ ಹೆಚ್ಚಿಗೆ ಆಡುತ್ತಿರಲಿಲ್ಲ. ನಾವು ತೆಗೆದುಕೊಂಡಿದ್ದ ನಾಟಕ ಶಾಲೆಯನ್ನು ನಮ್ಮ ನಾಟಕಗಳಿಲ್ಲದ ದಿನಗಳಲ್ಲಿ ದಿನ ಒಂದಕ್ಕೆ ತೊಂಬತ್ತು ನೂರು ರೂ.ಗಳಂತೆ ಬಾಡಿಗೆಗೆ ಕೊಟ್ಟು ಒಂದು ತಿಂಗಳು ಕಾಲ ಕಳೆದೆವು. ಪ್ರತಿನಿತ್ಯವೂ ಬೇರೆಯವರ ನಾಟಕದ ಬಾಡಿಗೆಯಿಂದ ಬರುತ್ತಿದ್ದ ಒಂದು ನೂರು ರೂಪಾಯಿಗಳಿಂದ ನಮ್ಮ ಖರ್ಚುಗಳು ಜರುಗಿ ಯೋಚನೆಯಿಲ್ಲದೆ ಒಂದು ತಿಂಗಳಿದ್ದು ಮುಂದಿನ ಕ್ಯಾಂಪು ಕುಂಭಕೋಣದಲ್ಲಿ ಮಾಡಿದೆವು.

ಕನ್ನಡ ನಾಟಕ ಪ್ರಭಾವ

ಅಲ್ಲಿ ಅರಮನೆ ನಾಟಕಶಾಲೆಯನ್ನು ತಿಂಗಳಿಗೆ ಇನ್ನೂರೈವತ್ತು ರೂಪಾಯಿಗಳಿಗೆ ಬಾಡಿಗೆಯಂತೆ ಗೊತ್ತುಮಾಡಿದ್ದೆವು.

ಆ ನಾಟಕ ಶಾಲೆಯಲ್ಲಿ ಸ್ಪೆಷಲ್ ನಾಟಕಗಳನ್ನಾಡಲು ದಿನಕ್ಕೆ ಎಪ್ಪತ್ತೈದು ಎಂಭತ್ತು ರೂಪಾಯಿ ಬಾಡಿಗೆ ಕೊಡುತ್ತಿದ್ದರು. ಅಲ್ಲಿ ಭೈರವಿಸುಂದರಂ ಪಿಳ್ಳೆ, ಸುಬ್ಬಯ್ಯ ಭಾಗವತರ್, ಕಲ್ಯಾಣ ಸುಂದರಂ ನಾಯಿಡು, ಕಳದೆ ಮಾಣಿಕ್ಯ, ರುಕ್ಮಿಣಿ, ಸುಬ್ಬುಲಕ್ಷ್ಮಿ ಮೊದಲಾದ ಹೆಸರಾಂತ ನಟನಟಿಯರನ್ನು ಕರೆಸಿ ನಾಟಕವೊಂದಕ್ಕೆ ಐವತ್ತು, ನೂರು, ನೂರೈವತ್ತು, ಇನ್ನೂರು ರೂ.ಗಳಂತೆ ಸಂಭಾವನೆ ಗೊತ್ತುಮಾಡಿ ನಾಟಕವಾಡಿಸುತ್ತಿದ್ದರು. ಆ ನಟರುಗಳ ಹಾಡುಗಾರಿಕೆ ಚೆನ್ನಾಗಿರುತ್ತಿತ್ತೇ ವಿನಹ ಅಭಿನಯ ಡ್ರೆಸ್ಸುಗಳ ರೀತಿ ನಾಟಕದ ಲಕ್ಷಣಕ್ಕೇ ವಿರೋಧವಾಗಿರುತ್ತಿತ್ತು. ಉದಾಹರಣೆಗೆ : ವಳ್ಳೀ ಪರಿಣಯದಲ್ಲಿ ಸುಬ್ರಮ್ಮಣ್ಯನ ಪಾತ್ರಕ್ಕೆ ಚಮಕಿ ಹಂಟಿಂಗ್ ಸೂಟು, ಸ್ಟಾಕಿಂಗ್ಸ್, ಬೂಡ್ಸು, ರಿಸ್ಟ್‌ವಾಚ್, ಕನ್ನಡಕ ಹಾಕಿಕೊಂಡು ಕ್ರಾಪ್ ಬಾಚಿಕೊಂಡು ರಂಗಭೂಮಿಯ ಮೇಲೆ ಜಯ ಜಯ ಗೋಕುಲ ಬಾಲ ಹಾಡಿಕೊಂಡು ಪ್ರವೇಶಿಸುತ್ತಿದ್ದರು. ಅಲ್ಲದೆ ಒಳಗಿನಿಂದ ರಂಗಪ್ರವೇಶ ಮಾಡಿ ಯಾವುದಾದರೊಂದು ಹಾಡು ಹಾಡಿಕೊಂಡು ಬಂದು ನನ್ನದು ಇಂತಹ ಪಾತ್ರ ಎಂದು ಹೇಳಿ ಪ್ರೇಕ್ಷಕರಿಗೆ ಕೈ ಮುಗಿದು ಹೋಗುತ್ತಿದ್ದರು. (ಈ ಪದ್ಧತಿ ನಮ್ಮಲ್ಲಿ ಬೈಲು ಆಟದಲ್ಲಿತ್ತು). ಪಾತ್ರದವರ ಹಾಡು ನಿಂತ ಕೂಡಲೇ ಹಿಮ್ಮೇಳದವರು ತಾಳ ಹಾಕಿಕೊಂಡು ಹಾಡನ್ನು ಹಾಡುತ್ತಿದ್ದರು. ರಂಗಭೂಮಿಯ ಮೇಲೆ ಪಾತ್ರಾಭಿನಯದಲ್ಲಿದ್ದ ಹಾಗೇ 'ಸುಬ್ಬಯ್ಯ ಭಾಗವತರೇ ಒರು ತಂದಾನ ಪಾಟಂ ಪಾಡಂಗಳೆ' ಎಂದು ಪ್ರೇಕ್ಷಕರು ಕೂಗಿ ಹೇಳಿದಾಗ ನಟನು ರಂಗಭೂಮಿಯಿಂದ 'ಕೊಂಚ ಇರಂಗಳೆ ಪಾಡರೆ' ಎಂದು ಹೇಳುತ್ತಿದ್ದನು. ಹಾಡನ್ನು ಹಾಡುತ್ತ ರಂಗಭೂಮಿಯ ಪಕ್ಕದಲ್ಲಿ ಹಾರ್ಮೋನಿಯಂ ನುಡಿಸುತ್ತಿರುವ ಹಾರ್ಮೋನಿಯಂ ಮಾಸ್ಟರ್ ಎದುರಿಗೆ ನಿಂತು ಒಬ್ಬರಾದ ಮೇಲೊಬ್ಬರು ಸ್ವರಗಳನ್ನು ಹಾಕಿಕೊಂಡು ಹಾಡುತ್ತಿದ್ದರು.

ನಟರಾಜಾಚಾರಿ ಎಂಬ ತಮಿಳುನಟ ಸದಾರಮೆಯಲ್ಲಿ ಕಳ್ಳನ ಪಾತ್ರ ಮಾಡುವುದರಲ್ಲಿ ತಮಿಳ ನಾಡಿನಲ್ಲೆಲ್ಲಾ ತುಂಬಾ ಹೆಸರುಗಳಿಸಿದ್ದನು. ಘನವಾದ ಕಂಠ, ಬಹಳ ಚೆನ್ನಾಗಿ ಹಾಡುತ್ತಿದ್ದನು. ಸದಾರಮೆಯಲ್ಲಿ ನಟರಾಜ ಕಳ್ಳನ ಪಾತ್ರ ಮಾಡುತ್ತಾನೆಂದರೆ ನಾಟಕಮಂದಿರ ಭರ್ತಿಯಾಗಿ ಜನ ಹಿಂದಿರುಗಿ ಹೋಗುತ್ತಿದ್ದರು. ಆದರೆ ಕೀಳು ಜನರೇ ನಾಟಕಮಂದಿರದಲ್ಲಿ ತುಂಬಿರುತ್ತಿದ್ದರು. ದೊಡ್ಡ ಮನುಷ್ಯರಾರೂ ಬರುತ್ತಿರಲಿಲ್ಲ ತುಂಬಾ ಅಸಹ್ಯವಾದಹಾಡು, ಬಹು ಕೀಳುಮಟ್ಟದ ಮಾತುಗಳನ್ನಾಡುತ್ತಾ ಜನಗಳನ್ನು ಮೆಚ್ಚಿಸುತ್ತಿದ್ದನು. ನಾವು ಕುಂಭಕೋಣದಲ್ಲಿ ನಾಟಕವಾಡುತ್ತಿದ್ದಾಗ್ಗೆ ನಮ್ಮಿಂದಲೇ ನಾಟಕಮಂದಿರವನ್ನು ಬಾಡಿಗೆಗೆ ತೆಗೆದುಕೊಂಡು ನಾಟಕಗಳನ್ನು ಆಡಿಸುತ್ತಿದ್ದರು. ನಮ್ಮ ಸಂಘವು ತಮಿಳುನಾಡಿಗೆ ಹೋಗುವ ಮುಂಚೆ ನಾಟಕದಲ್ಲಿ ನಡೆಯುತ್ತಿದ್ದ ಹಿಮ್ಮೇಳವು ನಾವು ಹೋದನಂತರ ನಮ್ಮ ನಾಟಕಗಳನ್ನು ನೋಡಿದ ನಂತರ ನಿಂತುಹೋಯಿತು.

ನಾವು ಕುಂಭಕೋಣದಲ್ಲಿದ್ದಾಗ ಅಲ್ಲಿ ಅಮೆಚೂರ್ ಸಂಘದಲ್ಲಿ ಮುಖ್ಯಪಾತ್ರ ವಹಿಸುತ್ತಿದ್ದ ಧನಿಕರೂ, ಚಿನ್ನ ಬೆಳ್ಳಿಯ ವ್ಯಾಪಾರಿಗಳೂ ಆದ ರಾಜಗೋಪಾಲ ಚೆಟ್ಟಿಯವರಿಗೂ ನನಗೂ ಸ್ನೇಹವಾಗಿತ್ತು. ನಮ್ಮ ನಾಟಕಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಭಾಷೆ ಜನಗಳಿಗೆ ತಿಳಿಯುತ್ತಿರಲಿಲ್ಲವಾಗಿ ಉತ್ಪತ್ತಿ ಬಹುಕಡಿಮೆಯಾಗಿ ತೊಂದರೆಯಾಗುತ್ತಿತ್ತು. ಕೊನೆಗೆ ಅಲ್ಲಿಂದ ಸೇಲಂಗೆ ಬರಬೇಕಾದರೆ ಮೇಲ್ಕಂಡ ಚೆಟ್ಟಿಯವರು ಒಂದು ಸಾವಿರರೂಪಾಯಿಗಳನ್ನು ಸಾಲವಾಗಿ ಕೊಟ್ಟು ನಮ್ಮ ಪ್ರಯಾಣ ಸುರಕ್ಷಿತವಾಗಿ ಸಾಗುವಂತೆ ಸಹಕರಿಸಿದರು. ಸೇಲಂನಲ್ಲಿ ರಾಣಿ ಪಾತ್ರದ ಗಾಣಿಗರ ಮನಿಸ್ವಾಮಯ್ಯ ಎಂಬಾತನನ್ನು ಕಂಪನಿಗೆ ಸೇರಿಸಿಕೊಂಡೆವು. ಸೇಲಂನಲ್ಲಿ ಕನ್ನಡ ಮಾತನಾಡುವವರು ಬಹಳವಾಗಿರುವುದರಿಂದಲೂ, ಮೈಸೂರಿನ ಎರಡು-ಮೂರು ಜನಗಳು ನಮಗೆ ಸಹಾಯಕರಾಗಿದ್ದುದರಿಂದಲೂ ಉತ್ಪತ್ತಿ ನಾನೂರು-ನಾನೂರೈವತ್ತುರಂತೆ ಆಗಿ ಕುಂಭಕೋಣದ ಸಾಲ ತೀರಿಸಲಾಯಿತು.

ಅಲ್ಲಿ ನಾಟಕವಾಡುತ್ತಿದ್ದಾಗ ನನ್ನ ಭಾಗಸ್ಥರಾಗಿ ಮೂರು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದ ನಾಗರಾಜಯ್ಯನವರನ್ನು ಕರೆದುಕೊಂಡು ಬಂದು ಲೆಕ್ಕಗಳನ್ನು ಬರೆಯಲು ನೇಮಿಸಿದನು. ಉತ್ಪತ್ತಿ ಚೆನ್ನಾಗಿದ್ದುದರಿಂದ ಸೇಲಂನಲ್ಲಿಯೇ ಮೂರುತಿಂಗಳಿದ್ದೆವು. ನೇಮಿರಾಜಯ್ಯ ಲೆಕ್ಕದಲ್ಲಿ ವ್ಯತ್ಯಾಸ ಮಾಡುತ್ತ ಬರಲು ಒಬ್ಬರಿಗೊಬ್ಬರಿಗೆ ಮನುಸ್ತಾಪ ಬರಲು ಕಾರಣವಾಗುತ್ತ ಬಂದಿತು. ಸೇಲಂನಿಂದ ತಿರುಪತ್ತೂರಿಗೆ ಬಂದು ಅಲ್ಲಿಂದ ಆಂಬೂರಿಗೆ ಮೊಕ್ಕಾಂ ಹಾಕಲು ನಿರ್ಧರಿಸಿದೆವು. ಆಂಬೂರಿನಲ್ಲಿ ಒಬ್ಬ ವಿಶ್ವಕರ್ಮ ಮತದವರು ಹೊಸದಾಗಿ ಕಟ್ಟಿಸಿದ ನಾಟಕಶಾಲೆಯೊಂದಿತ್ತು. ಅದರ ಪ್ರಾರಂಭೋತ್ಸವವನ್ನು ನಮ್ಮ ಸಂಸ್ಥೆಯಿಂದ ನೆರವೇರಿಸಿ ನಾಟಕಗಳನ್ನಾಡುವಾಗ ಅಲ್ಲಿಗೆ ಶಿವಲಿಂಗಪ್ಪ ಎಂಬುವರು ಒಂದು ಮೆಡಲನ್ನು ನನಗೆ ಬಹುಮಾನವಾಗಿ ಕೊಟ್ಟರು. ಅವರ, ನಮ್ಮ ಸ್ನೇಹ ಬೆಳೆಯಲಾರಂಭಿಸಿತ್ತು. ಕಂಪನಿಯಲ್ಲಿ ನನಗೂ, ನಾಗರಾಜಯ್ಯನರಿಗೂ ಲೆಕ್ಕದ ವಿಚಾರದಲ್ಲಿ ಕಲಹ ಪ್ರಾರಂಭವಾಗಿ ನಾಟಕದ ವಿಶಿಷ್ಟ ಸಾಮಾನುಗಳನ್ನೂ ಶಿವಲಿಂಗಪ್ಪನವರ ಮನೆಯಲ್ಲಿ ತುಂಬಿ ಅವರಿಂದ ಎರಡು ಸಾವಿರ ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡು ಗೌರಿ-ಗಣೇಶನ ಹಬ್ಬಕ್ಕೆ ಗುಬ್ಬಿಗೆ ಬಂದೆವು. ಅಷ್ಟುಹೊತ್ತಿಗೆ ಕಂಪನಿಯ ಸೀನರಿ, ಡ್ರೆಸ್ಸು, ಲೈಟುಗಳೆಲ್ಲಾ ಆರು-ಏಳು ಸಾವಿರ ರೂಪಾಯಿ ಬೆಲೆ ಬಾಳುತ್ತಿತ್ತು. ಕೆಲವು ನಟರುಗಳಿಗೆ ಸಂಬಳಗಳನ್ನು ಕೊಟ್ಟು ಅವರವರ ಊರಿಗೆ ಕಳುಹಿಸಿದೆನು. ಇನ್ನು ಕೆಲವರು ನನ್ನ ಮನೆಯಲ್ಲಿಯೇ ಉಳಿದುಕೊಂಡರು.

ಪ್ರೊಪ್ರೈಟರ್ ಆದೆ

ನನ್ನ ಭಾಗಸ್ಥನಾದ ನಾಗರಾಜಯ್ಯ, ಅವರ ಅಣ್ಣ ತಮ್ಮಂದಿರು ದುರುದ್ದೇಶದಿಂದ, ಲೆಕ್ಕಮಾಡುತ್ತೇವೆಂದು ಹೇಳಿ ಲೆಕ್ಕದ ಪೆಟ್ಟಿಗೆಯನ್ನು ಹೊತ್ತುಕೊಂಡು ಹೋಗಿ ನನ್ನನ್ನೇ ಲೆಕ್ಕಕೊಡುವಂತೆ ಗಂಡಾಗುಂಡಿ ಮಾತನಾಡಲು ಪ್ರಾರಂಭಿಸಿದರು. ನನಗಾದರೋ ತುಂಬಾ ತೊಂದರೆಯಾಗುತ್ತ ಬಂದಿತು. ಊರಿಗೆ ಹೋದ ನಟರಲ್ಲದೆ ನನ್ನ ಮನೆಯಲ್ಲಿ ಇಪ್ಪತ್ತೈದು ಜನರು ಉಳಿದುಕೊಂಡಿದ್ದರು. ದಿನವಹಿ ಅವರಿಗೆ ಕಾಫಿ ಟಿಫನ್ ನಡೆಯಬೇಕು. ಕೈಯಲ್ಲಿ ಮೂರುಕಾಸಿಲ್ಲ! ಈ ತೊಂದರೆ ಒಂದು ಕಡೆ ನಾಗರಾಜನ ಕಡೆಯವರೋ ಮಹಾಪುಂಡರು, ಮರ್ಯಾದೆಗೆ ಬೆಲೆಕೊಡುವಂತಹವರಲ್ಲ. ಯಾವುದಕ್ಕೂ ಹೆದರುವ ಜನರಲ್ಲ, ದಿನವಹಿ ನನ್ನೊಡನೆ ಜಗಳ ತೆಗೆಯುತ್ತಲೇ ಇದ್ದರು. ಹಿಂದೆ ಪದ್ಮರಾಜಯ್ಯನವರಿಗೆ ಕೊಡಬೇಕಾಗಿದ್ದ ಮೂರು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಹೇಳಿ ಗೋಪಿ ಚೆಟ್ಟಿಪಾಳ್ಯದಿಂದ ತೆಗೆದುಕೊಂಡು ಹೋಗಿ ಅವರಿಗೆ ಕೊಡದೆ ಸ್ವಂತಕ್ಕೆ ಮನೆ ತೆಗೆದುಕೊಂಡು ಬಳಸಿಕೊಂಡು, ಈಗ ನನ್ನ ಲೆಕ್ಕವನ್ನು ಎಲ್ಲಾ ಹೊತ್ತುಕೊಂಡು ಹೋಗಿ 'ವೀರಣ್ಣ ಲೆಕ್ಕವನ್ನೆಲ್ಲಾ ಅದಪ್ ಮಾಡಿಬಿಟ್ಟಿದ್ದಾನೆ– ಆದ್ದರಿಂದ ಇವನ ಮೇಲೆ ಕೇಸು ನಡೆಸುತ್ತೇವೆ. ಹೀಗೆ ಮಾಡುತ್ತೇವೆ. ಹಾಗೆ ಮಾಡುತ್ತೇವೆ' ಎಂದು ಮಾತನಾಡಲಾರಂಭಿಸಿದರು. ಒಂದೂವರೆ ತಿಂಗಳಾದರೂ ನಮ್ಮ ಲೆಕ್ಕಾಚಾರಗಳು ಬಗೆ ಹರಿಯಲಿಲ್ಲ. ಆಗ ನನ್ನ ಆಪ್ತಗೆಳೆಯರಾದ ವಾಣಿ ಮಲ್ಲಪ್ಪನವರು ವಿಚಾರವನ್ನೆಲ್ಲಾ ವಿವರವಾಗಿ ತಿಳಿದುಕೊಂಡು ಮೂರು ಸಾವಿರ ರೂಪಾಯಿಗಳಿಗೆ ಅವರ ಹೆಸರಿಗೆ ಕ್ರಯಕ್ಕೆ ಬರಸಿಕೊಂಡು, 'ಈ ಫುಂಡು ಜನ ನಿನಗೆ ಅಂಬೂರಿನಿಂದ ಸಾಮಾನು ತರಲು ಅವಕಾಶ ಖಂಡಿತ ಕೊಡುವುದಿಲ್ಲ. ನಾನು ಹೇಳಿದಂತೆ ಕೇಳಿದರೆ ಎಲ್ಲವು ಸರಿಹೋಗುತ್ತೆ' ಎಂದು ಧೈರ್ಯ ಹೇಳಿದರು.

ಆಗ್ಗೆ ಸಂಸ್ಥೆಯ ಮೇಲೆ ಮೂರು ಸಾವಿರ ರೂಪಾಯಿ ಸಾಲವಿತ್ತು. ಅದೇ ಮೂರು ಸಾವಿರ ರೂಪಾಯಿಯನ್ನು ಅವರವರಿಗೆ ತಲ್ಪಿಸುವಂತೆ ಬರೆದುಕೊಟ್ಟೆ; ಅದೇ ಸಮಯದಲ್ಲಿ ತುಮಕೂರಿನ ಧನಲಕ್ಷ್ಮಿ ನಾಟಕಮಂದಿರವೊಂದರಲ್ಲಿ ಬಾಲೇನ ಹಳ್ಳಿ ನಾಟಕದ ಕಂಪನಿಯವರು ನಾಟಕಗಳನ್ನಾಡಿ, ನಾಟಕಮಂದಿರದ ಬಾಡಿಗೆ ವಗೈರೆ ಕೊಡಲಾಗದೆ, ಅಲ್ಲಿಯೇ ಸಾಮಾನುಗಳನ್ನು ಬಿಟ್ಟು ಹೊರಟುಹೋಗಿದ್ದರು. ನಮ್ಮ ಕಲಹಗಳು ಎರಡು ತಿಂಗಳಾದರೂ ತೀರ್ಮಾನವಾಗಲಿಲ್ಲ. ಸುಮ್ಮನೆ ನಟರನ್ನು ಕೂಡಿಸಿಕೊಂಡು, ಊಟ, ಸಂಬಳ ಕೊಡಲು ಸಾಧ್ಯವಿಲ್ಲ, ನನಗೆ ಶಕ್ತಿ ಇದ್ದಿಲ್ಲ. ತುಮಕೂರಿನ ನಾಟಕಮಂದಿರದಲ್ಲಿ ನಾಟಕದ ಸಾಮಾಗ್ರಿಗಳೆಲ್ಲವು ಸಿದ್ಧವಾಗಿವೆ, ಅಂಬೂರಿನಿಂದ ಹಾರ್ಮೋನಿಯಂ, ಕೆಲವು ಡ್ರೆಸ್ಸ್ ತಂದು ನಾಟಕಗಳನ್ನಾಡೋಣವೆಂದು ವಾಣಿ ಮಲ್ಲಪ್ಪನವರು ನನಗೆ ಸಲಹೆ ಕೊಟ್ಟರು. ಅದು ಸರಿಯಾದ ಸಲಹೆಯೆಂದು ಯೋಚಿಸಿ ಅದರಂತೆಯೇ ಅಂಬೂರಿಗೆ ಹೋಗಿ, ಶ್ರೀ ಶಿವಲಿಂಗಪ್ಪನವರಿಗೆ ಹೇಳಿಕೊಂಡು, ಹಾರ್ಮೋನಿಯಂ, ಕೆಲವು ಡ್ರೆಸ್ ಗಳನ್ನು ತಂದು, ವಾಣಿ ಮಲ್ಲಪ್ಪನವರ ಯಜಮಾನಿಕೆಯಲ್ಲಿ ಪ್ರಸಿದ್ಧಪತ್ರಿಕೆ ಹೊರಡಿಸಿ,

ಊರಿಗೆ ಹೋಗಿದ್ದ ನಟರನ್ನು ಕರೆಯಿಸಿ, ತುಮಕೂರಿನಲ್ಲಿರುವ ಸಾಮಾನುಗಳನ್ನು ಬಾಡಿಗೆ ಗೊತ್ತುಮಾಡಿಕೊಂಡು, ನಾಟಕವಾಡಲು ಪ್ರಾರಂಭಿಸಿದೆವು. ಆಗ ಉತ್ಪತ್ತಿಯು ಸಹಾ ನಮಗೆ ಖರ್ಚಿಗೆ ಸಾಕಾಗುವಷ್ಟು ಆಗುತ್ತಿತ್ತು. ಕಂಪನಿ ಚಾಲ್ತಿಗೆ ಬಂತು. ಆಗ ನನ್ನ ಭಾಗಸ್ಥರ ಗುಂಪು ರಾಜಿಮಾಡಿಕೊಳ್ಳಲು ಬಂದರು. ಆಗ ಊರಿನ ಪ್ರಮುಖರೆಲ್ಲರು ಸೇರಿ, ಐದು ಸಾವಿರ ರೂಪಾಯಿಗಳನ್ನು ಅವರಿಗೆ ಕೊಟ್ಟು ಅವರ ಭಾಗಾಂಶವನ್ನು ತೆಗೆದು ಬಿಡುವಂತೆಯೂ, ಅದರಲ್ಲಿ ಪದ್ಮರಾಜಯ್ಯನವರ ಮೂರು ಸಾವಿರದ ಐದುನೂರು ರೂಪಾಯಿಗಳನ್ನು ತೆಗೆದುಕೊಂಡು ಅವರ ಸಾಮಾನುಗಳನ್ನು ಕ್ರಯಪತ್ರ ಬರೆಯಿಸಿ, ಗುಬ್ಬಿಯಲ್ಲಿ ನನ್ನ ಸ್ನೇಹಿತರಾದ ಕೆಲವು ಜನಗಳಲ್ಲಿ ಐದುಸಾವಿರ ರೂಪಾಯಿ ಸಾಲ ತೆಗೆದುಕೊಂಡು, ನನ್ನ ಭಾಗಸ್ಥರ ಹಾಗೂ ಸಾಮಾನುಗಳ ಬಿಡುಗಡೆ ಮಾಡಿಕೊಂಡು, ನನ್ನ ಹೆಸರಿಗೆ ರಿಜಿಸ್ಟರ್ಡ್ ಮಾಡಿಸಿಕೊಂಡು, ಶ್ರೀ ಚನ್ನಬಸವೇಶ್ವರ ಸ್ವಾಮಿದೇವಸ್ಥಾನಕ್ಕೆ ಹೋಗಿ, ಈ ದೊಡ್ಡ ಗಂಡಾಂತರವನ್ನು ಪರಿಹಾರಮಾಡಿಸಿದ್ದಕ್ಕೆ ಪೂಜೆ ಮಾಡಿಸಿ, ನಮಸ್ಕಾರ ಮಾಡಿ ಬಂದು ತುಮಕೂರಿನಲ್ಲಿ ನಾಟಕವಾಡಲು ಪಕ್ರಮಿಸಿದೆನು

ನಾನು ನಾಟಕದ ಸಾಮಾನುಗಳನ್ನು ಮೂರು ಸಾವಿರ ರೂಪಾಯಿಗೆ ಮಲ್ಲಪ್ಪನವರಿಗೆ ಬರೆದುದು ಸರಿಯಷ್ಟೆ. ಆಗ ಅವರು–" ನನಗೇನು ಮಾಡುತ್ತೀರಿ?" ಎನ್ನುವ ಪ್ರಶ್ನೆ ಬಂತು. ಹಿಂದೆ ಮಾಲಿಕರ ನಡತೆಗಳು ಸರಿಬೀಳದೆ ಸಾಮಾನು ಮಾಡುತ್ತಿದ್ದು ಕೆಲ ಸಾಮಾನುಗಳನ್ನು ಬರೆದ ನಂತರ ನಿಲ್ಲಿಸಿದ್ದೆವು. ಆ ಸಾಮಾನುಗಳನ್ನು ಕೊಟ್ಟು, ಅದರ ಜೊತೆಗೆ ಒಂದು ಸಾವಿರ ರೂಪಾಯಿಗಳನ್ನು ಸಾಲಮಾಡಿಕೊಟ್ಟು, ಪ್ರಸಿದ್ಧ ಪತ್ರಿಕೆಯಲ್ಲಿದ್ದ ಅವರ ಪ್ರೊಪ್ರೈಟರ್ (ಅಂದರೆ ಪ್ರೊಪ್ರೈಟರ್ ವಾಣಿ ಮಲ್ಲಪ್ಪ) ಎಂಬುದನ್ನು ತೆಗೆದುಹಾಕಿ, "ಜಿ. ಹೆಚ್. ವೀರಣ್ಣ" ಎಂಬುದನ್ನು ಹಾಕಿಸಿದ್ದಾಯಿತು.

ಅಲ್ಲಿಗೆ ಸೀನರೀ ಬಾಬ್ತು ಮೂರು ಸಾವಿರದ ಐನೂರು, ನನ್ನ ಭಾಗಸ್ಥರಿಗೆ ಸಾವಿರದ ಐನೂರು, ವಾಣಿ ಮಲ್ಲಪ್ಪನವರಿಗೆ ಸಾವಿರ, ಅಂಬೂರು ಶಿವಲಿಂಗಪ್ಪನವರಿಗೆ ಎರಡು ಸಾವಿರ, ಗುಬ್ಬಿಯಲ್ಲಿ ಕೂತು ತಿಂದ ಬಾಬ್ತು ಚಿಲ್ಲರೆ ಓಡಾಟಕ್ಕೆ ಸಾವಿರ, ಹೀಗೆ ಒಟ್ಟು ಒಂಬತ್ತು ಸಾವಿರ ರೂಪಾಯಿ ಸಾಲಗಾರನಾಗಿ, ಗುಬ್ಬೀ ಚನ್ನಬಸವೇಶ್ವರಸ್ವಾಮಿ ನಾಟಕಸಂಘದ ಪ್ರೊಪ್ರೈಟರ್ ಆದೆ. ಪ್ರೊಪ್ರೈಟರ್ ನಾನಾದುದಕ್ಕೆ ನವಗ್ರಹಗಳೇ ಸಾಕ್ಷಿ.

ನಾಟಕ ಸಂಸಾರ

ಈ ಕಥೆ ಮುಗಿದು ಭಗವಂತನ ಕೃಪೆಯಿಂದ ಸುಸೂತ್ರವಾಗಿ ನಾಟಕಗಳು ನಡೆಯುತ್ತಿರುವಾಗ್ಗೆ ಅದೇ ಊರಿನಲ್ಲಿ ವಿದ್ಯಾ ಇಲಾಖೆಯಲ್ಲಿ ಸೂಪರ್ ವೈಸರ್ ಆಗಿದ್ದ ಶ್ರೀ ಬೆಳ್ಳಾವಿ ನರಹರಿಶಾಸ್ತ್ರಿಗಳ ಸ್ನೇಹ ನನ್ನ ಪುಣ್ಯವಶಾತ್ ಲಭಿಸಿತು. ಕಂಪನಿಯ ಶ್ರೇಯಸ್ಸಿಗೆ ಅವಕಾಶವಾಗಿ, ಶ್ರೀ ಕೃಷ್ಣಲೀಲೆ ಬರೆಯಲು ಗೊತ್ತು ಮಾಡಿದೆ. ಅದೇ ಕಾಲದಲ್ಲಿ ಮೂಕನಹಳ್ಳಿ ಪಟ್ಟಣದ ಹತ್ತೊಂಬತ್ತು ವರುಷದ ಸುಬ್ಬರಾಯರು ಕಂಪನಿಗೆ ಸೇರಿದರು. ಆಗಿನಿಂದಲೂ ಬೆಳ್ಳಾವಿ ನರಹರಿಶಾಸ್ತ್ರಿಗಳು ಸಂಸ್ಥೆಗೆ ಬೇಕಾಗುವ ಸಲಹೆಗಳನ್ನು ಕೊಡುತ್ತಿದ್ದರು. ಸಂಸ್ಥೆಯು ಶಿವಗಂಗೆಯ ಜಾತ್ರೆಗೆ ಹೋಗಬೇಕಾದರೆ ನಾಟಕವಾಡಲು ಥಿಯೇಟರ್‌ಗೆ ಡೇರಾ ಹೊಡೆಯಲು ಡೇರಾ ಹೊಲಿಸಿದೆವು. ಕಾಂಪೌಂಡಿಗಾಗಿ ಕ್ಯಾತ್ಸಂದ್ರದಲ್ಲಿ ಬಿದಿರಿನ ತಟ್ಟೆಗಳನ್ನು ಹೆಣೆಸಿದೆವು. ಅದಕ್ಕೆ ಬೇಕಾಗುವ ಸಾಮಾನುಗಳನ್ನು ಹೊಂಚಿಕೊಂಡು, ತುಮಕೂರಿನಲ್ಲಿ ಪೊರಡಗೆರೆ ಮಲ್ಲಪ್ಪನವರಲ್ಲಿ ಎರಡುಸಾವಿರ ರೂಪಾಯಿ ಸಾಲವಾಗಿ ತೆಗೆದುಕೊಂಡು, ಅಂಬೂರು ಶಿವಲಿಂಗಪ್ಪನವರಿಗೆ ಕೊಟ್ಟು, ನಮ್ಮ ಸ್ವಂತ ಸಾಮಾನುಗಳನ್ನು ತೆಗೆದುಕೊಂಡು ಬಂದು ಶಿವಗಂಗೆಯಲ್ಲಿ ತಾರೀಕು ಜನವರಿ ೧೪, ೧೯೨೦ ರಲ್ಲಿ ಜಾತ್ರೆಯಲ್ಲಿ, ಡೇರೆ ಹಾಕಿಕೊಂಡು ದಿನವಹಿ ನಾಟಕವಾಡಿದೆವು.

ಜಾತ್ರೆಯಲ್ಲಿ ಪ್ರತಿನಿತ್ಯವೂ ಮುನ್ನೂರು-ಮುನ್ನೂರೈವತ್ತು ರೂಪಾಯಿ ಉತ್ಪತ್ತಿಯಾಗುತ್ತಲಿತ್ತು. ಅಲ್ಲಿಂದ ತ್ಯಾಮಗೊಂಡ್ಲು, ಮಹಿಮರಂಗನ ಜಾತ್ರೆ ಮುಗಿಸಿ, ಸಿದ್ಧಗಂಗೆಯಲ್ಲಿ ನಾಟಕ ಪ್ರಾರಂಭಿಸಿದೆವು. ಅಲ್ಲಿ ನಮಗೆ ಎದುರಾಗಿ ಅಗಳಿ ಕಂಪನಿಯೂ ಬಂದಿತ್ತು. ನಂತರ ಸುಗ್ಗೇನಹಳ್ಳಿ, ಕುಣಿಗಲ್‌ಗೆ ಬಂದೆವು. ಸುಗ್ಗೇನಹಳ್ಳಿಯಲ್ಲಿ ನಾಟಕವಾಡಿ, ಕುಣಿಗಲ್‌ಗೆ ಕ್ಯಾಂಪು ಮಾಡಲು ಯೋಚಿಸಿ, ಕಡೆಯ ನಾಟಕವಾದ ಮರುದಿನ, ಸಾಮಾನು ಸಾಗಿಸಲು ಗಾಡಿಗಳನ್ನು ಗೊತ್ತುಮಾಡಲು ಸುಗ್ಗೇನಹಳ್ಳಿಯಲ್ಲಿ ಸಮೀಪದಲ್ಲಿರುವ ಉಳ್‌ಕಲ್ ಎಂಬ ಗ್ರಾಮಕ್ಕೆ ನಾನು ನನ್ನ ಗೆಳೆಯ ಗುಬ್ಬಿಶೆಟ್ಟಪ್ಪ, ಇಬ್ಬರೂ ಹೋದೆವು, ಅದೇ ಉಳುಕಲ್ಲಿಗೆ ನಮ್ಮ ಊರು ಗುಬ್ಬಿಯಿಂದ ಒಬ್ಬ ಹೆಣ್ಣುಮಗಳನ್ನು ಕೊಟ್ಟು ಲಗ್ನಮಾಡಿದ್ದರು. ಆ ಹೆಣ್ಣುಮಗುವಿನ ತಂದೆ ತಾಯಿಗಳು ನನ್ನ ಗೆಳೆಯ ಗುಬ್ಬಿಶೆಟ್ಟಪ್ಪನಿಗೆ ತುಂಬಾ ಪರಿಚಯವಿತ್ತು! ಆ ಹೆಣ್ಣು ಮಗುವಿಗೂ ಪರಿಚಯವಿತ್ತು. ನಾವಿಬ್ಬರೂ ಬೀದಿಯಲ್ಲಿ ಗಾಡಿಗಳನ್ನು ಹುಡುಕುತ್ತಿರುವಾಗ್ಗೆ ಆ ಹೆಂಗಸು ಸಂತೋಷದಿಂದ ಕರೆದಳು. ತವರೂರಿನ ಜನವೆಂದರೆ ಹೆಂಗಸರಿಗೆ ಸಂತೋಷವಲ್ಲವೇ? ಆ ಅಮ್ಮ ಕರೆದಕೂಡಲೇ ನಾವು ಆ ಮನೆಯೊಳಗೆ ಹೋದೆವು. ಮಧ್ಯಾಹ್ನ ಸುಮಾರು ಒಂದೂವರೆ ಗಂಟೆಯ ಸಮಯ. ಕುಳಿತುಕೊಳ್ಳಲು ಚಾಪೆಯನ್ನು ಹಾಸಿ, ಕುಡಿಯಲು ಮಜ್ಜಿಗೆಯನ್ನು ಕೊಟ್ಟು, ಅಡಿಕೆ ಎಲೆಯನ್ನು ಕೊಟ್ಟರು. ನಾವು ಮಜ್ಜಿಗೆಯನ್ನು ಕುಡಿದು ತಾಂಬೂಲವನ್ನು ಸವಿಯುತ್ತ ಅವರಿಗೆ ಹೇಳಿ ಅಲ್ಲಿಂದ ಹೊರಟೆವು. ಹೊರಟು ಅರ್ಧ ಫರ್ಲಾಂಗ್ ಬಂದಮೇಲೆ ನನ್ನ ಸ್ನೇಹಿತ ಗುಬ್ಬಿಶೆಟ್ಟಪ್ಪನಿಗೆ ತಲೆ ತಿರುಗಲು ಪ್ರಾರಂಭವಾಯ್ತು. ಹಾಗೆಯೇ ಆತನನ್ನು ಮೆಲ್ಲಗೆ ಸಮೀಪದಲ್ಲಿದ್ದ ಒಂದು ದೇವರ ಗುಡಿಗೆ ಕರೆದುಕೊಂಡು ಬಂದೆನು. ಆತನಿಗೆ ಬಿಕ್ಕುಹತ್ತಿ

ಶಿವ, ಶಿವಾಯೆನ್ನುತ್ತಾ ನನ್ನ ತೊಡೆಯ ಮೇಲೆಯೇ ತನ್ನ ಶರೀರವನ್ನು ಬಿಟ್ಟು ಪರಲೋಕಯಾತ್ರೆ ಮಾಡಿದ. ಅಷ್ಟು ಹೊತ್ತಿಗೆ ಜನಗಳು ಗುಂಪು ಸೇರಿದರು. ಪಕ್ಕದಲ್ಲಿ ಸುಗ್ಗೇನಹಳ್ಳಿ ಸುಮಾರು ಎರಡು ಮೈಲುಯಿತ್ತು. ಆಗ ಅಲ್ಲಿಗೆ ವರ್ತಮಾನ ಕೊಟ್ಟ ನಂತರ ನಮ್ಮ ಸಂಸ್ಥೆಯವರು, ದಫೇದಾರರು ವಗೈರೆ ಜನರು ಸೇರಿದರು. ಸಾಯಂಕಾಲ ಆರು ಘಂಟೆಯ ಸಮಯ. ದಪೇದಾರರು, ಗೌಡ-ಶಾನುಭೋಗರು ಕಾನ್‌ಸ್ಟೇಬಲ್ ಎಲ್ಲರೂ ಸೇರಿ ಮಹಜರ್ ಮಾಡಿದರು. ನನ್ನ ಕಂಪನಿ ಹುಡುಗರು, ಹೆಗಸರೂ ತುಂಬಾ ಗಾಬರಿಯಾಗಿ ಭಯದಿಂದ ನಡುಗುತ್ತಲಿದ್ದಾರೆ. ನಾನು ಸುಗ್ಗೆನಹಳ್ಳಿಗೆ ಮೃತಶರೀರವನ್ನು ಬಿಟ್ಟುಹೋಗಲು ದಫೇದಾರ್ ಸಾಹೇಬರ ಅಪ್ಪಣೆಯಿಲ್ಲ. ಹೋಗದಿದ್ದರೆ ವಿಧಿಯಿಲ್ಲ, ಆಗ ಪಂಚಾಯಿತರ ಜಾಮೀನು ಕೊಟ್ಟು ದಫೇದಾರರ ಕೈ ಬೆಚ್ಚಗೆ ಮಾಡಿ, ನಮ್ಮ ಪೈಕಿ ಇಬ್ಬರನ್ನು ಶವದ ಹತ್ತಿರ ಬಿಟ್ಟು, ಸುಗ್ಗೇನಹಳ್ಳಿಗೆ ಬಂದು ಎಲ್ಲಾ ಕಂಪನಿಯ ಜನಗಳಿಗೆ ಧೈರ್ಯ ಹೇಳಿ, ಬೆಳಗ್ಗೆ ಉಳ್‌ಕಲಿಗೆ ಬಂದು, ದಫೇದಾರರಿಗೆ ತಕ್ಕ ಸಮಧಾನ ಹೇಳಿ, ಹೇಳಿಸಿ, ಮತ್ತೊಂದು ಕೈ ಬೆಚ್ಚಗೆ ಮಾಡಿ, ಹೆಣವನ್ನು ಸಮಾಧಿ ಮಾಡಲಾಯಿತು.

ಅನಂತರ ಗಾಡಿಗಳನ್ನು ಗೊತ್ತುಮಾಡಿ ಸಾಮಗ್ರಿಗಳನ್ನು ಕುಣಿಗಲ್‌ಗೆ ಸಾಗಿಸಿ ಡೇರಾ ಹೊಡೆದು ನಾಟಕವನ್ನಾಡಲು ಅಡ್ವರ್ಟೈಜ್ ವಗೈರೆ ಮಾಡಿದ್ದೇವೆ. ಸಾಯಂಕಾಲವೇ ನನಗೆ ಪೋಲೀಸ್ ವಾರೆಂಟ್ ಬಂದಿರುತ್ತೆ. ಪೋಲೀಸ್ ಇನ್‌ಸ್ಪೆಕ್ಟರ್ ನನ್ನನ್ನು ಕರೆಯಿಸಿ, ನೀವು ಮಾಗಡಿಗೆ ಹೋಗಬೇಕು. ನಿಮ್ಮ ಮೇಲೆ ಕಂಪ್ಲೇಂಟ್ ಬಂದಿರುತ್ತೆ. ನೀವು ಮೃತರಿಗೆ ವಿಷ ಹಾಕಿರುತ್ತೀರೆಂದು-ಎಂದು ಹೇಳಲು ಆಗ ನನ್ನ ಗತಿ, ಸಂಸ್ಥೆಯ ಗತಿ ಏನಾಗಿರಬಹುದು? ಸರಿ, ಶ್ರೀ ಚನ್ನಬಸವೇಶ್ವರ ಗತಿಯೆಂದು ನಾಟಕ ನಿಲ್ಲಿಸಿ ಮಾಗಡಿಗೆ ಹೋದೆನು. ಅಲ್ಲಿಂದ ಮೆಡಿಕಲ್ ಡಿಪಾರ್ಟ್‌ಮೆಂಟ್‌ನವರು ಉಲ್‌ಕಲ್ಲಿಗೆ ಬಂದು ಹೆಣವನ್ನು ಕಿತ್ತು ಮಾಗಡಿಯ ಆಸ್ಪತ್ರೆಯಲ್ಲಿ ಕೊಯ್ದು. ಬೆಂಗಳೂರಿಗೆ ಕಳುಹಿಸಿ, ನಾನು ನಿರಪರಾಧಿಯೆಂದು ವರ್ತಮಾನ ಬರುವವರೆಗೂ, ನನ್ನ ಜಾಮೀನು ಬಿಡುಗಡೆಯಾಗಿರಲಿಲ್ಲ. ಇದಕ್ಕೆ ಗುಬ್ಬಿಯಿಂದ ನನ್ನ ವಿರೋಧಿಗಳು ಕಂಪ್ಲೆಂಟ್ ಕೊಟ್ಟದ್ದೇ ಕಾರಣ! ಪುನಃ ನಾನು ಕುಣಿಗಲ್‌ಗೆ ಬಂದು ನಾಟಕಗಳನ್ನಾಡಿದೆ.

ಅಲ್ಲಿಂದ ಮಾಗಡೀ ಜಾತ್ರೆಯಲ್ಲಿ ನಾಟಕವಾಡಿಕೊಂಡು ಪುನಃ ಶಿವಗಂಗೆಯ ಎರಡನೆ ಜಾತ್ರೆ, ಹೊನ್ನಾದೇವಿಯ ಜಾತ್ರೆಯಲ್ಲಿ ನಾಟಕವಾಡುವಾಗ್ಗೆ ನನಗೆ ಎರಡನೇ ಲಗ್ನಕ್ಕೆ ಹನುಮಂತಪುರದಲ್ಲಿ ಕನ್ಯೆ ಗೊತ್ತುಮಾಡಿದ್ದರು. ಈ ಜಾತ್ರೆಗಳು ಪೂರೈಸಲು ಎರಡೂವರೆ ತಿಂಗಳಾಯಿತು. ಈ ಜಾತ್ರೆಗಳಲ್ಲಿ ನಿತ್ಯವೂ ನಿದ್ರೆಗೆಟ್ಟು, ನಿತ್ಯವೂ ಪಾತ್ರಮಾಡಿ, ತುಂಬಾ ಆಯಾಸವಾದುದರಿಂದ, ಶ್ರೀ ಗಂಗಾಧರರಾಯರಿಗೆ ತುಂಬಾ ಕಾಯಿಲೆಯಾದುದರಿಂದಲೂ, ನನಗೆ ಲಗ್ನದ ಸಂದರ್ಭ ಬಂದುದರಿಂದಲೂ, ಹದಿನೈದು ದಿನಗಳು ಸಂಸ್ಥೆಗೆ ವಿರಾಮಕೊಟ್ಟು ನನ್ನ ಕೆಲಸಕ್ಕೆ ಹೋದೆನು. ಅವೊಳಗಾಗಿ ತಿಪಟೂರಿನಲ್ಲಿ ಡೇರಾ ಹೊಡೆಯಲು ಗೊತ್ತು ಮಾಡಿದ್ದವಾದುದರಿಂದ, ಅಲ್ಲಿ ಥಿಯೇಟರ್ ತಯಾರಾಯಿತು. ಗಂಗಾಧರರಾಯರು ಕಾಯಿಲೆಯಿಂದ ಹುಷಾರಾದರು. ನನ್ನ ಲಗ್ನದ ಕಾರ್ಯವೂ ಹನುಮಂತಪುರದಲ್ಲಿ ಸುಲಲಿತವಾಗಿ ಜರುಗಿತು. ಅಷ್ಟರೊಳಗೆ ತಿಪಟೂರಿನಲ್ಲಿ ಥಿಯೇಟರ್

ತಯಾರಾಗಿತ್ತು. ಸುಭದ್ರಾ, ಪ್ರಹ್ಲಾದ ಚರಿತ್ರೆ, ಪ್ರಭಾಮಣಿ, ಸದಾರಮೆ, ಬಕಾವಲಿ ನಾಟಕಗಳನ್ನು ನಾಟಕ ಒಂದಕ್ಕೆ ಇನ್ನೂರು ರೂಪಾಯಿಗಳಂತೆ ತೆಗೆದುಕೊಂಡೆನು. ಮತ್ತು ಇಪ್ಪತ್ತೊಂದು ರೂಪಾಯಿಗೆ ಒಂದು ತೊಲದಂತೆ ಭಂಗಾರ ನಾರ್‌ಸಲ್ ಫಟ್ಟ ಮೂವತ್ತು ತೊಲ ತೆಗೆದುಕೊಂಡೆನು. ಕೆಲವು ಹಣಕೊಟ್ಟು ಕೆಲವು ನಿಲ್ಲಿಸಿಕೊಂಡು ಕೆಲವು ದಿನಗಳಾದ ಮೇಲೆ ಅವುಗಳನ್ನು ಜಾತ್ರೆಗೆ ನಾಟಕ ಹಾಕಿದೆವು. ಜಾತ್ರೆಗಳಾದ ಮೇಲೆ ನನಗೆ ಟೈಫಾಯ್ಡ್ ಜ್ವರ ಪ್ರಾರಂಭವಾಗಿ, ತುಂಬಾ ಕೃಶವಾಗಿ ಉಳಿಯವುದೇ ಸಂದೇಹವಾಯ್ತು. ಆಗ ಒಂದು ಘಟನೆಯಾಯ್ತು. ಸಿ. ಬಿ. ಮಲ್ಲಪ್ಪನವರ ಊರು ಚಿಕ್ಕನಾಯ್ಕನಹಳ್ಳಿ, ಅದೇ ಊರಿನಲ್ಲಿ ಕಂಪನಿಯಿತ್ತು. ಊರಿನಲ್ಲಿ ಅವರ ತಂದೆ ತಾಯಿ, ಅಣ್ಣ ತಮ್ಮಂದಿರುಗಳು ಇದ್ದು ದೊಡ್ಡ ಸಂಸಾರಸ್ಥರಾಗಿ ಜವಳಿ ಅಂಗಡಿಯನ್ನಿಟ್ಟುಕೊಂಡು ಸಾಧಾರಣವಾಗಿ ಲೇವಾದೇವಿ ಸಹಾ ಮಾಡಿ ಕೊಂಡಿದ್ದರು. ನನ್ನ ಶರೀರಸ್ಥಿತಿಯಿಂದ ನನಗೆ ಅನುಮಾನ ಬಂದು, ಅವರನ್ನು ಸಮೀಪಕ್ಕೆ ಕರೆದ ಕೂರಿಸಿಕೊಂಡು,–"ಮಲ್ಲಪ್ಪನವರೇ ನನ್ನ ಕಾಯಿಲೆಸ್ಥಿತಿ ನೋಡಿದರೆ ನಾನು ಉಳಿಯುವುದೇ ನಂಬಿಕೆ ಇಲ್ಲವಾಗಿದೆ. ಇಲ್ಲಿ ನಿಮಗಿಂತ ನನ್ನ ಹಿತಚಿಂತಕರು ಯಾರು ಇಲ್ಲ. ಕಾರಣ, ಒಂದು ವಿಷಯ ತಾವು ನಡಸಿಕೊಡಬೇಕಾಗಿ ಪ್ರಾರ್ಥನೆ. ಏನೆಂದರೆ ನಾನೇನಾದರೂ ಈ ಕಾಯಿಲೆಯಿಂದ, ಅದೃಷ್ಟವಶಾತ್ ಭಗವಂತನ ಕೃಪೆಯಿಂದ ಬದುಕಿಕೊಂಡರೆ, ಮುಂದೆ ಕಂಪನಿಯನ್ನು ನಾವಿಬ್ಬರೂ ಭಾಗದಲ್ಲಿ ನಡೆಸೋಣ. ಒಂದು ವೇಳೆ ಗ್ರಹಚಾರವಶಾತ್ ಪರಲೋಕಯಾತ್ರೆಯಾದರೆ ನನ್ನ ನಾಟಕ ಸಾಮಾನುಗಳನ್ನು ನಿಮ್ಮ ಸುಪರ್ದಿಗೆ ತೆಗೆದುಕೊಂಡು ಇರುವ ನನ್ನ ಹಿರಿಯ ಹೆಂಡತಿಯ ಮಗ, ನನ್ನ ತಾಯಿ, ಈಗ ಹೊಸದಾಗಿ ಮದುವೆಯಾದ ನನ್ನ ಹೆಂಡತಿ, ಇವರುಗಳಿಗೆ ಧರ್ಮದ ದೃಷ್ಟಿಯಿಂದ ಏನಾದರೂ ಕೊಡಿರಿ."–ಎಂದು ಸಂಸ್ಥೆಯ ಜನಗಳನ್ನೆಲ್ಲಾ ಕೂಡ್ರಿಸಿಕೊಂಡು ಹೇಳಿದೆ; ಆದಾದ ಒಂದು ವಾರ ಹತ್ತು ದಿನಗಳಲ್ಲಿ ಕಾಯಿಲೆ ವಾಸಿಯಾಗುತ್ತ ಬಂತು. ಹದಿನೈದು-ಇಪ್ಪತ್ತು ದಿನಗಳಲ್ಲೇ ಶ್ರೀ ಚನ್ನಬಸವೇಶ್ವರಸ್ವಾಮಿ ಸಂಘವು ಬಹುದಿನ ನಡೆಯಬೇಕಾದ ಯೋಗವಿದ್ದುದರಿಂದ ಚೆನ್ನಾಗಿ ಗುಣವಾಯಿತು. ಆಗ ಮಲ್ಲಪ್ಪನವರ ಅಣ್ಣಂದಿರು ಮತ್ತು ಒಬ್ಬಿಬ್ಬರು ಸ್ನೇಹಿತರು ಸೇರಿ ಸಂಸ್ಥೆಯ ಅಭಿವೃದ್ಧಿಗಾಗಿ ಮಲ್ಲಪ್ಪನವರ ಮೂರು ಸಾವಿರ ರೂಪಾಯಿ ಕೊಟ್ಟು ಭಾಗಕ್ಕೆ ಸೇರಿ, ಉಭಯತರೂ ಕಂಪನಿಯ ಅಭಿವೃದ್ಧಿಗೆ ನಿರತರಾಗಿರಬೇಕೆಂದೂ, ಮೂರು ತಿಂಗಳಿಗೊಬ್ಬರು ಕ್ಯಾಷಿಯರ್ ಆಡಳಿತಗಳನ್ನು ನೋಡಿಕೊಳ್ಳುವಂತೆ, ಮಾತುಗಳು ಕರಾರಾಯಿತು. ಅದಕ್ಕಾಗಿ ಮಲ್ಲಪ್ಪನವರಿಂದ ಒಂದು ತಿಂಗಳಾದ ಮೇಲೆ ಒಂದು ಸಾವಿರ ರೂಪಾಯಿ ಬಂದಿತು. ಆ ಹಣವನ್ನು ಆಪತ್ಕಾಲದಲ್ಲಿ ಉಪಯೋಗಿಸಬೇಕಲ್ಲದೆ, ಬಾಕಿಯಂತೆ ಹಾಗೆಯೇ ಇರಬೇಕೆಂದು ತೀರ್ಮಾನವಾಯಿತು. ಮೊದಲನೇ ಬಾರಿಗೆ ಆಡಳಿತ ಚಾರ್ಜು ಮಲ್ಲಪ್ಪನವರಿಗೆ ಬಿಟ್ಟುಕೊಟ್ಟೆ. ಕಬ್ಬಿಣ ಪೆಟ್ಟಿಗೆಯ ಬೀಗದಕೈ ಸಿಲ್ಕು ಹಣ ಅವರ ಕೈಗೆ ಕೊಟ್ಟೆ.

೧೯೨೦ ನೆಯ ನವಬಂರ್ ತಿಂಗಳ ಸಮಯದಲ್ಲಿ ಶ್ರೀರಾಮಪುರ (ಬುದ್ಯಾಳ) ನಲ್ಲಿ ದ್ದಾಗ್ಗೆ ಶ್ರೀ ಬೆಳ್ಳಾರಿ ನರಹರಿಶಾಸ್ತ್ರಿಗಳನ್ನು ಕರೆಯಿಸಿಕೊಂಡು ಶ್ರೀ ಕೃಷ್ಣಲೀಲೆ ಎಂಬ ಪೌರಾಣಿಕ ನಾಟಕವನ್ನು ಕಲಿತು, ಪೆಯಿಂಟರ್ ಚನ್ನಬಸವಪ್ಪನವರಿಂದ ಸೀನರಿಗಳನ್ನು

ಬರೆಯಿಸಿ, ಶ್ರೀ ರಾಮಪುರದಲ್ಲಿ ಆಡಿದೆವು. ನಾಟಕವು ಶಾಸ್ತ್ರಿಗಳವರ ಶ್ರಮ ಮತ್ತು ಶ್ರದ್ಧೆಯಿಂದ ಬಹಳ ಚೆನ್ನಾಗಿ ಯಶಸ್ವಿಯಾಗಿ ನಡೆಯಿತು. ಅಂದನಕೆರೆ, ಮಾಡಾಳು, ಬೂದ್ಯಾಳು, ಬೆಲಗೂರು-ಈ ನಾಲ್ಕು ಊರುಗಳಲ್ಲಿ ಕಂಟ್ರಾಕ್ಟ್ ಕೊಟ್ಟಿದ್ದೆವು. ಅಲ್ಲಿಂದ ಚಿಕ್ಕಮಗಳೂರಿಗೆ ಕಂಪನಿಯು ಹೋಯಿತು. ಅಲ್ಲಿಗೆ ಮಲ್ಲಪ್ಪನವರು ಆಡಳಿತ ವಹಿಸಿ ನಾಲ್ಕು ತಿಂಗಳಾಗಿತ್ತು. ಅವರು ಆಡಳಿತ ಚಾರ್ಜು ನನಗೆ ಕೊಡಲಿಲ್ಲ. ಮತ್ತು ಕಂಪನಿಯ ಕೆಲವು ವಿಷಯದಲ್ಲಿ ತುಂಬಾ ಕಿರಿಕಿರಿಯಾಯಿತು. ಸಂಸ್ಥೆಯು ಬೆಲಗೂರಿನಿಂದ ಹರಿಹರಕ್ಕೆ ಹೋಯಿತು. ಪುರಜನಗಳು ನನ್ನೊಬ್ಬನಿಗೆ ಹಾರ ವಗೈರೆ ಯಾರಾದರೂ ಹಾಕಿದರೆ ಆ ದಿನ ನನ್ನಲ್ಲಿ ಅವರು ಮಾತನಾಡುತ್ತಿರಲಿಲ್ಲ. ಅಂತಹ ಸ್ವಭಾವ ಅವರದು. ಹೀಗೆ ಬರಬರುತ್ತ ಜನಗಳಿಗೆ ಬಹು ಕಿರಿಕಿರಿ, ಹಿಡಿತವಾಗುತ್ತ ಬಂತು. ಹೀಗೇ ಸುಧಾರಿಸಿಕೊಂಡು ಅರಸೀಕೆರೆಗೆ ಮೊಕ್ಕಾಂ ಬಂದುದಾಯಿತು. ನನ್ನ ನಿಷೇಕಕ್ಕೆ ಐನೂರು ರೂ. ತೆಗೆದುಕೊಂಡು ಊರಿಗೆ ಬಂದು ಪ್ರಸ್ಥ ವಗೈರೆ ಪೂರೈಸಿ ಕಂಪನಿಗೆ ಹೋಗಿ, ಬೆಂಗಳೂರಿಗೆ ಕಂಪನಿಯನ್ನು ಹಾಕಬೇಕೆಂದು ಯೋಚಿಸಿ ತುಮಕೂರಿಗೆ ಕಂಪನಿಯನ್ನು ಹಾಕಿ, ಬೆಂಗಳೂರಲ್ಲಿ ಥಿಯೇಟರ್ ಹಾಕಲು ತಕ್ಕ ಸಲಕರಣೆಗಳನ್ನು ಒದಗಿಸಿಕೊಳ್ಳುವುದರಲ್ಲಿ ಒಂದು ತಿಂಗಳಾಯಿತು.

ಬೆಂಗಳೂರು ಕ್ಯಾಂಪು

ಬೆಂಗಳೂರು ಸುಬೇದಾರ್ ಛತ್ರಂ ರೋಡ್‌ನಲ್ಲಿ ಹನುಮಯ್ಯನವರ ಛತ್ರವನ್ನು (ಅಂದ್ರೆ ಮಾಜಿ ಮೇಯರ್ ಸುಬ್ಬಣ್ಣನವರ ತಂದೆ ಹನುಮಯ್ಯನವರು) ತಿಂಗಳು ಒಂದಕ್ಕೆ ಒಂದುನೂರು ರೂಪಾಯಿ ಬಾಡಿಗೆ ಗೊತ್ತು ಮಾಡಿ, ತುಮಕೂರು ಅರಸಿಕೆರೆಯ ಸ್ನೇಹಿತರಿಂದ ಕೆಲವು ಜಿಂಕ್‌ಷೀಟ್‌ಗಳನ್ನು ಬಾಡಿಗೆಗೆ ತಂದು ನಮ್ಮಲ್ಲಿದ್ದ ಜಿಂಕ್‌ಷೀಟ್‌ಗಳ ಜೊತೆಗೆ ಆ ಕಾಂಪೌಂಡಿನಲ್ಲಿ ಥಿಯೇಟರ್ ಭರ್ತಿ ಹೊಡೆದು ಥಿಯೇಟರ್ ಕಟ್ಟಿ, ತಾರೀಕು ಜುಲೈ ೧೩, ೧೯೨೧ ರಲ್ಲಿ ಬೆಂಗಳೂರಿನಲ್ಲಿ ಪ್ರಥಮ ಸುಭದ್ರಾಕಲ್ಯಾಣವೆಂಬ ಪೌರಾಣಿಕ ನಾಟಕವಾಡಿದೆವು.

ಆ ಸಮಯಕ್ಕೆ ಸಂಸ್ಥೆಯು ಬಹಳ ಅಭಿವೃದ್ಧಿಗೆ ಬಂದಿತ್ತು. ಆಗ್ಗೆ ಕಂಪನಿಯಲ್ಲಿ ಅರವತ್ತು-ಎಪ್ಪತ್ತು ಜನಗಳನ್ನು ಸೇರಿಸಲಾಯ್ತು. ಖರ್ಚಿನ ಬಾಬ್ತು ತುಂಬಾ ಹೆಚ್ಚಾಗುತ್ತ ಬಂತು. ವಾದ್ಯಗಾರರು-ಪಿಟೀಲ್ ಕೇಶವಮೂರ್ತಿಗಳು, ತಬಲ ಮುನಿಸ್ವಾಮಿ, ಹಾರ್ಮೋನಿಯಂಗೆ ಶ್ರೀನಿವಾಸಯ್ಯನವರು, ಸಿ. ಬಿ. ಮಲ್ಲಪ್ಪ, ಗಂಗಾಧರರಾಯರು, ನಾರಾಯಣರಾವ್, ತಿಮ್ಮೋಟ, ಯು. ಕೆ. ವ್ಯಾಸರಾವ್, ನಾರಾಯಣನಾಯ್ಡು, ರಾಮಚಂದ್ರರಾವ್, ಸುಂದರಮ್ಮ, ದಾವಣಗೆರೆ ಸುಂದರಮ್ಮ ಮುಂತಾದವರು ಒಳ್ಳೆ ಒಳ್ಳೆ ನಟರು ಇದ್ದುದರಿಂದ ಉತ್ಪತ್ತಿಯು ಚೆನ್ನಾಗಿ ಆಗಿ ಒಳ್ಳೆಯ ಕೀರ್ತಿಯು ಲಭಿಸಿತು. ಕೆ. ಗೋಪಾಲಾಚಾರ್ರು, ಉಡುಪಿ ಸುಂದ್ರ, ಮಹಾಬಲರಾವ್ ಮುಂತಾದವರೂ ಸೇರಿದರು. ಬೆಂಗಳೂರು ಮೊಕ್ಕಾಮಿನಲ್ಲಿ ನಾಟಕಗಳು ಚೆನ್ನಾಗಿ ನಡೆಯುತ್ತಾ ಬಂದು, ಐದು ತಿಂಗಳು ನಾಟಕಗಳನ್ನಾಡಿದೆವು. ನಾವು ಆಡುವ ನಾಟಕಗಳಲ್ಲಿ ಸದಾರಮೆ, ಪ್ರಭಾಮಣಿ ವಿಜಯಕ್ಕೆ ಒಳ್ಳೆಯ ಹೆಸರು ಬಂದಿತು. ಅಕ್ಟೋಬರ್ ತಿಂಗಳ ಕೊನೆಗೆ ಒಂದು ವರ್ಷವಾಯ್ತು ಮಲ್ಲಪ್ಪನವರು ಭಾಗಕ್ಕೆ ಸೇರಿ; ಕಳಾನಿಧಿ ಪ್ರೆಸ್ ಟಿ. ಕೆ. ಕೃಷ್ಣಸ್ವಾಮಿಶೆಟ್ಟಿಯವರ ಮುಖಾಂತರ ಒಂದು ವರ್ಷಕ್ಕೆ ಸರಿಯಾಗಿ ತೀರ್ಮಾನಮಾಡಿಕೊಂಡೆವು. ಪ್ರಭಾಮಣಿವಿಜಯ ನಾಟಕದಲ್ಲಿ ನಾನು ವಿರೋಚನನ (ಹುಚ್ಚ) ಪಾತ್ರವನ್ನು ಮಾಡುತ್ತಿದ್ದೆ. ಬೆಂಗಳೂರು ಅಮೆಚೂರ್ ನಾಟಕದವರು ಅಂದರೆ ಸ್ವರ್ಗವಾಸಿಗಳಾದ ಕೈಲಾಸಂರವರು ಕೂಡಾ ನಮ್ಮ ನಾಟಕವನ್ನು ನೋಡಲು ಬರುತ್ತಿದ್ದರು. ಒಂದು ದಿನ ಪ್ರಭಾಮಣಿವಿಜಯದಲ್ಲಿ ನನ್ನ ಹುಚ್ಚನ ಪಾತ್ರವನ್ನು ನೋಡಿ ರಂಗಭೂಮಿಯ ಮೇಲೆ ಬಂದು ತಮ್ಮ ಕೈಯಲ್ಲಿ ಕಟ್ಟಿಕೊಂಡಿದ್ದ ಬೆಲೆಯುಳ್ಳ ರಿಸ್ಟ್ ವಾಚನ್ನು ಬಹುಮಾನವಾಗಿ ದಯಪಾಲಿಸಿ, ಆಶೀರ್ವದಿಸಿ, ನನ್ನ ಶ್ರೇಯಸ್ಸು ಕೋರಿದರು. ಸಿ. ಬಿ. ಮಲ್ಲಪ್ಪನವರು ನನಗೆ ಬಂದ ಬಹುಮಾನವನ್ನು ನೋಡಿ ಸಹಿಸಲಾರದೆ ಯಾವುದೋ ಒಂದು ಕಾರಣ ಹೇಳಿ ಊರಿಗೆ ಹೋಗಿ ಎರಡು-ಮೂರು ದಿನಗಳಲ್ಲೇ ಬರುತೇನೆಂದು ಹೇಳಿಹೋದವರು ಎಂಟು ಹತ್ತು ದಿನಗಳಾದರೂ ಬರಲಿಲ್ಲ. ಅವರು ಕಂಪನಿಯಲ್ಲಿಲ್ಲದುದರಿಂದ ಜನಗಳು ಕರೆಸಬೇಕೆಂದು ತುಂಬಾ ಅಪೇಕ್ಷಪಟ್ಟರು. ಅದೂ ಅಲ್ಲದೆ ಉತ್ಪತ್ತಿಯೂ ಕೊಂಚ ಕಡಿಮೆಯಾಗುತ್ತ ಬಂತು. ಆಗ ಮಲ್ಲಪ್ಪನವರನ್ನು ಕರೆಯಲು ಬೆಳ್ಳಾವಿ ನರಹರಿಶಾಸ್ತ್ರಿಗಳವರನ್ನು ಕಳುಹಿಸಿ ಒಂದು ಸಾವಿರ ರೂಪಾಯಿಗಳನ್ನು ಮುಫತ್ತಾಗಿ

ಕೊಟ್ಟು ನೂರು ರೂಪಾಯಿ ಸಂಬಳ ಗೊತ್ತುಮಾಡಿ ಕರೆಸಿಕೊಂಡುದಾಯ್ತು. ಅನಂತರ ಅಲ್ಲಿಯೇ ಕೆಲವು ನಾಟಕಗಳನ್ನಾಡಿ ಡಿಸೆಂಬರ್ ತಿಂಗಳ ಕೊನೆಗೆ ಹಾಸನಕ್ಕೆ ಹೋದೆವು.

ನಾವು ಬೆಂಗಳೂರಿನಲ್ಲಿ ಕಟ್ಟಿ ಆಡುತ್ತಲಿದ್ದ ಥಿಯೇಟರ್‌ನ್ನು 'ಶಾಕುಂತಲಾ ನಾಟಕ ಸಭಾ, ಮೈಸೂರು"–ಎಂಬ ಸಂಸ್ಥೆಗೆ ತಿಂಗಳು ಒಂದಕ್ಕೆ ಮೂನ್ನೂರು ರೂಪಾಯಿಯಂತೆ ಬಾಡಿಗೆ ಗೊತ್ತುಮಾಡಿ ಕೊಟ್ಟೆನು. "ಶಾಕುಂತಲಾ ನಾಟಕ ಸಭಾ" ಯೆಂದರೆ ಮೈಸೂರು ಚಾಮರಾಜೇಂದ್ರ ಒಡೆಯರವರು ಅರಮನೆಯಲ್ಲಿ ನಾಟಕ ಆಡಿಸಲು ತಯಾರಿಸಿದ "ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ!" ಆ ಸಂಸ್ಥೆಯು ಮೈಸೂರು ಅಲ್ಲದೆ ಹೊರಗಡೆ ಎಲ್ಲಿಯೂ ಆಡಿರಲಿಲ್ಲ. ಬೆಂಗಳೂರಿನಲ್ಲಿ ನಾಟಕಶಿರೋಮಣಿ. ಶ್ರೀ ಎ. ವಿ. ವರದಾಚಾರ್ಯರು ಬೆಂಗಳೂರಿನ ಕಿಚ್ಚೆಟ್ಟ ಛತ್ರದಲ್ಲಿ (ಹಾಲಿ ಈಗ ಸ್ಟೇಟ್ ಟಾಕಿಸಿ ಇರುವ ಸ್ಥಳ) ಹಾಕಿರುವ ಥಿಯೇಟರ್ ಖಾಲೀ ಇರುವುದರಿಂದ ಸರದಾರ್ ಗೋಪಾಲರಾಜೇ ಅರಸಿನವರು ಸಂಸ್ಥೆಯನ್ನು ಕರೆಸಿ ಆಡಿಸುತ್ತಿದ್ದರು. ಒಂದು ದಿನ ಆಗ ನಾಟಕವಿರಲಿಲ್ಲ. ಆ ಸಂಸ್ಥೆಯ ನಟರಾದ ಸುಬ್ಬರಾಯರೆಂಬುವರು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರೆಂಬ ಕಾರಣ ಕೃಷ್ಣರಾಜೇಂದ್ರ ಒಡೆಯರವರು ಅರಮನೆಯ ಕಂಪನಿಯನ್ನು ನಿಲ್ಲಿಸಿ, ಪರದೆ ಸೀನರಿ, ಡ್ರೆಸ್, ವಗೈರೆ ವಿಶಿಷ್ಟ ಸಾಮಾನುಗಳನ್ನೂ ಎಲ್ಲಾ ನಟರನ್ನೂ ಕರೆಯಿಸಿ– "ನೀವುಗಳೆಲ್ಲಾ ಸೇರಿ ಬೇರೆ ಸಂಸ್ಥೆಯನ್ನು ಮಾಡಿಕೊಳ್ಳಿರೆಂದು" ಹೇಳಿ, ಸಾಮಾನುಗಳನ್ನು ಬಹುಮಾನವಾಗಿ ಆಶೀರ್ವಾದ ಮಾಡಿಕೊಟ್ಟರು. ಆಗ ಕಲಾವಿದರೆಲ್ಲರೂ ಸೇರಿ "ಶಾಕುಂತಲಾ ಕರ್ನಾಟಕ ನಾಟಕ ಸಭಾ"– ಎಂಬ ಹೆಸರಿಟ್ಟುಕೊಂಡು ೧೯೨೨ನೇ ಇಸ್ವಿಯಲ್ಲಿ ಬೆಂಗಳೂರಿನಲ್ಲಿ ನಾನು ಕಟ್ಟಿಸಿದ್ದ ಥಿಯೇಟರ್‌ಗೆ ಬಂದು ನಾಟಕಗಳನ್ನಾಡಿದರು. ತದನಂತರ ಶಾಕುಂತಲದಲ್ಲಿ ಎರಡು ಭಾಗವಾಗಿ, ಒಂದು ಭಾಗಕ್ಕೆ "ಚಾಮುಂಡೇಶ್ವರೀ ನಾಟಕ ಸಭಾ ಲಿ. ಮೈಸೂರ್"–ಎಂದು ಹೆಸರಾಯಿತು.

ನಾವು ಹಾಸನ ಕ್ಯಾಂಪು ಮುಗಿಸಿಕೊಂಡು ಸಕಲೇಶಪುರಕ್ಕೆ ಹೋದೆವು. ಅಲ್ಲಿ ಸುಂದರಮ್ಮಯೆಂಬ–ಅಂದರೆ ನಾನು ಗಾಂಧರ್ವ ವಿವಾಹಮಾಡಿಕೊಂಡಿದ್ದ–ನಟೀಮಣಿಗೆ ತಾರೀಕು ೨೨-೨-೧೯೨೨ ರಂದು ಒಂದು ಹೆಣ್ಣುಮಗುವು ಜನನವಾಯ್ತು. ಅದಕ್ಕೆ "ಸುವರ್ಣ" ಯೆಂದು ನಾಮಕರಣಮಾಡಿ, ಆ ಕ್ಯಾಂಪು ಮುಗಿಸಿಕೊಂಡು, ಚಿಕ್ಕಮಗಳೂರಿಗೆ ಬಂದು ನಾಟಕವಾಡುವ ಕಾಲದಲ್ಲಿ, ಶ್ರೀಯುತ ಶಿವರಾಮಕಾರಂತರು ಬಂದು ಕಂಪನಿಯಲ್ಲಿ ಕೆಲವು ದಿನಗಳಿದ್ದು "ರನ್ನನ ಗದಾಯುದ್ಧ"– ಎನ್ನುವ ನಾಟಕವನ್ನು ಅಭ್ಯಾಸಮಾಡಲು ಕೊಟ್ಟರು. ಆದರೆ ಅವರ ನಾಟಕದಲ್ಲಿ ಹೆಂಗಸರು ಪಾತ್ರಮಾಡಕೂಡದೆಂಬ ನಿಬಂಧನೆ ಮಾಡಿದ್ದರು. ನಾನು ಅದಕ್ಕೆ ಒಪ್ಪಿದ್ದು ಅಭ್ಯಾಸವು ಅಲ್ಲಿಗೇ ನಿಂತುಹೋಯಿತು. ಸಂಸ್ಥೆಯು ಚಿಕ್ಕಮಗಳೂರಿನಿಂದ ತರೀಕೆರೆ, ಅರಸೀಕೆರೆ ಮುಗಿಸಿಕೊಂಡು ಶಿವಮೊಗ್ಗಕ್ಕೆ ಬಂದಿತು.ಅರಸೀಕೆರೆಯಲ್ಲಿ ನಮ್ಮ ಸಂಸ್ಥೆಗೆ ಹಾಕಿದ ನಾಟಕ ಮಂದರಿವನ್ನು ಗದುಗಿನ ದತ್ತಾತ್ರೇಯ ನಾಟಕಮಂಡಲಿಯ ಮಾಲಿಕರಾದ ಗರೂಡ ಸದಾಶಿವರಾಯರು ಕೇಳಿದುದರಿಂದ ಅವರಿಗೆ ಬಿಟ್ಟುಕೊಟ್ಟು ನಾವು ಶಿವಮೊಗ್ಗೆ ಬಂದು ನಾಟಕಗಳನ್ನಾಡಲು ಪ್ರಾರಂಭಮಾಡಿದೆವು. ಬೆಂಗಳೂರು ಬಿಡುವ ಸಮಯದಲ್ಲಿ ಜಿ. ನಾಗೇಶರಾಯರನ್ನು

ನೂರ ಇಪ್ಪತ್ತೈದು ರೂಪಾಯಿ ಸಂಬಳದ ಮೇಲೆ ಸಂಸ್ಥೆಗೆ ಸೇರಿಸಿಕೊಂಡೆನು. ಶಿವಮೊಗ್ಗೆಯಲ್ಲಿ ನಾಟಕಗಳನ್ನು ಅಭಿನಯಿಸುತ್ತಿದ್ದಾಗ್ಗೆ ನನ್ನ ದೂರದ ಸಂಬಂಧಿಕ, ತಂದೆ ತಾಯಿ ಇಲ್ಲದ ಸುಮಾರು ಹನ್ನೆರಡು ವರ್ಷದಿಂದ ನನ್ನನ್ನೇ ಆಶ್ರಯಿಸಿ ಕೊಂಡಿದ್ದ, ನೀಲಕಂಠಪ್ಪನೆಂಬ ಹುಡುಗನ ಮದುವೆಯನ್ನು ಸಂಸ್ಥೆಯ ಸಹಕಾರದಿಂದ ನೆರವೇರಿಸಿದೆನು. ಶಿವಮೊಗ್ಗದಿಂದ ಗುಬ್ಬಿ, ಗುಬ್ಬಿಯಿಂದ ಸಂಸ್ಥೆಯು ಕೋಲಾರಕ್ಕೆ ಹೋಯಿತು. ಕೋಲಾರದಲ್ಲಿ ಶ್ರೀ ಬೆಳ್ಳಾವಿ ನರಹರಿಶಾಸ್ತ್ರಿಗಳು ನಾರ್‌ಮಲ್ ಸ್ಕೂಲ್ ಹೆಡ್ ಮಾಸ್ಟರರಾಗಿದ್ದರು. ಕೋಲಾರದಲ್ಲಿ ನಾಟಕಗಳನ್ನಾಡುತ್ತಿರುವಾಗ್ಗೆ "ಕಬೀರ್" ನಾಟಕವನ್ನು ಅಭ್ಯಾಸಮಾಡಿ, ಅದೇ ಸ್ಥಳದಲ್ಲಿ ಆಡಿದೆವು. ಅಲ್ಲಿನ ಪುಂಡ ಜನಗಳು ನಮ್ಮ ಮ್ಯಾನೇಜರ್‌ಗಳ ಮೇಲೆ ಗಲಾಟೆಯೆಬ್ಬಿಸಿದರು, ಅದನ್ನು ಸರಿಹೋಗಿಸಿಕೊಂಡು ಸಂಸ್ಥೆ ಬೆಂಗಳೂರಿಗೆ ಬಂದು ಕೆಲವು ದಿನ ನಾವು ಹಾಕಿದ್ದ ಶಾಲೆಯಲ್ಲಿ ನಾಟಕಗಳನ್ನಾಡುತ್ತಾ ಇದ್ದೆವು.

ನಾಟಕ ಮಂದಿರದ ಅಂಕುರಾರ್ಪಣ

ಒಮ್ಮೆ ನಾನು ಗುಬ್ಬಿಗೆ ಹೋಗಿದಾಗ್ಗೆ ಅಲ್ಲಿಗೆ ಶ್ರೀ ಸರ್ಪಭೂಷಣಸ್ವಾಮಿ ಮಠಾಧ್ಯಕ್ಷರಾದ ಶ್ರೀ ಶ್ರೀ ಚೆನ್ನಬಸವಸ್ವಾಮಿಗಳು ಬಂದು ಈಗ ಹಾಲೀ ಗೀತಾಟಾಕೀಸ್ ಇರುವ ಸ್ಥಳದಲ್ಲಿ ನಾಟಕ ಮಂದಿರವನ್ನು ಕೆಲವು ನಿಬಂಧನೆಗಳ ಮೇಲೆ ಕಟ್ಟಬೇಕೆಂದು ಹೇಳಿದರು. ಅದು ನನ್ನಿಂದಾಗದು ಎಂದು ಹೇಳಿದಾಗ್ಯೂ ಕೇಳದೆ, ನೀನು ಕಟ್ಟುತ್ತೇನೆಂದು ಹೇಳಿದರೆ ನಾನು ಶಿವಪೂಜೆಗೆ ಹೋಗುತ್ತೇನೆ. ಇಲ್ಲವಾದರೆ ಇಲ್ಲವೆಂದು ಹಟಮಾಡಿದರು. ಆಗ ನಾನು ಶ್ರೀ ಚೆನ್ನಬಸವೇಶ್ವರಸ್ವಾಮಿಯ ಮೇಲೆ ಭಾರ ಹಾಕಿ, ಶ್ರೀ ಚನ್ನಬಸವೇಶ್ವರಸ್ವಾಮಿಯ ದೇವಸ್ಥಾನದಲ್ಲೇ ಸ್ವಾಮಿಗೆ ನಮಸ್ಕಾರ ಹಾಕಿ, ನಾಟಕಮಂದಿರವನ್ನು ಕಟ್ಟುತ್ತೇನೆಂದು ಒಪ್ಪಿಕೊಂಡೆನು. ಆಗ ಸ್ವಾಮಿಗಳವರು ಶಿವಪೂಜೆ ತೀರಿಸಿಕೊಂಡು ಸಂತೋಷದಿಂದ ಬೆಂಗಳೂರಿಗೆ ಬಂದರು. ನನ್ನಲ್ಲಿ ಥಿಯೇಟರ್ ಕಟ್ಟಲು ಹಣವಿಲ್ಲ. ಕಟ್ಟುವುದಾಗಿ ಒಪ್ಪಿಕೊಂಡು ದೇವರಿಗೇನೋ ನಮಸ್ಕಾರ ಹಾಕಿದೆ. ಏನು ಮಾಡಲಿಯೆಂಬ ಯೋಚನೆಯೇ ಬಲವಾಯಿತು. ಆಗ ಗುಬ್ಬಿಗೆ ಬಂದು ನನಗೆ ಆಪ್ತರಾಗಿದ್ದ ಮುರಿಗೆಪ್ಪನೆಂಬ ಓರ್ವಧನಿಕರನ್ನು ಗುದ್ಧಲಿ ಪೂಜೆಗಾಗಿ ಎರಡುಸಾವಿರ ರೂಪಾಯಿ ಕೇಳಿದೆ. ಅದಕ್ಕೆ ಅವರು "ವೀರಣ್ಣ, ನಿನಗೆ ಕೊಡುವುದಕ್ಕೆ ನನಗೆ ಮನಸ್ಸಿದ್ದರೂ, ನನ್ನ ತಂದೆಯವರು ಇರುವುದರಿಂದ ನಾನು ಸ್ವತಂತ್ರನಲ್ಲ. ಆದರೂ ನಾನು ನಿನಗೆ ಬೇರೆ ದಾರಿಯಿಂದ ಸಹಾಯ ಮಾಡುತ್ತೇನೆ" ಎಂದು ಹೇಳಿ, ನನ್ನ ಜೊತೆಯಲ್ಲಿ ಬೆಂಗಳೂರಿಗೆ ಬಂದು, ಅಡಿಕೆಮಂಡಿ ದುರ್ಗಪ್ಪನವರಿಗೆ ಎರಡುಸಾವಿರ ರೂಪಾಯಿಗೆ ನನ್ನನ್ನು ಸೇರಿಸಿಕೊಂಡು ಪ್ರೊನೋಟ್ ಬರೆದುಕೊಟ್ಟು, ಹಣವನ್ನು ತೆಗೆದುಕೊಂಡು ನನಗೆ ಕೊಟ್ಟರು. ಅದೇ ಹಣದಿಂದ ಒಳ್ಳೆ ಮುಹೂರ್ತದಲ್ಲಿ ದೇವರ ಪೂಜೆ ಮಾಡಿಸಿ, ಸ್ವಾಮಿಯವರಿಗೂ, ಎರಡುಸಾವಿರ ರೂಪಾಯಿ ಕೊಡಿಸಿದ ಮುರಿಗೆಪ್ಪನವರಿಗೂ ನಮಸ್ಕರಿಸಿ, ಗುದ್ದಲಿಪೂಜೆ ಮಾಡಿ ತಳಪಾಯ ಮಾಡಲು ಆರಂಭ ಮಾಡಿಸಿದೆನು.

ಸಂಸ್ಥೆಯನ್ನು ಚೆನ್ನಪಟ್ಟಣಕ್ಕೆ ಕಳುಹಿಸಿ ಅಲ್ಲಿ ನಾಟಕಗಳನ್ನು ಆಡಿದೆವು. ಉತ್ಪತ್ತಿ ಚೆನ್ನಾಗಿ ಆಯಿತು. ಅಲ್ಲಿಂದ ಸಂಸ್ಥೆಯು ಕಾನಕಾನ್‌ಹಳ್ಳಿ (ಕನಕಪುರ)ಗೆ ಹೋಯಿತು. ಅಲ್ಲಿಯೂ ಉತ್ಪತ್ತಿ ಚೆನ್ನಾಗಿಯೇ ಆಯಿತು. ಅಲ್ಲಿ ಬಂದ ಹಣವನ್ನು ಥಿಯೇಟರ್‌ನ ಕಟ್ಟಡಕ್ಕೆ ಉಪಯೋಗಿಸುತ್ತಲಿದ್ದೆ. ಅಷ್ಟರಲ್ಲಿ ಕಾನಕಾನಹಳ್ಳಿಯಲ್ಲಿ ಸಿಡುಬಿನ ರೋಗ ವ್ಯಾಪಿಸಿ ನನ್ನ ಮಗಳು ಸುವರ್ಣನಿಗೆ ತಗಲಿತು ಆಗ ಗಾಬರಿಯಿಂದ ಮಗುವನ್ನು ಕರೆದುಕೊಂಡು ಬೆಂಗಳೂರಿನಲ್ಲಿಯೇ ವಾಸವಾಗಿದ್ದ ನಮ್ಮ ಸಂಸಾರದ ಮನೆಗೆ ಬಂದೆವು. ಆಗ ಬಂಗಳೂರಿನ ಸರ್ಪಭೂಷಣ ಶಿವಯೋಗೀಶ್ವರ ಮಠದ ಆವರಣದಲ್ಲೇ ಒಂದು ಮನೆಯನ್ನು ಇಪ್ಪತ್ತೈದು ರೂಪಾಯಿಗಳಿಗೆ ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದೆವು. ನನ್ನ ಸಂಸಾರವನ್ನು, ನನ್ನ ಹಿರಿಯ ಹೆಂಡತಿಯ ಮಗ ಚಿ|| ರೇವಣ್ಣನೆಂಬ ಎಂಟುವರ್ಷದ ಹುಡುಗನನ್ನೂ ಮತ್ತು ನಾನು ಸಾಕಿಕೊಂಡಿದ್ದ ನನ್ನ ಅಕ್ಕನ ಮಗನಾದ ಚೆನ್ನಪ್ಪನೆಂಬ ಒಂಬತ್ತು ವರ್ಷದ ಹುಡುಗನನ್ನೂ, ಸ್ಕೂಲಿಗೆ ಹೋಗುವುದಕ್ಕಾಗಿ, ಇಲ್ಲಿಯೇ ಬಿಟ್ಟಿದ್ದೆನು. ಆಗ ಸಿಡುಬಿನ

ರೋಗ ಸುವರ್ಣನಿಗೆ ಹೆಚ್ಚಾದುದಲ್ಲದೆ, ನನ್ನ ಮಗ ತಾಯಿಯಿಲ್ಲದ ತಬ್ಬಲಿಗೂ ವ್ಯಾಪಿಸಿತು. ಆಗ ನಾವುಗಳು ಎಷ್ಟು ಎಚ್ಚರವಹಿಸಿದ್ದು ಎಷ್ಟು ಶ್ರಮಪಟ್ಟರೂ ಸಾರ್ಥಕವಾಗಲಿಲ್ಲ. ಮಗನನ್ನು ಮೃತ್ಯು ದೇವತೆಗೆ ಒಪ್ಪಿಸಿ ಅವರ ತಾಯಿಯ ಸನ್ನಿಧಿಗೆ ಕಳುಹಿಸಿದುದಾಯಿತು. ದ್ವಿಗುಣವಾಗಿ ಸಿಡುಬುರೋಗದಿಂದ ಬಳಲುತ್ತಿದ್ದ ಸ್ವರ್ಣಮ್ಮ ಎಂಬ ಹೆಣ್ಣು ಮಗುವನ್ನು ಮೃತ್ಯುದೇವತೆಯು ತಾನೊಪ್ಪಿಸಿಕೊಳ್ಳದೆ ಇಲ್ಲಿಯೇ ಅವರ ತಾಯಿಯ ಬಳಿಯಲ್ಲಿಯೇ ಬಿಟ್ಟುಹೋಳು. ಇದೇ ದುಃಖದಲ್ಲಿ "ಪುತ್ರಶೋಕಂ ನಿರಂತರಂ"– ಎನ್ನುವ ನಾಣ್ಣುಡಿಯಿದ್ದರೂ ಅದರಂತೆ ನಡೆದರೆ ಮುಂದಿನ ಮಾರ್ಗ ಹೇಗೆ ನಡೆಯಬೇಕು? ಅಲ್ಲದೆ ಐವತ್ತೈದು - ಅರವತ್ತು ಜನ ಕಲಾವಿದರಿರುವ ಸಂಸ್ಥೆಯ ಪರಿಣಾಮವೇನಾಗಬೇಕು? ಅಭಿವೃದ್ಧಿ ಹೇಗಾಗಬೇಕು ಎಂಬ ತೀವ್ರವಾದ ಯೋಚನೆಯಿಂದ "ಪುತ್ರಶೋಕ ಮಷ್ಟದಿನಂ"–ಎಂದು ಮನಸ್ಸಿನಲ್ಲೆ ಅಂದುಕೊಂಡು, ಎಂಟು ದಿನಗಳು ನಾಟಕ ನಿಲ್ಲಿಸಿ, ನಂತರ ಮಂಡ್ಯಕ್ಕೆ ಕ್ಯಾಂಪು ಹಾಕಿದೆವು. ಅಲ್ಲಿಗೆ ಅಗಳೀ ಕಂಪನಿಯೂ ಬರಲು ಪ್ರಯತ್ನಮಾಡಿತು. ಹಿಂದೆ ೧೯೨೦ನೇ ಇಸ್ವಿಯಲ್ಲಿ ಸಿದ್ಧಗಂಗೆ ಜಾತ್ರೆಯಲ್ಲಿ ಪೈಪೋಟಿ ಮಾಡಿ, ಥಿಯೇಟರ್ ಹಾಕಿ, ನಾಟಕವಾಡಿ ಉಭಯತರು ಕಷ್ಟನಷ್ಟಗಳನ್ನು ಪಟ್ಟಿದ್ದೆವು. ಅದನ್ನು ಮರೆತು ಪುನಃ ಬಂದರು. ಎರಡು ಕಂಪೆನಿಗಳೂ ನಾಟಕವಾಡಿದವು. ಊರಿದ್ದಲ್ಲಿ ಹೊಲಗೇರಿಯೆಂಬಂತೆ ನಮ್ಮ ಪಕ್ಷಕ್ಕೆ ಕೆಲವರು, ಅವರ ಪಕ್ಷಕ್ಕೆ ಕೆಲವರು ಪ್ರೋತ್ಸಾಹಿಸಲಾಗಿ ಇಬ್ಬರಿಗೂ ಪ್ರಯೋಜನವಿಲ್ಲದಾಯಿತು. ಅನಂತರ ಸಂಸ್ಥೆಯನ್ನು ಮೈಸೂರಿಗೆ ಕ್ಯಾಂಪು ಮಾಡಲು ಯೋಚಿಸಿ, ಮೈಸೂರಿನಲ್ಲಿ ಅರಮನೆಯ ಕಂಟ್ರಾಕ್ಟರ್ ಮುನಿವೆಂಕಟಪ್ಪನವರು ಚಾಮುಂಡೇಶ್ವರೀ ಕಂಪನೆಯವರಿಗಾಗಿ ನೂರಡಿ ರೋಡಿನಲ್ಲಿ ಹಾಕಿದ್ದ ಲಕ್ಷ್ಮೀಥಿಯೇಟರ್‌ನ್ನು ಬಾಡಿಗೆಗೆ ಗೊತ್ತುಮಾಡಿಕೊಂಡು ಅಡ್ವರ್ಟೇಜ್ ಮಾಡಲು ವಾಲ್ ಪೋಸ್ಟರ್‌ಗಳನ್ನು ಹಾಕಿಸಿದೆವು. ಮತ್ತು ಮೈಸೂರು ಅರಮನೆಯಲ್ಲಿ ಮಹಾಜನರು ನಾಟಕಗಳನ್ನು ಆಡಿಸುವ ಊರಾದುದರಿಂದ ನಾಟಕಗಳು ಚೆನ್ನಾಗಿ ಆಗುವುದಕ್ಕೆ ಏನೇನು ಸಲಕರಣೆಗಳು ಬೇಕೆಂಬುದನ್ನು ಸಿದ್ಧಪಡಿಸಿಕೊಳ್ಳುತ್ತಿದ್ದೆವು. ಅಷ್ಟರಲ್ಲಿ ರಾಜಧಾನಿಯ ಪುರಜನರು ಯಾವುದೋ ಹಳ್ಳಿ ಕಂಪನಿಯು ಬರುತ್ತದೆಂದು ಮಾತನಾಡಿಕೊಳ್ಳುತ್ತಲಿದ್ದರು. ಆಗ ನಮ್ಮ ಸೀನರಿ, ಪರದೆ, ಡ್ರೆಸ್ಸು ವಗೈರೆ ಗಾಡಿ ಸಾಮಾನುಗಳಾಗಿತ್ತು. ಸಂಸ್ಥೆಯಲ್ಲಿ ಅರವತ್ತು ಜನದವರೆಗೂ ಏರಿತ್ತು. ಮಂಡ್ಯದಿಂದ ಮೈಸೂರಿಗೆ ನಮ್ಮ ಸಂಸ್ತೆ ಬಂದು ನಾಟಕದ ಅಡ್ವರ್ಟೈಜ್ ವಗೈರೆ ಚೆನ್ನಾಗಿ ಮಾಡಿ ಮೊದಲನೆಯ ದಿನ "ಸುಭದ್ರಾಕಲ್ಯಾಣ"–ವೆಂಬ ಪೌರಾಣಿಕ ನಾಟಕವನ್ನು ಆಡಿದೆವು. ಶ್ರೀ ಚೆನ್ನಬಸವೇಶ್ವರನ ಕೃಪೆಯಿಂದ ನಾಟಕವು ಚೆನ್ನಾಗಿ ನಡೆದು ಜನಗಳು ತುಂಬಾ ಮೆಚ್ಚಿಕೊಂಡು ಸಂತೋಷಪಟ್ಟರು. ಸಂಸ್ಥೆಯ ನಟವರ್ಗದವರು, ವಾದ್ಯಗಾರರು ನೃತ್ಯದ ಗುಂಪು, ವ್ಯವಸ್ಥೆ (ಮ್ಯಾನೇಜ್‌ಮೆಂಟ್), ಸೀನರೀ ಕೆಲಸಗಾರರ ಗುಂಪು, ಪ್ರತಿಯೊಂದು ಭಾಗದ ವ್ಯವಸ್ಥೆ ಬಹಳ ಚೆನ್ನಾಗಿತ್ತು. ಅಲ್ಲದೆ ಪ್ರತಿಯೊಬ್ಬ ನಟರೂ ತರುಣ ವಯಸ್ಕರು. ಚೆನ್ನಾಗಿಯೂ, ಶ್ರದ್ಧೆಯಿಂದಲೂ, ದಕ್ಷತೆಯಿಂದಲೂ, ಕೆಲಸಗಳನ್ನು ಮಾಡುತ್ತಿದ್ದುದರಿಂದ ಜನ ಮೆಟ್ಟಲು ಕಾರಣವಾಯ್ತು. ಸದಾರಮೆ, "ಕಬೀರ್‌ದಾಸ್" ನಾಟಕಕ್ಕೆ ಬೇರೆ ಸೀನರಿಗಳನ್ನು ಕೊಂಚ ತಯಾರ್ಮಾಡಿಸಿ, ಕಬೀರ್‌ದಾಸ್ ನಾಟಕ ಪ್ರಾರಂಭಮಾಡಿದೆವು.

ನಾಟಕ ಮಂದಿರವು ಪ್ರೇಕ್ಷಕರಿಂದ ತುಂಬಿ, ಮಂದಿರದ ಹೊರಗೆ ಸಾವಿರಾರು ಜನರ ಸಮೂಹವೇ ನೆರೆದಿತ್ತು. ಆ ನಾಟಕವೂ ಸಹ ಮೆಚ್ಚಿಗೆಗೆ ಪಾತ್ರವಾಗಿ, ಚೆನ್ನಾಗಿ ಉತ್ಪತ್ತಿಯಾಗಿ, ನಂತರ ಕೇವಲ ಹೆಣ್ಣುಮಕ್ಕಳಿಗಾಗಿಯೇ ವಾರಕ್ಕೆ ಎರಡೆರಡು ಪ್ರತ್ಯೇಕ ನಾಟಕಗಳನ್ನು ಆಡಲು ಪ್ರಾರಂಭಿಸಿದೆವು. ಕಬೀರನ ಪಾತ್ರವನ್ನು ಸಿ. ಬಿ. ಮಲ್ಲಪ್ಪನವರು, ರತ್ನಾಕರನಾಗಿ ನಾಗೇಶರಾವ್, ಕಾಕೋದರನಾಗಿ ಗಂಗಾಧರರಾವ್, ಲಿಂಗದಾಸಯ್ಯನಾಗಿ ಸಿದ್ಧಲಿಂಗದೇವರು, ಕೋಮಟ ದಾಸಯ್ಯನಾಗಿ ನಾನು, ವೈಶ್ಯನಾಗಿ ಅನಂತಾಚಾರ್, ರಾಮನಾಗಿ ನಾರಾಯಣನಾಯ್ಡು, ಬೀಬಿಯಾಗಿ ನಾರಾಯಣರಾವ್, ಮಧು ಮೋಹಿನಿಯಾಗಿ ವ್ಯಾಸರಾವ್ ಮತ್ತು ಸೋಮಾಜಿರಾಯರ ನೃತ್ಯದ ಗುಂಪು ಹೀಗೆ ಎಲ್ಲ ನಟರೂ ಇಪ್ಪತ್ತರಿಂದ ಮೂವತ್ತರ ವಯಸ್ಸಾದುದರಿಂದ ಪಾತ್ರಗಳು ಚೆನ್ನಾಗಿ ಶೋಭಿಸುತ್ತಿದ್ದವು.

ಅರಮನೆಯಲ್ಲಿ ನಾಟಕ-ವರ್ಸ್‌ಟೈಲ್ ಕಮೆಡಿಯನ್

ಹೀಗೆ ಮೈಸೂರಿನಲ್ಲಿ ಎರಡು ಮೂರು ತಿಂಗಳಾದನಂತರ ಅರಮನೆಯಲ್ಲಿ ನಾಟಕವಾಡಲು ನಮ್ಮನ್ನಾಳಿದ ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಕರೆ ಬಂದಿತು. ಆಗ ನಮ್ಮ ಸಂಘದ ವ್ಯವಸ್ಥಾಪಕರಾದ ಎಸ್. ನಾಗೇಶರಾಯರು ಅರಮನೆಯಲ್ಲಿ ಆಡಬೇಕಾದರೆ ಹೇಗೆ ಏನೇನು ಸೌಕರ್ಯಗಳುಬೇಕು, ಅಲ್ಲಿನ ಕ್ರಮಗಳು ಏನು, ಹೇಗೆ ಎಂಬುದನ್ನು ತಿಳಿದುಕೊಂಡು ಬಂದು ತಿಳಿಸಿದರು. ನಮ್ಮ ಸಂಘದವರೆಲ್ಲರೂ ತುಂಬಾ ಸಂತೋಷದಿಂದ ಮಹಾರಾಜರ ಸನ್ನಿಧಿಯಲ್ಲಿ ತಮ್ಮ ತಮ್ಮ ಕಲಾಚಾತುರ್ಯವನ್ನು ತೋರಿಸುವ ಸಮಯ ಒದಗಿತೆಂದು ನಲಿದಾಡಿದರು. ನಾನೂ ಸಹ ಶ್ರೀ ಚನ್ನಬಸವೇಶ್ವರ ಸ್ವಾಮಿಯನ್ನು ಧ್ಯಾನಿಸಿ ಮನಸ್ಸಿನಲ್ಲಿ ಹರಸಿಕೊಂಡು ಮಹಾರಾಜರ ಅಪ್ಪಣೆಯಂತೆ ಸದಾರಮೆ ನಾಟಕವನ್ನು ಮೂರು ಗಂಟೆಗಳ ಕಾಲಕ್ಕೆ ಅವಳಡಿಸಿಕೊಂಡು, ಅರಮನೆಯ ಪದ್ಧತಿಗಳನ್ನನುಸರಿಸಿ ಜಗನ್ಮೋಹನ ಪ್ಯಾಲೇಸಿನಲ್ಲಿ ನಾಟಕವನ್ನಾಡಿದೆವು. ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್‌ರವರು ನನ್ನನ್ನು ಕರೆಸಿ, "ವೀರಣ್ಣನವರೆ, ನಾಟಕವು ಬಹಳ ಚೆನ್ನಾಗಿತ್ತು" ಎಂದು ಬಹಳವಾಗಿ ಪ್ರಶಂಸಿಸಿ ನಂತರ ಕಬೀರ್‌ದಾಸ್ ಆಡಬೇಕೆಂದು ಅಪ್ಪಣೆ ಮಾಡಿದರು. ಅದಾದ ಮೇಲೆ ಪ್ರಭಾಮಣಿ ವಿಜಯ ನಾಟಕವನ್ನೂ ಸಹ ಆಡಿದೆವು. ಆ ದಿನದ ನಾಟಕವಾದ ನಂತರ ಮಹಾಸ್ವಾಮಿಯವರು ನನ್ನನ್ನು ಕರೆಸಿ ನಾಟಕವು ಬಹಳ ಚೆನ್ನಾಗಿತ್ತೆಂದು ತಿಳಿಸಿ ಎಲ್ಲಾ ನಟರುಗಳ ಹೆಸರನ್ನು ಕೇಳಿದರು. ನಾನು ಸಹ ಎಲ್ಲಾ ನಟರುಗಳನ್ನು ಕರೆದು ಮಹಾಸ್ವಾಮಿಯವರ ದರ್ಶನ ಮಾಡಿಸಿದೆನು. ಅದಾದ ನಂತರ ಮೈಸೂರಿನಲ್ಲಿಯೇ ನಾಟಕಗಳನ್ನಾಡುತ್ತಿದ್ದೆವು. ಅರಮನೆಯಲ್ಲಿ ನಾಟಕಗಳಾದ ನಂತರ ಹೊರಗಡೆಯೂ ಉತ್ಪತ್ತಿ ಚೆನ್ನಾಗಿ ಬರಲು ಪ್ರಾರಂಭವಾಯ್ತು. ಬರುವ ಉತ್ಪತ್ತಿಯಲ್ಲಿ ಸಂಘದ ಖರ್ಚಿಗೆ ಅವಶ್ಯಕವಾಗಿ, ಬೇಕಾಗಿದ್ದಷ್ಟು ಇಟ್ಟುಕೊಂಡು ಉಳಿದುದನ್ನೆಲ್ಲಾ ಬೆಂಗಳೂರಿನಲ್ಲಿ ನಾಟಕ ಮಂದಿರದ ನಿರ್ಮಾಣಕ್ಕಾಗಿ ಕಳುಹಿಸಿಕೊಡುತ್ತಿದ್ದೆ. ಆಗ ಮಹಾಸ್ವಾಮಿಯವರು ನನ್ನನ್ನು ಅರಮನೆಗೆ ಕರೆಸಿ ಒಂದು ದೊಡ್ಡ ಹರಿವಾಣದಲ್ಲಿ ಒಂದು ಜೊತೆ ಕಲಾಪತ್ತಿನ (ಜರಿಕೆಲಸದ) ಹಸಿರು ಬಣ್ಣದ ಶಾಲುಗಳನ್ನು, ಒಂದು ಜರಿಯ ಪೇಟವನ್ನು, ಒಂದು ಹರಿವಾಣದಲ್ಲಿ ಸುತ್ತು ವೀಳೆಯರ ತಾಂಬೂಲವನ್ನು, ಒಂದು ಹರಿವಾಣದಲ್ಲಿ ಎರಡು ಸಾವಿರ ರೂಪಾಯಿಗಳನ್ನು ದಯಪಾಲಿಸಿ ಆಶೀರ್ವದಿಸಿ ಬೀಳ್ಕೊಟ್ಟರು. ಆಗ ನಾನು ಮಹಾಸ್ವಾಮಿಯವರಲ್ಲಿ–ಹಣವೇನೋ ಸ್ವಾಮಿಯವರ ಆಶೀರ್ವಾದದಿಂದ ಸಂಪಾದನೆಯಾಗುತ್ತೆ, ಆದರೆ ಮಹಾಸ್ವಾಮಿಯವರ ಸನ್ನಿಧಿಯಲ್ಲಿ ಕಲಾಸೇವೆ ಮಾಡಿದ ಗುರುತು ಉಳಿಯುವುದಕ್ಕೆ ಏನಾದರೂ ದಯಪಾಲಿಸಬೇಕೆಂದು ಬಿನ್ನೈಸಿಕೊಂಡೆ. ಅದಕ್ಕೆ ಮಹಾಸ್ವಾಮಿಯವರು ಹಸನ್ಮುಖರಾಗಿ ಸಮ್ಮತಿ ಸೂಚಿಸಿದರು.

ಅನಂತರ ವೀರಣ್ಣನಿಗೆ ಮಹಾಸ್ವಾಮಿಯವರು ಮೆಡಲನ್ನು ದಯಪಾಲಿಸುವರಂತೆ ಎಂಬ ವರ್ತಮಾನ ಹರಡಿ ಅರಮನೆಯ ಪರಿವಾರದಲ್ಲೆಲ್ಲಾ ಗುಜಗುಂಪಲಿಗೆ

ಪ್ರಾರಂಭವಾಯ್ತು. ಅರಮನೆಯ ಕೆಲವು ಹಾಸ್ಯಗಾರರು, ಕಲಾವಿದರು, ನನಗೆ ಮೆಡಲನ್ನು ಕೊಡುವುದನ್ನು ತಪ್ಪಿಸಲು ಒಳಗೊಳಗೇ ಬಹಳ ಕೆಲಸ ಮಾಡಲು ಪ್ರಾರಂಭಿಸಿದರು. ಸದಾರಮೆ ನಾಟಕದಲ್ಲಿ ನನ್ನ ವೈಶ್ಯ. ಸಾಬಿ ಮತ್ತು ಕಳ್ಳನ ಪಾತ್ರಗಳನ್ನು ನೋಡಿದ್ದರೂ, ಮಹಾಸ್ವಾಮಿಯವರು ಯೋಚಿಸಿ ಗುಲೇಬಕಾವಲಿ ನಾಟಕವನ್ನು ಆಡುವಂತೆ ಹೇಳಿಕಳುಹಿಸಿದರು. ಅದರಲ್ಲಿ ನಾನು ಮತ್ತು ಸ್ವಾಮಿ ಎಂಬ ಪಾತ್ರವನ್ನೂ (ಮೋಹಶಾಸನೆಯೆಂಬ ವೇಶ್ಯೆಯ ಅಣ್ಣ) ಮತ್ತು ಕುರುಡ ದೊಂಬಿದಾಸನ ಪಾತ್ರವನ್ನೂ ಮಾಡಿದ್ದೆ. ಮುತ್ತುಸ್ವಾಮಿ ಪಾತ್ರದಲ್ಲಿ ರಾಗಗಳನ್ನು ಹಾಡುವುದು. ಸ್ವರ ಹಾಕುವುದು, ಭರತನಾಟ್ಯದ ಅಭಿನಯಗಳನ್ನು ನಟಿಸುವ ಸಂದರ್ಭ ಬರುತ್ತದೆ. ಕುರುಡ ದೊಂಬಿದಾಸನ ಪಾತ್ರದಲ್ಲಿ ಯಕ್ಷಗಾನದ ಕುಣಿತ, ಬೈಲು ನಾಟಕದ ಹೆಣ್ಣು ವೇಷದ ಕುಣಿತ, ಅಭಿನಯ, ಮಾತುಕತೆ ಬರುತ್ತೆ. ಈ ಎರಡೂ ವಿರುದ್ಧ ಗುಣಗಳುಳ್ಳ ಪಾತ್ರವನ್ನು ಮಹಾರಾಜರು ಪರಾಂಬರಿಸಿದರು. ಅಲ್ಲದೆ ಬೈಲಾಟದ ಹೆಣ್ಣ ವೇಷದ ಅಭಿನಯ, ಕುಣಿತ ಮಾತುಗಾರಿಕೆಗಳನ್ನು ಕೇಳಿ ಹೆಚ್ಚು ನಗಲಾರದೆ ಬಾಯನ್ನು ಕರವಸ್ತ್ರದಿಂದ ಮುಚ್ಚಿ ಸಂತೋಷಪರವಶರಾಗಿದ್ದುದರ ಚಿತ್ರವು ಇನ್ನು ನನ್ನ ಸ್ಮೃತಿ ಪಟಲದಲ್ಲಿ ಅಚ್ಚಳಿಯದೆ ನಿಂತಿದೆ.

ಮರುದಿನ ಬಿಟ್ಟು ಚೌ – ಚೌ – ನಾಟಕ ಅಭಿನಯಿಸಬೇಕೆಂತಲೂ, ಆ ನಾಟಕದ ಪ್ರತಿ ಸೀನುಗಳಲ್ಲಿಯೂ ವೀರಣ್ಣನವರ ಪಾತ್ರ ಬರುವಂತೆ ಏರ್ಪಡಿಸಿ ಕೊಂಡಿರಬೇಕೆಂದೂ ಹೇಳಿ ಕಳುಹಿಸಿದರು. ಆಗ ಓಹೋ! ಇದೇನೋ ವರಪರೀಕ್ಷೆಗೆ ಬಂದಂತಿದೆ ಸಮಾಚಾರ ಎಂದುಕೊಂಡು ಅದರಂತೆಯೇ ಅನುಕೂಲವಾಗುವಂತೆ ಮೀನು ಹಿಡಿಯುವ ಸಾಬಿಯ ಪಾತ್ರ, ನಟುವನಾಗಿ ಪಿಟೀಲು ನುಡಿಸಿಕೊಂಡು ಹಿಮ್ಮೇಳ ಹಾಡಿಕೊಂಡು ತಾಪೆ ಕುಣಿಸುವ ಪಾತ್ರ, ಸದಾರಮೆಯ ವೈಶ್ಯನ ಪಾತ್ರ, ವಿರೋಚನನ (ಹುಚ್ಚ) ಪಾತ್ರ, ಕುರುಡ ದೊಂಬಿದಾಸಯ್ಯನಾಗಿ ಯಕ್ಷಗಾನ, ಬೈಲಾಟದ ಗಂಡು ಹೆಣ್ಣು ವೇಷದ ಕುಣಿತ, ಮಾತುಗಾರಿಕೆ ಹೀಗೆ ವಿಂಗಡಿಸಿಕೊಂಡು ಚೌ – ಚೌ – ನಾಟಕವಾಡಿದೆವು. ಮಹಾಸ್ವಾಮಿಯವರು ನಾಟಕವಾದ ನಂತರ ಬಹು ಸಂತೋಷಪಟ್ಟು ನನ್ನನ್ನು ಕರೆಯಿಸಿಕೊಂಡು "ವೀರಣ್ಣನವರೇ ನಾಟಕಗಳು ಚೆನ್ನಾಗಿದ್ದುವು. ಅಲ್ಲದೆ ನಿಮ್ಮ ಪಾತ್ರಗಳು ಪ್ರತಿಯೊಂದು ಬಹು ಚೆನ್ನಾಗಿದ್ದವು" ಎಂದೂ, ಶ್ಲಾಘನೀಯವೆಂದೂ ಹೊಗಳಿ ಆಶೀರ್ವದಿಸಿ ಹೋದರು.

ಎರಡು ಮೂರು ದಿನ ಕಳೆದ ನಂತರ ಪುನಃ ನನ್ನನ್ನು ಕರೆಸಿ ಒಂದು ಹರಿವಾಣದಲ್ಲಿ ಒಂದು ಜೊತೆ ದೊಡ್ಡ ಜರಿ ಅಂಚಿನ ಪಂಚೆ, ಒಂದು ಶಲ್ಯ, ಒಂದು ಪೇಟ, ಖಿಲ್ಲತ್ತುಗಳನ್ನು ಸುತ್ತು ವೀಳೆಯ, ಒಂದು ಸಾವಿರದ ಐದುನೂರು ರೂಪಾಯಿಗಳನ್ನು ಒಂದು ಭಂಗಾರದ ಪದಕವನ್ನು ಆಶೀರ್ವದಿಸಿ ದಯಪಾಲಿಸಿದರು.

ಪದಕದ ಒಂದು ಭಾಗದಲ್ಲಿ ಮೈಸೂರು ರಾಜಮನೆತನದ ಗಂಡಭೇರುಂಡ ಪಕ್ಷಿಯನ್ನು ಮುದ್ರಿಸಲಾಗಿತ್ತು. ಮತ್ತೊಂದು ಭಾಗದಲ್ಲಿ presented by His Highness

The Maharaja Of Mysore. G. C.S. I, To G. H. Veeranna Proprietor and Versatile Comedian Of C. B. K.N., Co, Of Gubbi 17-11-23 ಎಂದು ಬರೆಸಲಾಗಿತ್ತು (C. B. K.N. Co, of Gubbi ಎಂದರೆ ಚನ್ನಬಸವೇಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಕಂಪೆನಿ.)

ಮಹಾರಾಜರಿಂದ ಖಿಲ್ಲತ್ತು, ಭಂಗಾರದ ಪದಕ ಬಂದಿರುವ ಸಮಾಚಾರವನ್ನು ಮೈಸೂರು ನಗರದ ಜನರು, ವರ್ತಕಮಂಡಳಿಯವರು, ಸಂತೇಪೇಟೆಯವರು ಕೇಳಿ ಆನಂದದಿಂದ ಲಕ್ಷ್ಮಿ ಥಿಯೇಟರಿನಲ್ಲಿ ಸಾಧ್ವಿ ಪೇಪರಿನ ಸಂಪಾದಕರಾದ ಪಿತಾಮಹ ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ದೊಡ್ಡ ಸಭೆ ಸೇರಿಸಿ ಆಸ್ಥಾನ ವಿದ್ವಾನ್ ಶ್ರೀ ಬಿಡಾರಂ ಕೃಷ್ಣಪ್ಪನವರ ಹಾಡುಗಾರಿಕೆ, ಸಂಗೀತ ರತ್ನ ಶ್ರೀ ಟಿ. ಚೌಡಯ್ಯನವರ ಪಿಟೀಲು ವಾದನದಿಂದ ಸಭೆಗೆ ಆನಂದಪಡಿಸಿ ನನಗೆ ಒಂದು ಭಂಗಾರದ ತೋಡವನ್ನು ಸನ್ಮಾನಪತ್ರದ ಜೊತೆ ದಯಪಾಲಿಸಿ ಆಶೀರ್ವದಿಸಿದರು.

ನಲ್ಲ ಇರ್ಕದಿ

ಮೈಸೂರಿನವರ ಈ ಪ್ರೋತ್ಸಾಹಬಲದಿಂದಲೂ, ಶ್ರೀ ಮಹಾಸ್ವಾಮಿಯವರ ಆಶೀರ್ವಾದದಿಂದಲೂ, ಚನ್ನಬಸವೇಶ್ವರಸ್ವಾಮಿಯ ಕೃಪೆಯಿಂದಲೂ ಧೈರ್ಯಹೊಂದಿ ಸಂಸ್ಥೆಯು ಮದ್ರಾಸಿಗೆ ಹೋಗಿ ಬ್ರಾಡ್ವೆಯಲ್ಲಿ ಹೊಸದಾಗಿ ಕಟ್ಟಿಸಿದ ನಾಟಕ ಮಂದಿರದಲ್ಲಿ ಕಬೀರ್‌ದಾಸ್ ನಾಟಕದ ಪ್ರಾರಂಭ ಮಹೋತ್ಸವವನ್ನು ಡಿಸೆಂಬರ್ ೨೫, ೧೯೨೩ ರಂದು ನೆರವೇರಿಸಿದೆವು.

ಅಲ್ಲಿಯೇ ನಾಟಕಗಳನ್ನಾಡುತ್ತಿದ್ದು ಸದಾರಮೆ ನಾಟಕವನ್ನಾಡಲು ಪ್ರಚಾರ ಮಾಡಲಾರಂಭಿಸಿದಾಗ ಅಲ್ಲಿನ ನಮ್ಮ ಹಿತಚಿಂತಕರು ನಿಮ್ಮಂತಹ ದೊಡ್ಡ ಸಂಸ್ಥೆಯವರು ಸದಾರಮೆಯಂತಹ ಕೀಳುದರ್ಜೆಯ ನಾಟಕಗಳನ್ನಾಡಕೂಡದೆಂದು ಹೇಳಿದರು. ಏಕೆಂದರೆ ತಮಿಳುನಟನಾದ ನಟರಾಜಾಚಾರಿ ಎಂಬಾತ ಸದಾರಮೆಯೆಂಬ ನಾಟಕವನ್ನು ಕೀಳುದರ್ಜೆಯಲ್ಲೂ ತುಂಬಾ ಅಸಹ್ಯವಾದ ರೀತಿಯಲ್ಲೂ ಮಾತುಗಳನ್ನು ರಂಗಮಂಟಪದಲ್ಲಿ ಉಪಯೋಗಿಸುತ್ತಿದ್ದುದರಿಂದ ಸುಸಂಸ್ಕೃತ ಪ್ರೇಕ್ಷಕರು ಯಾರೂ ಹೋಗುತ್ತಿರಲಿಲ್ಲವೆಂದು ಹೇಳಿದರು. ಆದರೂ ಆಗಲೇ ಪ್ರಚಾರಪಡಿಸಿದ್ದುದರಿಂದ ಆಡಲೇಬೇಕಾಯಿತು. ಅಲ್ಲಿಯವರೆಗೂ ಉತ್ಪತ್ತಿ ಐನೂರು ರೂ. ಗಳಿಂದ ಸಾವಿರದವರೆಗೂ ಆಗುತ್ತಿದ್ದುದು-ಮೊದಲನೇ ಸದಾರಮೆ ನಾಟಕಕ್ಕೆ ದಿಡೀರನೆ ಇನ್ನೂರು ರೂಪಾಯಿಗೆ ಇಳಿಯಿತು. ನಾಟಕವೇನೋ ಬಹಳ ಚೆನ್ನಾಗಿ ಬಂದಿತು. ಆ ದಿನ ನಾಟಕವನ್ನು ನೋಡಲು ಬಂದಿದ್ದ ಕಲಾವಿದರೂ, ಕವಿಗಳೂ ಆಗಿದ್ದ ದಿವಾನ್ ಬಹದ್ದೂರ್ ಸಂಬಂಧ ಮೊದಲಿಯಾರ್ ಎಂಬ ಮಹನೀಯರು ಬಹು ಸಂತೋಷಪಟ್ಟು ತಾವಾಗಿಯೇ ರಂಗಭೂಮಿಯ ಮೇಲೆ ಬಂದು 'ಪ್ರೇಕ್ಷಕರೇ, ನಟ ರಾಜಾಚಾರಿ ಆಡುವ ಕೀಳುದರ್ಜೆಯ ಸದಾರಮೆಗೂ, ಇವರು ಆಡುವ ಸದಾರಮೆಗೂ ಬಹಳ ತಾರತಮ್ಯವಿರುತ್ತೆ. ಈ ನಾಟಕವು ಪತಿವ್ರತಾಧರ್ಮಬೋಧೆಯನ್ನು ಚೆನ್ನಾಗಿ ಸೂಚಿಸಿ, ಅವಿವೇಕವನ್ನು ತಪ್ಪಿಸಿ ವಿವೇಕಮಾರ್ಗವನ್ನು ತೋರಿಸುವ ಉತ್ತಮ ದರ್ಜೆಯದಾಗಿರುತ್ತೆ. ಆದ್ದರಿಂದ ಮದ್ರಾಸಿನ ರಸಿಕರು ಈ ನಾಟಕಕ್ಕೆ ಖಂಡಿತವಾಗಿಯೂ ಪ್ರೋತ್ಸಾಹ ಕೊಡಲೇಬೇಕೆಂದು ಕೋರುತ್ತೇನೆ'– ಮುಂತಾಗಿ ಭಾಷಣ ಮಾಡಿದರು. 'ಕುಪ್ಪಿ ಸತಾರಾಂ ರೊಂಬ ನಲ್ಲ ಇರ್ಕದಿ' ಎಂದು ಹೊಗಳುತ್ತಾ–ಸದಾರಮೆ ನಾಟಕ ಹಾಕಿದರೆ ಸಾವಿರದಿಂದ ಸಾವಿರದ ಇನ್ನೂರು ರೂ ವರೆಗೂ ಉತ್ಪತ್ತಿ ಆಗುತ್ತಿತ್ತು. ಹೀಗೆ ಎರಡು ಮೂರು ತಿಂಗಳು ಬ್ರಾಡ್ವೆಯ ನಾಟಕ ಮಂದಿರದಲ್ಲಿ ನಾಟಕಗಳನ್ನಾಡಿ ನಂತರ ಬ್ರಾಡ್ವೆಯ ಜೆಕೇರಿಯ ಹಾಲಿನಲ್ಲಿ ಹತ್ತು ನಾಟಕಗಳನ್ನಾಡಿ, ತಿರುವಲ್ ಕೇಣಿಯ ನಾಟಕಮಂದಿರದಲ್ಲಿ ಮೊದಲನೆ ನಾಟಕ ಸದಾರಮೆಯನ್ನು ಸಿ.ವಿ. ರಾಮಸ್ವಾಮಿ ಐಯರ್‌ರವರ ಘನ ಅಧ್ಯಕ್ಷತೆಯಲ್ಲಿ ಆಡಿ-ನಂತರ ಟ್ರಿಪ್ಲಿಕೇನ್‌ನಲ್ಲಿ ಎರಡು ಹೀಗೆ ಮದ್ರಾಸಿನಲ್ಲಿ ಒಟ್ಟು ಐದು ತಿಂಗಳು ಒಂದೇಸಮನಾಗಿ ಕನ್ನಡ ನಾಟಕ ನಡೆದದ್ದು ತುಂಬಾ ಆಶ್ಚರ್ಯ.

ಈ ಮೊದಲ ಚನ್ನಪಟ್ಟಣ, ಕಾನಕಾನಹಳ್ಳಿ (ಕನಕಪುರ) ಮೈಸೂರಿನಲ್ಲಿ ಬಂದ ಉತ್ಪತ್ತಿಯ ಹಣವನ್ನು ಬೆಂಗಳೂರಿನಲ್ಲಿ ಕಟ್ಟುತ್ತಿರುವ ನಾಟಕಮಂದಿರಕ್ಕಾಗಿ ಉಪಯೋಗಿಸುತ್ತಿದ್ದೆ. ಮಧ್ಯೆ ಮಧ್ಯೆ ಶ್ರೀ ಟಿ. ಕೆ. ಕೃಷ್ಣಸ್ವಾಮಿ ಶೆಟ್ಟರ ಹತ್ತಿರ ಹಣವನ್ನು ತಂದುಕೊಡುತ್ತಿದ್ದೆ. ಮದ್ರಾಸಿನಿಂದಲೂ ಕೊಂಚ ಕೊಂಚ ಹಣ ಕಳುಹಿಸುತ್ತಿದ್ದೆ. ಅಲ್ಲಿಂದ ನಾವು ಸೇಲಂ ಕ್ಯಾಂಪಿಗೆ ಬಂದೆವು. ಅಲ್ಲಿ ನನ್ನ ಉಪಪತ್ನಿ ಸುಂದರನಿಗೆ ಎರಡನೇ ಹೆಣ್ಣು ಮಗು ಜನನವಾಯಿತು. ಆ ಮಗುವಿಗ ಮಹಾಲಕ್ಷ್ಮಿ ಎಂದು (ಮಾಲತಮ್ಮ) ನಾಮಕರಣ ಮಾಡಿದೆವು- ಸೇಲಂನಿಂದ ಕೋಲಾರಕ್ಕೆ ಬಂದು ಅಲ್ಲಿಂದ ಬಂಗಾರುಪೇಟೆಗೆ (ಬೌರಿಂಗ್ ಪೇಟೆ) ಬಂದು ನಾಟಕವಾಡುತ್ತಿದ್ದೆವು. ಅಲ್ಲದೆ ಬೆಂಗಳೂರು ನಗರದಲ್ಲಿ ಕಟ್ಟುತ್ತಿರುವ ನಾಟಕಮಂದಿರವನ್ನು ಮುಗಿಯಿಸಿ ಪ್ರಾರಂಭೋತ್ಸವದ ಸಿದ್ಧತೆಗಳನ್ನು ಮಾಡುತ್ತಿದ್ದೆವು. ಆ ಸಮಯದಲ್ಲಿ ವಾದಿರಾಜಾಚಾರ್ ಎಂಬುವರು ತಮ್ಮ ಮೂರುಜನ ಮಕ್ಕಳೊಂದಿಗೆ ಬಂದು ಸಂಘಕ್ಕೆ ಸೇರಿಕೊಂಡರು.

೧೯೨೪ನೇ ಇಸವಿ ನವೆಂಬರ್ ಹದಿನಾಲ್ಕನೇ ತಾರೀಖು ಘನಹೊಂದಿದ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಘನ ಅಧ್ಯಕ್ಷತೆಯಲ್ಲಿ ನಾಟಕಮಂದಿರವು ಚನ್ನಬಸವೇಶ್ವರ ನಾಟಕಮಂದಿರವೆಂಬ ಹೆಸರಿನಲ್ಲಿ ವಿಜೃಂಭಣೆಯಿಂದ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ವಿದ್ವಾನ್ ಪೂಚಿ ಶ್ರೀನಿವಾಸಯ್ಯಂಗಾರ್ಯರ ಶಿಷ್ಯರಾದ ಸೇಲಂ ದೊರೆಸ್ವಾಮಿ ಐಯಂಗಾರ್‌ರವರ ಸಂಗೀತ ಕಛೇರಿ ಏರ್ಪಡಿಸಲಾಗಿತ್ತು. ತಾಯಪ್ಪನವರ ಪಿಟೀಲು ವಾದನವನ್ನೂ ಇಡಲಾಗಿತ್ತು. ಪ್ರಾರಂಭೋತ್ಸವ ಸಮಯದಲ್ಲಿ ಭೂತತೃಪ್ತಿಗಾಗಿ ಬಡಬಗ್ಗರಿಗೆ ಅನ್ನ ಹಾಕಿಸಬೇಕೆಂದು ದೇವರ ಪ್ರೇರಣೆಯಾಗಿ ನಾಟಕಶಾಲೆಯ ಆವರಣದಿಂದ ಪ್ರಾರಂಭಿಸಿ ಬಳೇಪೇಟೆ ಚಿಕ್ಕಪೇಟೆ ಚೌಕದವರೆಗೂ ಕಿಕ್ಕಿರಿದು ತುಂಬಿದ್ದ ಅನೇಕ ಸಹಸ್ರ ಜನ ಬಡಬಗ್ಗರಿಗೆ ಬೆಳಗ್ಗೆ ಹನ್ನೊಂದು ಗಂಟೆಯಿಂದ ರಾತ್ರಿ ಎಂಟು ಗಂಟೆಯವೆಗೂ ಅವಿಚ್ಛಿನ್ನವಾಗಿ ಅನ್ನದಾನಮಾಡಿದ್ದಾಯಿತು. ಘನಸರ್ಕಾರದವರು ದಾರಿಯ ತಿರುಗಾಟವನ್ನು ನನ್ನ ಮೇಲೆ ಕೃಪೆಯಿಟ್ಟು ನಿಲ್ಲಿಸಿದ್ದರು. ನನ್ನ ಮೇಲಿನ ಅಭಿಮಾನದಿಂದ ಬಳೇಪೇಟೆಯ ವರ್ತಕ ಮಹಾಜನಗಳು ಅಂಗಡಿಗಳನ್ನು ಮುಚ್ಚಿ, ಅಂಗಡಿಗಳ ಮುಂದೆ ಹಂಡೆ ಕೊಳಗಗಳನ್ನಿಟ್ಟು ಊಟ ಮಾಡುತ್ತಿದ್ದ ಎರಡು ಸಾಲಿನ ಜನರಿಗೆ ನೀರು ಸರಬರಾಜು ಮಾಡುತ್ತ ತುಂಬಾ ಸಹಕರಿಸಿದ್ದನ್ನು ನಾನು ಎಂದಿಗೂ ಸ್ಮರಿಸಿಕೊಳ್ಳುತ್ತೇನೆ.

ಯಶಸ್ವೀ ನಾಟಕಗಳು

೧೯೨೪ನೇ ನವೆಂಬರ್ ೧೪ರಿಂದ ೧೯೨೫ ನೇ ಏಪ್ರಿಲ್ ೧೫ರ ವರೆಗೆ ನಾಟಕಗಳು ಬಹಳ ಯಶಸ್ವಿಯಾಗಿ ನಡೆದವು. ಮೈಸೂರಿನಲ್ಲಿ ಕಬೀರ್‌ದಾಸ್ ನಾಟಕಕ್ಕೆ ಒಳ್ಳೆ ಹೆಸರು ಇದ್ದುದರಿಂದಲೂ ಶ್ರೀಮನ್ಮಹಾರಾಜರ ಸಮ್ಮುಖದಲ್ಲಿ ಅಭಿನಯಿಸಿದ್ದುದರಿಂದಲೂ, ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ ಕಬೀರ್‌ದಾಸ್ ಅಭಿನಯಿಸಿದುದರಿಂದಲೂ ವಿಶೇಷವಾಗಿ ಪ್ರೋತ್ಸಾಹ ಕೊಡುತ್ತಿದ್ದರು. ಮಧ್ಯಾಹ್ನ ಮೂರುಗಂಟೆಗೆ ಮೊದಲನೇ ಎರಡು ತರಗತಿಗಳಿಗೆ ಟಿಕೀಟು ಪೂರಾ ಬಿಕರಿಯಾಗಿ ರಿಜರ್ವ್ ಆಗಿರುತ್ತಿತ್ತು. ಹಾಗೆಯೇ ಸುಮಾರು ಎರಡು-ಮೂರು ರಾತ್ರಿ ಒಂಭತ್ತು ಗಂಟೆಗೆ ಪ್ರೇಕ್ಷಕರಿಗೆ ಟಿಕೇಟ್ ದೊರೆಯದೆ ನಿರಾಶರಾಗಿ ವಾಸಪ್ ಹೋಗುತ್ತಿದ್ದರು. ಆ ಸಮಯದಲ್ಲಿ ಒಂದು ಘಟನೆ ನಡೆಯಿತು. ನಾವು ಅಭಿನಯಿಸುತ್ತಿದ್ದ ಕಬೀರ್ ದಾಸ್, ಸದಾರಮೆ ಎರಡು ನಾಟಕಗಳಲ್ಲಿಯೂ ವೈಶ್ಯನ ಪಾತ್ರಗಳು ಬರುವ ಸನ್ನಿವೇಶಗಳಿವೆ. ಅದರಲ್ಲಿ ನಾನು ವೈಶ್ಯನ ಪಾತ್ರಗಳನ್ನು ಮಾಡುತ್ತಿದ್ದೆ. ವೈಶ್ಯ ಮಹಾಜನಗಳು ಕೆಲವು ಕುಹಕಿ ಜನಗಳ ಚಾಡಿಮಾತನ್ನು ಕೇಳಿ ಕ್ರಿಮಿನಲ್ ಕೇಸು ಮಾಡಿದ್ದು ಬಹಳವಾಗಿ ಬೆದರಿಸಿದ್ದರು. ಅದೂ ಅಲ್ಲದೇ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ಕೇಶವಯ್ಯಂಗಾರ್ ಎಂಬುವರು ರಿಜರ್ವ್ ಆಗಿದ್ದ ಸೀಟ್‌ಮೇಲೆ ಕೂತಿದ್ದರಿಂದ ನಾವು ಅವರನ್ನು ಎಬ್ಬಿಸಿದುದಕ್ಕೆ ಅವರು ಕ್ರೋಧದಿಂದ ವೈಶ್ಯಮಹಾಜನಗಳೊಂದಿಗೆ ಸೇರಿ ಅವರನ್ನು ಹುರಿದುಂಬಿಸಿ, ಕಬೀರ್‌ದಾಸ್ ನಡೆಯುವಾಗ ವೈಶ್ಯನ ಪಾತ್ರದಲ್ಲಿ ವೀರಣ್ಣನಿಗೆ ಕೈಕೋಳ ಹಾಕಿಸುತ್ತೇನೆಂದು ಕೈಕೋಳ ಕೂಡ ತಂದು ತೋರಿಸಿ ಭಯಪಡಿಸುತ್ತಿದ್ದರು. ಕೊನೆಗೆ ಕೋರ್ಟಿನಲ್ಲಿ ವಿಚಾರಣೆಯಾಗಿ ಒಂದು ದಿನ ಸದಾರಮೆ. ಕಬೀರ್‌ದಾಸ್‌ನಲ್ಲಿ ವೈಶ್ಯ ಪಾತ್ರ ಬರುವ ಸನ್ನಿವೇಶಗಳನ್ನು ತೋರಿಸಬೇಕೆಂದು ಹೇಳಿದರು. ಅದರಂತೆ ಅಭಿನಯಿಸಿ ತೋರಿಸಿದೆನು. ಆ ದಿನ ನಾಲ್ಕು ಜನ ಜಡ್ಜಿಗಳು, ಇನ್ನೂರು ಜನ ಅಡ್ವೋಕೇಟ್‌ಗಳು ರಿಟೈರ್ಡ್ ಆಗಿದ್ದ ಚಂಗಲರಾಯ ಶ್ರೇಷ್ಠಿಯವರೂ, ಬೆಂಗಳೂರಿನ ಗಣ್ಯ ವೈಶ್ಯಮಹಾಜನಗಳೆಲ್ಲರೂ ದಯಮಾಡಿಸಿದ್ದರು. ನಾಟಕಗಳನ್ನು ನೋಡಿದನಂತರ ಮ್ಯಾಜಿಸ್ಟ್ರೇಟರಾದ ವೆಂಕಟರಂಗಂ ಅವರು ಈ ನಾಟಕಗಳಲ್ಲಿ ಬರುವ ಪಾತ್ರಗಳು ಯಾರನ್ನು ಉದ್ದೇಶಿಸಿ ಅಭಿನಯಿಸಿಲ್ಲವಾಗಿ ಈ ಕೇಸನ್ನು ವಜಮಾಡಿರುತ್ತೇವೆಂದು ತೀರ್ಪು ಕೊಟ್ಟರು. ಆಗ ಅಡ್ವೋಕೇಟರಾದ ಶ್ರೀ ಡಿ. ಕೃಷ್ಣಯ್ಯಂಗಾರ್‌ರವರು ಒಂದು ಭೋಜನಕೂಟವನ್ನೇರ್ಪಡಿಸಿ ಗಣ್ಯವ್ಯಕ್ತಿಗಳಾದ ವೈಶ್ಯಮಹಾಜನಗಳನ್ನೂ, ನಮ್ಮ ಸಂಘದವರನ್ನೂ ಆಹ್ವಾನಿಸಿ, ಅವರಿಗೂ ನಮಗೂ ರಾಜಿಮಾಡಿಸಿದರು. ಕ್ಯಾಂಪು ಬಿಡುವ ಸಮಯದಲ್ಲಿ ವೈಶ್ಯ ಮಹಾಜನಗಳು ನಮ್ಮ ಸಂಘಕ್ಕೆ ಒಂದು ಬೆಳ್ಳಿಯ ಷೀಲ್ಡನ್ನು ದಯಪಾಲಿಸಿದರು.

ಇದೇ ಸಮಯದಲ್ಲಿ ಚೆನ್ನಾಗಿ ತಬಲ ನುಡಿಸುವ ಸುಬ್ರಹ್ಮಣ್ಯ ಶಾಸ್ತ್ರಿ ಮತ್ತು ಆಂಜನೇಯುನ ಪಾತ್ರ ಮಾಡುವ ಮಿರ್ಲೆ ಸೀನಪ್ಪ ಎಂಬುವರನ್ನು ಸಂಘಕ್ಕೆ

ಸೇರಿಸಿಕೊಳ್ಳಲಾಯಿತು. ಅವರಾದರೋ ಸದಾ ಮದಿರಾದೇವಿಯ ಉಪಾಸಕರು. ಅಂಥವರನ್ನು ಸಾಮ, ದಾನ, ಭೇದ, ದಂಡೋಪಾಯಗಳಿಂದ ಅದನ್ನು ಬಿಡಿಸಿ ಬೆನಿಫಿಟ್ ನಾಟಕವನ್ನು ಆಡಿ ಬಂದ ಉತ್ಪತ್ತಿಯಲ್ಲಿ ಲಗ್ನ ಮಾಡಿಸಿದ್ದಾಯ್ತು. ಬೆಂಗಳೂರು ಕ್ಯಾಂಪಿನಲ್ಲಿ ಸಂಘದ ಸದಸ್ಯರುಗಳ ಸಂಖ್ಯೆ ಎಪ್ಪತ್ತೈದಕ್ಕೆ ಏರಿತು. ಆ ಊರಿನಲ್ಲಿ ನಾಲ್ಕು-ಐದು ತಿಂಗಳು ಕ್ಯಾಂಪು ಮಾಡಿದ್ದೆವು. ಪ್ರತಿ ಶುಕ್ರವಾರ, ಶನಿವಾರ, ಸಂಘದಲ್ಲಿ ಲಕ್ಷ್ಮೀಪೂಜೆ, ಆಂಜನೇಯನ ಪೂಜೆ, ಬಹಳ ವಿಜೃಂಭಣೆಯಿಂದ ನಡೆಯುತ್ತಲಿತು. ಪೂಜೆಯಕಾಲಕ್ಕೆ ಬೆಂಗಳೂರಿನ ಪಿಟೀಲು ವಿದ್ವಾನ್ ತಾಯಪ್ಪನವರು, ವಿದ್ವಾನ್ ಪುಟ್ಟಪ್ಪನವರು, ವೀಣೆ ಶೇಷಗಿರಿಯಪ್ಪನವರು, ಅರುಣಾಚಲಪ್ಪನವರೇ ಮುಂತಾದ ವಿದ್ವಾಂಸರುಗಳು ದೊಡ್ಡ ದೊಡ್ಡ ಮನುಷ್ಯರುಗಳೆಲ್ಲರೂ ಬರುತ್ತಿದ್ದು ಸೇವೆಯಲ್ಲಿ ಭಾಗವಹಿಸುತ್ತಿದ್ದರು. ಬೆಂಗಳೂರು ಮಹಾಜನಗಳ ಅಭಿಮಾನವು ಸಂಘದ ಮೇಲೆ ಪರಿಪೂರ್ಣವಾಗಿತ್ತು ಎಂದರೆ ಅತಿಶಯುಕ್ತಿಯಲ್ಲ. ಪ್ರತಿ ಶುಕ್ರವಾರದ ಭಜನೆ, ಪ್ರಸಾದ ವಿನಿಯೋಗದ ಖರ್ಚನ್ನು ಒಬ್ಬೊಬ್ಬ ಕಲಾವಿದರು ವಹಿಸಿಕೊಳ್ಳುತ್ತಿದ್ದರು. ಶ್ರೀ ಬೆಳ್ಳಾವೆ ನರಹರಿಶಾಸ್ತ್ರಿಗಳವರಿಂದ ಕಂಸವಧ ರುಕ್ಮಿಣೀ ಹರಣ ಎಂಬ ಪೌರಾಣಿಕ ನಾಟಕಗಳನ್ನು ಬರೆಸಿ ಬೆಂಗಳೂರಿನಲ್ಲಿಯೇ ಪ್ರದರ್ಶನ ಮಾಡಿದೆವು. ಅವುಗಳಿಗೂ ಒಳ್ಳೆ ಹೆಸರು ಬಂದು ಸಂಘವು ತರೀಕೆರೆ, ಹುಬ್ಬಳ್ಳಿ ಕ್ಯಾಂಪಿಗೆ ಹೊರಟಿತು. ಆಗ ಗಂಗಾಧರರಾಯರ ಗಲಾಟೆ ಪ್ರಾರಂಭವಾಗಿ ದಾವಣಗೆರೆಗೆ ಹೋಗಿ ಕುಳಿತರು. ಆಗ ಅಲ್ಲಿಗೆ ಹೋಗಿ ಅವರನ್ನು ಸಮಾಧಾನ ಪಡಿಸಿ, ಹೆಚ್ಚಿಗೆ ಸಂಬಳ ಗೊತ್ತುಮಾಡಿ ಕರೆತಂದದ್ದಾಯ್ತು. ಹುಬ್ಬಳ್ಳಿಯಲ್ಲಿನ ಗಣೇಶ ನಾಟಕ ಶಾಲೆಯಲ್ಲಿ ಮರಾಟಿಯವರಾದ ಪೆಂಡಾರ್‌ಕರವರ ಲಲಿತ ಕಲಾವರ್ಧಕವೆಂಬ ಹೆಸರಿನ ನಾಟಕ ಸಂಘವು ರಾಕ್ಷಸೀ ಮಹತ್ವಾಕಾಂಕ್ಷೆ ಎಂಬ ನಾಟಕವನ್ನು ಆಡುತ್ತಿದ್ದಿತು. ಆ ನಾಟಕವನ್ನು ನೋಡಿ ನಾನು ತುಂಬಾ ಮೆಚ್ಚಿಕೊಂಡು ಅದರ ಕರ್ತೃಗಳಾದ ಶ್ರೀ ಖಾಡಿಲ್‌ಕರ್ ರವರ ಅನುಮತಿ ಪಡೆದು ಕನ್ನಡ-ಮರಾಠಿ ಭಾಷೆಯಲ್ಲಿ ಚೆನ್ನಾಗಿ ಪರಿಶ್ರಮವುಳ್ಳ ಶ್ರೀ ಭೀಮರಾವ್ ಮಾಸ್ಟರ್ ಎಂಬುವರಿಂದ ರಾಕ್ಷಸೀಮಹತ್ವಾಕಾಂಕ್ಷೆ, ರಣದುಂದುಭಿ, ಸ್ವಾಮಿನಿಷ್ಠೆ —ಈ ಮೂರು ನಾಟಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿಟ್ಟುಕೊಂಡೆನು.

ಬಳ್ಳಾರಿ ಕ್ಯಾಂಪ್-ಕಲ್ಲಿನ ಸುರಿಮಳೆ

ಹುಬ್ಬಳ್ಳಿ ಕ್ಯಾಂಪಿಗೆ ಹೋಗಿ ಮಲ್ಲಿಕಾರ್ಜುನ ಥಿಯೇಟರನ್ನು ವಿಚಾರಿಸಲಾಗಿ ಬಾಲಗಂಧರ್ವ ನಾಟಕ ಮಂಡಳಿಗೆ ಮುಂಚಿತವಾಗಿ ಬಾಡಿಗೆಗೆ ಗೊತ್ತು ಮಾಡಿದ್ದರಿಂದ ನಮ್ಮ ಸಂಘವನ್ನು ಬಳ್ಳಾರಿ ಕ್ಯಾಂಪು ಮಾಡಿ ಅಲ್ಲಿಗೆ ತೆಗೆದುಕೊಂಡು ಹೋದೆನು. ಹುಬ್ಬಳ್ಳಿಯಲ್ಲಿ ಬಾಲಗಂಧರ್ವ ಕಂಪನಿಯವರು ಸ್ವಯಂವರ, ಎಕಚ್ ಪ್ಯಾಲ, ಕಾನೋಪಾತ್ರ, ದ್ರೌಪದಿ ಮುಂತಾದ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಶ್ರೀ ಬಾಲಗಂಧರ್ವ ಎಂಬ ನಟರು ಬಹಳ ಹೆಸರಾದವರು. ಮೊದಲು ಅವರಿಗೆ ನಾರಾಯಣರಾವ್ ಎಂಬ ಹೆಸರಿತ್ತು.ಅವರು ಮುಂಚೆ ಕಿರ್ಲೋಸ್ಕರ್ ಅಣ್ಣಾಸಾಹೇಬರ ನಾಟಕ ಮಂಡಳಿಯಲ್ಲಿದ್ದಾಗ್ಗೆ ಇವರ ಪಾತ್ರವನ್ನು ನೋಡಿ ಬಹುವಾಗಿ ಮೆಚ್ಚಿಕೊಂಡ ಬಾಲಗಂಗಾಧರ ತಿಲಕ್‌ರವರು ಇವರಿಗೆ ಬಾಲಗಂಧರ್ವ ಎಂಬ ಬಿರುದನ್ನು ಕೊಟ್ಟಿದ್ದರು. ಬಾಲಗಂಧರ್ವ ಒಳ್ಳೆ ರೂಪವಂತರು ಗುಣವಂತರು, ಸಂಗೀತವನ್ನು ಚೆನ್ನಾಗಿ ಕಲಿತಿದ್ದರು. ಬಾಲಗಂಧರ್ವ ತಿಲಕ್ ರವರು ಇವರಿಗೆ ಬಾಲಗಂಧರ್ವ ಎಂಬ ಬಿರುದನ್ನು ಕೊಟ್ಟಿದ್ದರು. ಬಾಲಗಂಧರ್ವ ಒಳ್ಳೆ ರೂಪವಂತರು ಗುಣವಂತರು, ಸಂಗೀತವನ್ನು ಚೆನ್ನಾಗಿ ಕಲಿತಿದ್ದರು. ಸ್ತ್ರೀಪಾತ್ರವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದರು. ಅಲ್ಲದೆ ಹೆಸರಾಂತ ನಟರೂ, ಸುಪ್ರಸಿದ್ಧ ಗಾಯಕರು ಆದ ಮಾಸ್ಟರ್ ಕೃಷ್ಣ ಎಂಬುವರೂ ಸಹ ಅದೇ ಕಂಪನಿಯಲ್ಲಿದ್ದು ಹುಬ್ಬಳ್ಳಿಯಲ್ಲಿ ಮೂರು-ನಾಲ್ಕು ತಿಂಗಳು ಬಾಲಗಂಧರ್ವ ಸಂಸ್ಥೆಯವರು ಮೊಕ್ಕಾಂ ಮಾಡಿದ್ದರು. ಆ ಕಂಪನಿಯವರಿಂದ ಕರೆ ಬಂದುದರಿಂದ ನಮ್ಮ ಸಂಘದ ಮುಖ್ಯನಟರುಗಳು ಅತಿಥಿಗಳಾಗಿ ಹುಬ್ಬಳ್ಳಿಗೆ ಹೋಗಿದ್ದು, ನಾವು ಅವರ ಸಂಘದ ಮುಖ್ಯ ನಟರುಗಳನ್ನು ಆಹ್ವಾನಿಸಿ ಕರೆತಂದು ಬಳ್ಳಾರಿಯಲ್ಲಿ ಒಂದು ದಿನ ಇಟ್ಟುಕೊಂಡು ಮರ್ಯಾದೆಯಿಂದ ಸತ್ಕರಿಸಿ ಕಳುಹಿಸಿಕೊಟ್ಟೆವು.

ಬಳ್ಳಾರಿಯಲ್ಲಿ ಮೊದಲನೇ ನಾಟಕದ ದಿನ, ಸೂರಸಿಂಗ್ ಎಂಬಾತನಿಗೆ ಕಾಂಪ್ಲಿಮೆಂಟರಿ ಟಿಕೆಟ್ ಕಳುಹಿಸಿದ್ದರೂ ನನ್ನ ಗ್ರಹಚಾರದಿಂದ ಅದು ಆ ದಿನ ಅವನಿಗೆ ತಲ್ಪಿರಲಿಲ್ಲ. ಮರುದಿನ ಎರಡನೇ ನಾಟಕ ಸದಾರಮೆ. ಪ್ರೇಕ್ಷಕರಿಂದ ನಾಟಕ ಮಂದಿರ ಕಿಕ್ಕಿರಿದು ತುಂಬಿದೆ. ನಾಟಕವು ಪ್ರಾರಂಭವಾಗಿ ಒಂದು ದೃಶ್ಯವಾಗಿದೆ-ನಾಟಕ ಮಂದಿರದ ಮೇಲೆ ಕಲ್ಲಿನ ಸುರಿಮಳೆ ಬೀಳಲಾರಂಭಿಸಿತು. ಕಂಪನಿ ಮ್ಯಾನೇಜರ್ ಪೋಲೀಸ್‌ಸ್ಟೇಷನ್ನಿಗೆ ಹೋಗಿ ನೋಡುತ್ತಾರೆ! ಒಬ್ಬ ಕಾನ್ಸ್ಟೇಬಲ್ ವಿನಾ ಬೇರೆಯವರು ಗತಿ ಇರಲಿಲ್ಲ. ಕಾನ್‌ಸ್ಟೇಬಲ್‌ಗಳೆಲ್ಲರೂ, ದಫೇದಾರರೂ ಮೊದಲ್ಗೊಂಡು ಸೂರ್‌ಸಿಂಗನ ಜೊತೆಗೂಡಿ ಕಲ್ಲುಗಳನ್ನೆಸೆಯಲು ಸೇರಿದ್ದರು-ಅದು ಅಂದಿನ ಅವರ ಮುಖ್ಯ ಕೆಲಸವಾಗಿತ್ತು. ಕಲ್ಲಗಳ ಉಪದ್ರವ ಜಾಸ್ತಿಯಾಗಿ ನಾಟಕವಾಡಿಸದೆ ಸುಮ್ಮನೆ ಇದ್ದರೆ ಕಲ್ಲುಗಳೂ ಸುಮ್ಮನಾಗುತ್ತಿದ್ದುವು. ಪುನಃ ನಾಟಕವಾರಂಭವಾದರೆ ಕೂಡಲೇ ಕಲ್ಲುಗಳೆಸೆತವೂ ಪ್ರಾರಂಭವಾಗುತ್ತಿತ್ತು. ಆಗ ಆ ಊರಿನ ಪ್ರಸಿದ್ಧ ಅಡ್ವೋಕೇಟರೂ, ಹೆಸರಾಂತ ನಟರೂ ಆದ ರಾಘವಾಚಾರ್ಯರು ರಂಗಭೂಮಿಯ ಮೇಲೆ ಬಂದು ಇಂತಹ ಕಾರ್ಯಮಾಡಿ ಕಲೆಗೂ, ಕಲಾವಿದರಿಗೂ ಅವಮಾನ ಮಾಡುವುದು ಯೋಗ್ಯವಲ್ಲ. ಇದರಿಂದ ಬಳ್ಳಾರಿಗೆ ಕೆಟ್ಟ ಹೆಸರು ಬರುತ್ತೆ

ಎಂದು ಅನೇಕ ವಿಧವಾಗಿ ಭಾಷಣ ಮಾಡಿದರೂ ಏನೂ ಉಪಯೋಗವಾಗಲಿಲ್ಲ. ಆಗ ಕೆಲವು ಸ್ಥಳೀಕರು ಗೋಪ್ಯವಾಗಿ ನಿಜ ಸಂಗತಿಯನ್ನು ತಿಳಿಸಿದ ನಂತರ, ಸೂರಸಿಂಗ್‌ನನ್ನು ಕರೆತಂದು ಕೂಡಿಸಿದನಂತರ ಗಲಾಟೆ ತಣ್ಣಗಾಗಿ ನಾಟಕವು ಸರಾಗವಾಗಿ ನಡೆಯಿತು.

ಆದರೂ ಸಹ ನನ್ನ ಮನಸ್ಸಿಗೆ ಸಮಾಧಾನವಾಗದೆ ಒಬ್ಬ ಸಾಮಾನ್ಯ ಮನುಷ್ಯನಿಗೆ ಕಾಂಪ್ಲಿಮೆಂಟರಿ ಕೊಡದೆ ಹೋದುದಕ್ಕೆ ನಾಟಕ ನಡೆಯಗೊಡಲಿಲ್ಲವಲ್ಲ-ಹೀಗಾದರೆ ಮುಂದೆ ನಾಟಕ ಸಂಸ್ಥೆಗಳು ನಡೆಯುವುದು ಹೇಗೆಂಬ ಯೋಚನೆಯಿಂದ ರಾತ್ರಿಯೆಲ್ಲಾ ನಿದ್ದೆ ಹತ್ತದೆ ಬಹಳ ದುಃಖವಾಯಿತು. ಬೆಳಗಾದ ಕೂಡಲೇ ಸ್ನಾನ, ಶಿವಪೂಜಾದಿಗಳನ್ನು ತೀರಿಸಿಕೊಂಡು ಆ ಊರಿನ ಸೇಂದಿ ಕಂಟ್ರಾಕ್ಟರ್‌ರವರಾದ ಶ್ರೀ ನೆಟ್ಟಕಲ್ಲಪ್ಪನವರನ್ನು ನೋಡಿ ನನ್ನ ಸಂಕಟವನ್ನು ಬಹಳ ದುಃಖದಿಂದ ಮನವಿ ಮಾಡಿಕೊಂಡೆನು. ರಾತ್ರಿ ನಡೆದ ದುರಂತವನ್ನು ನೋಡಿದ್ದ ಅವರ ಇಲಾಖೆಯವರೂ ಸಹ ವಿವರವಾಗಿ ತಿಳಿಸಿದರು. ಆ ಮಹಾನುಭಾವರು ನನ್ನನ್ನು ಸಂತೈಸಿ, ಸಮಾಧಾನ ಪಡಿಸಿ ಕೂಡಲೇ ಅವರ ಕಾರಿನಲ್ಲಿಯೇ ಕೂರಿಸಿಕೊಂಡು ಕಲೆಕ್ಟರ್‌ರವರ ಬಳಿ ಹೋಗಿ ನಡೆದ ಸಮಾಚಾರ ತಿಳುಹಿಸಿ, ಅಲ್ಲಿಂದ ಪೋಲೀಸ್ ಕಲೆಕ್ಟರ್‌ರವವ ಬಳಿ ಹೋಗಿ ನಡೆದ ಸಮಾಚಾರ ತಿಳುಹಿಸಿ, ಅಲ್ಲಿಂದ ಪೋಲೀಸ್ ಸೂಪರ್‌ಇನ್‌ಟೆನ್‌ಡೆಂಟ್‌ರವರ ಬಳಿಯೂ ಹೋಗಿ ಅವರಿಗೆ ತಿಳಿಸಿ, ತಮ್ಮ ಆಫೀಸಿಗೆ ಬಂದು ಆ ಸೂರ್‌ಸಿಂಗ್ ನಿ ಪಿಲಿವರಾ ಎಂದು ಸೂರಸಿಂಗ್ ರೌಡಿಯನ್ನು ಕರೆಸಿ ನನ್ನ ಸಮಕ್ಷಮವೇ ಆತನಿಗೆ "ಏ ಸಿಂಗ್! ಈ ಕಂಪನಿ ವೀರಣ್ಣನದಿ ಕಾದು, ನಾ ಕಂಪನಿ, ನಿನ್ನಿಟ ದಿನಂ ರೇತ್ರಿ ನಿಂಡ ಗಲಭೆ ಚೇಸಿಯುನಾ ವಂಟ, ನಾಕಿ ವಿಚಾರಮಂತ ಬಾಗ ತೆಲಸಿ ಪೋಯಿನದಿ ಇಕಚೂಡು, ರೇಪುನಿಂಚಿ ಏಮೈನ ಕೊಂಚ ಗಲಭೆ ನಡೆಚಿಂದಿ ಅಂಟೆ ನೇನು ಊರ್ಕೆ ಉಂಡೆ ಲಾಪನು, ತೆಲಿಸಿನದಾ? ರೇಪು ನಿಂಚಿ ನೂವು ದಿನಮು ಥಿಯೇಟರ್ ದೆಗ್ಗರಾ ಪೋಯಿ ಮೊದಟ ಗೇಟಲೊ ಉಂಡೆವಲೆನು. ತೆಲಿಸಿಂದಾ?" ಎಂದು ಹೇಳಿಕಳುಹಿಸಿದ್ದೂ ಅಲ್ಲದೆ ಎರಡು-ಮೂರು ನಾಟಕ ಸುಸೂತ್ರವಾಗಿ ನಡೆಯುವವರೆಗೂ ಐವತ್ತು ಜನಗಳನ್ನು ದೊಣ್ಣೆಗಳನ್ನು ಹಿಡಿದು ನಿಲ್ಲುವಂತೆ ಆಜ್ಞೆ ಮಾಡಿದ್ದರು. ಆ ಸಮಯದಲ್ಲಿ ಈಗ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ ಪತ್ರಿಕೆಗಳ ಡೈರೆಕ್ಟರ್ ಗಾದ ಶ್ರೀ ಕೆ. ವೆಂಕಟಸ್ವಾಮಿಯವರು ಸಹಾ ನೆಟ್ಟಕಲ್ಲಪ್ಪನವರ ಜೊತೆಯಲ್ಲಿ ನನ್ನ ಸಹಾಯಕ್ಕೆ ಭಾಗಿಯಾಗಿದ್ದರು. ಆ ಮಹನೀಯರು ನನಗೆ ಮಾಡಿದ ಉಪಕಾರಕ್ಕೆ ನಾನು ಕೃತಜ್ಞನಾಗಿರುವುದೂ ಅಲ್ಲದೆ ಅವರುಗಳಿಗೆ ಚಿರಋಣಿಯಾಗಿರುತ್ತೇನೆ.

ಬಾಲಕಲಾ ವಿವರ್ಧಿನಿ

೧೯೨೫ನೇ ಇಸವಿ ಅಕ್ಟೋಬರ್ ಮಾಹೆ ಆಶ್ವಯುಜ ಮಾಸದ ವಿಜಯ ದಶಮಿಯ ದಿನ ಕೇವಲ ಎಂಟು ವರುಷ ಮೊದಲ್ಗೊಂಡು ಹದಿನಾಲ್ಕು ವರ್ಷಗಳಿಗೆ ಒಳಪಟ್ಟ ವಯಸ್ಸಿನ ಕೆಲವು ಮಂದಿ ಬಾಲಕರನ್ನೇ ಸೇರಿಸಿ ಬಾಲಕಲಾ ವಿವರ್ಧಿನಿ ಎಂಬ ಹೆಸರಿನಲ್ಲಿ ಒಂದು ಸಂಘವನ್ನೇರ್ಪಡಿಸಿ ದಿ|| ಕವಿಕೇಸರಿ ವೇ|| ಬೆಳ್ಳಾವೆ ನರಹರಿಶಾಸ್ತ್ರಿಗಳಿಂದಲೇ ಶ್ರೀ ಕೃಷ್ಣಪಾರಿಜಾತ, ಜಲಂಧರ, ಕೃಷ್ಣಗಾರುಡಿ, ಭಾಮಾಪರಿಣಯ ಮೊದಲಾದ ನಾಟಕಗಳನ್ನೂ, ಕರ್ಣಾಟಕಾಂಧ್ರ ಕವಿ ಭೀಮರಾಜುರವರಿಂದ ಸಾವಿತ್ರಿ, ಕಬೀರ್ ಲೀಲೆ ನಾಟಕಗಳನ್ನೂ ಬರೆಯಿಸಿ ಬಾಲಕರಿಗೆ ಅಭ್ಯಾಸ ಮಾಡಿಸಿ ಆ ಸಂಘದ ಆಡಳಿತವನ್ನು ನನ್ನ ಭಾವಮೈದ ನೀಲಕಂಠಪ್ಪನವರ ವಶಕ್ಕೆ ಬಿಟ್ಟು ಮೇಲ್ವಿಚಾರಣೆಯನ್ನು ನಾನು ನೋಡಿಕೊಳ್ಳುತ್ತಿದ್ದೆ.

ಆ ಸಂಘವೂ ಸಹ ದೊಡ್ಡ ಸಂಘದಂತೆಯೇ ದಿನೇ ದಿನೇ ಅಭಿವೃದ್ಧಿಗೆ ಬಂದು ಶ್ರೀ ಮನ್ಮಹಾರಾಜರ ಸನ್ನಿಧಿಯಲ್ಲಿಯೂ ಸಹ ನಾಟಕಗಳನ್ನಾಡಿ ಬಹುಮಾನವನ್ನು ಪಡೆದುದೂ ಅಲ್ಲದೆ ಮದ್ರಾಸು, ಮಂಗಳೂರು, ಬಳ್ಳಾರಿ ಪ್ರಾಂತ್ಯಗಳಲ್ಲಿಯೂ ಉತ್ತಮವಾದ ಕೀರ್ತಿ ಪ್ರಯೋಜನಗಳನ್ನು ಪಡೆದು ವೃದ್ಧಿಯಾಗುತ್ತ ಬಂದಿತು.

ಆ ಸಮಯದಲ್ಲಿಯೇ ಚಿಕ್ಕೋಡಿಯ ಶ್ರೀ ಶಿವಲಿಂಗಸ್ವಾಮಿಗಳೆಂಬ ಕವಿಗಳು ಸ್ವಯಂ ನಟರೂ ಆಗಿದ್ದು, ತಮ್ಮದೇ ಒಂದು ಸಂಸ್ಥೆ ಮಾಡಿಕೊಂಡು ಬಂದು ಸಿರಸಿ ಕ್ಯಾಂಪಿನಲ್ಲಿ ನಷ್ಟವಾಗಿ ನಾಟಕದ ಸೀನರಿ, ಡ್ರೆಸ್ ವಗೈರೆ ಎಲ್ಲವನ್ನೂ ಕಳೆದುಕೊಂಡು ಬರಿಗೈಯಲ್ಲಿ ನಟರುಗಳ ಸಮೇತ ಬಂದು 'ನಮಗೆ ಕೆಲವು ಸೀನರಿ, ಡ್ರೆಸ್ಸು ಸಲಕರಣೆಗಳನ್ನು ಒದಗಿಸಿಕೊಟ್ಟಲ್ಲಿ ನಿಮ್ಮ ಶಾಖೆಯನ್ನಾಗಿ ಮಾಡಿಕೊಂಡು ಮೂವತ್ತು-ಮೂವತ್ತೈದು ಜನರ ಸಂಸಾರ ನಿಮ್ಮ ಹೆಸರಿನಿಂದ ಜೀವನ ಮಾಡಿಕೊಳ್ಳಲು ಅವಕಾಶವಾಗುತ್ತೆ' ಎಂದ ಹೇಳಿಕೊಳ್ಳಲು, ಅವರ ಆಗಿನ ಸ್ಥಿತಿಗತಿಗಳನ್ನು ನೋಡಲಾರದೆ ಕನಿಕರದಿಂದ ಅವರಿಗೆ ಅನುಕೂಲ ಮಾಡಿಕೊಡುತ್ತೇನೆಂದು ಭರವಸೆಕೊಟ್ಟೆ. ಅನಂತರ ಶ್ರೀ ನೆಟ್ಟಕಲ್ಲಪ್ಪನವರಿಂದ ಐದು ಸಾವಿರ ರೂಪಾಯಿಗಳನ್ನು ಸಾಲವಾಗಿ ಪಡೆದು ಚಿಕ್ಕೋಡಿಯ ಶಿವಲಿಂಗ ಸ್ವಾಮಿಗಳ ಜೊತೆ ಬೊಂಬಾಯಿಗೆ ಹೋಗಿ ಅವರಾಡುವ ನಾಟಕಗಳಿಗೆ ಆಗಬೇಕಾದ ಡ್ರೆಸ್, ಒಡವೆ, ವಿಶಿಷ್ಟ ಸಲಕರಣೆಗಳನ್ನು ತೆಗೆದುಕೊಂಡು ಬಂದು ಮೊದಲನೆಯದಾಗಿ ಬಳ್ಳಾರಿ ಕ್ಯಾಂಪು ಮಾಡಿ 'ಚಂದ್ರಗ್ರಹಣ' ಎಂಬ ನಾಟಕದೊಂದಿಗೆ ಸಂಘವನ್ನು ಪುನರ್‌ಸ್ಥಾಪಿಸಿದೆವು. ಅದರಲ್ಲಿ ಶಿವಲಿಂಗಸ್ವಾಮಿಗಳು, ಕರ್ನಾಟಕ ಗಂಧರ್ವ (ಗಂಗಾಧರ), ವಜೀರಾಬಾಯಿ, ಪ್ಯಾರಾಬಾಯಿ, ಕಿತ್ತೂರು ಗುರಪ್ಪ, ಮಲ್ಲಾರೀರಾವ್ ಮೊದಲಾದವರಿದ್ದು, ಎಸ್. ನಾಗೇಶರಾಯರನ್ನು ವ್ಯವಸ್ಥಾಪಕರನ್ನಾಗಿ ಮಾಡಿದ್ದೆನು. ಆ ಕಂಪನಿಯ ಹೆಸರನ್ನೂ ಸಹ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ ಮಂಡಳಿಯೆಂದು ಇಟ್ಟು ಎರಡನೆಯ ಬ್ರಾಂಚ್ ಮಾಡಿ ನಡೆಸುತ್ತಿದ್ದೆವು. ಈ ಮೂರು ಸಂಘಗಳಿಂದಲೂ ಇನ್ನೂರೈವತ್ತು ಜನಗಳಿದ್ದು ಅವರ ಸಂಸಾರ ನಡೆಯುತ್ತಿತ್ತು.

ಬಳ್ಳಾರಿ ಕ್ಯಾಂಪಿನಲ್ಲಿ ದೊಡ್ಡಬಳ್ಳಾಪುರದ ಮುರಾರಾಚಾರ್ ಎಂಬ ಉತ್ತಮ ನಟರು ಸಂಘಕ್ಕೆ ಸೇರಿದರು. ದೊಡ್ಡ ಕಂಪನಿ ಬಳ್ಳಾರಿಯಲ್ಲಿಯೂ, ಒಂದನೇ ಬ್ರಾಂಚು ಬೆಂಗಳೂರಿನಲ್ಲಿಯೂ ಮತ್ತು ಎರಡನೇ ಬ್ರಾಂಚು ಗದಗಿನಲ್ಲಿಯೂ ಕ್ಯಾಂಪು ಮಾಡಿಕೊಂಡು ಚನ್ನಾಗಿಯೇ ನಡೆದುಕೊಂಡು ಬಂದವು. ದೊಡ್ಡ ಕಂಪನಿ ಹೊಸಪೇಟೆಗೆ ಹೋಗಿ ಅಲ್ಲಿಂದ ಕಂಪನಿಯಲ್ಲಿದ್ದಾಗ್ಗೆ ನನ್ನ ಸುದೈವದಿಂದ ಶ್ಯಾಮಲಾಲ್ ಎಂಬ ಬಹಳ ಉತ್ತಮವಾದ ಪೆಯಿಂಟರ್ ಸಂಘಕ್ಕೆ ಸೇರಿದರು.

ಕಂಪಲಿಯಿಂದ ಅನಂತಪುರ ಕ್ಯಾಂಪು ಮಾಡಿದಾಗ ಕಬೀರ್‌ದಾಸ್ ಮೊದಲನೆಯ ನಾಟಕ ಹಾಕಿದ್ದೆ. ಅದರಲ್ಲಿ ಸಿ. ಬಿ. ಮಲ್ಲಪ್ಪನವರು ಕಬೀರ್‌ದಾಸ್, ನಾಗೇಶರಾಯರು ರತ್ನಾಕರ, ನಾರಾಯಣನಾಯ್ಡು ಬೀಬಿ, ಗಂಗಾಧರರಾವ್ ಕಾಕೋದರ ಎಂಬುದಾಗಿ ನಟರ ಹೆಸರನ್ನೂ ಅವರು ಅಭಿನಯಿಸುವ ಪಾತ್ರದ ಹೆಸರನ್ನೂ ನೋಟೀಸುಗಳಲ್ಲಿ ಪ್ರಿಂಟ್ ಮಾಡಿಸಿ ಅಡ್ವರ್‌ಟೈಜು ಮಾಡಿಸಿದ್ದೆನು. ಗುಬ್ಬಿ ಕಂಪನಿಯೆಂದರೆ ತುಂಬಾ ಹೆಸರುವಾಸಿಯಾಗಿದ್ದುದರಿಂದ ರಂಗಮಂದಿರ ಕಿಕ್ಕಿರಿದು ಭರ್ತಿಯಾಗಿ ಪ್ರೇಕ್ಷಕರು ಸ್ಥಳಾಭಾವದಿಂದ ಹಿಂತಿರುಗಿ ಹೋದರು. ರಾತ್ರಿ ಎಂಟುಗಂಟೆಯಾಗಿದೆ. ನಾಗೇಶರಾಯರು ಬರಲಿಲ್ಲ. Train missed Excuse ಎಂದು ಟೆಲಿಗ್ರಾಂ ಬಂದಿತು. ಆಗ ಏನು ಮಾಡಲೂ ತೋರದೆ, ಅವರಿಂದ ಬಂದ ಟೆಲಿಗ್ರಾಂ ಹಿಡಿದು, ಪ್ರೇಕ್ಷಕರಲ್ಲಿ 'ನಾಗೇಶರಾಯರು ಬರಲು ತೊಂದರೆಯಾದ್ದರಿಂದ ಅವರ ಪಾತ್ರವನ್ನು ಬೇರೆಯವರಿಂದ ಮಾಡಿಸುತ್ತೇನೆ. ನಾಟಕ ನೋಡಲು ಇಷ್ಟವಿಲ್ಲದವರು ಟಿಕೆಟ್ಟು ವಾಪಸು ಮಾಡಿ ಹಣ ಪಡೆಯಬಹುದು-ಇದಕ್ಕಾಗಿ ತಮ್ಮ ಕ್ಷಮೆ ಬೇಡುತ್ತೇನೆ' ಎಂದು ಹೇಳಿಕೊಂಡೆ. ಕೆಲವರು-ಸುಮಾರು ಇನ್ನೂರು ರೂಪಾಯಿನ ಜನ-ವಾಪಸುಹೋದರು. ಅಲ್ಲದೆ ಬಹಳ ಗಲಭೆಯಾಯಿತು. ಅಂದಿನಿಂದ ನಟರುಗಳ ಹೆಸರು ಹಾಕಿಸುವುದನ್ನು ಕೆಲವು ಕಾಲ ನಿಲ್ಲಿಸಬೇಕಾಯಿತು.

ಹೊಸದಾಗಿ ಬಂದ ಚಿತ್ರಗಾರರಿಂದ ಒಂದನೆಯ ಬ್ರಾಂಚ್ ಕಂಪನಿಯಾದ ಬಾಲ ಕಲಾ ವಿವರ್ಧಿನಿ ನಾಟಕ ಮಂಡಳಿಗೆ ಹೊಸ ಸೀನರಿಗಳನ್ನು ಬರೆಯಿಸಿ, ಬೆಂಗಳೂರಿನಲ್ಲಿ ಹೊಸದಾಗಿ ಕಟ್ಟಿದ ರಂಗಮಂದಿರದಲ್ಲಿ ನಾಟಕಗಳನ್ನಾಡಲು ಆರಂಭಿಸಿದೆವು. ಅಲ್ಲಿ ಹಾರ್ಮೋನಿಯಂ ಮಾಸ್ಟರ್‌ರವರಾದ ಶ್ರೀನಿವಾಸಯ್ಯನವರ ಲಗ್ನಕ್ಕಾಗಿ ಬೆನಿಫಿಟ್ ನಾಟಕವನ್ನಾಡಿ ಒಂದು ಸಾವಿರದ ಇನ್ನೂರು ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟು ಅಡ್ವಾನ್ಸಾಗಿ ಒಂದು ಸಾವಿರ ರೂಪಾಯಿಗಳನ್ನೂ ಕೊಟ್ಟೆವು. ದೊಡ್ಡ ಕಂಪನಿ ಅನಂತಪುರದಿಂದ ಹಾಸನದ ಜಾತ್ರೆಗೆ ಬಂದಿತು. ಎರಡನೆಯ ಬ್ರಾಂಚು ಗದಗಿನಲ್ಲಿಯೇ ನಡೆಯುತ್ತಿತ್ತು.

ದೊಡ್ಡ ಕಂಪನಿ ಹಾಸನದಿಂದ ಕೊಡ್ಲಿಪೇಟೆ, ಸೋಮವಾರ ಪೇಟೆ ಆದಮೇಲೆ ಮಡಕೇರಿಗೆ ಬಂದು ನಾಟಕವಾಡುತ್ತಿದ್ದಾಗ ಬರಸಿಡಿಲಿನಂತೆ ಅತ್ಯಂತ ದುಃಖಕರವಾದ ಸುದ್ದಿಯನ್ನು ಕೇಳಬೇಕಾಯಿತು. ೧೯೨೬ನೇ ಇಸವಿ, ಏಪ್ರಿಲ್ ಮಾಹೆ. ಬೆಂಗಳೂರಿನಲ್ಲಿ ರತ್ನಾವಳೀ ಸಂಸ್ಥೆಯ ಮಾಲೀಕರಾದ ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರು

(Gifted Actor) ಪರಲೋಕಯಾತ್ರೆ ಮಾಡಿ, ಎಲ್ಲಾ ನಾಟಕ ಮಂಡಳಿಯವರಿಗೂ ಅತೀವ ದುಃಖವನ್ನುಂಟುಮಾಡಿದರು. ಆ ದಿನ ಮಡಿಕೇರಿಯಲ್ಲಿ ನಾಟಕವನ್ನು ನಿಲ್ಲಿಸಿ, ಆ ಊರಿನ ಹಿರಿಯ ವ್ಯಕ್ತಿಗಳನ್ನೂ, ಆಫೀಸರುಗಳನ್ನೂ ನಮ್ಮ ನಾಟಕಶಾಲೆಗೆ ಬರಮಾಡಿಕೊಂಡು ಸಂತಾಪಸೂಚಕ ಸಭೆಯನ್ನು ಏರ್ಪಡಿಸಿದೆನು.

ಮಡಕೇರಿಯಿಂದ ಹುಣಸೂರಿಗೆ ಬಂದು ಕೆಲನಾಟಕಗಳನ್ನಾಡಿದ ನಂತರ ಕಂಪನಿಯಲ್ಲಿ ಬಹಳ ಜನ ಮಲೇರಿಯಾ ಜ್ವರಪೀಡಿತರಾದ್ದರಿಂದ, ಒಂದು ತಿಂಗಳು ಕಂಪನಿಗೆ ರಜ ಕೊಡಬೇಕಾಗಿ ಬಂದಿತು. ಎರಡನೆಯ ಬ್ರಾಂಚು ಕಂಪೆನಿ ಗುಳೇದ ಗುಡ್ಡದಲ್ಲಿದ್ದು ಅಷ್ಟು ದೂರ ಹೋಗಿದ್ದರೆ ನಾಟಕ ಕಂಪನಿಗಳನ್ನು ವ್ಯವಸ್ಥೆಯಿಂದ ನಡೆಸಲು ತುಂಬಾ ಕಷ್ಟಕರವಾದ್ದರಿಂದ ನಾನೇ ಖುದ್ದು ಹೋಗಿ ಸಂಸ್ಥೆಯನ್ನು ಬಿಜಾಪುರಕ್ಕೆ ತಂದು ಅಲ್ಲಿ ಛತ್ರಿಯವರ ಥಿಯೇಟರಿನಲ್ಲಿ ನಾಟಕಗಳನ್ನು ನಡೆಯಿಸುತ್ತಾ ಅದರ ಅಂದರೆ ಎರಡನೆಯ ಬ್ರಾಂಚು ಕಂಪನಿಯ ಸಂಪೂರ್ಣ ಅಧಿಕಾರವನ್ನು ಶ್ರೀಶಿವಲಿಂಗಸ್ವಾಮಿಗಳಿಗೆ ವಹಿಸಿಕೊಟ್ಟು ಬೆಂಗಳೂರಿಗೆ ಹಿಂದಿರುಗಿದೆನು.

ಒಂದು ತಿಂಗಳ ನಂತರ ಕಂಪನಿಯನ್ನು ತಿರುಪತ್ತೂರು, ಸೇಲಂ ಕ್ಯಾಂಪಿಗೆ ತಂದೆವು. ಅಲ್ಲಿ ತುಕಾರಾಂ ನಾಟಕವನ್ನು ಮರಾಠಿ ಭಾಷೆಯಿಂದ ಕನ್ನಡ ಭಾಷೆಗೆ ಶ್ರೀ ಜನಾರ್ಧನ ಪೆಯಿಂಟರ್‌ರವರಿಂದ ತರ್ಜುಮೆ ಮಾಡಿಸಿ ನಾಟಕ ಅಭ್ಯಾಸ ಮಾಡಿ ಆಡಿದೆವು. ವರದಾಚಾರ್ಯರು ತೀರಿಹೋದ ಬಳಿಕ ಅವರ ಸಂಸ್ಥೆಯನ್ನು ಯಾರೂ ನಡೆಸಲಿಲ್ಲವಾದ್ದರಿಂದ ಅಲ್ಲಿ ಮುಖ್ಯ ರಾಣೀಪಾತ್ರವನ್ನು ಮಾಡುತ್ತಿದ್ದ ಶ್ರೀ ಆರ್. ನಾಗೇಂದ್ರರಾಯರು ಮತ್ತು ಡಿ. ಜಯರಾಯರನ್ನು ನಮ್ಮ ಸಂಘಕ್ಕೆ ಬರಮಾಡಿಕೊಂಡೆವು. ಆರ್. ನಾಗೇಂದ್ರರಾಯರು ಕೆಲವು ತಿಂಗಳು ಮಾತ್ರ ಸಂಘದಲ್ಲಿದ್ದು ನಟರುಗಳ ಒಳ ಜಗಳದಿಂದ ಸಂಘವನ್ನು ಬಿಟ್ಟುಹೋದರು.

ಸೇಲಂನಿಂದ ಕೊಯಮತ್ತೂರು ಕ್ಯಾಂಪಿಗೆ ಬಂದು ಅಲ್ಲಿಂದ ವೆರೈಟಿ ಹಾಲ್ ಮಾಲೀಕರಾದ ವಿನ್‌ಸೆಂಟರವರಿಂದ ಐದುಸಾವಿರ ರೂಪಾಯಿಗಳನ್ನು ಸಾಲ ತೆಗೆದುಕೊಂಡು ಎಲೆಕ್ಟ್ರಿಕ್ ಲೈಟಿನಲ್ಲಿ ನಾಟಕವನ್ನಾಡಲು ಇನ್‌ಜಿನ್ ಡೈನಾಮೊ ಕೊಂಡೆವು. ೧೯೨೬ನೇ ಡಿಸೆಂಬರ್ ೨೫ರಲ್ಲಿ ಎಲೆಕ್ಟ್ರಿಕ್ ಲೈಟಿನಲ್ಲಿ ಮಂಗಳೂರಿನಲ್ಲಿ ನಾಟಕವನ್ನಾಡಲು ಆರಂಭಿಸಿದೆವು. ಅದುವರೆವಿಗೂ ಮಂಗಳೂರಿನಲ್ಲಿ ಯಾರೂ ಎಲೆಕ್ಟ್ರಿಕ್ ಲೈಟಿನಲ್ಲಿ ನಾಟಕವನ್ನಾಡಿರಲಿಲ್ಲವಾದ್ದರಿಂದ ಉತ್ಪತ್ತಿ ಬಹಳ ಚೆನ್ನಾಗಿ ಆಯಿತು. ಆಗ ಅಲ್ಲಿನ ಗಣಪತಿ ಸ್ಕೂಲಿಗೆ ಬೆನಿಫಿಟ್ ನಾಟಕವನ್ನಾಡಿ ಬಂದು ಮೂರು ಸಾವಿರ ರೂಪಾಯಿಗಳನ್ನು ಸ್ಕೂಲಿಗೆ ಕೊಟ್ಟು ಮುಂದೆ ಚಿಕ್ಕಮಗಳೂರು ಕ್ಯಾಂಪು ಮಾಡಿದೆವು.

ಅಲ್ಲಿ ೧೯೨೭ನೇ ಏಪ್ರಿಲ್ ಮಾಹೆಯಲ್ಲಿ ಅಂದರೆ ಚೈತ್ರ ಶುದ್ಧದಲ್ಲಿ (ನನ್ನ ಜ್ಯೇಷ್ಠಪುತ್ರ) ಗಂಡುಮಗುವಾಯಿತೆಂದು ನನಗೆ ಗುಬ್ಬಿಯಿಂದ ಟೆಲಿಗ್ರಾಂ ಬಂದಿತು. ಆ ಸಂತೋಷದಲ್ಲಿ ಗುಬ್ಬಿಯಲ್ಲಿ ದೇವಸ್ಥಾನದ ಮುಂದೆ ಒಂದು ಭಾವಿಯನ್ನು ತೆಗೆಯಿಸಿ,ದಾಸೋಹಕ್ಕಾಗಿ ಒಂದು ಸಾವಿರದ ಐನೂರು ರೂಪಾಯಿಗಳವರೆಗೆ ಪಾತ್ರೆ

ಸಾಮಾನುಗಳನ್ನು ಕೊಡಿಸಿದೆನು. ಮಗುವಿಗೆ ಚನ್ನಬಸವಣ್ಣನೆಂದು ನಾಮಕರಣ ಮಾಡಲಾಯಿತು.

ಅದೇ ಕ್ಯಾಂಪಿನಲ್ಲಿದ್ದ ಸಿದ್ಧಲಿಂಗಯ್ಯನವರನ್ನು ಕಳುಹಿಸಿ ಶ್ರೀ ಎಂ. ವಿ. ಸುಬ್ಬಯ್ಯ ನಾಯ್ಡುರವರನ್ನು ಕಂಪನಿಗೆ ಕರೆಸಿಕೊಳ್ಳಲಾಯಿತು. ಮುಂದೆ ಶಿವಮೊಗ್ಗ ಕ್ಯಾಂಪು ಮಾಡಿದೆವು. ಅಲ್ಲಿನ ಪೆಟ್ರೋಲ್ ಏಜೆಂಟರಾದ ಶ್ರೀ ಮರುಳಸಿದ್ಧಯ್ಯನವರು ತಮ್ಮಲ್ಲಿದ್ದ ಓವರ್ ಲ್ಯಾಂಡ್ ಎಂಬ ಮೋಟಾರು ಕಾರನ್ನು ಬಲವಂತವಾಗಿ ನನಗೆ ಒಂದು ಸಾವಿರದ ಇನ್ನೂರು ರೂಪಾಯಿಗಳಿಗೆ ಖರೀದಿಗೆ ಕೊಟ್ಟು ದಾವಣಗೆರೆ ಕ್ಯಾಂಪಿಗೆ ಬಂದ ನಂತರ ಹಣ ತೆಗೆದುಕೊಂಡರು.

ಶಿವಮೊಗ್ಗ ಕ್ಯಾಂಪಿನಲ್ಲಿ ಮಂತ್ರಿಗಳಾದ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಆ ಊರಿನ ಬಸವೇಶ್ವರ ದೇವಾಲಯಕ್ಕಾಗಿ ಬೆನಿಫಿಟ್ ನಾಟಕವನ್ನಾಡಿ, ಸಾವಿರದ ಎಂಟುನೂರು ರೂ.ಗಳನ್ನು ಕೊಟ್ಟೆವು. ಅದೇ ಕ್ಯಾಂಪಿನಲ್ಲಿ ಸಿ. ಬಿ. ಮಲ್ಲಪ್ಪನವರು ನಮ್ಮ ಕಂಪನಿಯನ್ನು ಬಿಟ್ಟು ದೊಡ್ಡಬಳ್ಳಾಪುರದ ನಂಜುಂಡಯ್ಯನವರ ಜೊತೆಯಲ್ಲಿ ಶ್ರೀ ಚಂದ್ರಮೌಳೀಶ್ವರಸ್ವಾಮಿ ಕಂಪನಿಗೆ ಭಾಗಸ್ಥರಾಗಿ ಸೇರಿದರು. ಆಗ ಅವರ ಜಾಗಕ್ಕೆ ಬನ್ನಿಕುಪ್ಪೆ ಗುರುಮೂರ್ತಪ್ಪನವರನ್ನು ಕರೆತಂದು ಅಭ್ಯಾಸ ಮಾಡಿಸಲಾಯಿತು. ಕಂಪನಿ ದಾವಣಗೆರೆಗೆ ಹೋಗಿ ಅಲ್ಲಿಂದ ಚಿತ್ರದುರ್ಗಕ್ಕೆ ಹೋಯಿತು. ಹೊಸದಾಗಿ ಬಂದಿದ್ದ ಶ್ಯಾಮಲಾಲ್ ಪೆಯಿಂಟರಿಂದ ಬೆಂಗಳೂರಿನಲ್ಲಿಯೇ ಸೀನರಿಗಳನ್ನು ಬರೆಯಿಸಿ ಅಲ್ಲಿಂದ ದೊಡ್ಡ ಕಂಪನಿಗೂ ಬ್ರಾಂಚ್ ಕಂಪನಿಗೂ ಕಳುಹಿಸಲಾಗುತ್ತಿತ್ತು.

ಮೂಕ ಚಿತ್ರ ಪ್ರಪಂಚ-ಕಹಿ ಅನುಭವ

೧೯೨೭ನೇ ಡಿಸೆಂಬರ್ ತಿಂಗಳಲ್ಲಿ ಎರಡು ಕಂಪನಿಗಳನ್ನೂ ಹಾಸನದ ಜಾತ್ರೆಯಲ್ಲಿ ಒಂದರ ಪಕ್ಕದಲ್ಲಿ ಒಂದನ್ನು ಹಾಕಿಕೊಂಡು ನಾಟಕವಾಡಿದೆವು. ಎರಡು ಕಂಪನಿಗಳಿಗೂ ಉತ್ಪತ್ತಿ ಚೆನ್ನಾಗಿ ಆದುದಲ್ಲದೆ ಒಳ್ಳೆ ಕೀರ್ತಿಯು ಬಂದಿತು. ಆಗ ಹಾಸನದ ದನಗಳ ಜಾತ್ರೆಗಳಲ್ಲಿ ಎರಡುಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಭಾವಿಯನ್ನು ಕಟ್ಟಿಸಲಾಯಿತು. ೧೯೨೮ರಲ್ಲಿ ಒರಿಜಿನಲ್ ಕಂಪನಿಯು ಚುಂಚನ ಕಟ್ಟೆಗೆ ಹೋಗಿ ಅಲ್ಲಿಂದ ಟಿ. ನರಸೀಪುರ, ಕೊಳ್ಳೇಗಾಲ ಕ್ಯಾಂಪುಮಾಡಿ ರಾಜಭಕ್ತಿ (ರಾಕ್ಷಸೀಮಹತ್ವಾಕಾಂಕ್ಷೆ) ನಾಟಕದ ರಿಹರ್ಸಲ್ ಆರಂಭಿಸಿದೆವು. ಕೊಳ್ಳೆಗಾಲದಲ್ಲಿ ಶ್ರೀ ಬಿ. ಪಿ. ಮಲ್ಲಪ್ಪನವರ ಮುಂದಾಳತ್ವದಲ್ಲಿ ವಜ್ರಖಚಿತವಾದ ಭಂಗಾರದ ಪದಕವನ್ನು ಕೊಟ್ಟರು. ಮೈಸೂರಿಗೆ ಬಂದು ಕಬ್ಬಳ್ಳಿ ಸಾಹುಕಾರರ ಹಾಸ್ಟೆಲಿನಲ್ಲಿಳಿದು ಕೊಂಡು ರಾಜಭಕ್ತಿ ನಾಟಕ ಚೆನ್ನಾಗಿ ಕಲಿತು ಲಕ್ಷ್ಮಿ ಥಿಯೆಟರಿನಲ್ಲಿ ಮೊದಲನೆಯ ಸಾರಿ ಅಭಿನಯಿಸಿದೆವು. ಅದರಲ್ಲಿ ವಿಕ್ರಾಂತನ ಪಾತ್ರಮಾಡಿದ ಶ್ರೀ ಸುಬ್ಬಯ್ಯನಾಯ್ಡು ರವರಿಗೂ, ದೇವಾಂಗನೆ ಪಾತ್ರಮಾಡಿದ ಜಿ. ಸುಂದರಮ್ಮ, ವಸಂತನ ಪಾತ್ರಮಾಡಿದ ಶಿವಕುಮಾರನಿಗೂ ತುಂಬಾ ಒಳ್ಳೆ ಹೆಸರು ಕೀರ್ತಿ ಲಭಿಸಿತು. ಆಗ ಮೈಸೂರಿನಲ್ಲಿ ರಾಜಭಕ್ತಿ ನಾಟಕ ಮಾತ್ರ ಆಡಿ ಬೆಂಗಳೂರಿಗೆ ಬಂದು ಕಲಾಸಿಪಾಳ್ಯದಲ್ಲಿದ್ದ ರತ್ನಾವಳೀ ಥಿಯೇಟರಿನಲ್ಲಿ ನಾಟಕವಾಡುತ್ತಾ ಇದ್ದಾಗ್ಗೆ ಕೆ. ವ್ಯಾಸರಾಯರ ಲಗ್ನಕ್ಕಾಗಿ ಒಂದು ಸಾವಿರ ರೂಪಾಯಿ ಕೊಟ್ಟೆವು. ನಂತರ ಕಡೂರು ಕ್ಯಾಂಪುಮಾಡಿದೆವು. ಜನವರಿ ತಿಂಗಳಲ್ಲಿಯೇ ಹನ್ನೆರಡು ಮತ್ತು ಒಂಭತ್ತು ವರ್ಷದ ಸಹೋದರಿಯರಾದ ಬಿ. ಜಯಮ್ಮ, ಬಿ. ರಾಜಮ್ಮ ಸಂಘಕ್ಕೆ ಸೇರಿದರು. ಕಡೂರಿನಲ್ಲಿ ನಾವು ನಾಟಕಗಳನ್ನಾಡುವಾಗ್ಗೆ ಬೀರೂರಿನ ಸಾಹುಕಾರರಾದ ಪತ್ರೆ ಚನ್ನೀರಪ್ಪನವರು ಮೂರು ತೊಲ ಭಂಗಾರದ ಪದಕವನ್ನು ಬಹುಮಾನಿಸಿದರು. ಇದೇ ಇಸವಿಯಲ್ಲಿ ನನ್ನ ಮಿತ್ರರಾದ ಶ್ರೀಯುತ ದೇವುಡು ನರಸಿಂಹ ಶಾಸ್ತ್ರಿಗಳು ಹಾಗೂ ಶ್ರೀನಿವಾಸಮೂರ್ತಿಗಳು ನನ್ನ ಬಳಿಗೆ ಬಂದು ಷೇರ್‌ಗಳನ್ನು ಹಾಕಿ ಒಂದು ಫಿಲಂ ಲಿಮಿಟೆಡ್ ಕಂಪನಿಯನ್ನು ರಿಜಿಸ್ಟರ್ ಮಾಡೋಣವೆಂದು ಒತ್ತಾಯ ಮಾಡಿದರು. ನನ್ನ ನಾಟಕದ ವ್ಯವಹಾರ ಒಂದನ್ನು ಬಿಟ್ಟು ಮತ್ತೇನ ಗೊತ್ತಿಲ್ಲವೆಂದರೂ ಬಿಡದೆ ನನ್ನನ್ನು ಮ್ಯಾನೇಜಿಂಗ್ ಡೈರೆಕ್ಟರ್‌ನನ್ನಾಗಿ ಮಾಡಿ, ನನ್ನ ಜೊತೆಯಲ್ಲಿ ಅವರೂ ಸೇರಿಕೊಂಡು, ನನ್ನಿಂದ ಷೇರಿಗಾಗಿ ಎರಡು ಸಾವಿರದ ಐದುನೂರು (೨೫೦೦) ರೂಪಾಯಿಗಳನ್ನು ತೆಗೆದುಕೊಂಡು ನಿಬಂಧನೆಗಳಂತೆ ರೂಲ್ಸುಗಳನುನುಸರಿಸಿ ಕಂಪನಿಯನ್ನು ರಿಜಿಸ್ಟರ್ಡ್ ಮಾಡಿದರು.

ಅದಕ್ಕೆ ಯಜಮಾನ್ ಅಂಡ್ ಸನ್ಸ್, ಎ. ಬಿ. ಅಯ್ಯಂಗಾರ್, ರಿಟೈರ್ಡ್ ಎಲೆಕ್ಟ್ರಿಕಲ್ ಇಂಜಿನಿಯರ್, ಪುಟ್ಟಸ್ವಾಮಯ್ಯ, ಕೃಷ್ಣರಾಯರು, ಸಬ್‌ಜಡ್ಡಿ-ಇವರುಗಳು ಡೈರೆಕ್ಟರಾಗಿದ್ದರು. ಸಂಸ್ಥೆಯು ಹಾಸನಕ್ಕೆ ಹೋಗಿ ಅಲ್ಲಿಂದ ಸಕಲೇಶಪುರಕ್ಕೆ ಕ್ಯಾಂಪುಮಾಡಲಾಯಿತು. ಈ ಮಧ್ಯೆ ೧೯೨೯ರಲ್ಲಿ ಸಿ. ವಿ. ನರಸಿಂಹ ಅಯ್ಯಂಗಾರ್‌ರವರ ಸ್ಥಳವನ್ನು ಒಂದು ವರ್ಷಕ್ಕೆ ಒಂದು ಸಾವಿರ ರೂಪಾಯಿಗಳಂತೆ ಹನ್ನೆರಡು ವರ್ಷಕ್ಕೆ ಗೊತ್ತು ಮಾಡಿ,

ಕರಾರುಮಾಡಿಕೊಂಡು, ಥಿಯೇಟರ್ ಕಟ್ಟಿ ಶಿವಾನಂದ ಥಿಯೇಟರ್‌ಯೆಂಬ ಹೆಸರಿನಿಂದ ದಿವಾನ್ ಮಿರ್ಜಾರವರ ಅಮೃತಹಸ್ತದಿಂದ ೧೯೩೦ನೇ ಇಸ್ವಿ ಮೇ ತಿಂಗಳಲ್ಲಿ ಪ್ರಾರಂಭ ಮಾಡಿಸಿದೆವು.

ಆಗ ರಿಜಿಸ್ಟರ್ಡ್ ಆಗಿದ್ದ ಕರ್ನಾಟಕ ಫಿಲಂ ಕಾರ್ಪೋರೇಷನ್‌ಗೆ ಹಣ ವಸೂಲಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ನನ್ನನ್ನೇ ಸಕಲೇಶಪುರದಲ್ಲಿ ಮುಂದಾಳಾಗಿ ಬಿಟ್ಟರು. ಸಕಲೇಶಪುರದ ಕಾಫಿ ಪ್ಲ್ಯಾಂಟರ್ಸ್‌ಗಳು ಮತ್ತು ಅಕ್ಕಪಕ್ಕದ ಪ್ಲ್ಯಾಂಟರ್ಸ್‌ಗಳು ಸಹಾ ನನಗೆ ಪರಿಚಯವಿದ್ದು ನನ್ನಲ್ಲಿ ತುಂಬಾ ವಿಶ್ವಾಸವಿಟ್ಟಿದ್ದರು. ಅದೇ ಸಮಯದಲ್ಲಿ ದೋಣಿಗಲ್ ಬಸವೇಗೌಡರರೆಂಬ ಕಾಫಿಪ್ಲಾಂಟರು ನಮ್ಮ ಸಂಸ್ಥೆಯ ಮೇಲೆ ತುಂಬಾ ಅಭಿಮಾನವಿಟ್ಟದ್ದರು. ಅವರು ಸಹಾ ಎರಡು ತೊಲ ಭಂಗಾರದ ಪದಕವನ್ನು ದಯಪಾಲಿಸಿ ಅಲ್ಲದೆ ನಮ್ಮ ಸಂಘದವರೆಲ್ಲರನ್ನೂ ತಮ್ಮ ಊರಾದ ದೋಣಿಗಾಲ್‌ಗೆ ಉತ್ಸವದ ಮೂಲಕ ಕರೆದೊಯ್ದು, ಜಿಲ್ಲಾಧಿಕಾರಿಗಳ ಸಮಕ್ಷಮ ಬಹು ವಿಜೃಂಭಣೆಯಿಂದ ಔತಣ ಮಾಡಿಸಿ, ಭಂಗಾರದ ಪದಕವನ್ನು ಬಹುಮಾನ ಮಾಡಿದ್ದರು. ಅದೇ ಸಕಲೇಶಪುರದಲ್ಲಿ ಫಿಲಂ ಕಂಪನಿಗಾಗಿ ನಲವತ್ತು ಸಹಸ್ರ ರೂಪಾಯಿಗಳ ಷೇರುಗಳನ್ನು ವಿಕ್ರಯ ಮಾಡಿದೆನು.

ಧರ್ಮಪ್ರವರ್ತಕ ಚಂದ್ರೇಗೌಡರು (ನಿರ್ವಾಣಿಗೌಡರ ತಂದೆಯವರು) ಸಕಲೇಶಪುರದ ವರ್ತಕರಾದ ದೇವೇಗೌಡರಿಗೂ ಒಂದೊಂದು ಸಾವಿರ ರೂಪಾಯಿ ಷೇರನ್ನು, ಮಿಕ್ಕ ಎಲ್ಲಾ ಪ್ಲಾಂಟರುಗಳಿಗೆ ಇನ್ನೂರ ಐವತ್ತು ಊರುಗಳಲ್ಲಿ ನಲವತ್ತು ಸಾವಿರದವರೆಗೂ ಷೇರುಗಳನ್ನು ಕ್ಯಾನ್ವಾಸ್ ಮಾಡಿಕೊಂಡು ಬಂದು, ಮದ್ರಾಸಿನ ವೇಲ್ ಪಿಕ್ಚರಿನವರಿಂದ ಸ್ಟೂಡಿಯೋ ಸಾಮಗ್ರಿಗಳನ್ನು ತರಿಸಿದುದಾಯಿತು. ಸ್ಟೂಡಿಯೋ ಎಂದರೆ ಈಗಿನ ಕಾಲದಂತ ದೊಡ್ಡ ದೊಡ್ಡ ಬಿಲ್ಡಿಂಗ್ ಇರಲಿಲ್ಲ. ಕಬ್ಬಿಣದ ಪೈಪ್ ಹೂಳಿ. ಅದರ ಮೇಲೆ ಪೈಪ್‌ಗಳನ್ನು ಫಿಟ್‌ಮಾಡಿ, ಮೇಲೆ ಡೇರೆ ಎಳೆಯುತ್ತಲಿದ್ದರು. ಬಿಸಿಲು ಬೇಕಾಗಿದ್ದಾಗ ಮೇಲೆ ಆಚ್ಛಾದಿಸಲ್ಪಟ್ಟ ಬಟ್ಟೆಯನ್ನು ನೂಕಿಕೊಂಡು ಬಿಸಿಲನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಕನ್ನಡಿಗಳನ್ನಿಟ್ಟುಕೊಂಡು (ರಿಫ್ಲೆಕ್ಟ್) ಬಿಸಿಲಿನ ಬೆಳಕನ್ನು ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳುತ್ತಲಿದ್ದರು. ಅದರಂತೆಯೇ ನಾವು ಸಹಾ ಮಲ್ಲೇಶ್ವರದ ಹೆಚ್. ವಿ. ನಂಜುಂಡಯ್ಯನವರ ಬಂಗಲೆಯನ್ನು ತಿಂಗಳೂ ಒಂದಕ್ಕೆ ಇನ್ನೂರ ಐವತ್ತು (೨೫೦) ರೂಪಾಯಿಗಳಂತೆ ಬಾಡಿಗೆಗೆ ತೆಗೆದುಕೊಂಡು ರೂಮುಗಳಲ್ಲಿ ಫಿಲಂ ತೊಳೆಯುವುದಕ್ಕೂ ಹಾಲಿನಲ್ಲಿ ಫಿಲಂ ಆರಿಸುವುದಕ್ಕೂ ಮತ್ತು ಕೆಲವು ರೂಂಗಳಲ್ಲಿ ಡಾರ್ಕ್‌ರೂಂ (ಕತ್ತಲು ಕೋಣೆ)ಗಳನ್ನಾಗಿ ಮಾಡಿಕೊಂಡು ಕೆಲಸಮಾಡುತ್ತಿದ್ದೆವು. "ಹಿಜ್ ಲಾ ಅಫೇರ್", "ಕಳ್ಳರ ಕೂಟ" "ಸಾಂಗ್ ಆಫ್ ಲೈಫ್" ಎನ್ನುವ ಮೂರು ಮೂಕಚಿತ್ರಗಳನ್ನು ತೆಗೆಸಿದೆವು. ಬೆಲ್ಜಿಯಂಮಿನ "ಆಲ್‌ಗುಡ್" ಎಂಬುವನು ಹಿಜ್ ಲಾ ಅಫೇರ್, ಎಂಬ ಚಿತ್ರಕ್ಕೆ ಡೈರೆಕ್ಟರ್ ಆಗಿ "ಲಲಿತಾ ಪವಾರ್" ಎಂಬ ಬೊಂಬಾಯಿಯ ನಟಿ ಇದ್ದರು. "ರೇಲಿಂಗೀ" ಎಂಬ ಕ್ಯಾಮರಾಮೆನ್ ಇದ್ದರು. ಚಿತ್ರದಲ್ಲಿ ಪಾತ್ರವಹಿಸುತ್ತಿರುವುದು ಹೊಸತಾದ್ದರಿಂದ ರಿಫ್ಲೆಕ್ಟರ್‌ಗಳನ್ನಿಟ್ಟಾಗ್ಗೆ ಆ ಸೂರ್ಯನ ಪ್ರಕಾಶಕಿರಣಗಳಿಂದಾಗಿ ನಟರು ಕಣ್ಣು ಬಿಡಲಾಗದೇ, ಕೆಲವು ಸಾರಿ ಮುಕ್ಕಾಲು ಕಣ್ಣು ಮುಚ್ಚಿಯೇ ನಟಿಸುತ್ತಿದ್ದರು. "ಕ್ರೀಂ" ಇದ್ದರೂ ಅದರ

ಉಪಯೋಗ ತಿಳಿಯದ್ದರಿಂದ ಬಣ್ಣವನ್ನು ಅಳಿಸುವುದೂ ಗೊತ್ತಿರಲಿಲ್ಲ. ಅಲ್ಲದೆ ಬೊಂಬಾಯಿ ಸ್ಟುಡಿಯೋ ಲಾಸಾಗಿದ್ದುದರಿಂದ ಅಲ್ಲಿಯ ಸಾಮಾನುಗಳನ್ನು ತಂದಿದ್ದೆವು. ಹೀಗೆ ಚಿತ್ರಗಳನ್ನು ಅವ್ಯವಸ್ಥೆಯಿಂದ ತೆಗೆದದ್ದಾಯಿತು.

ನಮ್ಮ ದೊಡ್ಡ ಕಂಪನಿಯು (ಒರಿಜನಲ್) ಶಿವಾನಂದ ಥಿಯೇಟರ್‌ನಲ್ಲಿಯೂ, ಗುಬ್ಬಿ ಬಾಲಕಲಾವಿವರ್ಧಿನಿ ಕಂಪನಿಯು ಬೆಂಗಳೂರಿನ ತುಳಸೀ ತೋಟದ ಥಿಯೇಟರ್‌ನಲ್ಲಿಯೂ ಇದ್ದುವು. ಏತನ್‌ಮಧ್ಯೆ ಶಿವಾನಂದ ಥಿಯೇಟರ್‌ನಲ್ಲಿ ಬಹು ವಿಜೃಂಭಣೆಯಿಂದ ನಾಟಕ ನಡೆದವು. ಥಿಯೇಟರ್‌ನಲ್ಲಿ ಘೋಷ ಪರದೆ ಕಟ್ಟಿ ರಾಣಿವಾಸದವರಿಗೆ ಅನುಕೂಲ ಮಾಡಿಕೊಡುತ್ತಿದ್ದೆವು. ಬೊಬ್ಬಲ್ಲಿ, ವೆಂಕಟಗಿರಿ, ಸೊಂಡೂರು, ಹಾಗೂ ಮೈಸೂರು ಮಹಾರಾಜರುಗಳೆಲ್ಲರೂ ಬರುತ್ತಲಿದ್ದರು ನಾಟಕ ನೋಡಲು! "ರಾಜಭಕ್ತಿ", "ಕರ್ನಾಟಕ ಸಾಮ್ರಾಜ್ಯ" ಎಂಬ ಸ್ವಾತಂತ್ರ್ಯ ಸಂಬಂಧವಾದ ನಾಟಕಗಳು ನಡೆದವು. ವೆಂಕಟಗಿರಿ ಮಹಾರಾಜರು ಒಂದು ಬಂಗಾರದ ಪದಕವನ್ನು ಕೊಟ್ಟರು. ಶಿವಾನಂದ ಥಿಯೇಟರ್‌ನಲ್ಲಿ ದೊಡ್ಡ ಕಂಪನಿಯು ಗುಲೇಬಕಾವಲಿ ನಾಟಕ, ಆಡುತ್ತಿರುವಾಗ್ಗೆ ನನ್ನ ಆಪ್ತಗೆಳೆಯರಾಗಿದ್ದ ತಟ್ಟಿ ಸುಬ್ಬರಾಯರು (ಮುನಿಸೀಪಾಲಿಟಿ ಗುಮಾಸ್ತರು) ನನ್ನಲ್ಲಿ ಮಾತನಾಡುತ್ತಲಿದ್ದಂತೆ ನನ್ನ ತೊಡೆಯ ಮೇಲೆ ಮರಣಹೊಂದಿದರು. ಅದರ ವಿಚಾರ ಸ್ವಲ್ಪ ವಿವರವಾಗಿಯೇ ತಿಳಿಸಬೇಕಾಗಿದೆ:— ಇವರು ಮುನಿಸಿಪಾಲಿಟಿಯಲ್ಲಿ ಗುಮಾಸ್ತರಾಗಿದ್ದರು. ನನ್ನಲ್ಲಿ ಬಹಳ ಪ್ರೀತಿ, ವಿಶ್ವಾಸಗಳನ್ನಿಟ್ಟಿದ್ದರು. ನಮ್ಮ ಸ್ನೇಹ ಎಷ್ಟಿತ್ತೆಂದರೆ ಮುನಿಸಿಪಲ್ ಆಫೀಸಿನಲ್ಲಿ ಕೆಲಸವಾದ ನಂತರ, ಅವರು ಮನೆಗೆ ಹೋಗುತ್ತಿದ್ದುದು ನಮ್ಮ ನಾಟಕ ನೋಡಿದನಂತರವೇ, ಅಲ್ಲಿಯವರೆಗೆ ನನ್ನ ಜೊತೆಯಲ್ಲಿಯೇ ಮಾತನಾಡಿಕೊಂಡಿರುತ್ತಿದ್ದರು. ನಾನೂ ಸಹ, ಪಾತ್ರವಹಿಸುತ್ತಿದ್ದ ಸಮಯವನ್ನು ಬಿಟ್ಟು ಉಳಿದ ವೇಳೆಯಲ್ಲಿ ಸೈಡ್‌ವಿಂಗ್ಸ್‌ನಲ್ಲಿ ಅವರೊಂದಿಗೆ ಮಾತನಾಡುತ್ತಾ ಕುಳಿತಿರುತ್ತಿದ್ದೆ. ಶಿವಾನಂದ ಥಿಯೇಟರಿನಲ್ಲಿ ಗುಲೇಬಕಾವಲಿ ನಾಟಕವಾಡುತ್ತಿದ್ದಾಗ ಮಾಮೂಲಿನಂತೆ ಕುರ್ಚಿ ಹಾಕಿಸಿಕೊಂಡು ಕುಳಿತು ಮಾತನಾಡುತ್ತಿದ್ದೆವು. ನಾನು "ಮುತ್ತುಸ್ವಾಮಿ' ಪಾತ್ರ ಮುಗಿಸಿಕೊಂಡು, 'ದೊಂಬಿದಾಸರ' ಪಾತ್ರಕ್ಕೆ ಹೋಗುವ ಮುಂಚೆ, ಕಾಫಿ ತರಿಸಿ ಕುಡಿಯುತ್ತಿದ್ದು ನನ್ನ ಪಾತ್ರದ ವೇಳೆ ಬಂದದ್ದರಿಂದ, ಹೋಗಿ, ಪಾತ್ರ ಮುಗಿಸಿ ಒಳಗೆ ಬಂದು ನೋಡಿದಾಗ ಸುಬ್ಬರಾಯರಿಗೆ ಎದೆನೋವು ಬಂದು, ಹಾಗೇ ನನ್ನ ತೊಡೆಯಮೇಲೆ ಒರಗಿಕೊಂಡರು. ಹಾಗೇ ಪ್ರಾಣ ಹೊರಟುಹೋಗಿದ್ದಿತು. ನನಗೆ ಇದರಿಂದ ಬಹಳ ದುಃಖವಾಯಿತು. ದುಃಖ ಪಟ್ಟರೆ ಆಗುವ ಪ್ರಯೋಜನವಾದರೂ ಏನು? ನನಗೆ ನಾನೇ ಸಮಾದಾನ ಮಾಡಿಕೊಂಡೆ.

ಈ ಮಧ್ಯೆ ಎಲ್ಲಾ ಕಡೆಯಲ್ಲೂ ಡಿಪ್ರೆಷನ್‌ನಿಂದಾಗಿ ಕಲೆಕ್ಷನ್ ತೀರ ಕಡಿಮೆಯಾಗುತ್ತ ಬಂತು. ಎರಡೂ ಕಂಪನಿಗಳಿಗೂ ಕಲೆಕ್ಷನ್ ಕಡಿಮೆ. ಆಗ ನಿರ್ವಾಹವಿಲ್ಲದೆ ಸಂಚಾರಕ್ಕೆ ಹೊರಟಿತು. ಒರಿಜನಲ್ ಕಂಪನಿಯು ಹಿಂದೂಪುರ, ಗುಂತಕಲ್ ಬಳ್ಳಾರಿ. ತಾಡಪತ್ರಿ, ಆದವಾನಿ, ರಾಯಚೂರು ಸಂಚಾರಮಾಡಿ, ಪುನಃ ಬೆಂಗಳೂರಿಗೆ ಬಂದಿತು. ಆ
7 ಒಳಗಾಗಿ ಫಿಲಂ ಕಂಪನಿಯ ಅವ್ಯವಸ್ಥೆಯಿಂದಾಗಿ, ಸಂಬಳವನ್ನು ಕೊಡದೆ ಬಹು ಹೀನಸ್ಥಿತಿಗೆ

ಬಂದಿತ್ತು. "ಹರಿಮಾಯ" "ಹಿಜ್ ಲೌ ಅಫೇರ್" ಎಂಬ ಮೂಕ ಚಿತ್ರಗಳನ್ನು ಡಿಸ್ಟ್ರಿಬ್ಯೂಟಿಗೆ ತೆಗೆದುಕೊಂಡಿದ್ದ ಡೈರೆಕ್ಟರು, ಸರಿಯಾಗಿ ಚಿತ್ರಗಳನ್ನು ನಡೆಸದೆ, ಸರಿಯಾಗಿ ಲೆಕ್ಕಗಳನ್ನು ನೋಡದೇ, ತುಂಬಾ ಅನ್ಯಾಯ ಮಾಡಿದರು, ನಾನು ಫಿಲಂ ಕಂಪನಿ ಮಾಡಿ ಸ್ಥಳದಲ್ಲಿರದೆ, ಸಂಚಾರಕ್ಕೆ ಹೋದದ್ದೇ ಈ ಅವ್ಯವಸ್ಥೆಗೆ ಕಾರಣವಾಯಿತಲ್ಲದೆ, ನಷ್ಟವೂ ಸಂಭವಿಸಿತು. ನಮ್ಮ ಸಂಚಾರಕ್ಕೆ ಹೋಗಿಬರಲು ಸುಮಾರು ಏಳು-ಎಂಟು ತಿಂಗಳು ಹಿಡಿಯಿತು. ಫಿಲಂ ಕಂಪನಿಗೆ ನಾನು, ದಿವಂಗತ ದೇವುಡು ನರಸಿಂಹ ಶಾಸ್ತ್ರಿಗಳು, ಶ್ರೀನಿವಾಸಮೂರ್ತಿ-ಈ ಮೂವರು ಮ್ಯಾನೇಜಿಂಗ್ ಡೈರೆಕ್ಟರ್‌ಗಳಾಗಿದ್ದುದು ಸರಿಯಷ್ಟೆ. ನಾನು ಸಂಚಾರಕ್ಕೆ ಹೊರಟನಂತರ ಫಿಲಂ ಕಂಪನಿಯ ನಟ-ನಟಿಯರಿಗೂ, ಕೆಲಸಗಾರರಿಗೂ, ಸಂಬಂಳ ಕೊಡಲಾಗದೆ, ಹೆದರಿ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದ ದೇವುಡುಶಾಸ್ತ್ರಿಗಳು ಬಳ್ಳಾರಿಗೆ ಬಂದು ನಮ್ಮ ಸಂಘಕ್ಕೆ ಮಾನೇಜರ್‌ಗಳಾಗಿ ಸೇರಿದರು. ನಾನು ಸಹ ನನ್ನ ಜವಾಬ್ದಾರಿ ಕಂಪನಿಯ ಮೇಲೆ ಎಷ್ಟಿದೆಯೆಂಬುದು ಗೊತ್ತಾಗದೇ, ಉದಾಸೀನದಿಂದ ಉಪೇಕ್ಷೆ ಮಾಡಿದೆ. ಆದರೂ - "ಮೈ ಛೊಡೇ ತೋ ಭಿ ಮೆರೆ ಕಂಬಲ್ ನಹೀ ಛೋಡ್ತಾ"-ಎನ್ನುವ ಗಾದೆಯಂತೆ ಫಿಲಂ ಕಂಪನಿಯ ಜವಾಬ್ದಾರಿ ನನ್ನನ್ನು ಬಿಟ್ಟು ಕೊಡಲಿಲ್ಲ. ಆಗ ನನಗೆ ತುಂಬಾ ಗಾಭರಿಯಾಗಿ ದಿಕ್ಕೇ ತೋಚದಂತಾಗಿ ಕಂಪನಿಯ ಜವಾಬ್ದಾರಿ ನನಗೆ ಎಷ್ಟರಮಟ್ಟಿಗೆ ಇದೆಯೆಂಬುದನ್ನು ತಿಳಿದು ದಿಗ್ಭ್ರಾಂತನಾದೆ. ಕಂಪನಿಯ ನಟ-ನಟಿಯರಿಗೆ ಕೆಲಸಗಾರರಿಗೆ, ಕೊಡಬೇಕಾಗಿದ್ದ ಸಂಬಳ ಸಾರಿಗೆ ಮನೆಬಾಡಿಗೆ ಎರಡು ವರ್ಷದ್ದು ಎಲ್ಲಾ ನಿಂತುಹೋಗಿ ಜನಗಳಲ್ಲಿ ನಮ್ಮ ಫಿಲಂ ಕಂಪನಿಯ ವಿಚಾರ ಅಪಹಾಸ್ಯಕ್ಕೆ ಕಾರಣವಾಯಿತು. ಅಲ್ಲದೆ ಶ್ರೀನಿವಾಸಮೂರ್ತಿಗಳು ನಡೆಯಿಸುತ್ತಿದ್ದ ಓರಿಯಂಟಲ್ ಬ್ಯಾಂಕು ಕೂಡಾ ನಿಂತುಹೋಯಿತು. ಆಗ ಅವರು ಕೂಡಾ ನಿರಾಧಾರವಾಗಿ ಕೈ ಕಳಚಿಕೊಂಡರು. ಆಗ ನಾನೊಬ್ಬನೇ "ಅನಿಷ್ಟಕ್ಕೆ ಶನೀಶ್ವರ ಗುರಿ", ಎಂಬಂತೆ, ಈ ಆಘಾತಕ್ಕೆ ಸಿಕ್ಕಿಕೊಂಡೆ. ಬೆಳಗಾದರೆ ನಟ-ನಟಿಯರ ಕಾಟ, ಕೆಲಸಗಾರರ ಸಂಬಳದ ಕಾಟ, ಮನೆ ಬಾಡಿಗೆ ಬಾಬ್ತಿನ ಕಾಟ, ಕೊಡಕ್ ಫಿಲಂನವರ ಕಾಟ; ಸಾಲದುದಕ್ಕೆ ಎರಡು ಕಂಪನಿಯ ನೂರಾ ಐವತ್ತು (೧೫೦) ಜನಗಳ ಕಾಟ, ಇಷ್ಟು ಕಾಟಗಳ ದೆಸೆಯಿಂದಾಗಿ ನಾನು ಪೇಟೆಯಲ್ಲಿ ತಿರುಗಾಡಲೂ ಅವಕಾಶವಿಲ್ಲದೆ, ಸೂರ್ಯರಶ್ಮಿಯೇ ನನ್ನ ಮೇಲೆ ಬೀಳದಂತೆ, ಮನೆಯಲ್ಲೇ ಕುಳಿತು ಕೊಂಡು ರಾತ್ರಿಕಾಲದಲ್ಲಿ ಮಾತ್ರ ಥಿಯೇಟರಿಗೆ ಬಂದು ಪಾತ್ರ ಮಾಡುತ್ತಲಿದ್ದೆ. ಫಿಲಂ ಕಂಪನಿಯ ವಿಚಾರ ಪ್ರತಿಯೊಬ್ಬರಿಗೂ ಗೊತ್ತಾಗುತ್ತಾ ಬಂತು. ಪ್ರತಿಯೊಬ್ಬರಿಗೂ ಸಂಬಳ ಸಾರಿಗೆ ಕೊಡಲಾಗದಿದ್ದರೂ, ಊಟಕ್ಕಾದರೂ ಏರ್ಪಾಡು ಮಾಡಬೇಕಾಯಿತು. ಆಗ ಫಿಲಂ ಕಂಪನಿಯವರಿಗೂ ನಾಟಕ ಕಂಪನಿಯಲ್ಲೇ ಊಟಕ್ಕೆ ಏರ್ಪಾಡು ಮಾಡಿ ಕೆಲವು ದಿನಗಳು ಮಾತ್ರ ಕಳೆದೆ! ಅಷ್ಟರೊಳಗೆ ನಮ್ಮ ಸ್ಥಿತಿಗಳು ಮನೆಯ ಮಾಲೀಕರಿಗೆ ಗೊತ್ತಾಗಿ ಐದು ಸಾವಿರ ರೂಪಾಯಿಗಳಿಗೆ (೫೦೦೦) ದಾವಾ ಹಾಕಲಾಯಿತು. ಹಾಗಾದರೂ ನಾನು ಮರ್ಯಾದೆಗೆ ಹೆದರಿ ಕೋರ್ಟಿಗೆ ಹೋಗಲಿಲ್ಲ; ಎಕ್ಸ್‌ಪಾರ್ಟಿ ಡಿಕ್ರಿಯಾಯಿತು. ಹೀಗೆ ಕೆಲವು ದಿನಗಳಾದ ನಂತರ ಎಲ್ಲಾ ಜನಗಳ ಬಾಯಲ್ಲಿಯೂ ವೀರಣ್ಣನವರು ತರ್ಲೆ ವ್ಯಕ್ತಿಯಾದರು. "ಇನ್ನೇನು ಮೇಲೆ ಏಳುವಂತಿಲ್ಲ.

ಹನ್ನೆರಡಾಣೆ ಚೀಟಿಯನ್ನು ಈವತ್ತೊ ನಾಳೆಯೋ ತಗೊಳ್ತಾರೆ. ಇನ್‌ಸಾಲ್‌ವೆನ್ಸಿಗೆ ಅರ್ಜಿಹಾಕುತ್ತಾರೆ (ಪಾಪರ್ ಚೀಟಿ ತೆಗೆದುಕೊಳ್ಳುತ್ತಾರೆ)" ಯೆಂಬ ಕೂಗು ಜನಜನಿತವಾಗಿ ಆ ಮಾತು ನನ್ನ ಕಿವಿಗೂ ತಾಕಿತು. ಆಗ ನನ್ನ ಸ್ಥಿತಿ ಏನಾಗಿರಬಹುದೆಂಬುದನ್ನು ವಾಚಕರೇ ಊಹಿಸಬಹುದು. ಒಂದೊಂದು ಸಾರಿ ವಿಷಪಾನದಿಂದ ಆತ್ಮಹತ್ಯೆಯ ಯೋಚನೆಯು ಸದಾ ನನ್ನ ಕಣ್ಣ ಮುಂದೆ ಹಾದು ಹೋಗುತ್ತಿತ್ತು. ರಾತ್ರಿ ಕಳೆಯ ಬೆಳಗಾಯಿತೆಂದರೆ ಸಾಲಗಾರರ ಹಾಡೇ ಹೇಳತೀರದಂತಾಯಿತು. ಆಗ ಬಾಲಕಲಾಭಿವರ್ಧಿನಿಯನ್ನು ನಿಲ್ಲಿಸಲು ಸಹಾ ಯೋಚಿಸಿದೆ. ನಿಲ್ಲಿಸಿದರೆ ಜನಗಳಿಗೆ ಮತ್ತಷ್ಟು ಸಂದೇಹ, ಕಳವಳಕ್ಕೆ ಕಾರಣವಾಗಬಹುದೆಂದು-ಕೊನೆಗೆ "ಧೈರ್ಯಂ ಸರ್ವತ್ರ ಸಾಧನಂ"– ಎಂದ ಧೈರ್ಯಮಾಡಿ, ನನ್ನ ಹೆಂಗಸರ ಬಳಿಯಿದ್ದ ಡಾಬುಗಳನ್ನೂ, ಕಾಸಿನಸರ, ಬಳೆಗಳನ್ನೂ ಮಾರಿದ್ದೂ ಅಲ್ಲದೆ, ನನಗೆ ಮಹಾಜನಗಳಿಂದ ಬಂದಿದ್ದ ಮೆಡಲ್‌ಗಳನ್ನೂ ಅಡವಿಟ್ಟು (೩೦೦೦) ಸಾವಿರ ರೂಪಾಯಿ ತಂದು, ಮತ್ತು ಮುಲ್ತಾನಿ ಸೇಟುಗಳು ನಾಲ್ಕು ಜನರುಗಳಲ್ಲಿ ಎರಡು ಸಾವಿರ ರೂಪಾಯಿಯಂತೆ, ಎಂಟುಸಾವಿರ (೮೦೦೦) ರೂಪಾಯಿಗಳನ್ನು ತಂದು, ಫಿಲಂ ಕಂಪನಿಯ ನಟನಟಿಯರಿಗೂ, ನೌಕರರಿಗೂ, ಕೊಡಬೇಕಾಗಿದ್ದ ಸಂಬಳವನ್ನು ಕೊಟ್ಟು, ಅರ್ಧ ಹಿಂಸೆ ಕಡಿಮೆ ಮಾಡಿಕೊಂಡೆ, ಅಷ್ಟರಲ್ಲಿ ಬೆಂಗಳೂರು ಪ್ಯಾಲೇಸಿನಲ್ಲಿ ಹದಿನೆಂಟು ನಾಟಕಗಳನ್ನಾಡಿಸಿದ್ದರ ಬಾಬ್ತು ಐದು ಸಾವಿರ (೫೦೦೦) ರೂಪಾಯಿಗಳು ಬಂದುವು. ನಮ್ಮ ಯುವರಾಜರಿಗೆ ಫಿಲಂ ಕಂಪನಿಯ ವಿಷಯ ತಿಳಿದಿದ್ದೇ ಅಲ್ಲದೆ ನನ್ನ ಮೇಲೆ ವಿಶ್ವಾಸವಿತ್ತು. ಹಿಂದೆ ಫಿಲಂ ಕಂಪನಿಯಲ್ಲಿ ನಮ್ಮ ಯುವರಾಜರಾದ ನರಸಿಂಹ ರಾಜ ಒಡೆಯರವರ, ಮತ್ತು ಈಗಿನ ರಾಜ್ಯಪಾಲರಾದ ಜಯಚಾಮರಾಜರವರ "ಹಾರ್ಸ್ ರೈಡಿಂಗ್" (ಕುದುರೇ ಓಟ)ನ ಫಿಲಂ ತೆಗೆದಿದ್ದೆವು. ಆಗ ಯುವರಾಜರಿಗೆ ಫಿಲಂ ಕಂಪನಿಯ ವಿಚಾರವನ್ನೆಲ್ಲಾ ಸಮಗ್ರವಾಗಿ ತಿಳಿಸಲಾಯಿತು. ಅಲ್ಲದೇ ಯುರೋಪಿಯನ್ ಲೇಡಿಗಳ ಜೊತೆಗೆ ನೃತ್ಯ ಮಾಡುತ್ತಿದ್ದು ಲಂಚ್ ಸಮಯದಲ್ಲಿ ನರಸಿಂಹರಾಜ ಒಡೆಯರವರು ನನ್ನಿಂದ ಹಾಸ್ಯವನ್ನು ಮಾಡಿಸುತ್ತಲಿದ್ದರು. ಒಂದು ದಿನ ನನ್ನ ಪಾತ್ರಗಳನ್ನು ನೋಡಿ, ಸಂತೋಷದಿಂದ ನನ್ನನ್ನು ಹತ್ತಿರಕ್ಕೆ ಕರೆದು-"ವೀರಣ್ಣನವರೇ ನೀವು ಅತ್ಯುತ್ತಮವಾಗಿ ಅಭಿನಯಿಸಿಸುವ ನಟರು. ನಿಮ್ಮಂತಹ ಉತ್ತಮ ನಟರೇನಾದರೂ ಅಮೇರಿಕದಲ್ಲಿದ್ದಿದ್ದರೆ ಬೆಳ್ಳಿಯ ಪಲ್ಲಕ್ಕಿ ಮೇಲೆ ಕೂಡಿಸಿ ಮೆರವಣಿಗೆ ಮಾಡುತ್ತಲಿದ್ದರು"– ಎಂದವರು ಹೇಳಿದ ಮಾತು ಇನ್ನೂ ನನ್ನ ನೆನಪಿನಲ್ಲಿದೆ! ಅವರು ಈಗ ನಮ್ಮ ಫಿಲಂ ಸಮಾಚಾರ ಕೇಳಿ ಪಶ್ಚಾತ್ತಾಪಪಟ್ಟು,- "ವೀರಣ್ಣನವರೇ ನೀವು ಅಧೈರ್ಯರಾಗಬೇಡಿ, ನಾನು ಈ ಬಾರಿ ಅಮೇರಿಕಕ್ಕೆ ಹೋಗಿ ಬಂದು, ಒಂದು ಲಕ್ಷರೂಪಾಯಿ ಸರಕಾರದಿಂದ ಕೊಡಿಸುವುದೂ ಅಲ್ಲದೆ, ಯಶವಂತಪುರದ ರೈಲ್ವೆ ಸ್ಟೇಷನ್‌ನ ಎದುರುಭಾಗದಲ್ಲಿ ಒಂದು ನೂರು ಎಕರೆ ಭೂಮಿಯನ್ನು ಕೊಡಿಸುತ್ತೇನೆಂದು"– ಹೇಳಿದರಲ್ಲದೆ ನನ್ನನ್ನು ಅಮೇರಿಕಾಕ್ಕೆ ಬರುವಂತೆ ಆಹ್ವಾನಿಸಿದರು! ಆ ಪ್ರಯೋಜನವನ್ನು ಹೊಂದಲು ನಾನು ಹೆಚ್ಚು ಪ್ರಯತ್ನ ಮಾಡಲಿಲ್ಲ, ಲಭ್ಯವೂ ಇರಲಿಲ್ಲವೆನ್ನಿ!

ಅಂತೂ ನಗ ನಾಣ್ಯ ಮುಂತಾದವುಗಳನ್ನು ಮಾರಿದ, ಹಾಗೂ ಮುಲ್ತಾನಿ ಸೇಟುಗಳಲ್ಲಿ ಸಾಲವಾಗಿ ತಂದ ಹಣ, ಅರಮನೆಯಿಂದ ಬಂದ ಹಣ-ಒಟ್ಟು ಸುಮಾರು ಇಪ್ಪತ್ತೈದು ಸಾವಿರ ರೂಪಾಯಿಗಳಲ್ಲಿ (೨೫೦೦) ಫಿಲಂ ಕಂಪನಿಯ ನಟ ನಟಿಯರಿಗೆ ಕೊಟ್ಟಿದ್ದಾಯಿತು. ಇನ್ನು ಮನೆ ಬಾಡಿಗೆ ಬಾಬ್ತಿನಲ್ಲಿ ಚಿಲ್ಲರೆಯಾಗಿ ಮಾಲಿಕರ ಹತ್ತಿರ ಹೋಗಿ, ಅವರನ್ನು ಒಡಂಬಡಿಸಿ, ೩೦೦೦ (ಮೂರುಸಾವಿರ) ರೂಪಾಯಿಗಳನ್ನಿತ್ತು- "ನಿಮಗೆ ಕೊಡಬೇಕಾದ ಐದುಸಾವಿರ ಚಿಲ್ಲರೆ ರೂಪಾಯಿಗಳಲ್ಲಿ ಇಷ್ಟನ್ನು ತೆಗೆದುಕೊಳ್ಳಿ. ಉಳಿದಿದ್ದನ್ನು ಕೆಲವೇ ದಿನಗಳಲ್ಲಿ ಕೊಟ್ಟುಬಿಡುತ್ತೇನೆ–" ಎಂದು ಹೇಳಿ ಅದನ್ನೂ ಕಂತಿನ ಮೂಲಕ ಮುಟ್ಟಿಸಿ ಬಿಟ್ಟೆ. ಅಲ್ಲಿಗೆ ನಾನು ನಿರರ್ಗಳವಾಗಿ ಉಸಿರು ಬಿಡುವಂತಾಯಿತಾದರೂ,– "ಕೊಡಕ್ ಫಿಲಂ" ಕಂಪನಿಗೆ ಕೊಡಬೇಕಾದ ಹಣ, ಚಿಲ್ಲರೆ ಸಾಲಗಳನ್ನೆಲ್ಲಾ ಕೊಟ್ಟು ಫಿಲಂ ಕಂಪನಿಯನ್ನು ನಾನೇ ವಹಿಸಿಕೊಂಡುದಾಯ್ತು. ಇಷ್ಟಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಸಾಲವಾಯಿತು. ೧೯೩೧ರ ಕಾಲದಲ್ಲಿ ೧ ಲಕ್ಷ ರೂಪಾಯಿ ಬೆಲೆ ಎಷ್ಟಿತ್ತುಯೆಂಬುದನ್ನೂ ಈಗಿನ ಬೆಲೆಗೆ ಎಷ್ಟಕ್ಕೆ ಸಮತೂಗ ಬಹುದೆಂಬುದನ್ನೂ ನೀವೇ ಆಲೋಚಿಸಬೇಕಾದ್ದು.

ರಸಿಕ ಶಿಖಾಮಣಿ-ಹಾಸ್ಯ ಕಲಾಪ್ರವೀಣ

ಆಗ ಕಂಪನಿಗಳನ್ನು ತೀರ್ಥಹಳ್ಳಿ, ಉಡುಪಿ ಪರ್ಯಾಯ, ಹಾಗೂ ಮಂಗಳೂರು ಈ ಮೂರು ಸ್ಥಳಗಳಲ್ಲಿ ಏಕಕಾಲದಲ್ಲೇ ಥಿಯೇಟರ್ ಕಟ್ಟಿಸಿ, ಒರಿಜನಲ್ ಮತ್ತು ಬ್ರಾಂಚ್ ಎರಡೂ ಕಂಪನಿಗಳನ್ನು ಸಹ ಜೊತೆಯಲ್ಲೇ ಇಟ್ಟುಕೊಂಡು, ಮೊದಲು ತೀರ್ಥಹಳ್ಳಿ ಜಾತ್ರೆಗೆ ಹೋಗಿ ಹತ್ತು ನಾಟಕಗಳನ್ನಾಡಿದೆವು. ಅಲ್ಲಿ ಉತ್ಪತ್ತಿ ಚೆನ್ನಾಗಿಯೇ ಆಯಿತು. ಅಲ್ಲಿಂದ ಉಡುಪಿಗೆ ಕ್ಯಾಂಪು ಹಾಕಲಾಯಿತು. ಅಲ್ಲಿ ನಾಟಕ ಪ್ರಾರಂಭವಾದ ಕೆಲವು ದಿನಗಳಲ್ಲೇ ನಾಟಕಗಳನ್ನಾಡುತ್ತಿರುವಾಗ್ಗೆ, ಉಡುಪಿ ಅಷ್ಟಮಠಗಳಲ್ಲಿ ಒಂದಾದ ಹಾಗೂ ಆ ವರುಷದ ಪರ್ಯಾಯ ನಡೆಸುತ್ತಲಿದ್ದ ಕಾಣೂರು ಮಠದ ಸ್ವಾಮಿಗಳು ನನಗೆ "ರಸಿಕ ಶಿಖಾಮಣಿ" ಯೆಂದೂ, ಅದಮಾರು ಮಠದ ಸ್ವಾಮಿಗಳು "ಹಾಸ್ಯ ಕಲಾ ಪ್ರವೀಣ" ಎಂಬ ಬಿರುದನ್ನೊಳಗೊಂಡ ಬಂಗಾರದ ಪದಕವನ್ನು ನನಗೂ, ಹಾಗೂ ಜಿ. ನಾಗೇಶರಾಯರಿಗೂ ಆಶೀರ್ವದಿಸಿ ದಯಪಾಲಿಸಿದರು.

ಇದಾದನಂತರ ಕೆಲವು ದಿನಗಳಲ್ಲೇ ನಟ-ನಟಿಯರು ತಮಗೆ ಸಂಬಳ ಸಾಲದೆಂದು ಹಟಹಿಡಿದು ಸ್ಟ್ರೈಕ್ ಮಾಡಿದರು! ಅವರನ್ನು ಸಮಾಧಾನಪಡಿಸಬೇಕಾದರೆ ಸಾಕು ಬೇಕಾಗಿ ಹೋಯಿತು. ಆವಾಗಲೇ ಕಾರಣಾಂತರದಿಂದ ಕಂಪನಿಯನ್ನು ಬಿಟ್ಟು ಕಳುಹಿಸಿದ್ದ ಬಿ. ಜಯಮ್ಮ ಎಂಬ ನಟಿಯನ್ನು ಪುನಃ ಕರೆಯಿಸಿಕೊಂಡು "ಸದಾರಮೆ" ಪಾತ್ರವನ್ನು ಮಾಡಲು ನೇಮಿಸಿದೆ ಬಿ. ಜಯಮ್ಮ ಕಂಪನಿಯನ್ನು ತ್ಯಜಿಸಿ ಹೋಗಿದ್ದ ಕಾರಣವೇನೆಂದರೆ– ಕಂಪೆನಿಯಲ್ಲಿದ್ದ ಬಿ. ಜಯಮ್ಮ ಎಂಬ ಹುಡುಗಿಯ ಬಗ್ಗೆ, ನನ್ನ ಬಗ್ಗೆ, ಜನಗಳಲ್ಲಿ ಊಹಾ ಪೋಹಗಳೆದ್ದುವು. ಆಗ ನಾನು ಜನಗಳ ಮಾತಿಗೆ ಸಿಕ್ಕಬಾರದೆಂದು ಭಾವಿಸಿ ಜಯಮ್ಮ ಅವಳ ತಂಗಿ ರಾಜಮ್ಮ-ಇಬ್ಬರನ್ನೂ ಕಂಪೆನಿಯಿಂದ ಕಳುಹಿಸಿಕೊಟ್ಟೆ. ಆದರೆ ಉಡುಪಿ ಕ್ಯಾಂಪಿನಲ್ಲಿ ಕೆಲವು ನಟೀ ನಟರುಗಳು ಸಂಬಳ ಕಡಿಮೆಯೆಂದು ಸ್ಟ್ರೈಕ್ ಮಾಡಿದ್ದರಿಂದ ಜಯಮ್ಮನನ್ನು ಪುನಃ ಕಂಪೆನಿಗೆ ಕರೆಸಿಕೊಂಡೆನು. ಅಲ್ಲಿಯೇ ಆಕೆ ಮೊಟ್ಟಮೊದಲಿಗೆ 'ಸದಾರಮೆ' ಪಾತ್ರವನ್ನು ವಹಿಸಿದುದು. ಏತನ್ಮಧ್ಯೆ "ಹಿಜ್ ಲೌ ಅಫೇರ್" ಹರಿಮಾಯಾ ಎಂಬ ಮೂಕಚಿತ್ರ ತೆಗೆಯುವ ಸಮಯದಲ್ಲಿ ನಗಗೂ ಮತ್ತು ಜಯಮ್ಮನವರಿಗೂ ದೃಷ್ಟಿಕೋನಗಳು ಮಿಲನವಾಗಿ ಪರಸ್ಪರ ಪ್ರೀತ್ಯಾದರಗಳು ಅಂಕುರಿಸಿ, ದಿನೇ ದಿನೇ ಬೆಳೆಯಲುಪಕ್ರಮಿಸಿ, ಬಹುವಾಗಿ ಆಲೋಚನೆಗೆ ಗುರಿಯಾಗಿ, ಮನಸ್ಸು ಹೊಯ್ದಾಡುತ್ತಿತ್ತು. ನನಗೆ ನಲವತ್ತು ವಯಸ್ಸು. ಅಲ್ಲದೆ ಇಬ್ಬರು ಪತ್ನಿಯರು, ಒಬ್ಬೊಬ್ಬರಿಗೂ ಎರಡೆರಡು ಮಕ್ಕಳು, ಇದ್ದುಕೊಂಡು ಮತ್ತು ಎರಡು ಸಂಸ್ಥೆಗಳಿಗೆ ಒಡೆಯನಾಗಿ, ಈಗ ಮತ್ತೊಂದು ಹೆಣ್ಣನ್ನು ಕಟ್ಟಿಕೊಳ್ಳುವುದು ಸರಿಯೇ? ಎಂದು ಬಹುವಾಗಿ ಯೋಚಿಸಿದೆನು. ಆದರೂ ಬ್ರಹ್ಮಸಂಕಲ್ಪ ಬಹು ಘಟ್ಟಿಯಾಗಿದ್ದುದರಿಂದ ಕೊನೆಗೆ ಬಿ. ಜಯಮ್ಮನೆಂಬ ನಟಿಯನ್ನು ಉಪಪತ್ನಿಯನ್ನಾಗಿ ಗಾಂಧರ್ವ ವಿಧಿಯಿಂದ ೩೧ ನೇ ಇಸ್ವಿಯಲ್ಲಿ ವಿವಾಹಮಾಡಿಕೊಂಡುದ್ದಾಯಿತು. ದೈವೇಚ್ಛೆ!

ತಂದೆ ತಾಯಿಯಿಲ್ಲದೆ, ಚಿಕ್ಕಂದಿನಿಂದಲೂ ನನ್ನ ಆಶ್ರಯದಲ್ಲಿಯೇ ಇದ್ದು, ನಾನೇ ಕರೆತಂದು ಸಾಕಿ ದೊಡ್ಡವನ್ನನಾಗಿಸಿದ್ದೂ, ಕೊನೆಗೆ ಲಗ್ನವನ್ನೂ ಮಾಡಿ, ದಂಪತಿಗಳನ್ನು ನನ್ನ ಜೊತೆಯಲ್ಲಿಯೇ ಇಟ್ಟುಕೊಂಡು, ಕೊನೆಗೆ ಬ್ರಾಂಚ್ ಕಂಪನಿಗೆ ಯಜಮಾನನನ್ನಾಗಿ ಮಾಡಿ ಇಟ್ಟುಕೊಂಡಿದ್ದ ನೀಲಕಂಠಪ್ಪನೆಂಬ ನಮ್ಮ ಸಂಬಂಧಿಕನು ಫಿಲಂ ಕಂಪನಿಯ ನಟ-ನಟಿಯರ ಹಾಗೂ ಕೆಲಸಗಾರರ ಗಲಾಟೆಯ ಸಮಯದಲ್ಲಿ, ನನಗೆ ಒಂದು ಲಕ್ಷ ರೂಪಾಯಿಯ ಪೆಟ್ಟು ಬಿದ್ದಾಗ "ಓಹೋ ನಮ್ಮ ಮಾವನ ಕಥೆ ಮುಗಿಯಿತು. ಇನ್ನು ನಾನು ಹುಷಾರಾಗಬೇಕು" ಎಂದು ಉದ್ದೇಶಪೂರ್ವಕವಾಗಿ ಕಾರಣವಿಲ್ಲದೆ ಮನಸ್ತಾಪಮಾಡಿಕೊಂಡು ಬೇರೆ ಹೊರಡಲು ಸಿದ್ಧನಾದ. ಆಗ ಆತನಿಗೆ ನಾಲ್ಕುಸಾವಿರ ರೂಪಾಯಿಗೆ ಆಧಾರವಾಗಿ ಬಳೇಪೇಟೆಯಲ್ಲಿದ್ದ ಮನೆಯ ಆಧಾರ ಪತ್ರವನ್ನೂ, ಐದುನೂರು ರೂಪಾಯಿನ ಪ್ರೊನೋಟನ್ನೂ, ಒಂದೂವರೆ ಸಾವಿರ ರೂಪಾಯಿ ನಗ ನಾಣ್ಯವನ್ನು ಕೊಟ್ಟು ಕಳುಹಿಸಿ, ಬಿಡುಗಡೆ ಮಾಡಿಕೊಂಡೆನು. ಜಿ. ನಾಗೇಶರಾಯರು ೧೯೨೪ರಲ್ಲಿ ಸಂಸ್ಥೆಗೆ ಸೇರಿದ ನಂತರ ಎ.ವಿ. ವರದಾಚಾರ್ಯರು ಆಡುತ್ತಲಿದ್ದ ನಾಟಕಗಳನ್ನು ಅಂದರೆ ಧ್ರುವ ಚರಿತ್ರೆ, ನಿರುಪಮೆ, ಶಕುಂತಲ, ರತ್ನಾವಳಿ, ಮನ್ಮಥ ವಿಜಯ, ವಿರಾಟ ಪರ್ವ-ಮುಂತಾದ ನಾಟಕಗಳನ್ನು ಅಭ್ಯಾಸ ಮಾಡಿ ಆಡುವುದಕ್ಕೆ ಪ್ರಾರಂಭಿಸಿದೆವು. ಧ್ರುವ ಚರಿತ್ರೆಯಲ್ಲಿ ಜಿ. ಸುಂದ್ರಮ್ಮನ ಮಕ್ಕಳು, ಸ್ವರ್ಣಮ್ಮ ಮತ್ತು ಮಾಲತಮ್ಮ ಎಂಬ ಬಾಲಕಿಯರು ಧ್ರುವ ಮತ್ತು ಉತ್ತಮನ ಪಾತ್ರ ಮಾಡುವುದೂ ಅಲ್ಲದೆ, ತಮ್ಮ ನಾಲ್ಕು ಐದನೇ ವರ್ಷದಲ್ಲಿಯೇ ಕೃಷ್ಣಲೀಲೆಯಲ್ಲಿ ಕೃಷ್ಣನ ಪಾತ್ರವನ್ನು ಮಾಡಲಾರಂಭಿಸಿದರು. ಸಂಸ್ಥೆಯು ಉಡುಪಿ, ಮಂಗಳೂರು ಕ್ಯಾಂಪು ಮುಗಿಸಿ, ಚಿಕ್ಕಮಗಳೂರು, ಅರಸೀಕೆರೆಗೆ ಬರಲಾಯಿತು. ಅರಸೀಕೆರೆಯಲ್ಲಿ, ಈಶ್ವರ ದೇವಾಲಯದ ಕಾಂಪೌಂಡ್ ಹಾಗೂ ದೇವಾಲಯದ ಜೀರ್ಣೋದ್ಧಾರಕ್ಕಾಗಿ, ಒಂದು ನಾಟಕವಾಡಿ (೨೦೦೦) ಎರಡು ಸಾವಿರ ರೂಪಾಯಿಗಳನ್ನು ಕೊಡಲಾಯಿತು. ನಂತರ ಕ್ಯಾಂಪು ಶಿವಮೊಗ್ಗಕ್ಕೆ ಬಂದು ನಾಟಕಗಳನ್ನಾಡಿ, ಅದೇ ಊರಿನ ಮೂರು -ನಾಲ್ಕು ಸಂಸ್ಥೆಗಳಿಗೂ, ಉರ್ದು ಸ್ಕೂಲಿಗೂ ಒಂದೊಂದು ಬೆನ್‌ಫಿಟ್ ನಾಟಕವಾಡಿದೆವು. ಅದರಿಂದ ಧರ್ಮಸಂಸ್ಥೆಗೆ ಐದು-ಆರು ಸಾವಿರ ರೂಪಾಯಿಗಳ ಉತ್ಪತ್ತಿಯಾಯಿತು.

ಅದೇ ಊರಿನಲ್ಲಿ ಬಸವೇಶ್ವರ ಜಯಂತಿಯ ದಿನ ಬಸವೇಶ್ವರ ಪಠಕ್ಕೆ ಹಾಕಿದ್ದ ನನ್ನ ಮೆಡಲ್ ಸರದಲ್ಲಿ ಹನ್ನೆರಡು ತೊಲದ ಮೆಡಲನ್ನು ಯಾರೋ ಅಪಹರಿಸಿದ್ದರು. ಅದೂ ಕಂಪನಿಯವರಲ್ಲೇ ಯಾರೋ ಒಬ್ಬರು. ಆ ಕ್ಯಾಂಪಿನಿಂದ ಹೊಳೆನರಸಿಪುರಕ್ಕೆ ಬಂದು ನಾಟಕಗಳನ್ನಾಡುತ್ತಿದ್ದು, ಆ ಊರಿನಲ್ಲಿ ಉತ್ತರಾದಿ ಮಠಕ್ಕೆ ಅದರ ಕೈಂಕರ್ಯಕ್ಕಾಗಿ ಒಂದು ಬೆನಫಿಟ್ ನಾಟಕವಾಡಿ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟೆವು. ಅಲ್ಲಿಂದ ಮೈಸೂರಿಗೆ ಬಂದು "ರಾಜಭಕ್ತಿ" "ಕರ್ನಾಟಕ ಸಾಮ್ರಾಜ್ಯ" ನಾಟಕಗಳನ್ನಾಡುತ್ತಿದ್ದೆವು. ಅದೇ ಸಮಯದಲ್ಲೇ ಮೈಸೂರು ಟೌನ್ ಹಾಲಿನ ಪಕ್ಕದಲ್ಲೇ ಥಿಯೇಟರ್ ಹಾಕಿಕೊಂಡು ದೊಡ್ಡ ಕಂಪನಿಯೂ ನಾಟಕವನ್ನಾಡುತ್ತಲಿತ್ತು. ಟೌನ್ ಹಾಲಿನಲ್ಲಿ ಬ್ರ್ಯಾಂಚ್ ಕಂಪನಿಯೂ ಎರಡೂ ಸಂಸ್ಥೆಗಳು ಪ್ರತಿನಿತ್ಯವೂ ನಾಟಕ ನಡೆಸುತ್ತಲಿದ್ದವು. ಅನಂತರ ಶ್ರೀಮನ್

ಮಹಾರಾಜರ ಸಮ್ಮುಖದಲ್ಲಿ ನಾಟಕಗಳನ್ನಾಡಿ ಅಲ್ಲಿ ಪೂರ್ಣಯ್ಯನವರ ಛತ್ರದ ರಿಪೇರಿಗಾಗಿ ಒಂದು ನಾಟಕವಾಡಿ ಬಂದ (೮೫೦) ಎಂಟುನೂರ ಐವತ್ತು ರೂಪಾಯಿಗಳನ್ನು ನಿವೇದಿಸಿ ಅಲ್ಲಿಂದ ಬೆಂಗಳೂರಿಗೆ ಬಂದು ಕೆಲವು ನಾಟಕಗಳನ್ನಾಡಿ, ಅಲ್ಲಿ ಡಿ. ನಾರಾಯಣ ನಾಯ್ಡು ಎಂಬ ರಾಣಿ ಪಾತ್ರ ಮಾಡುವವನಿಗೆ ಒಂದು ನಾಟಕದ ಉತ್ಪತ್ತಿ, ಸಾವಿರದ ಇನ್ನೂರು ಐವತ್ತು (೧೨೫೦) ರೂಪಾಯಿಗಳನ್ನೂ; ತಬಲ ಸುಬ್ರಮಣ್ಯ ಶಾಸ್ತ್ರಿಗಳ ಲಗ್ನಕ್ಕೆ ಒಂದು ನಾಟಕದ ಉತ್ಪತ್ತಿ ಸಾವಿರದಯಿನ್ನೂರು (೧೨೦೦) ರೂಪಾಯಿಗಳನ್ನೂ ಕೊಡಲಾಯಿತು. ಈ ಮೊದಲೇ ಶ್ರೀ ಗಂಗಾಧರರಾಯರ ಗಲಾಟೆ ಮಧ್ಯೆ ಮಧ್ಯೆ ಬರುತ್ತಲೇಯಿದ್ದು, ಚನ್ನಪಟ್ಟಣದ ಗುರುಕಾರರ ಶಾಸ್ತ್ರಿಗಳು ಕಂಪನಿ ಮಾಡಿದುದರ ಮೇಲೆ ಭಾಗಕ್ಕೆ ಹೋಗಿ ಗಂಗಾಧರರಾಯರು ಸೇರಿಕೊಂಡರು ೧೯೩೨ರ ಜನವರಿ ಮಾಹೆಯಲ್ಲಿ ಆದಿಗುಡಿ ವೆಂಕಟರಮಣಯ್ಯರ್, ತಿರುಚನಾಪಲ್ಲಿಗೆ ನಮ್ಮ ನಾಟಕಗಳನ್ನು ಕಂಟ್ರಾಕ್ಟ್ ಮಾಡಿಕೊಂಡು ಐದು ಸಾವಿರ ರೂಪಾಯಿಗಳನ್ನು ಮುಂಗಡವಾಗಿ ಬೆಂಗಳೂರಿಗೆ ಬಂದು ಕೊಟ್ಟು ಹೋದರು. ಅದೇ ಸಮಯದಲ್ಲಿ ದಿವಂಗತ ಸುಬ್ಬಯ್ಯ ನಾಯ್ಡುರವರು ಸಂಬಳವನ್ನು ಇನ್ನೂ ನೂರು ರೂಪಾಯಿ ಹೆಚ್ಚಿಸಬೇಕೆಂದು ಕೇಳಿದರು. ನಾನು ಆಗ ಅವರಿಗೆ ನೂರಾ ಎಪ್ಪತ್ತೈದು (೧೭೫) ರೂಪಾಯಿಗಳನ್ನು ಕೊಡುತ್ತಲಿದ್ದೆ. ನಾನು ಐವತ್ತು ರೂಪಾಯಿಗಳನ್ನು ಹೆಚ್ಚಾಗಿ ಕೊಡುತ್ತೇನೆಂದು ಹೇಳಲು ಕೇಳದೆ, ಅದಕ್ಕೆ, ಒಪ್ಪದೆ ಸಂಸ್ಥೆಗೆ ಕೊಡಬೇಕಾಗಿದ್ದ ಇನ್ನೂರ ಇಪ್ಪತ್ತೈದು ರೂಪಾಯಿಗಳನ್ನು ಒಂದು ತಟ್ಟೆಯಲ್ಲಿ ತಾಂಬೂಲಸಮೇತ ಇಟ್ಟು ಹೂವಿನ ಹಾರವನ್ನು ಕೊರಳಿಗೆ ಹಾಕಿ "ನಾನು ಮುಂದುವರಿಯಲು ಚೆನ್ನಾಗಿ ಆಶಿರ್ವಾದ ಮಾಡಿ ಸ್ವಾಮಿ" ಎಂದು ಹೇಳಿ ದೀರ್ಘ ದಂಡ ನಮಸ್ಕಾರ ಹಾಕಿ ನಿಂತರು. ನಮ್ಮಿಬ್ಬರ ಕಣ್ಣುಗಳಲ್ಲಿಯೂ ಧಾರಾಕಾರವಾಗಿ ನೀರು ಸುರಿಯುತ್ತಲಿತ್ತು. ಆಗ ನಾನು ಮನಸಾರೆ "ದೇವರು ನಿಮಗೆ ಶ್ರೇಯಸ್ಸು ಉಂಟು ಮಾಡಲಿ" ಯೆಂದು ಹೇಳಿ ಕೊಟ್ಟೆನು.

ತಮಿಳು ನಾಡಿನಲ್ಲಿ

ಕಂಪನಿಯು ತಿರುಚಿನಾಪಲ್ಲಿಗೆ ಹೋಯಿತು. ತಿರುಚಿನಾಪಲ್ಲಿಯಲ್ಲಿ ಸಿ. ಆರ್. ಪಂತುಲು ಎಂಬುವರನ್ನು ತಿಂಗಳೊಂದಕ್ಕೆ ಇನ್ನೂರು ರೂ. ಸಂಬಳಕ್ಕೆ ಗೊತ್ತು ಮಾಡಿಕೊಂಡೆ. ಆತನಿಗೆ ಸಂಗಿತ ಜ್ಞಾನ ಚೆನ್ನಾಗಿಯಿತ್ತು. ಕನ್ನಡ ಅಭ್ಯಾಸಮಾಡಿಸಿ, ಎರಡು-ಮೂರು ತಿಂಗಳಿಗೆ ಒಂದೊಂದು ಪಾತ್ರಗಳನ್ನು ಕೊಡುತ್ತಾ ಬಂದೆವು. ತಿರುಚಿನಾಪಲ್ಲಿಯಲ್ಲಿ ನಾಟಕವಾಡುತ್ತಿರುವಾಗ್ಗೆ ನಮ್ಮ ಸಂಸ್ಥೆಯವರೆಲ್ಲರನ್ನು ಸಮೀಪದಲ್ಲಿದ್ದ ಶ್ರೀರಂಘ, ತಾಯಿ ಮಾರುಮಲೈ, ಜಂಬುಕೇಶ್ವರ, ಪಳನಿ, ವಗೈರೆ ಎಲ್ಲಾ ಪುಣ್ಯ ಸ್ಥಳಗಳನ್ನು ದರ್ಶನ ಮಾಡಿಸಿಕೊಂಡು ಬಂದುದಾಯಿತು. ತಿರುಚಿನಾಪಲ್ಲಿಯಲ್ಲಿ ಮುನಿಸಿಪಲ್‌ನವರು ಹೊಸತಾಗಿ ಕಟ್ಟಿದ್ದ ಥಿಯೇಟರಿನಲ್ಲಿ ನಾವು ರಾಮಾಯಣ ನಾಟಕವಾಡುತ್ತಿರುವಾಗ್ಗೆ, ಗ್ಯಾಲರಿಯ ಮೇಲೆ ಜನರು ಹೆಚ್ಚಾಗಿದ್ದುದರಿಂದಾಗಿ, ಗ್ಯಾಲರಿ ಮುರಿದು, ನನ್ನ ಗ್ರಹಚಾರವಶಾತ್ ಒಬ್ಬರು ಸತ್ತುಹೋದ್ದರಿಂದ ನಮ್ಮ ಸಂಸ್ಥೆಗೆ ಲೈಸನ್ಸ್ ಕಾನ್ಸಲ್ ಮಾಡಿದರು. ಇದರ ಜತೆಗೆ ಮತ್ತೊಂದು ದುಃಖಕರವಾದ ಸಂಗತಿಯೂ ಇಲ್ಲಿ ನಡೆಯಿತು. 'ಶಿವಲೀಲಾ' ಎಂಬ ನಾಟಕವನ್ನು ಬರೆದುಕೊಡಲು ಮುಂಗಡ ಹಣ ತೆಗೆದುಕೊಂಡು ಶ್ರೀ ಬಿ. ವೆಂಕಟಾಚಾರ್ಯ ಎಂಬ ಕವಿಗಳು (ಭೋಜ ಪ್ರಬಂಧ ನಾಟಕ ಬರೆದವರು) ಪತ್ನಿ ಸಮೇತರಾಗಿ ತಿರುಚಿನಾಪಲ್ಲಿಗೆ ಬಂದರು. ಮನೆ ವಗೈರೆ ವ್ಯವಸ್ಥೆಗಳನ್ನೆಲ್ಲಾ ಮಾಡಿಕೊಟ್ಟೆವು. ಅವರಿಗೆ ನಾಟಕವನ್ನು ಬರೆಯಲು ಪ್ರಾರಂಭಿಸುವುದರೊಳಗಾಗಿ ಖಾಯಿಲೆ ಬಿದ್ದು ಕೇವಲ ಎರಡು ದಿನಗಳೊಳಗಾಗಿ ದೈವಾಧೀನರಾದರು. ಅವರ ಮತಕ್ಕೆ ಅನುಸಾರವಾಗಿ ಕರ್ಮಾದಿಗಳನ್ನು ಹತ್ತಿರದ ಪುಣ್ಯಕ್ಷೇತ್ರವಾದ ಶ್ರೀರಂಗದಲ್ಲಿ ಏರ್ಪಡಿಸಿದ್ದ ಪೂರೈಸುವುದರೊಳಗಾಗಿ, ಅವರ ಧರ್ಮಪತ್ನಿಯವರೂ ಸ್ವರ್ಗಸ್ಥರಾದರು. ಆ ದಂಪತಿಗಳನ್ನು ನಾಟಕ ಬರೆಯಲು ಕರೆಯಿಸಿ ಕೊಂಡಿದ್ದ ನನಗೆ ಅವರ ಕರ್ಮಾದಿಗಳನ್ನು ಮಾಡಿಸುವ ಯೋಗ ಮಾತ್ರ ಲಭಿಸಿತು. ಸಂಸ್ಥೆಯು ಕಾರೈಕುಡಿಗೆ ಪ್ರಯಾಣ ಬೆಳಸಿತು. ಕಾರೈಕುಡಿಯೆಂದರೆ ನಾಟಕೋಟ (ಚೆಟ್ಟಿನಾಡು) ಜನಗಳ ಸ್ಥಳ. ಕಾರೈಕುಡಿ, ದೇವಕೋಟೆ, ಕಾನಡಿಕಾಕ, ಈ ಮೂರು ಸ್ಥಳಗಳಲ್ಲಿ, ನಾಟಕೋಟಿ ಚೆಟ್ಟಿಯಾರ್‌ರವರು ಇರುವ ಊರು. ಪ್ರತಿಯೊಂದು ಮನೆಗಳೂ, ಮೂರು-ನಾಲ್ಕು ಲಕ್ಷ ರೂಪಾಯಿಗಳು ಖರ್ಚು ಮಾಡಿ ಕಟ್ಟಿಸಿದ್ದವುಗಳಾಗಿದ್ದವು. ಅದೂ ಆಗಿನ ಕಾಲದಲ್ಲಿ, ಈಗ ಅವುಗಳಿಗೆ ಅದರ ನಾಲ್ಕರಷ್ಟಾಗಬಹುದು. ದೇವರ ಸೇವೆ ಮಾಡುವುದರಲ್ಲಂತೂ ಪ್ರಸಿದ್ಧವಾದ ಸ್ಥಳ. ಕಾರೈಕುಡಿಯಲ್ಲಿ ಅಮ್ಮನವರ ಉತ್ಸವವಾಯಿತು. ಅದರ ವೈಭವ ವರ್ಣನೆ ಮಾಡಲು ಸಾಧ್ಯವೇಯಿಲ್ಲ. ವಜ್ರಾಂಗಿ ಹಾಗೂ ವಜ್ರದ ಆಭರಣಗಳು ನೋಡಲು ಬಂದ ಭಕ್ತಾದಿಗಳ ಮನಸ್ಸಿನ್ನು ಸೆಳೆಯುತ್ತಲಿದ್ದವು. ಬಹು ಭಕ್ತಿಯಿಂದ ಮನಸಾರೆ ಸೇವೆ ಗೈಯುತ್ತಲಿದ್ದರು.

ಆ ಉತ್ಸವದ ನಾಗಸ್ವರ, ದೋಲು, ವಾದ್ಯದವರಿಗೆ ಅವರ ಮೇಲ್ ವಿಚಾರಣೆಯ ಖರ್ಚಲ್ಲದೆ ದಿನ ಒಂದಕ್ಕೆ ಒಂದು ಸಾವಿರದ ಐನೂರು ರೂಪಾಯಿಗಳನ್ನು ಕೊಡುತ್ತಲಿದ್ದರು.

ಆ ಊರಿನಲ್ಲಿ ಸುಂದರೈಯ್ಯರ್ ನಾಟಕ ಶಾಲೆಯಿತ್ತು. ಅದನ್ನು ದಿನ ಒಂದಕ್ಕೆ ನೂರುರೂಪಾಯಿಯಂತೆ ಬಾಡಿಗೆ ಗೊತ್ತು ಮಾಡಿಕೊಂಡು ನಾಟಕ ಪ್ರಾರಂಭಿಸಿದೆವು. ಅಲ್ಲಿಯ ಜನರು ಹತ್ತು ರೂಪಾಯಿಗಳ ಟಿಕೇಟ್ ತೆಗೆದುಕೊಂಡು ಎಲೆ ಅಡಿಕೆ ಪೆಟ್ಟಿಗೆ ಸಮೇತ ಕುಳಿತುಕೊಂಡು ನಾಟಕ ಪ್ರಾರಂಭವಾದ ತಕ್ಷಣ ಆರಾಮ ಕುರ್ಚಿಯಲ್ಲಿ ಸುಖ ನಿದ್ರೆಹೊಡೆಯುತ್ತಲಿದ್ದರೇ ವಿನಃ ನಾಟಕ ನೋಡುತ್ತಿರಲಿಲ್ಲ. ಅಲ್ಲಿಯೂ ಸಹಾ ನಮ್ಮ ಸಂಸ್ಥೆಯವರು ಸುತ್ತುಮುತ್ತಲಿನ ಕ್ಷೇತ್ರಗಳ ದರ್ಶನ ಮಾಡಿಕೊಂಡು ಬಂದರು. ಅಲ್ಲಿಂದ ಕಂಪನಿಯು ಮಧುರೈಗೆ ಹೋಗಿ, ಅಲ್ಲಿ ಮಧುರೈ ಮೀನಾಕ್ಷಿದೇವಿಯ ದರ್ಶನ-ಸೇವೆಯನ್ನು ಮಾಡಿಕೊಂಡು ನಾಟಕವಾಡುತ್ತಿರುವಾಗ್ಗೆ, ಎಟ್ಟಿಯಾ ಪುರದ ಸಂಸ್ಥಾನ ಮಹಾರಾಜರು ನಮ್ಮ ನಾಟಕವನ್ನು ನೋಡಿ ಸಂತೋಷಪಟ್ಟು ತಮ್ಮ ರಾಣೀವಾಸದವರಿಗೆ ತೋರಿಸಲು ನಮ್ಮ ಸಂಸ್ಥೆಯ ನಟರನ್ನೆಲ್ಲಾ ಕರೆಯಿಸಿಕೊಂಡು ತಮ್ಮ ನಾಟಕ ಶಾಲೆಯಲ್ಲೇ ಅವರ ಸೀನರಿಗಳಲ್ಲೆ ನಾಟಕಗಳನ್ನಾಡಿಸಿದರು. ನಮ್ಮ ನಾಟಕಗಳು ಮಹಾರಾಜರ ಹಾಗೂ ರಾಣಿವಾಸದವರ ಮತ್ತು ರಾಜ ಪರಿವಾರದವರ ಮೆಚ್ಚಿಗೆ ಪಡೆಯಿತು. ಆರನೇ ನಾಟಕದ ದಿನ ನಮ್ಮ ಗ್ರಹಚಾರಕ್ಕೆ, ಅರಮನೆಯ ಆವರಣದಲ್ಲಿದ್ದ ತೋಟದ ಬಾವಿಯಲ್ಲಿ ಸ್ನಾನ ಮಾಡಲು ಕಂಪನಿಯ ಕೆಲವರು ಹೋಗಿದ್ದಾಗ್ಗೆ ಒಬ್ಬ ನಟನು ಬಾವಿಯಲ್ಲಿ ಮುಳುಗಿ ಮೃತಪಟ್ಟನು. ಕೆಲವರು ಅವನ ಬಳಿಯಿದ್ದರೂ ಮೃತ್ಯದೇವತೆಯಿಂದ ಬಿಡಿಸಿಕೊಳ್ಳಲಾಗಲಿಲ್ಲ. ದೈವ ಸಂಕಲ್ಪವೇ ಹಾಗಿತ್ತು. ಮರಣ ವಾರ್ತೆಯನ್ನು ಮಹಾರಾಜರಿಗೆ ತಿಳಿಸಿದ ಕೂಡಲೇ ನಾಟಕಗಳನ್ನಾಡುವುದು ಸಾಕು ಎಂದು ಹೇಳಿಕಳುಹಿಸಿದರು. ಆ ದಿನ ಸಾಯಂಕಾಲದೊಳಗೇ ಮೃತನ ದೇಹವನ್ನು ಬಾವಿಯಿಂದ ಹೊರಕ್ಕೆ ತೆಗೆದು ಬ್ರಾಹ್ಮಣರ ವಶಕ್ಕೆ ಕೊಟ್ಟು ವಿಧಿಯುಕ್ತ ಸಂಸ್ಕಾರ ಮಾಡಲಾಯಿತು. ಮರುದಿನ ಮಹಾರಾಜರು ನಮ್ಮ – ನಟಿಯರಿಗೆಲ್ಲಾ ಉಡುಗೊರೆ ಕೊಟ್ಟು, ಗಂಗಾಧರರಾಯರಿಗೆ, ಯು. ಕೆ. ವ್ಯಾಸರಾಯರಿಗೆ ಜಿ. ಸುಂದರಮ್ಮನಿಗೆ ಬಂಗಾರದ ಮೆಡಲನ್ನೂ, ಸ್ವರ್ಣಮ್ಮ ಮಾಲತಮ್ಮನಿಗೆ ಒಂದೊಂದು ವಜ್ರದ ಲೋಲಕ್‌ಗಳನ್ನೂ, ಆಶೀರ್ವದಿಸಿ ಕೊಟ್ಟರು. ಸಂಸ್ಥೆಗೆ ಎರಡು ಸಾವಿರದ ಐನೂರು ರೂಪಾಯಿಗಳನ್ನೂ ಒಂದು ಭಂಗಾರದ ಪದಕವನ್ನು ದಯಪಾಲಿಸಿ ಬೀಳುಕೊಟ್ಟರು.

ನಮ್ಮ ಸಂಸ್ಥೆ ಮಹಾರಾಜರ ಆಹ್ವಾನದ ಮೇರೆಗೆ ಎಟ್ಟಿಯಾ ಪುರಕ್ಕೆ ಹೋದಾಗ ನಮ್ಮ ಥಿಯೇಟರ್‌ನಲ್ಲಿ ನಾಟಕವಾಡಲು ತ್ಯಾಗರಾಜ ಭಾಗವತರೆಂಬ ನಟರು ಬಾಡಿಗೆಗೆ ತೆಗೆದುಕೊಂಡು ನಾಟಕವಾಡುತ್ತಲಿದ್ದರು. ಆಗ ಅವರಿಗೆ ಕೇವಲ ೨೨-೨೩ ವರ್ಷ ಪ್ರಾಯ! ಮಧುರೈಯಲ್ಲಿ ನಾಟಕವಾಡುತ್ತಿರುವಾಗ್ಗೆ ಹೆಸರು ಪಡೆದು, ಪಿಕ್ಚರಿಗಾಗಿ ಪ್ರೊಡ್ಯೂಸರ್‌ಗಳು ಕರೆದುಕೊಂಡು ಹೋಗುತ್ತಲಿದ್ದರು. ಚಲನ ಚಿತ್ರಕ್ಕೆ ಕಾಲಿಟ್ಟ ಮೇಲೆ ಕೀರ್ತಿ ಪಡೆದರು.

ಮಹಾರಾಜರಿಂದ ಬೀಳ್ಕೊಂಡ ಕಂಪನಿಯು ಸೇಲಂಗೆ ಬಂದು ನಾಟಕಗಳ ನ್ನಾಡುತ್ತಲಿರುವಾಗ್ಗೆ-ಮಧುರವಾದ ಕಂಠದಿಂದ ಚೆನ್ನಾಗಿ ಹಾಡುತ್ತಲಿದ್ದ ಚಿಕ್ಕ ವಯಸ್ಸಿನ ರೂಪವತಿಯಾದ ಕೆ. ಅಶ್ವತ್ಥಮ್ಮ ಎನ್ನುವ ನಟಿಯೋರ್ವಳು ಕಂಪನಿಗೆ ಬಂದು ಸೇರಿದಳು.

ಚಿಕ್ಕ ಕಂಪನಿ ವ್ಯವಸ್ಥೆ

ಆ ಸಮಯದಲ್ಲಿ ಬ್ರ್ಯಾಂಚ್ ಕಂಪನಿಯಾದ ಬಾಲ ಕಲಾವಿವರ್ಧಿನಿ ಸಂಸ್ಥೆಯು ಮದನಪಲ್ಲಿ, ಕೋಲಾರ, ಚಿಕ್ಕಬಳ್ಳಾಪುರ, ಚಿಂತಾಮಣಿ, ಹೊಸೂರು, ವಗೈರೆ ಮುಗಿಸಿಕೊಂಡು, ಗುಂತಕಲ್ಲಿಗೆ ಮೊಕ್ಕಾಂ ಮಾಡಿತು. ಅದರ ಆಡಳಿತವನ್ನು ನೋಡಿ ಕೊಳ್ಳುತ್ತಿಲಿದ್ದ ಎಸ್. ನಾಗೇಶರಾಯರನ್ನು ಕಾರಣಾಂತರದಿಂಧ ದೊಡ್ಡ ಸಂಸ್ಥೆಗೆ ಕರೆಯಿಸಿಕೊಂಡಿದ್ದೆ. ಚಿಕ್ಕ ಸಂಸ್ಥೆಯನ್ನು ನನ್ನ ಸಂಬಂಧಿಕನಾಗಿದ್ದು, ಹಿಂದೆ ಬಿಟ್ಟು ಹೋಗಿ ಸ್ವತಃ ಕಂಪನಿಯನ್ನು ಮಾಡಿ ಕೈಯಲ್ಲಿದ್ದ ನಾಲ್ಕು-ಐದು ಸಾವಿರ ರೂಪಾಯಿ ಹಾಗೂ ನಗನಾಣ್ಯಗಳನ್ನು ಕಳೆದುಕೊಂಡು ಬಹು ತೊಂದರೆ ಪಡುತ್ತಲಿದ್ದ ನೀಲಕಂಠಪ್ಪನನ್ನು ಪುನಃ ಅನೇಕರು ಕನಿಕರದಿಂದ ಕರೆತಂದುರು; ಕೊನೆಗೆ ರೂಪಾಯಿಯಲ್ಲಿ ನಾಲ್ಕಾಣೆ ಭಾಗವನ್ನು ಕೊಡಲೊಪ್ಪಿಕೊಂಡು, ಆತನನ್ನೇ ಸಂಸ್ಥೆಯ ಆಡಳಿತವನ್ನು ನೋಡಲು ನೇಮಿಸಿದೆ. ಆತನು ಸಂಸ್ಥೆ ನಡೆಯಿಸಿಕೊಂಡು ಹೋಗುತ್ತಲಿದ್ದು ಕೊನೆಗೆ ದುರಾಶೆಯಿಂದ ದ್ರೋಹ ಮಾಡತೊಡಗಿದನು. ನನಗೆ ಈ ಸಮಾಚಾರ ಕೊಂಚ ಕೊಂಚವಾಗಿ ತಿಳಿಯುತ್ತ ಬಂದರೂ, ಬಹು ದೂರ ಸಂಚಾರವಿದ್ದುದರಿಂದ ಏನೂ ಉಪಾಯವಿಲ್ಲದೇ ಸುಮ್ಮನಿರಬೇಕಾಯಿತು. ಅಷ್ಟರಲ್ಲಿ ಬ್ರಾಂಚ್ ಕಂಪನಿಯು ಬಳ್ಳಾರಿಗೆ ಮೊಕ್ಕಾಂ ಮಾಡಿತು. ದೊಡ್ಡ ಕಂಪನಿಯನ್ನು ಬೆಂಗಳೂರು ಶಿವಾನಂದ ಥಿಯೇಟರ್‌ನಲ್ಲಿ ಆಡಲು ಅವಕಾಶ ಮಾಡಿಕೊಟ್ಟು ಬ್ರಾಂಚ್ ಕಂಪನಿಯಿದ್ದ ಬಳ್ಳಾರಿಗೆ ಹೋಗಿ ಪರಿಸ್ಥಿತಿ ನೋಡುವಲ್ಲಿ ನನಗೆ ಬಹಳ ಆಶ್ಚರ್ಯವಾಯಿತು. ಕಂಪನಿಯು ಮಾಲಿಕ ನಾನಲ್ಲವೆಂಬಂತೆ ಕಂಪನಿಯ ಪರಿಸ್ಥಿತಿಯಿತ್ತು. ನಟಿ-ನಟಯರನ್ನರಲ್ಲದೇ, ಇತರೆ ಕೆಲಸಗಾರನ್ನೆಲ್ಲರನ್ನೂ ನೀಲಕಂಠಪ್ಪ ಬಳಪಡಿಸಿಕೊಂಡಿದ್ದ ಅಲ್ಲಿ ಬ್ರಾಂಚಿನ ವಿದ್ಯಾಮಾನವನ್ನೆಲ್ಲಾ ನೋಡಿ ಬಹಳ ದುಃಖವಾಯಿತು. ಅಲ್ಲದೆ ಸಂಸ್ಥೆ ನನ್ನದೆ, ವೀರಣ್ಣನವರದಲ್ಲ"- ಎನ್ನುವ ಮಹತ್ವಾಕಾಂಕ್ಷೆ ಬಂದಿತ್ತು. ಅನಂತರ ಚೆನ್ನಾಗಿ ಯೋಚಿಸಿ ಓಹೋ ಕಂಪನಿಯನ್ನು ಹೀಗೆ ಬಿಟ್ಟರೆ ಅದು ನನ್ನ ಕೈ ಬಿಟ್ಟು ಹೋಗುವುದೆಂದು ಮನವರಿಕೆ ಮಾಡಿಕೊಂಡು, ಸಂಸ್ಥೆಯ ಜನರನ್ನೆಲ್ಲಾ ಸೇರಿಸಿ, ಎಲ್ಲರಿಂದಲೂ ನೌಕರಿ ಕರಾರುಗಳನ್ನು ಬರೆಯಿಸಿ, ನೀಲಕಂಠಪ್ಪನ ಹೆಸರನ್ನು ತೆಗೆಯಿಸಿ, ಎಸ್. ನಾಗೇಶರಾಯರನ್ನು ಮ್ಯಾನೇಜರ್ ಆಗಿ ನೇಮಿಸಿ, ನೀಲಕಂಠಪ್ಪನು ಬಂದರೆ ಇಲ್ಲಿರಲು ಅವಕಾಶ ಕೊಡಬಾರದೆಂದು ತಿಳಿಸಿ, ಸಂಸ್ಥೆಯನ್ನು ಹೊಸಪೇಟೆ ಕ್ಯಾಂಪು ಮಾಡಿಸಿ, ಮುಖ್ಯರಾದ ಜನರಿಗೆ ಅಂದರೆ ಎಸ್. ನಾಗೇಶರಾಯರಿಗೆ, ಬಿ. ಆರ್. ಪಂತುಲು, ಡಿಕ್ಕಿ ಮಾಧವರಾವ್, ತಮಾಷ್ ಮಾಧವರಾವ್, ಬಿ. ಜಯಮ್ಮ, ಎಂ. ಮುನಿಯಪ್ಪ, ತಬಲ ಚಿಕ್ಕಮುನಿಸ್ವಾಮಯ್ಯ, ಶೇಷಾಚಲ, ಚಿನ್ನಪ್ಪ, ನಾರಾಯಣದಾಸ್ ಮುಂತಾದವರೆಲ್ಲರಿಗೂ ವಿವೇಕ ಹೇಳಿ, ಅದಲು ಬದಲಾದ ಸಂಸ್ಥೆಯನ್ನು ಭದ್ರಪಡಿಸಿ, ನಾನು ಬೆಂಗಳೂರಿಗೆ ಬಂದೆನು. ಆಗ ಕಂಪನಿಗೆ ಸರಿಯಾದ ಕಲೆಕ್ಷನ್ ಆಗದೆಯೂ, ಮನೋರಂಜನ ತೆರಿಗೆ ಬಿದ್ದುದರಿಂದಲೂ, ವಾಕ್ ಚಲನಚಿತ್ರದ ಆರ್ಭಟ ಹೆಚ್ಚಾಗುತ್ತಿದ್ದುದರಿಂದಲೂ ತುಂಬ ತೊಂದರೆಯಾಯಿತು.

ಅನಂತರ ಚಿಕ್ಕ ಕಂಪನಿಯು ಹೊಸಪೇಟೆಯಿಂದ ಕೊಪ್ಪಳ, ಹರಪನಹಳ್ಳಿ, ಮೈಲಾರಲಿಂಗ ಜಾತ್ರೆಗೆ ಹೋಗಿ, ಅಲ್ಲಿಂದ ಒಂದು ತಿಂಗಳ ಕಂಟ್ರಾಕ್ಟಿನ ಮೇಲೆ, ಮದ್ರಾಸಿಗೆ ಹೋದುದಾಯಿತು. ಕಂಟ್ರಾಕ್ಟ್ ಮುಗಿದ ಮೇಲೆ, ವಾಲ್ಟ್ ಟ್ಯಾಕ್ಸ್ ಥಿಯೇಟರ್‌ನಲ್ಲಿ ಆಡುತ್ತಿರುವಾಗ್ಗೆ, ಮನೋರಂಜನ ತೆರಿಗೆಯವರ ಗಲಾಟೆ ಹೆಚ್ಚಾಯಿತು. ಆಗ ೦-೩-೧೧ ವರೆಗೆ ಟ್ಯಾಕ್ಸ್ ಇರಲಿಲ್ಲ, ಆರಾಣೆಗೆ ಅರ್ಧಾಣೆ ಟ್ಯಾಕ್ಸ್ ಹಾಕಿದ್ದರು. ಆದ್ದರಿಂದ ನಾವು ಎಲ್ಲಾ ಕ್ಲಾಸಿಗೂ ಐದಾಣೆ ಹನ್ನೊಂದು ಕಾಸು ತಿಕೀಟ್ ಹಾಕಿ ಅದರಂತೆ ಒಂದು ತಿಂಗಳು ನಾಟಕವಾಡಿದೆವು. ಮೊದಲು ಸೋಫಾಕ್ಲಾಸ್ ಭರ್ತಿಯಾಗಿ, ನಂತರ, ಕುರ್ಚಿ ಕ್ಲಾಸ್ ಕೊನೆಗೆ ಕಡೆಯ ಕ್ಲಾಸ್ ಭರ್ತಿಯಾಗುತ್ತಲಿತ್ತು. ಈ ರೀತಿ ಛಾರ್ಜುಮಾಡಿ ನಾಟಕವನ್ನಾಡುತ್ತಲಿದ್ದುದು ಒಂದು ಆದರ್ಶನೀಯ! ಅಂತೂ ಮದ್ರಾಸಿನಲ್ಲಿ ಚಿಕ್ಕ ಸಂಸ್ಥೆಗೆ ಒಳ್ಳೆ ಹೆಸರು ಬಂತು; ಸಂಸ್ಥೆಯ ಕೆಲವು ಬಾಲಕರಿಗೆ ಬಹುಮಾನಗಳೂ ದೊರೆತವು. ನಂತರ ಚಿಕ್ಕ ಸಂಸ್ಥೆಯು ಕೋಲಾರ, ಬೌರಿಂಗ್ ಪೇಟೆ, ಚಿಕ್ಕಬಳ್ಳಾಪುರ ಮುಗಿಸಿಕೊಂಡು ವಿಜಯಪುರ, ದೇವನಹಳ್ಳಿಗೆ ಬಂದು ನಂತರ ಬೆಂಗಳೂರಿನ ಶಿವಾನಂದ ಥಿಯೇಟರ್‌ನಲ್ಲಿ ಆಡುತ್ತಲಿದ್ದರು. ಬೆಂಗಳೂರಿನಲ್ಲಿ ಆಡುತ್ತಲಿದ್ದ ಒರಿಜಿನಲ್ ಕಂಪನಿಯು ಮದರಾಸ್ ಮಿಡ್‌ಲ್ಯಾಂಡ್ ಥಿಯೇಟರ್ ಮಾಲೀಕರು ಒಪ್ಪಂದ ಮಾಡಿಕೊಂಡು ಬಂದರು. ಆಗ ಕಂಪನಿಗೆ ಮಳವಳ್ಳಿ ಸುಂದರಮ್ಮ, ಕೆ. ಅಶ್ವತ್ಥಮ್ಮ, ತ್ರಿಪುರಾಂಬ, ಮುಂತಾದ ಉತ್ತಮ ನಟಿಯರೂ, ಜಿ. ನಾಗೇಶರಾಯರು, ಗುರುಮೂರ್ತಪ್ಪನವರು, ನಾರಾಯಣ ನಾಯ್ಡುರವರು, ಯು. ಕೆ. ವ್ಯಾಸರಾಯರು, ಗುರುಮೂರ್ತಪ್ಪನವರು, ನಾರಾಯಣ ನಾಯ್ಡುರವರು, ಮುಂತಾದ ಉತ್ತಮ ನಟರು ಇದ್ದು ಕೆಲವು ನಾಟಕಗಳನ್ನಾಡುತ್ತಲಿದ್ದ ಹಾಗೆ – ಬಿ. ಜಯಮ್ಮನಿಗೆ ಮೆನಂಜಿಟಿಸ್ ಖಾಯಿಲೆಯಾಗಿ ಉಳಿಯುವುದೇ ಕಷ್ಟವಾಯಿತು. ಪರಮೇಶ್ವರನ ಕೃಪೆಯಿಂದ ಪುನರ್ಜನ್ಮ ತಾಳಿದರು. ಅವರನ್ನು ರಜೆಯಿಂದ ಊರಿಗೆ ಕಳುಹಿಸಲಾಯಿತು.

ಹಿಂದೆ ಐದು ಆರು ತಿಂಗಳ ಕೆಳಗೆ ಮಧುರೈಗೆ ಹೋಗಿದ್ದಾಗ ಮರದ ಚಿತ್ರ ಕೆಲಸಮಾಡಬಲ್ಲ ಇಬ್ಬರು ಆಚಾರ್‍ರುಗಳನ್ನು ಕರೆದುಕೊಂಡು ಬಂದಿದ್ದೆನು. ಅಲ್ಲದೆ ಅಲ್ಲಿಯ ಜವಳಿ ವ್ಯಾಪಾರಿಗಳಾದ ಸೇಟುಗಳ ಪರಿಚಯವೂ ಆಗಿತ್ತು. ಅವರ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದೆವು. ಆಚಾರ್‍ರುಗಳಿಂದ ಚಿತ್ರಕೆಲಸದ ಕುರ್ಚಿಗಳನ್ನು ಮಂಚ, ಸೋಫಾನುಗಳನ್ನು ಮಾಡಿಸುತ್ತಿದ್ದು ಪೇಂಟರ್ ಶ್ಯಾಮಲಾಲ್‌ರವರಿಂದ ಕುರುಕ್ಷೇತ್ರದ ಸಾಮಾನುಗಳನ್ನು, ಸೀನರಿಗಳನ್ನು ತಯಾರುಮಾಡಲು ಯೋಚಿಸಿದೆನು. ಏಕೆಂದರೆ ಚಲನಚಿತ್ರದ ಕಡೆಗೆ ತಿರುಗಿ ನಾಟಕಗಳನ್ನು ನೋಡುವುದೇ ಕಡಿಮೆಯಾಗಿತ್ತು. ಎಲ್ಲಿ ಹೋದರೂ ಉತ್ಪತ್ತಿಯಾಗುತ್ತಿರಲಿಲ್ಲ. ಅದಕ್ಕಾಗಿ ದೊಡ್ಡ ಏರ್ಪಾಡು ಮಾಡಿ, ಚೆನ್ನಾಗಿ ಸೀನರಿಗಳನ್ನು ತಯಾರ್‍ಮಾಡಿಸಿ, ಜನಗಳ ದೃಷ್ಟಿಯನ್ನು ನಾಟಕದ ಕಡೆಗೆ ಸೆಳೆಯಬಹುದೇಯೆಂಬ ಯೋಚನೆಯಿಂದ ಕವಿಗಳಾದ ಬಿ. ಪುಟ್ಟಸ್ವಾಮಯ್ಯನವರನ್ನು "ಕುರುಕ್ಷೇತ್ರ" ನಾಟಕ ಬರೆಯಲು ಪ್ರೇರೇಪಿಸಿ, ಅವರ ಸಲಹೆಯಂತೆ ಸೀನರಿಗಳನ್ನು ತಯಾರುಮಾಡಲು ಪೇಂಟರ್‌ಗಳಾದ ಶ್ರೀ ಶ್ಯಾಮಲಾಲ್, ಶ್ರೀ ಚನ್ನಬಸಪ್ಪ, ಪುಟ್ಟಸ್ವಾಮಯ್ಯ, ಸುಬ್ರಾಯಿಲ್ ನಾಯ್ಡು, ಐಯರ್ ಎಂಬ

ಪೇಂಟರ್‌ಗಳನ್ನು ನೇಮಿಸಿ, ಅವರಿಗೆ ಸಾಮಾನು ಸಲಕರಣೆಗಳನ್ನು ಒದಗಿಸಿಕೊಟ್ಟು ಡ್ರೆಸ್‌ಮೇಕರ್‌ಗಳನ್ನು ಕರೆಯಿಸಿ, ಅವರಿಗೂ ಕುರುಕ್ಷೇತ್ರಕ್ಕೆ ಬೇಕಾದ ಡ್ರೆಸ್ ತಯಾರುಮಾಡಲು ಗೊತ್ತುಮಾಡಿದೆ. ಕಂಪನಿಯನ್ನು ಮದ್ರಾಸಿನಿಂದ ಮೈಸೂರಿಗೆ ತಂದು ಬಸವರಾಜೆ ಅರಸುರವರ ಬಂಗಲೆ ಮುಂಭಾಗದಲ್ಲಿರುವ ಸ್ಥಳಸಹಿತ ಬಾಡಿಗೆಗೆ ತೆಗೆದುಕೊಂಡು ಅಲ್ಲಿ ಥಿಯೇಟರ್ ಹಾಕಿಸಿ, ಸುಮಾರು ನಾಲ್ಕು ಐದು ತಿಂಗಳು ನಾಟಕವನ್ನಾಡುತ್ತ, ಕುರುಕ್ಷೇತ್ರದ ನಾಟಕದ ಪ್ರಾಕ್ಟೀಸ್ ಪ್ರಾರಂಭಿಸಿದೆವು. ಆಗ ಬೆಂಗಳೂರಿನಲ್ಲಿ ಶ್ರೀಮತಿ ಭದ್ರಮ್ಮನವರಿಗೆ ಹೆಣ್ಣು ಮಗವು ಜನನವಾಯಿತು. ಆ ಸುದ್ದಿಯು ಸಂತೋಷದಾಯಕವಾಯಿತು. ಬೆಂಗಳೂರಿನ ಶಿವಾನಂದ ಥಿಯೇಟರ್‌ನಲ್ಲಿ ಒಳ್ಳೆಯ ರಭಸದಿಂದ ಕುರುಕ್ಷೇತ್ರದ ಸಾಮಾನು ಸೀನರಿಗಳೂ ತಯಾರಾಗುತ್ತಲಿದ್ದವು. ಇಲ್ಲಿ ಪ್ರಾಕ್ಟೀಸ್ ನಡೆಯುತ್ತಿದ್ದಾಗ ಭೀಮನ ಪಾತ್ರ ಮಾಡುತ್ತಲಿದ್ದ ಕೃಷ್ಣಮೂರ್ತಿಯೆಂಬ ಉತ್ತಮ ನಟನು ಕಂಪನಿಗೆ ಸೇರಿದನು. ಮೈಸೂರು ಕ್ಯಾಂಪು ಮುಗಿಸಿಕೊಂಡು ಮಂಡ್ಯಕ್ಕೆ ಬಂದೆವು. ಅಲ್ಲಿಯೂ ಕುರುಕ್ಷೇತ್ರದ ಪ್ರಾಕ್ಟೀಸ್ ಮುಂದುವರಿಯುತ್ತಲಿತ್ತು. ಅಲ್ಲಿಂದ ಬೆಂಗಳೂರು ಕ್ಯಾಂಪು ಮಾಡಿ ನಾಟಕಗಳನ್ನಾಡ ತೊಡಗಿದೆವು. ಸೀನರಿಗಳಿಗೆ ಹೆಚ್ಚಿನ ಶ್ರದ್ಧೆಯಿಂದ ಗಮನ ಕೊಡತೊಡಗಿದೆವು. ರಥ, ಮಂಚ, ಕುರ್ಚಿ, ಮೊದಲಾದವುಗಳನ್ನು ಗೋಲ್ಡ್ ಪೇಂಟ್ ಮಾಡಿಸಲು ಮದ್ರಾಸಿನಿಂದ ನುರಿತ ಕೆಲಸಗಾರರನ್ನು ಕರೆಯಿಸಿದೆನು. ಆಗ ಗೋಲ್ಡನ್ ಜೂಬ್ಲಿಯನ್ನು ನೆರವೇರಿಸಬೇಕೆಂಬ ಸಂಕಲ್ಪದಿಂದ ಅದರ ಸಿದ್ಧತೆಗೂ ತೊಡಗಿದೆವು.

ಆ ಸಮಯದಲ್ಲಿ ರಂಭಾಪುರಿ ಸಿಂಹಾಸನಾಧ್ಯಕ್ಷರಾದ ಶ್ರೀ ಶಿವಾನಂದ ಸ್ವಾಮಿಗಳವರ ಸವಾರಿ ಬೆಂಗಳೂರಿಗೆ ಚಿತ್ತೈಸಿತು. ಅವರನ್ನು ಧರ್ಮಪ್ರವರ್ತಕ ಶ್ರೀ ಗುಬ್ಬಿ ತೋಟದಪ್ಪನವರ ಛತ್ರದಿಂದ ಭಾರಿ ಉತ್ಸವ ಬಿರುದಾವಳಿಗಳಿಂದ ನಮ್ಮ ಮನೆಗೆ ಬಿಜಯ ಮಾಡಿಸಿ, ನಮ್ಮ ಪಾದಪೂಜೆಯನ್ನು ಸ್ವೀಕರಿಸಿದರು. ಆ ದಿನ ಸಹಸ್ರಾರು ಬಡಜನರಿಗೆ ಶಿವಾನಂದ ಥಿಯೇಟರ್ ಆವರಣದಲ್ಲಿ ಸಮಾರಾಧನೆ ನಡೆಯಿಸಿ ಸಾಯಂಕಾಲ ಆರು ಗಂಟೆಗೆ ಥಿಯೇಟರ್‌ನೆಲ್ಲಾ ಶುಚಿಮಾಡಿಸಿ, ಕುರುಕ್ಷೇತ್ರದ ಹೊಸ ಸೀನರಿಗಳನ್ನೆಲ್ಲಾ ಒಪ್ಪವಾಗಿ ಜೋಡಿಸಿ, ಶ್ರೀ ಸ್ವಾಮಿಗಳವರನ್ನು ಆಹ್ವಾನಿಸಿ ಪುನಃ ಪಾದ ಪೂಜೆ ಗೈದು, ಪಾದೋದಕವನ್ನು ಥಿಯೇಟರ್ ಪೂರ್ಣ ಸಿಂಪಡಿಸಿ, ಸಿಂಹಾಸನದ ಮೇಲೆ ಅವರನ್ನು ಕೂಡ್ರಿಸಿದೆವು. ಕಂಪನಿಯ ಪ್ರತಿಯೊಬ್ಬರಿಗೂ ಫಲ ಮಂತ್ರಾಕ್ಷತೆಗಳನ್ನು ಆಶೀರ್ವಾದವನ್ನು ದಯಪಾಲಿಸಿ ನಾವು ಕೊಟ್ಟ ಅಲ್ಪಕಾಣಿಕೆಯನ್ನು ಸ್ವೀಕರಿಸಿ ಆಶೀರ್ವದಿಸಿ ತಮ್ಮ ಬಿಡಾರಕ್ಕೆ ಹೊರಟರು. ಅದೇ ಸಮಯದಲ್ಲಿ ನನ್ನ ಹೆಣ್ಣು ಮಗುವಿಗೆ ರೇವಾಂಬನೆಂದು ನಾಮಕರಣ ಮಾಡಿ ಆಶೀರ್ವದಿಸಿದರು.

ಕುರುಕ್ಷೇತ್ರ

ಕುರುಕ್ಷೇತ್ರ ನಾಟಕದ ಸೀನ್, ಡ್ರೆಸ್ಸು, ಕುರ್ಚಿಗಳು, ಇತರೆ ಚಿಲ್ಲರೆ ಸಾಮಾನುಗಳ ಕೆಲಸ ಬಹು ಭರದಿಂದ ಸಾಗಲಾರಂಭಿಸಿತು. ಒಂದು ಕಡೆಯಲ್ಲಿ ನಟರುಗಳ ಅಭಿನಯದ ಅಭ್ಯಾಸ, ಮತ್ತೊಂದು ಕಡೆ ಹಾಡುಗಳಿಗೆ ಮಟ್ಟು ಅಂದರೆ ಧಾಟಿ ಹಾಕುವ ಕಾರ್ಯ, ಮತ್ತೊಂದು ಕಡೆ ದೃಶ್ಯಗಳ ತಯಾರಿಕೆ ಕೆಲಸಗಳು - ನೋಡಿದವರಿಗೆ ಇದು ಒಂದು ಶಾಲೆಯೋ ಅಥವಾ ವರ್ಕ್‌ಷಾಪೋ ಇರಬೇಕೆಂಬ ಭ್ರಾಂತಿಯುಂಟಾಗುವ ರೀತಿಯಲ್ಲಿ ನಡೆಯುತ್ತಿದ್ದವು. ೧೯೩೪ನೇ ಇಸವಿ ಡಿಸೆಂಬರ್ ಮಾಹೆ ೩೧ನೇ ತಾರೀಖಿನಲ್ಲಿ ಕುರುಕ್ಷೇತ್ರ ನಾಟಕದ ಪ್ರಾರಂಭೋತ್ಸವವನ್ನು ಆಚರಿಸಲು ನಿರ್ಧರಿಸಿದೆವು.

೩೧-೧೨-೧೯೩೪ ನೇ ದಿನದಂದು ಶಿವಾನಂದ ಥಿಯೇಟರನ್ನು ತಳಿರು ತೋರಣಗಳಿಂದ ಅಲಂಕರಿಸಲಾಯ್ತು - ಥಿಯೇಟರಿನ ಆವರಣದಲ್ಲಿ ಟೆಂಟುಗಳನ್ನೂ, ಸೆಮಿಗಳನ್ನೂ ಹೊಡೆಸಿ ಅದರಲ್ಲಿ ಒಂದು ಸಾವಿರ ಜನರಿಗೆ ಫಲಾಹಾರ ವ್ಯವಸ್ಥೆಯನ್ನು ಏರ್ಪಡಿಸಿ, ಬೆಂಗಳೂರಿನ ದೊಡ್ಡ ವರ್ತಕರನ್ನೂ, ಮೈಸೂರಿನ ಕಲಾಪೋಷಕರಾದ ವರ್ತಕರನ್ನೂ ಕಲಾವಿದರನ್ನೂ, ತುಮಕೂರು ಗುಬ್ಬಿ ಮತ್ತು ಇತರೆ ಬೇರೆ ಕಡೆಗಳಿಂದಲೂ ಗಣ್ಯವ್ಯಕ್ತಿಗಳನ್ನು ಆಹ್ವಾನಿಸಲಾಗಿದ್ದು ಎಲ್ಲ ಕಡೆಗಳಿಂದಲೂ ಕಲಾಭಿಮಾನಿಗಳು ದಯಮಾಡಿಸಿದ್ದರು. ಮದರಾಸಿನಿಂದ ತಮಿಳು ಪ್ರಖ್ಯಾತ ಕಂಪೆನಿಯ ಒಡೆಯರಾದ ನವಾಬ್ ರಾಜಮಾಣಿಕ್ಯಂ, ಮೈಸೂರಿನ ಚಾಮುಂಡೇಶ್ವರಿ ಕಂಪನಿಯವರು, ಗದಗಿನ ದತ್ತಾತ್ರೇಯ ನಾಟಕ ಮಂಡಳಿ ಮಾಲೀಕರಾದ ಶ್ರೀ ಗರೂಡ ಸದಾಶಿವರಾಯರ ಪಾರ್ಟಿಯವರು, ಮೊದಲಾದ ಕಲಾವಿದರುಗಳೆಲ್ಲರೂ ಬಂದಿದ್ದರು. ಪರಸ್ಥಳದಿಂದ ಬಂದಿರುವವರಿಗೆ ಹಿಂದೂ ಮಾಡರ್ನ್ ಹೋಟೆಲ್‌ನಲ್ಲಿ ಬಿಡಾರಕ್ಕೆ ಏರ್ಪಡಿಸಲಾಗಿತ್ತು. ಸಂಜೆ ೬ ಗಂಟೆಗೆ ಸಂಘದ ಸುವರ್ಣಮಹೋತ್ಸವದ ಕಾರ್ಯದ ಅಧ್ಯಕ್ಷತೆಯನ್ನು ಮತ್ತು ಕುರುಕ್ಷೇತ್ರ ನಾಟಕದ ಪ್ರಾರಂಭೋತ್ಸವವನ್ನು ನೆರವೇರಿಸಲು ದಿವಾನ್ - ಉಲ್‌ಮುಲ್ಕ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ಆಗಮಿಸಿದರು. ಶಿವಾನಂದ ಥಿಯೇಟರಿನ ಮಹಾದ್ವಾರದಲ್ಲಿ ದಿವಾನ್‌ಸಾಹೇಬರು ಆಗಮಿಸಿದರು. ಶಿವಾನಂದ ಥಿಯೇಟರಿನ ಮಹಾದ್ವಾರದಲ್ಲಿ ದವಾನ್‌ಸಾಹೇಬರ, ನನ್ನ ಮತ್ತು ಸಂಸ್ಥೆಯ ಮ್ಯಾನೇಜರ್‌ರವರಾಗಿದ್ದ ಡಿ.ಎಸ್.ಪಿ. ನರಸಿಂಹಮೂರ್ತಿಯವರ ಫೋಟೋ ತೆಗೆಯಲಾಯ್ತು. ಉಪಾಹಾರ ಮುಗಿದನಂತರ ನಾಟಕ ಆರಂಭವಾಯಿತು.

ಮೊದಲನೆಯ ದೃಶ್ಯ ಶ್ರೀಕೃಷ್ಣನ ಶಯ್ಯಾಗೃಹದ ವೈಭವದ ದೃಶ್ಯ, ಅದರಲ್ಲಿ ಮಹಡಿಯ ಎರಡು ಕಡೆಗಳಿಂದಲೂ ಶ್ರೀಕೃಷ್ಣನಿಗೆ ಹಾರವನ್ನು ಹಾಕಲು ಹಾರವನ್ನು ಹಿಡಿದು ನರ್ತನಶೈಲಿಯಿಂದ ಸಖಿಯರು ಕೆಳಗೆ ಇಳಿಯುವ ಮನೋಹರ ದೃಶ್ಯವು ಕಣ್ಣುಗಳನ್ನು ಕೋರೈಸುವಂತಿದ್ದಿತು. ತೆರೆ ಏಳುತ್ತಿದ್ದಂತೆಯೇ ಪ್ರೇಕ್ಷಕರು ಹರುಷದ ಧ್ವನಿಯಿಂದಲೂ, ಕರತಾಡನದಿಂದಲೂ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. ನಂತರ ಕೃಷ್ಣರುಕ್ಮಿಣಿಯರ

ಪ್ರವೇಶ ಆದ ಕೂಡಲೇ, ಮತ್ತು ನರ್ತನ ಪ್ರಾರಂಭವಾದಾಗ ಒಂದು ಸಾರಿ, ಹಾಗೆ ಅದೊಂದೇ ದೃಶ್ಯದಲ್ಲಿ ಮೂರು ಸಾರಿ ಹರ್ಷಧ್ವನಿಯೊಂದಿಗೆ ಕರತಾಡನವಾಯಿತು. ಅನಂತರ ರಂಗದ ಮೇಲೆ ದಿವಾನ್ ಮಿರ್ಜಾ ಸಾಹೇಬರನ್ನು ಬರಮಾಡಿ, ಆ ದಿನದ ಸಮಾರಂಭಧ ವಿಚಾರಗಳನ್ನೂ, ಸಂಸ್ಥೆಯ ಆಗುಹೋಗುಗಳನ್ನು ಮಹಾಜನಗಳಿಗೆ ತಿಳಿಸಿ ಇಷ್ಟರ ಮಟ್ಟಿಗೆ ಸಂಸ್ಥೆಯನ್ನು ಕಾಪಾಡಿಕೊಂಡು ಬಂದ ಪರಮೇಶ್ವರನಿಗೂ, ಸಂಸ್ಥೆಯ ಆರಾಧ್ಯ ದೇವತೆ ಶ್ರೀಚೆನ್ನಬಸವೇಶ್ವರಸ್ವಾಮಿಗೂ, ನಮ್ಮನ್ನಾಳುವ ಶ್ರೀಕೃಷ್ಣರಾಜ ಒಡೆಯರಿಗೂ, ನಮಗೆ ಪ್ರೋತ್ಸಾಹ ಕೊಡುವ ಮಹಾಜನಗಳಿಗೆ ವಂದನೆಗಳನ್ನು ಸಮರ್ಪಿಸಲಾಯಿತು. ಆ ಸುಸಂದರ್ಭದಲ್ಲಿ ಅನೇಕ ಮಹಾಜನಗಳು ಸಂಸ್ಥೆಗೂ ಸಂಸ್ಥೆಯ ಮಾಲೀಕನಾದ ನನಗೂ ಬಹುವಾಗಿ ಬಹುಮಾನಗಳನ್ನು ದಯಪಾಲಿಸಿದರು.

ಮೈಸೂರು ಶ್ರೀಮನ್ಮಹಾರಾಜರವರು ಖಿಲ್ಲತ್ತು, ಪೇಟಾ, ಕೋಟಿನ ಕಿನ್ ಕಾಪಿನ ಬಟ್ಟೆ, ಒಂದು ಜೊತೆ ಕಲಾಪತ್ತು ಪಂಚೆಯನ್ನು ಆಶೀರ್ವದಿಸಿ ಕಳುಹಿಸಿ ಕೊಟ್ಟಿದ್ದರು. ಶ್ರೀ ಚಾಮುಂಡೇಶ್ವರಿ ಕೃಪಾಪೋಷಿತ ನಾಟಕ ಸಭಾದವವು ೫೦೦ ತೊಲ ಬೆಳ್ಳಿಯ ಪೆಟ್ಟಿಗೆ, ಮೈಸೂರಿನ ಪುರಜನ ಅಂದರೆ ವರ್ತಕಮಂಡಲಿಯವರು ರತ್ನ ಖಚಿತವಾದ ಬಂಗಾರದ ಚೈನ್ ಸಹಿತ ಪರಮೇಶ್ವರನ ವಿಗ್ರಹದ ಪದಕ, ನವಾಬ್ ರಾಜ ಮಾಣಿಕ್ಯಂರವರು ಕೈ ಚೈನನ್ನೂ ಬೆಂಗಳೂರಿನ ವರ್ತಕ ಮಹಾಜನಗಳು ೫೦೦ ರೂ. ಬೆಲೆ ಬಾಳತಕ್ಕ ಶಿವಪಂಚಾಯಿತಿಯ ಬರವಣಿಗೆಯ ಅಂಕದ ಪರದೆ ಮತ್ತು 'ನಾಟಕ ಸಾರ್ವಭೌಮ' ಎಂಬ ಬಿರುದಿತ್ತು ಬಂಗಾರದ ಪದಕವನ್ನು ದಯಪಾಲಿಸಿದರು - ನಮ್ಮ ಸಂಸ್ಥೆಯವರೆಲ್ಲರೂ ಸೇರಿ ೧೦೦೦ ತೊಲ ಬೆಳ್ಳಿಯಿಂದ ಮಾಡಿದ ಭವ್ಯಮಂಟಪದಲ್ಲಿ ರಾಜೀಸುತ್ತಿರುವ ೩೦ ತೊಲ ಭಂಗಾರದಿಂದ ತಯಾರು ಮಾಡಿದ ಉಮಾಮಹೇಶ್ವರ ಗಣಪತಿಯ ವಿಗ್ರಹಗಳನ್ನು ಅನುಗ್ರಹಿಸಿದರು. ಇವುಗಳಲ್ಲದೆ ಅನೇಕ ಮಹಾಜನಗಳಿಂದ ಬೆಳ್ಳಿಯ ಬಟ್ಟಲುಗಳೂ, ಕರಂಡಗಳೂ ಆಶೀರ್ವಾದರೂಪವಾಗಿ ಬಂದವು. ಈ ರೀತಿ ಆಶೀರ್ವಾದ ಬಹುಮಾನಗಳು ಬಂದದ್ದನ್ನು ಕಂಡು ನನ್ನ ಆನಂದಕ್ಕೆ ಪಾರವೇ ಇಲ್ಲದೆ ನಾನು ಸ್ವರ್ಗದಲ್ಲಿರುವೆನೋ ಏನೋ ಎನ್ನಿಸಿತ್ತು. ಅದೇ ದಿನವೇ ನಾಟಕ ನಡೆಯುವಾಗ್ಗೆ ಪರದೆಯ ರೋಲರ್ ನನ್ನ ತಲೆಯ ಮೇಲೆ ಬಿದ್ದು ದೊಡ್ಡದಾಗಿ ರಕ್ತ ಹರಿದು, ಒಂದು ದೊಡ್ಡ ಗಂಡಾಂತರದಿಂದ ಪಾರಾದೆನು. ಈ ನಾಟಕದಲ್ಲಿ ಸ್ವಲ್ಪ ದಿನಗಳು ನಾನೇ ದುರ್ಯೋಧನನ ಪಾತ್ರವನ್ನು ಅಭಿನಯಿಸಿದೆ.

ಪ್ರತಿನಿತ್ಯವೂ ಶಿವಾನಂದ ಥಿಯೇಟರಿನಲ್ಲಿ ಕುರಕ್ಷೇತ್ರ ನಾಟಕಕ್ಕೆ ಉತ್ಪತ್ತಿ ೧೦೦೦ ರೂ.ಗಳಿಗೆ ಕಡಿಮೆಯಿಲ್ಲದೆ ಬರುತ್ತಿತ್ತು. ಇಷ್ಟಾದನಂತರ ನಾನು ಗುಬ್ಬಿಗೆ ಬಂದು ಸಂಸ್ಥೆ ಶ್ರೇಯೋಭಿವೃದ್ಧಿಗೆ ಕಾರಣವಾದ ಆರಾಧ್ಯದೇವತೆ ಶ್ರೀ ಚನ್ನಬಸವೇಶ್ವರಸ್ವಾಮಿಯವರಿಗೆ ರುದ್ರಾಭಿಷೇಕ ಮಾಡಿಸಿ ಪ್ರತಿವರ್ಷವೂ ನಡೆಯುವ ಒಂದು ಸಾವಿರ ಜನರ ದಾಸೋಹಕ್ಕೆ ಬೇಕಾಗುವ ತಾಮ್ರದ ಪಾತ್ರೆಗಳನ್ನು ಕೊಡಿಸಿ, ಪ್ರತಿವರ್ಷವೂ ಉತ್ಸವ ನಡೆಸುತ್ತೇನೆಂದು ಸ್ವಾಮಿಗೆ ಬೇಡಿಕೊಂಡು ಬಂದು ನನ್ನ ಕಾರ್ಯವನ್ನು ಮುಂದುವರಿಸಲು ತೊಡಗಿದೆನು.

ಈ ಸುವರ್ಣಮಹೋತ್ಸವದ ಜ್ಞಾಪಕಾರ್ಥವಾಗಿ ನಮ್ಮ ಕಂಪನಿಯ ಮ್ಯಾನೇಜರ್ ಆಗಿದ್ದ ಎಸ್.ಪಿ. ನರಸಿಂಹಮೂರ್ತಿ ಎಂ.ಎ. ರವರು ಸಂಸ್ಥೆಯ ಜೀವನಚರಿತ್ರೆಯನ್ನೊಳಗೊಂಡ ಕೈಪಿಡಿಯನ್ನು ಪ್ರಿಂಟ್ ಮಾಡಿಸಿದರು. ಸುವರ್ಣಮಹೋತ್ಸವವು ನಡೆದ ವಿಜೃಂಭಣೆ, ವೈಖರಿ, ವೈಭವ ಇವುಗಳನ್ನು ಆ ದಿನ ನಡೆದಂತೆಯೇ ಬರೆಯಲು ಹೋದರೆ ನನ್ನನ್ನು ನಾನೇ ಹೊಗಳಿಕೊಂಡಂತಾಗುತ್ತದೆಂದು ಅದರ ಸಂಬಂಧದ ಬರೆವಣಿಗೆಯನ್ನು ನಿಲ್ಲಿಸಿರುತ್ತೇನೆ.

ಕುರುಕ್ಷೇತ್ರ ನಾಟಕಕ್ಕೆ ಸೀನರಿಗಳನ್ನು ತಯಾರಿಸಿದ ಚಿತ್ರಗಾರರಾದ ಪೇಯಿನ್‌ಟರ್ ಶ್ಯಾಮಲಾಲ್‌ರವರನ್ನು ಮಾತ್ರ ಸದಾ ನೆನಪುಮಾಡಿಕೊಳ್ಳುತ್ತೇನೆ. ಅಂತಹ ಉತ್ತಮ ಚಿತ್ರಗಾರರನ್ನು ಅಂದರೆ ಸೀನರಿಗಳನ್ನು ಬರೆಯುವವರನ್ನು, ತಯಾರ್ಮಾಡಿಸುವವರನ್ನು ಈವರೆವಿಗೂ ಪುನಃ ನೋಡಲೇ ಇಲ್ಲ. ಎಲ್ಲಾ ಸೀನರಿಗಳನ್ನೂ ತಯಾರುಮಾಡಿ, ಕುರುಕ್ಷೇತ್ರ ನಾಟಕ ಆಡಬೇಕೆನ್ನುವಷ್ಟರಲ್ಲಿಯೇ ಶಾಮಲಾಲ್‌ರವರು ಜಲೋದರ ರೋಗದಿಂದ ನರಳಿ ಮೃತರಾದರೆಂಬುದನ್ನು ತಿಳಿಸಲು ತುಂಬಾ ವ್ಯಸನವಾಗುತ್ತದೆ. ಕುರುಕ್ಷೇತ್ರ ನಾಟಕವನ್ನು ತಯಾರ್ಮಾಡಲು ನಮ್ಮಲ್ಲಿದ್ದ ಸೀನರಿ, ಡ್ರೆಸ್ಸು ವಗೈರೆಗಳು ಅಲ್ಲದೆ ಹೊಸದಾಗಿ ಮಾಡಿದ ಸಾಮಾನು ವಗೈರೆಗಳಿಗೆ ಎಪ್ಪತ್ತೈದು ಸಹಸ್ರ ರೂಪಾಯಿಗಳು ಖರ್ಚಾಗಿದ್ದವೆಂದು ಹೇಳಿದರೆ ಅತಿಶಯದಾಗಲಾರದು. ಅದೇ ಸಂದರ್ಭದಲ್ಲಿ ಕವಿಗಳಾದ ಶ್ರೀ ಬಿ. ಪುಟ್ಟಸ್ವಾಮಯ್ಯನವರಿಗೆ ಒಂದು ಸಾವಿರದ ಇನ್ನೂರು ರೂಪಾಯಿಗಳನ್ನು ಬಹುಮಾನರೂಪವಾಗಿ ಕೊಡಲಾಯಿತು. ಆಗಿನಿಂದ ನಮ್ಮ ಸಂಘದಲ್ಲಿ ಪ್ರತಿನಿತ್ಯವೂ ನಾಟಕಗಳನ್ನಾಡಲು ಪ್ರಾರಂಭವಾಯಿತು. ನಮ್ಮ ಸಂಸ್ಥೆಯನ್ನನುಸರಿಸಿ ಎಲ್ಲಾ ನಾಟಕ ಸಂಸ್ಥೆಯವರೂ ಪ್ರತಿದಿನವೂ ನಾಟಕವನ್ನಾಡಲು ಆರಂಭಿಸಿದರು. ಆಗ ಬೆಂಗಳೂರಿನಲ್ಲಿರುವ ಕಬ್ಬನ್‌ಪೇಟೆ ಶ್ರೀ ಚೌಡೇಶ್ವರಿ ದೇವಸ್ಥಾನದ ಸಂಘದವರಿಗೆ ಶ್ರೀ ಗುಂಡಣ್ಣನವರ ಮುಂದಾಳತ್ವದಲ್ಲಿ ಒಂದು ಬೆನಿಫಿಟ್ ನಾಟಕವಾಡಿ ಅದರಲ್ಲಿ ಉತ್ಪತ್ತಿಯಾದ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟೆವು.

ಕುರುಕ್ಷೇತ್ರ ನಾಟಕದ ಆರಂಭಕಾಲಕ್ಕೆ ನಾನು ಸ್ಥಾಪಿಸಿದ್ದ ಬ್ರಾಂಚ್ ಕಂಪನಿ ನಡೆದು ಹತ್ತು ವರ್ಷಗಳಾಗಿತ್ತು. ಆ ಕಂಪನಿಯು ಅವಿಚ್ಛಿನ್ನವಾಗಿ ಮೈಸೂರು ಪ್ರಾಂತ್ಯವಲ್ಲದೆ ಮದ್ರಾಸು, ಬಳ್ಳಾರಿ, ಕಡಪ, ಕರ್ನೂಲ್, ರಾಯಚೂರು ವಗೈರೆ ಎಲ್ಲಾ ಕಡೆ ಸಂಚರಿಸಿ ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ನಾಟಕಗಳನ್ನಾಡಿ ಅವರ ಕೃಪೆಗೂ, ಮಹಾಜನರ ಮನ್ನಣೆಗೂ ಪಾತ್ರರಾಗಿ ಕೀರ್ತಿಗಳಿಸಿತೆಂದು ತಿಳಿಸಲು ತುಂಬಾ ಸಂತೋಷಿಸುತ್ತೇನೆ. ಕುರುಕ್ಷೇತ್ರ ನಾಟಕಕ್ಕೆ ಹೆಚ್ಚು ಜನರ ಅವಶ್ಯಕತೆಯಿದ್ದುದರಿಂದ ಮೇಲ್ಕಂಡ ಬ್ರಾಂಚ್ ಕಂಪನಿಯನ್ನು ದೊಡ್ಡ ಕಂಪನಿಗೇ ಸೇರಿಸಿಕೊಂಡೆನು. ಬೆಂಗಳೂರು ನಗರದಲ್ಲಿ ಕುರುಕ್ಷೇತ್ರ ಕ್ಯಾಂಪು ಮುಗಿಸಿಕೊಂಡು ಕಡೂರಿನಲ್ಲಿ ಕ್ಯಾಂಪು ಹಾಕಿದ್ದೆವು. ಆ ಸಮಯದಲ್ಲಿ ಜಿ. ಸುಂದರಮ್ಮನಿಗೆ ತಾ. ೧೬.೩.೩೫ರಲ್ಲಿ ಬೆಂಗಳೂರಿನಲ್ಲಿ ಗಂಡುಮಗು ಹುಟ್ಟಿತು. ಅದಕ್ಕೆ ಶಿವಾನಂದಸ್ವಾಮಿಯೆಂದು ನಾಮಕರಣ ಮಾಡಿದೆವು.

ಕನಸು ನನಸಾಯಿತು

ನಂತರ ಸಾಗರ ಕ್ಯಾಂಪು ಮಾಡಿದಾಗ್ಗೆ ಸದಾರಮೆ ನಾಟಕವನ್ನು ಚಿತ್ರ ತೆಗೆಯಲು ಕಂಟ್ರಾಕ್ಟು ಒಪ್ಪಿ ಜೂನ್ ತಿಂಗಳಿನಲ್ಲಿ ಬೊಂಬಾಯಿಗೆ ಪ್ರಯಾಣ ಮಾಡಿದೆವು. ಪುನಃ ಕಂಪನಿಯನ್ನು ಶಿವಮೊಗ್ಗ ಕ್ಯಾಂಪು ಮಾಡಿಸಿ ಸರಿಯಾದ ಸಲಹೆಯನ್ನು ಕೊಡಲು ಮ್ಯಾನೆಜರ್ ನರಸಿಂಹಮೂರ್ತಿಯವರಿಗೆ ಹೇಳಿ ನಾನು ಬೊಂಬಾಯಿಗೆ ಹೋದೆನು. ಕೊಯಮತ್ತೂರಿನ ಶಕುಂತಲಾ ಪಿಕ್ಚರ್ಸ್‌ನ ಷಣ್ಮುಖ ಚೆಟ್ಟಿಯಾರ್‌ರವರಿಗೂ ನನಗೂ ಸದಾರಮೆ ಚಿತ್ರ ತೆಗೆಯಲು ೪೦,೦೦೦/- ರೂಪಾಯಿಗಳಿಗೆ ಒಪ್ಪಂದವಾಗಿ ೧೦,೦೦೦/- ರೂಪಾಯಿಗಳ ಅಡ್ವಾನ್ಸ್ ತೆಗೆದುಕೊಂಡು ಸದಾರಮೆ ಚಿತ್ರ ತೆಗೆಯಲು ಪ್ರಾರಂಭಿಸಿದೆವು. ದಾದರ್‌ನಲ್ಲಿ ವಾಸಕ್ಕಾಗಿ ದೊಡ್ಡ ಬಂಗಲೆಯನ್ನು ತೆಗೆದುಕೊಂಡಿದ್ದೆನು. ಚಿತ್ರದ ವ್ಯವಹಾರ ಅಷ್ಟು ಚೆನ್ನಾಗಿ ಗೊತ್ತಿರಲಿಲ್ಲವಾದ್ದರಿಂದ ತುಂಬಾ ಕಡಮೆ ಮೊಬಲಗಿಗೆ ಒಪ್ಪಿಕೊಂಡು ಲಾಭ ಇಲ್ಲವಾದರೂ ಏನೋ ಒಂದ ಹುಮ್ಮಸ್ಸಿನಿಂದ ಒಪ್ಪಿ ನಾಲ್ಕು - ಐದು ತಿಂಗಳಲ್ಲಿ ಚಿತ್ರವನ್ನೂ ಪೂರ್ತಿಮಾಡಿಕೊಟ್ಟೆವು. ಕುರ್ಲೆವಗೈರೆ ಸ್ಥಳಗಳಿಗೆ ಔಟ್‌ಡೋರ್ ಶೂಟಿಂಗಿಗೆ ಹೋಗಿದ್ದೆವು. ಆಗ ರಿಕಾರ್ಡಿಂಗ್ ಇರಲಿಲ್ಲ. ನಟರುಗಳ ಜೊತೆಯಲ್ಲಿಯೇ ವಾದ್ಯದವರು ಹಿಂದೆ ಹಿಂದೆಯೇ ಹೋಗ ಬಾರಿಸುತ್ತಿದ್ದರು. ನಟರುಗಳಾಗಲೀ, ನಟಿಯರಾಗಲೀ ಸ್ವಂತ ಹಾಡಿಕೊಂಡೇ ಅಭಿನಯಿಸಬೇಕಾಗುತ್ತಿತ್ತು. ಇದು ಅಂದು ಚಿತ್ರ ತೆಗೆಯುತ್ತಿದ್ದ ರೀತಿ. ಪ್ರಡ್ಯೂಸರ್‌ರವರಿಗೂ, ನಮಗೂ ಯಾವ ತಕರಾರೂ ಇಲ್ಲದೆ ವಿಶ್ವಾಸದಿಂದ ಅವರನ್ನು ಬೀಳ್ಕೊಟ್ಟು ನಮ್ಮ ಸಂಸ್ಥೆ ಎರಡು ಮೂರು ಸದಾರಮೆ ನಾಟಕವಾಡಿದೆವು. ಅನಂತರ ಅಲ್ಲಿನ ಬಾಲೀವಾಲ ಥಿಯೇಟರನ್ನು ತಿಂಗಳಿಗೆ ೩೦೦೦/- ರೂ.ಗಳಂತೆ ಬಾಡಿಗೆಗೆ ಗೊತ್ತು ಮಾಡಿಕೊಂಡು ದಾವಣಗೆರೆಯಿಂದ ಕುರುಕ್ಷೇತ್ರ ನಾಟಕದ ಸಾಮಾನನ್ನು ಬೊಂಬಾಯಿಗೆ ತರಿಸಿಕೊಂಡು ಕುರುಕ್ಷೇತ್ರ, ಕೃಷ್ಣಲೀಲೆ ನಾಟಕಗಳನ್ನಾಡಿದೆವು. ಬೊಂಬಾಯಿ ಕರ್ನಾಟಕ ಸಂಘಕ್ಕೆ ಬೆನಿಫಿಟ್ ನಾಟಕವೊಂದನ್ನು ಆಡಿ ಬಂದ ಮೂರು ಸಾವಿರ ರೂಪಾಯಿಗಳನ್ನು ಕರ್ನಾಟಕ ಸಂಘಕ್ಕೆ ಕೊಟ್ಟೆವು. ಅವರೂ ಸಹ ನಮ್ಮ ನಾಟಕವನ್ನು ಬಹುವಾಗಿ ಮೆಚ್ಚಿ ದಿವಾನ್ ಬಹದ್ದೂರ್ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಬಂಗಾರದ ಪದಕವೊಂದನ್ನು ಬಹುಮಾನಿಸಿದರು.

ಈ ಮಧ್ಯೆ ಮೈಸೂರು ದಿವಾನರಾ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರವರು ಕೆಂಪೇಗೌಡ ರಸ್ತೆಯಲ್ಲಿರುವ ಸಾಗರ್ ಟಾಕೀಸ್ ಕಟ್ಟಡವನ್ನು ಕಟ್ಟಲು ಸ್ಥಳವನ್ನು ಸರಕಾರದವರಿಂದ ಹದಿನಾರು ಸಾವಿರ ರೂಪಾಯಿಗಳ ಖರೀದಿಗೆ ಕೊಡಿಸಿ ವರ್ಷ ಒಂದಕ್ಕೆ ಮೂರುಸಾವಿರ ರೂಪಾಯಿಗಳನ್ನು ಕಂತು ಪ್ರಕಾರ ಕೊಡುವಂತೆ ಗೊತ್ತುಮಾಡಿ ಕೊಡಿಸಿಕೊಟ್ಟರು. ಬಡ್ಡಿ ಸಹಿತ ಐದು ವರ್ಷದಲ್ಲಿ ಹತ್ತೊಂಬತ್ತು ಸಾವಿರ ರೂಪಾಯಿಗಳನ್ನು ಕೊಟ್ಟೆ. ಡಾಕ್ಟರ್ ಅಂಬಾಲಾಲ್ ಪಟೇಲ್‌ರವರಿಂದ ನಲವತ್ತು ಸಾವಿರ ರೂಪಾಯಿಗಳ ಅಡ್ವಾನ್ಸ್ ತೆಗೆದುಕೊಂಡು, ಶ್ರೀಚನ್ನಬಸವೇಶ್ವರ ಸ್ವಾಮಿ ಪೂಜೆ ಮಾಡಿಸಿಕೊಂಡು ಬಂದು

ಸುಮುಹೂರ್ತದಲ್ಲಿ ಥಿಯೇಟರಿನ ಅಸ್ತಿಭಾರ ಹಾಕಿ ಕೆಲಸ ಪ್ರಾರಂಭಿಸಿದೆವು - 'ಕುರುಕ್ಷೇತ್ರ' ನಾಟಕವನ್ನು ಆಡುವ ಮೊದಲೇ ಕಟ್ಟಲು ಆರಂಭಿಸಿ ಮಧ್ಯೆ ಮಧ್ಯೆ ನಿಲ್ಲಿಸುವುದು, ಪುನಃ ಕಟ್ಟುವುದು ಹೀಗಾಗಿ ಬಹಳ ತೊಂದರೆಗಳನ್ನನುಭವಿಸಿ ಮೂರು ನಾಲ್ಕು ಜನಗಳ ಕೈಗಳು ಬದಲಾಯಿಸಿ ಕೊನೆಗೆ ೧೦೩೫ನೇ ಡಿಸೆಂಬರ್ ತಿಂಗಳಲ್ಲಿ ಕಟ್ಟಡ ಪೂರೈಸಿ ಡಾಕ್ಟರ್ ಅಂಬಾಲಾಲ್ ಪಟೇಲ್‌ರವರಿಂದ ಟಾಕೀ ಚಿತ್ರವೂ ನಡೆಯಲಾರಂಭವಾಯಿತು. ಕಟ್ಟಡವನ್ನು ಕಟ್ಟುವಾಗ ಹಣದ ತೊಂದರೆಯಂತೂ ಹೇಳತೀರದಷ್ಟಾಯಿತು. ಅದಕ್ಕಾಗಿ ನಾನು ಪಟ್ಟ ಶ್ರಮ, ಅದಕ್ಕಾಗಿ ಜನರು ನನಗೆ ಮಾಡಿದ ವಂಚನೆ, ಅವುಗಳು ಆಯಾಯಾ ಕಾಲದಲ್ಲಿಯೇ ಬಗೆಹರಿದ ಅನುಕೂಲ ಸಂದರ್ಭಗಳನ್ನು ನೆನೆದಷ್ಟೂ ಆಶ್ಚರ್ಯಕರವಾಗಿವೆ. ಈ ಸಂದರ್ಭದಲ್ಲಿ ಒಂದು ಅಪೂರ್ವ ಘಟನೆಯು ನೆನಪಿಗೆ ಬರುತ್ತಿದೆ - ಮಧುರೆಯಲ್ಲಿ ಕ್ಯಾಂಪು ಮಾಡಲಾಗಿತ್ತು. ಸಾಗರ್ ಟಾಕೀಸ್ ಕಟ್ಟಡದ ಕೆಲಸಕ್ಕಾಗಿ ಆಗಲೇ ನಗರದ ಪ್ರಮುಖ ಗುಜರಾತಿ ವ್ಯಾಪಾರಿಗಳಲ್ಲೊಬ್ಬರಲ್ಲಿ ೮೦,೦೦೦ ರೂ.ಗಳ ಸಾಲವಾಗಿತ್ತು ಕಟ್ಟಡದ ಕೆಲಸ ಅರ್ಧಭಾಗವಾಗಿದ್ದಾಗ ಹಣದ ಅಡಚಣೆಯಿಂದ ನಿಲ್ಲಿಸಬೇಕಾದ ಸಂದರ್ಭ ಬಂದಿತು. ಆಗ ಮೇಲ್ಕಂಡ ವ್ಯಾಪಾರಿಗಳಲ್ಲಿ ಹೋಗಿ ಸಂದರ್ಭವನ್ನು ವಿವರಿಸಿ ಇನ್ನೂ ಹಣ ಬೇಕಾಗುತೆಂದೂ, ಸಹಾಯಮಾಡಬೇಕೆಂದೂ ಕೇಳಿಕೊಂಡೆ. ಆಗ ಅವರು ಸಾಗರ್ ಟಾಕೀಸ್‌ನ್ನು ಕಂಡೀಷನ್ ಸೇಲಿಗೆ ಬರೆದುಕೊಡುವ ಹಾಗಿದ್ದಲ್ಲಿ ಕೊಡುತ್ತೇನೆಂದು ತಿಳಿಸಿದರು. ಅದಕ್ಕೆ ನಾನು ಒಪ್ಪಲಿಲ್ಲವಾಗಿ ಈ ಹಣವನ್ನು ವಾಪಸ್ ಕೊಡಬೇಕೆಂದು ಒತ್ತಾಯಮಾಡಿದರು. ಆಗ ನಾನು ಬಹಳ ನಿರುತ್ಸಾಹಗೊಂಡು ಬಹಳವಾಗಿ ವ್ಯಥೆಪಟ್ಟುಕೊಂಡು ಕಂಪನಿಯಿದ್ದ ಮಧುರೆಗೆ ರೈಲಿನಲ್ಲಿ ಹೋಗುತ್ತಿದ್ದೆ. ಮಧುರೆಯಲ್ಲಿ ಕಾಂಪ್ಲಿಮೆಂಟರಿ ಮೂಲಕ ಸ್ನೇಹಿತರಾಗಿದ್ದ ಸಹ ಪ್ರಯಾಣಿಕರಾದ ಒಬ್ಬ ಮುಸಲ್ಮಾನ ವರ್ತಕರು ಏನು ಯಾವುದೋ ಬಹಳ ಗಾಢವಾದ ಯೋಚನೆಯಲ್ಲಿದ್ದೀರಿ - ಏನು ವಿಚಾರ ಕೇಳಬಹುದೇ ಎಂದರು. ಆಗ ನನಗೆ ಒದಗಿದ್ದ ಪರಿಸ್ಥಿತಿಯನ್ನು ವಿವರಿಸಿ ಹೇಳಿದೆ. ಎಷ್ಟು ಹಣ ಸಾಲಕೊಡಬೇಕಾಗಿದೆ ಎಂದರು. ನಾನು ೮೦,೦೦೦ರೂ.ಗಳು ಸಾಲಕೊಡಬೇಕಾಗಿದೆ, ಅಲ್ಲದೆ ಕೆಲಸ ಮುಂದುವರಿಸಲು ೪೦,೦೦೦ರೂ.ಗಳಾದರೂ ಬೇಕು, ಒಟ್ಟು ಒಂದು ಲಕ್ಷ ಹಣವಾದರೂ ಬೇಕಾಗುತ್ತದೆ ಎಂದೆ. ಅವರು ಕ್ಷಣಕಾಲ ಯೋಚಿಸಿ ಒಂದು ವಾರ ಅವಕಾಶ ಕೊಡಿ - ಒಂದು ಲಕ್ಷ ಕೊಡುತ್ತೇನೆ. ಆದರೆ ಒಂದು ವೇಳೆ ನೀವು ನಿರಾಕರಿಸಿದರೆ ಆರು ತಿಂಗಳ ಬಡ್ಡಿ ಕೊಡಬೇಕಾಗುತ್ತದೆ ಎಂದು ಹೇಳಿದರು. ನನ್ನ ಕಿವಿಗಳನ್ನು ನಾನೇ ನಂಬಲಿಲ್ಲ. ಅವರ ಷರತ್ತಿಗೆ ಒಪ್ಪಿ ನನ್ನ ವಿಳಾಸವನ್ನು ಕೊಟ್ಟೆ. ಅದಾದ ಐದು ಆರು ದಿನಗಳಲ್ಲಿ ಒಂದು ಲಕ್ಷ ಹಣವನ್ನು ಮಹನೀಯರು ತಂದುಕೊಟ್ಟರು - ಆ ಹಣವನ್ನು ಮೊದಲು ಸಾಲಮಾಡಿದ್ದ ಗುಜರಾತಿ ವರ್ತಕರ ಬಳಿ ತೆಗೆದುಕೊಂಡು ಕೊಡಲು ಹೋದಾಗ ಅವರು ಬಹುವಾಗಿ ಆಶ್ಚರ್ಯಪಟ್ಟು ಎಲ್ಲಿಂದ ತಂದಿರಿ ಎಂದು ಕೇಳಿದರು. ಭಗವಂತ ದೊಡ್ಡವನು, ಕೊಡಿಸಿದ ಎಂದು ಹೇಳಿದೆ. ಆದರೆ ಅವರು ತೆಗೆದುಕೊಳ್ಳಲು ಒಪ್ಪಲಿಲ್ಲ. ಆಗ ಕೋರ್ಟಿನಲ್ಲಿ ಕಟ್ಟಿ ಅವರಿಂದ ಋಣ ಮುಕ್ತನಾಗಬೇಕಾಯ್ತು - ಅಂತ ಸಂದರ್ಭದಲ್ಲಿ ಸಹಾಯ ಮಾಡಿದ ಆ ಮುಸಲ್ಮಾನ ಬಂಧುವನ್ನು ಜನ್ಮಜನ್ಮಾಂತರಕ್ಕೂ ನೆನೆಸಿಕೊಳ್ಳಬೇಕಾಗಿದೆ. ಈ ರೀತಿ

ಅಡಚಣೆಗಳನ್ನು ಎದುರಿಸಿಕೊಂಡು ಬಂದು ಸಾಗರ್ ಟಾಕೀಸ್ ಕಟ್ಟಡ ಕಟ್ಟುವುದರೊಳಗೆ ಒಂದು ಎಪ್ಪತ್ತೈದು ಸಾವಿರ ರೂಪಾಯಿಗಳ ಸಾಲಗಾರನಾದೆ. ಆದರೂ ನನ್ನ ಮನಸ್ಸಿಗೆ ಒಂದು ವಿಧವಾದ ಸಂತೋಷವೇನೆಂದರೆ ಹಿಂದೆ ನಾನು ಶ್ರೀಚಂದಣ್ಣನವರಲ್ಲಿ ಸಂಬಳದ ನೌಕರನಾಗಿದ್ದಾಗ್ಗೆ ತಿರುಕನ ಕನಸಿನಂತೆ ನಾನೂ ಒಂದು ನಾಟಕದ ಕಂಪನಿ ಮಾಡಬೇಕೆಂದು ಹಂಬಲಿಸುತ್ತಿದ್ದೆ. ಬಹುದಿನಗಳು ಕನಸು ಮನಸುಗಳಲ್ಲಿಯೇ ಮಂಡಿಗೆ ಹಾಕುತ್ತಿದ್ದೆ. ಶ್ರೀ ಚೆನ್ನಬಸವೇಶ್ವರ ಸ್ವಾಮಿಯು ನನಸಾಗಿ ಮಾಡಿ, ನನ್ನ ಮನಸ್ಸಿನಂತೆ ನಾಟಕ ಸಂಸ್ಥೆಯಾಯಿತು. ಮಧುರೆ ಒರಿಜಿನಲ್ ಬಾಯ್ಸ್ ನಾಟಕ ಕಂಪೆನಿ ಬೆಂಗಳೂರು ತುಳಿಸೀತೋಟದಲ್ಲಿ ನಾಟಕಗಳನ್ನಾಡುತ್ತಿದ್ದಾಗ, ಅದನ್ನು ನೋಡಿ ನಾನು ಒಂದು ಸಣ್ಣ ಹುಡುಗರ ಸಂಸ್ಥೆಯನ್ನು ಪ್ರಾರಂಭಿಸಬೇಕೆಂದು ಬಯಸಿದೆ, ಪರಮಾತ್ಮ ಅದನ್ನೂ ನೆರವೇರಿಸಿದ. ಒಂದು ಜಟಕಾ ತೆಗೆದುಕೊಳ್ಳಬೇಕೆಂದು ಅದಕ್ಕೂ ಅವಕಾಶವಾಯಿತು. ಮೋಟಾರು ತೆಗೆಯಬೇಕೆಂದು ಆಸೆಯಾಯಿತು. ೧೯೨೭ರಲ್ಲಿ ಆ ಕಾರ್ಯವನ್ನು ದೇವರು ನೆರವೇರಿಸಿಕೊಟ್ಟ. ನಾನು ನಾಟಕವಾಯಡುವ ಕಸುಬಿನವನಾಗಿ ಸ್ವಂತಕ್ಕೆ ಒಂದು ನಾಟಕಮಂದಿರವಿರಲಿಲ್ಲ ಎಂದು ಪೇಚಾಡಿದೆ. ಭಗವಂತನು ಅದನ್ನೂ ನೆರವೇಸಿಕೊಟ್ಟ. ಇಷ್ಟೆಲ್ಲವೂ ೧೯೧೭ರಿಂದ ೧೯೩೫ನೇ ಇಸ್ವಿಯೊಳಗೆ, ಭಗವಂತನ ಕೃಪೆಯಿಂದ ಈಡೇರಿದವು. ೧೯೧೭ರಲ್ಲಿ ಸ್ವಂತ ಸಂಸ್ಥೆ ೧೯೨೪ರಲ್ಲಿ ಗುಬ್ಬಿ ಶ್ರೀಚೆನ್ನಬಸವೇಶ್ವರ ನಾಟಕ ಶಾಲೆ (ಈಗಿನ ಗೀತಾ ಚಿತ್ರಮಂದಿರ) ೧೯೨೫ರಲ್ಲಿ ಜಟ್ಕಾ, ೧೯೨೫ರಲ್ಲಿಯೇ ಬಾಲ ಕಲಾವಿವರ್ಧಿನಿ ಎಂಬ ಹೆಸರಿನಲ್ಲಿ ಸಣ್ಣ ಹುಡುಗರ ಸಂಸ್ಥೆ, ೧೯೨೭ರಲ್ಲಿ ಶಿವಮೊಗ್ಗ ಮರುಳ ಸಿದ್ಧಯ್ಯನವರಿಂದ ಮೋಟಾರು ಕಾರು, ೧೦೩೦ರಲ್ಲಿ ಶಿವಾನಂದ ಥಿಯೇಟರ್ ಹೆಸರಿನ ಮತ್ತೊಂದು ನಾಟಕ ಮಂದಿರ (ಈಗಿನ ಮೂವಿಲ್ಯಾಂಡ್ ಚಿತ್ರಮಂದಿರ) ೧೯೩೫ರಲ್ಲಿ ಸಾಗರ್ ಟಾಕೀಸ್ ಕಟ್ಟಡವಾಯಿತು.

ಸಾಗರ್ ಟಾಕೀಸಿನಲ್ಲಿ ಮೊಟ್ಟ ಮೊದಲನೆಯದಾಗಿ ಡಾಕ್ಟರ್ ಎಂಬ ಚಿತ್ರವನ್ನು ತೋರಿಸಿದರು. ಆ ದಿನದ ಸಮಾರಂಭದಲ್ಲಿ ಬೊಂಬಾಯಿಂದ ಮೋತೀಲಾಲ್, ಗೋಹರ್‌ಜಾನ್ ಮೊದಲಾದ ಚಿತ್ರನಟರು ಭಾಗವಹಿಸಿದ್ದರು. ಆ ಸಮಯದಲ್ಲಿ ನಾನು ತೆಗೆದಿದ್ದ ಹಿಸ್ ಲೌ ಅಫೇರ್ (His Love Affair) ಮೂಕ ಚಿತ್ರವನ್ನು ಬೊಂಬಾಯಿ ನಟರುಗಳ ಮುಂದೆ ತರಲಾಯಿತು. ಅದನ್ನು ನಟರುಗಳು ನೋಡಿ ತುಂಬಾ ಮೆಚ್ಚಿಕೊಂಡರು.

ಗುಬ್ಬಿ ಗರುಡನ ಮೇಲೆ ಹಾರಿತು

ಆ ಸಮಯದಲ್ಲಿ ಸರ್ಪಭೂಷಣಸ್ವಾಮಿ ಮಠದ ಆವರಣದಲ್ಲಿ ಕಟ್ಟಿದ್ದ ಚೆನ್ನಬಸವೇಶ್ವರ ಸ್ವಾಮಿ ಥಿಯೇಟರ್‌ಗೆ (ಸೆಲೆಕ್ಟ್ ಟಾಕೀಸ್ ನಂತರ ಗೀತಾ ಟಾಕೀಸ್) ತಿಂಗಳೊಂದಕ್ಕೆ ೬೦೦ ರೂ.ಗಳಂತೆಯೂ, ಸಾಗರ್ ಟಾಕೀಸಿಗೆ ೯೦೦ ರೂ.ಗಳಂತೆಯೂ ಬಾಡಿಗೆ ನಿಷ್ಕರ್ಷೆಮಾಡಿ ಡಾ. ಅಂಬಾಲಾಲ್ ಪಟೇಲರಿಗೆ ಕೊಟ್ಟೆನು.

ನಮ್ಮ ಕಂಪನಿ ಬೊಂಬಾಯಿಂದ ಬಿಜಾಪುರಕ್ಕೆ ಬಂದು ಅಲ್ಲಿ ಛತ್ರಿಯವರು ಕಟ್ಟಿದ್ದ ನಾಟಕಮಂದಿರದಲ್ಲಿ ಕುರುಕ್ಷೇತ್ರ ನಾಟಕಗಳನ್ನಾಡಿಕೊಂಡು ೧೯೩೬ನೇ ಜನವರಿ ಮಾಹೆಯಲ್ಲಿ ಸಿದ್ಧರಾಮೇಶ್ವರನ ಜಾತ್ರೆಗೆ ಸೊಲ್ಲಾಪುರಕ್ಕೆ (Sholapur) ಬಂದು ಅಲ್ಲಿದ್ದ ಮೆಕಾಸಿಕ್ ಥಿಯೇಟರು ಚಿಕ್ಕದಾಗಲು ಹಿಂಬಾಗದ ಗೋಡೆ ಒಡೆದು ದೊಡ್ಡದು ಮಾಡಿಕೊಂಡು ಕುರುಕ್ಷೇತ್ರ ನಾಟಕವನ್ನಾಡಿದೆವು. ಅಲ್ಲಿ ಮಹಾಜನರು ನಮ್ಮ ನಾಟಕವನ್ನು ನೋಡಿ ಬಹುವಾಗಿ ಮೆಚ್ಚಿ ಒಂದು ಬೆಳ್ಳಿಯ ಕರಂಡವನ್ನೂ, ಶ್ರೀ ಸಿದ್ಧರಾಮೇಶ್ವರಸ್ವಾಮಿಯ ದೊಡ್ಡ ತೈಲಚಿತ್ರವನ್ನೂ ಶ್ರೀ ಅಬ್ದುಲ್ ಪೂರ್‌ಕರ್‌ರವರ ಅಧ್ಯಕ್ಷತೆಯಲ್ಲಿ ಬಹುಮಾನಿಸಿದರು. ಶ್ರೀ ಅಬ್ದುಲ್ ಪೂರ್‌ಕರ್‌ರವರು ವೀರಶೈವ ಮತದವರು. ಆ ದಿನದ ಸಮಾರಂಭದಲ್ಲಿ ನಾನು ಅವರನ್ನು ಗಫಾರ್‌ಖಾನ್ ಎಂದು ಕರೆದಿದ್ದೆ. ಅದೇ ಊರಿನ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಬೆನೆಫಿಟ್ ನಾಟಕವೊಂದನ್ನಾಡಿ ಬಂದ ೧೫೦೦ರೂ.ಗಳನ್ನು ಕೊಟ್ಟೆವು.

ಸೊಲ್ಲಾಪುರದಿಂದ ಸಂಘದವರೆಲ್ಲರೂ ಪಂಡರಾಪುರಕ್ಕೆ ಹೋಗಿ ಚಂದ್ರಭಾಗಾನದಿಯಲ್ಲಿ ಮಿಂದು ಪಂಡರಿನಾಥನ ದರ್ಶನ, ಸೇವೆಯನ್ನು ಮಾಡಿ ಬಾಗಲಕೋಟೆಗೆ ಬಂದು ಅಲ್ಲಿನ ಶಿವಾನಂದ ಥಿಯೇಟರಿನಲ್ಲಿ ನಾಟಕಗಳನ್ನಾಡಿದೆವು ಅಲ್ಲಿನ ಶಿವಯೋಗ ಮಂದಿರಕ್ಕೆ ಹೋಗಿ ಘಟಪ್ರಭಾದಲ್ಲಿ ಸ್ನಾನಮಾಡಿ ಮಹಾಶಿವರಾತ್ರಿ ವ್ರತವನ್ನಾಚರಿಸಿ ಶಿವಕುಮಾರಸ್ವಾಮಿಗಳ ಪಾದಸಂದರ್ಶನ ಆಶೀರ್ವಾದಗಳನ್ನು ಪಡೆದು ರಬಕವಿಯಲ್ಲಿ ನಾಟಕವಾಡಿ ಮುಂದೆ ಹುಬ್ಬಳ್ಳಿ ಕ್ಯಾಂಪು ಮಾಡಿದೆವು.

ಹುಬ್ಬಳ್ಳಿಯಲ್ಲಿದ್ದ ಮಲ್ಲಿಕಾರ್ಜುನ ಥಿಯೇಟರ್ ಸಾಲದೆ ಹೋದುದರಿಂದ ಶ್ರೀ ಡಿ. ಗುರುನಾಥಪ್ಪನವರ ಸಹಾಯದಿಂದ ಅವರ ಸ್ಥಳದಲ್ಲಿ ಬೇರೆ ಹೊಸದಾಗಿ ಟೆಂಪರರಿಯಾದ ಥಿಯೇಟರನ್ನು ಕಟ್ಟಿಸಿ ಮಲ್ಲಿಕಾರ್ಜುನ ಥಿಯೇಟರನ್ನು ವಾಸಕ್ಕಾಗಿ ತೆಗೆದುಕೊಂಡು ಕುರುಕ್ಷೇತ್ರ ನಾಟಕದ ಪ್ರಚಾರ ಮಾಡಿದೆವು. ಎಲೆಕ್ಟ್ರಿಕ್ ಲೈಸೆನ್ಸ್ ಬಾರದೆ ನಾವು ಪ್ರಚಾರ ಮಾಡಿದ ತಾರೀಖಿಗಿಂತ ಒಂದು ವಾರ ನಿಧಾನವಾಗಿ ನಾಟಕವಾಡಬೇಕಾಯ್ತು ಅಲ್ಲದೆ ಮಳೆಗಾಲವೂ ಆಯಿತು. ಆದರೂ ಪ್ರೇಕ್ಷಕರು ಗುಂಪು ಗುಂಪಾಗಿ ಬಂದು ಉತ್ಪತ್ತಿ ಬಹಳ ಚೆನ್ನಾಗಿ ಆಯಿತು. ಒಂದು ದಿನ ಕುರುಕ್ಷೇತ್ರ ನೋಡಲು ಜಯಕರ್ನಾಟಕದ ಸಂಪಾದಕರೂ, ಹಿರಿಯ ಸಾಹಿತಿಯೂ ಆದ ಆಲೂರು ವೆಂಕಟರಾಯರು, ಕೃಷ್ಣರಾಯರೂ, ತಿಮ್ಮಯ್ಯನವರು ಮತ್ತು ದತ್ತಾತ್ರೇಯ ಕಂಪನಿಯ ಒಡೆಯರಾದ ಗರೂಡ ಸದಾಶಿವರಾಯರು ರಂಗಭೂಮಿಯ

ಮೇಲೆ ಬಂದು ಇಂತಹ ಕಲಾವೈಭವದಿಂದೊಡಗೂಡಿದ ನಾಟಕ ಸಂಸ್ಥೆಯನ್ನು ಇದುವರೆಗೂ ಯಾರೂ ತಂದಿರಲಿಲ್ಲ. ನಾವು ನೋಡಿಯೂ ಇರಲಿಲ್ಲ. ಇಂದು ಗುಬ್ಬಿಯು ಗರುಡನ ಮೇಲ್ ಹಾರಿತು ಎಂದು ಹೇಳಿ ಮನಸಾರ ಹೊಗಳಿದರು.

ಅಲ್ಲಿಂದ ಗದುಗಿಗೆ ಹೋಗಿ ಅಲ್ಲಿನ ಮಹಾಲಕ್ಷ್ಮಿ ಥಿಯೇಟರಿನಲ್ಲಿ ನಾಟಕಗಳನ್ನಾಡಿ ಆ ಊರಿನವರಿಂದ ಬಂಗಾರದ ಪದಕವನ್ನು ಹೊಂದಿ, ಬಳ್ಳಾರಿ ಕೋಲಾಚಲಂ ವೆಂಕಟರಾಯರ ಬಂಗಲೆಯ ಆವರಣದಲ್ಲಿ ಥಿಯೇಟರ್ ಹಾಕಿ ನಾಟಕವನ್ನಾಡಿ, ಆದವಾನಿ ಬಲ್ಲೆಕಲ್ಲು ನರಸಪ್ಪನವರ ಸಿನೆಮಾ ಥಿಯೇಟರನ್ನು ದೊಡ್ಡದನ್ನಾಗಿ ಮಾಡಿ ಅಲ್ಲಿ ನಾಟಕಗಳನ್ನಾಡಿ ರಾಯಚೂರಿನಲ್ಲಿ ಥಿಯೇಟರ್ ಹಾಕಿಸಿ ಅಲ್ಲಿ ನಾಟಕಗಳನ್ನಾಡಿದೆವು. ಅಲ್ಲಿಯ ಬಸವೇಶ್ವರಸ್ವಾಮಿ ದೇವಸ್ಥಾನಕ್ಕೆ ಬೆನಿಫಿಟ್ ನಾಟಕವನ್ನಾಡಿ ೧೦೦೧ ರೂ.ಗಳನ್ನು ಕೊಟ್ಟು ಗುಲ್‌ಬರ್ಗಕ್ಕೆ ಹೋಗಲು ಲೈಸೆನ್ಸ್ ಸಿಕ್ಕುವುದು ಸಾವಕಾಶವಾದ್ದರಿಂದ ಕರ್ನೂಲ್‌ಗೆ ಹೋಗಿ ಥಿಯೇಟರ್ ಹಾಕಿಕೊಂಡು ನಾಟಕವಾಡಿದೆವು.

ಕರ್ನೂಲ್ ದೊಡ್ಡ ಪಟ್ಟಣವಾದರೂ ತೆಲುಗುರಾಜ್ಯ. ಕನ್ನಡಭಾಷೆ ತುಂಬಾ ಕಡಿಮೆ. ಇಲ್ಲವೇ ಇಲ್ಲ ಎಂದು ಹೇಳಬಹುದು. ಅಂತಹ ಊರಿನಲ್ಲಿ ಬೆಳಗ್ಗೆ ೯-೧೦ ಗಂಟೆಯೊಳಗಾಗಿ ಖುರ್ಚಿ ಸೀಟುಗಳೆಲ್ಲವೂ ಪೂರ್ತಿಯಾಗಿ ರಿಜರ್ವ್ ಆಗುತ್ತಿದ್ದುವು. ಸಾಯಂಕಾಲ ಬಂದ ಜನರಿಗೆ ಟಿಕೆಟ್ ಸಿಕ್ಕದೆ ಥಿಯೇಟರಿನ ಸುತ್ತಲೂ ಜಾತ್ರೆ ನೆರೆದಂತೆ ಜನ ಸೇರುತ್ತಿದ್ದು ನಿರಾಶೆಯಿಂದ ವಾಪಸು ಹೋಗುತ್ತಿದ್ದರು. ಪರಸ್ಥಳದಿಂದ ಬಂದ ಜನ ಮರುದಿನ ಇದ್ದು ನಾಟಕವನ್ನು ನೋಡಿ ಹೋಗುತ್ತಿದ್ದರು. ಅನೇಕ ಜನರು ಏಮಿ ಚೇಸೇದಿ ಸ್ವಾಮಿ ಗುಬ್ಬಿ ವೀರಣ್ಣಗಾರಿ ಜಾತ್ರಕಿ ಪೋಯಿಂಟಮಿ, ಟಿಕೇಟು ದೊರಕಲೇದು, ಕಾನಿ ರೇಪು ಪೋಯಿ ಚೂಸ್ಕೋನಿ ಊರಿಕಿ ವೆಳ್ತಾಮು ಎಂದು ಹೇಳುತ್ತಿದ್ದರು. ಆಗ ನನಗೆ ಈ ಕನ್ನಡ ಭಾಷೆ ತಿಳಿಯದೇ ಈ ರೀತಿ ಉತ್ಪತ್ತಿ ಆಗಬೇಕಾದರೆ ಇನ್ನು ತೆಲೆಗು ಭಾಷೆಯಲ್ಲಿ ನಾಟಕವಾಡಿದರೆ ಮತ್ತಷ್ಟು ಒಳ್ಳೆ ಕೀರ್ತಿ, ಉತ್ಪತ್ತಿಯಾಗಬಹುದೆಂದು ಯೋಚಿಸಿ ಚಿಕ್ಕಬಳ್ಳಾಪುರದ ಉಭಯಭಾಷಾ ಪಂಡಿತ ಕೇಶಪ್ಪಯ್ಯನವರನ್ನು ಕರ್ನೂಲಿಗೆ ಕರೆಸಿ ತೆಲುಗು ಭಾಷೆಗೆ ಕುರುಕ್ಷೇತ್ರ ನಾಟಕವನ್ನು ಭಾಷಾಂತರ ಮಾಡಿಸಿದೆ.

ಅದೇ ಸಮಯದಲ್ಲಿ ಮದ್ದೂರಾಯಪ್ಪ ಲಕ್ಷ್ಮಣಶೆಟ್ಟರು ದಾವಣಗೆರೆಯ ರಾಜನಹಳ್ಳಿ ಹನುಮಂತ ಶೆಟ್ಟರು ಅಲ್ಲದೆ ಇನ್ನೂ ಮೂರು ನಾಲ್ಕು ಜನ ವೈಶ್ಯಮಹಾಶಯರು ದಾವಣಗೆರೆಯಲ್ಲಿ ಕಾಟನ್‌ಮಿಲ್ ಇಡುವ ಉದ್ದಿಶ್ಯದಿಂದ ಷೇರು ಕ್ಯಾನ್‌ವಾಸ್ ಮಾಡಲು ಬಂದರು. ಅಲ್ಲಿ ಅವರಿಗೂ ನನಗೂ ಬಹಳ ಚೆನ್ನಾಗಿ ಪರಿಚಯವಾಯಿತು. ಅವರುಗಳು ಆ ಊರಿಗೆ ಅಪರಿಚಿತರಾದ್ದರಿಂದ ಅವರ ಮಾತಿಗೆ ಜನಗಳು ಹೆಚ್ಚಿಗೆ ಗಮನಕೊಡಲಿಲ್ಲ. ಅಲ್ಲದೆ ತೆಲುಗುರಾಜ್ಯ - ನಂಬಲು ಅವಕಾಶವಾಗಲಿಲ್ಲ. ನನ್ನ ಪರಿಚಯ ಒಂದು ತಿಂಗಳಿಂದಲೂ ಚೆನ್ನಾಗಿ ಗೊತ್ತಿದ್ದರಿಂದಲೂ, ನಾಟಕಕ್ಕೆ ಹೆಸರು, ಕೀರ್ತಿ ಬಹಳವಾಗಿದ್ದರಿಂದಲೂ ನನ್ನನ್ನು ಜೊತೆಯಲ್ಲಿ ಕರೆದುಕೊಂಡಹೋದರು. ನನ್ನ ಮುಖಪುಣ್ಯವೋ ಏನೋ ಎಂಬಂತೆ ಜನರು ಹೆಚ್ಚಾಗಿ ಷೇರುಗಳನ್ನು ತೆಗೆದುಕೊಂಡರು.

ನಾನೂ ಸಹ ಕೆಲವು ಷೇರುಗಳನ್ನು ತೆಗೆದುಕೊಂಡು ಕಂಪನಿಯ ಕೆಲ ಜನರಿಗೂ ಷೇರುಗಳನ್ನು ತೆಗೆಸಿಕೊಟ್ಟೆ. ಆಗ ರಾಜನಹಳ್ಳಿ ಧರ್ಮಪ್ರವರ್ತಕ ಹನುಮಂತಪ್ಪನವರು ಒಂದು ದೊಡ್ಡ ಬೆಳ್ಳಿಯ ಕಪ್ಪನ್ನು ನಾಟಕದಲ್ಲಿ ಬಹುಮಾನ ಮಾಡಿದರು. ಅದೇ ಸಮಯದಲ್ಲಿ ಮೊಹರಂ ಹಬ್ಬ ಪ್ರಾರಂಭವಾಯಿತು. ಆಗ ಸರ್ಕಾರದವರು ಆ ಊರಿನಲ್ಲಿ ಮಹಮ್ಮದೀಯ ಮತಸ್ಥರು ತುಂಬಾ ಹೆಚ್ಚಾಗಿದ್ದುದರಿಂದ ಹನ್ನೆರಡು ದಿನದವರೆಗೂ ಲೈಸೆನ್ಸು ವಜಾ ಮಾಡಿದರು. ಆಗ ನಾವು ಅಲ್ಲಿಂದ ಐವತ್ತು ಮೈಲಿ ದೂರದಲ್ಲಿದ್ದ ನಂದ್ಯಾಲದಲ್ಲಿ ಕ್ಯಾಂಪು ಹಾಕಿದೆವು. ಅದು ಒಂದು ಸಣ್ಣ ತಾಲ್ಲೂಕು. ಕನ್ನಡ ಭಾಷೆ ಸುತರಾಂ ತಿಳಿಯುತ್ತಿರಲಿಲ್ಲ. ಆದರೂ ಜನಗಳಿಗೆ ನಮ್ಮ ಸೀನರಿಗಳು ಹುಚ್ಚು ಹಿಡಿಸಿದ್ದವು. ಸಣ್ಣ ಊರಾದರೂ ಪ್ರೋತ್ಸಾಹ ಬಹು ಚೆನ್ನಾಗಿ ದೊರೆಯಿತು. ಅಲ್ಲದೆ ಶಿವರಾತ್ರಿ ಹಬ್ಬಕ್ಕೆ ಶ್ರೀಶೈಲಕ್ಕೆ ಹೋಗುವವರು ನಂದ್ಯಾಲದ ಮಾರ್ಗವಾಗಿ ಹೋಗಿ ನದಿಯಲ್ಲಿ ಸ್ನಾನ ಮಾಡಿ ಹೋಗುತ್ತಿದ್ದರು. ಅವರು ಒಂದೊಂದು ರಾತ್ರಿ ಉಳಿದು ನಾಟಕ ನೋಡಿಕೊಂಡು ಹೋಗುತ್ತಿದ್ದರು. ನಮ್ಮ ಸಂಸ್ಥೆಯವರಲ್ಲಿ ಬಹುಜನ ಶ್ರೀಶೈಲಕ್ಕೆ ಹೋಗಿ ಮಲ್ಲಿಕಾರ್ಜುನಸ್ವಾಮಿಯ ದರ್ಶನಾಶೀರ್ವಾದ ಪಡೆದುಕೊಂಡು ಬಂದರು. ನನಗೆ ಮಾತ್ರ ಆ ಯೋಗ ಲಭಿಸಲಿಲ್ಲ.

ಅಲ್ಲಿಂದ ಮುಂದೆ ಪ್ರಯಾಣಕ್ಕೆ ಮೊದಲಬಾರಿಗೆ ಸ್ಪೆಷಲ್ ಟ್ರೈನ್ ಏರ್ಪಾಡು ಮಾಡಲಾಯಿತು. ಗುಲ್ಬರ್ಗಾ ಅಥವಾ ಕಲ್‌ಬುರ್ಗಿ ಊರಿನಲ್ಲಿ ಥಿಯೇಟರ್ ಹಾಕಿಸಿ, ಸ್ಪೆಷಲ್ ಟ್ರೈನ್‌ನಲ್ಲಿ ನಮ್ಮ ಸಂಘವು ಇಳಿಯಿತು. ಆ ಊರಿನಲ್ಲಿ ಆಯಿಲ್ ಮಿಲ್, ಬಸ್ಸುಗಳನ್ನು ಇಟ್ಟು ಬಹು ಹೆಸರುವಾಸಿಯಾಗಿ, ಮುಖಂಡರಾಗಿ ಆಯಿಲ್ ಕಿಂಗ್ (Oil King) ಎಂಬ ಟೈಟಲ್ ಪಡೆದಿದ್ದ ಭೂಮಿರೆಡ್ಡಿ ಬಸಪ್ಪನವರು, ಇನ್ನೂ ಮುಖಂಡ ವರ್ತಕರೊಡನೆ ರೈಲ್ವೆ ನಿಲ್ದಾಣಕ್ಕೆ ಬಂದು ನಮ್ಮನ್ನು ಸ್ವಾಗತಿಸಿದರು. ಆಗ ಸಂಘದಲ್ಲಿ ನೂರ ಐವತ್ತು ಜನರಿದ್ದರು. ಇಪ್ಪತ್ತೆರಡು ಸಂಸಾರಗಳಿದ್ದವು. ಸ್ಪೆಷಲ್ ಟ್ರೈನಿನ ಏರ್ಪಾಡು ಮಾಡಿದ್ದರಿಂದ ಸಂಸಾರಿಗಳಿಗೆ ಅವರ ಮನೆಯವರುಗಳ ಚಾರ್ಜು ಬೀಳುತ್ತಿರಲಿಲ್ಲವಾಗಿ ಕಂಪನಿಯಲ್ಲಿ ಸಂಸಾರವಿದ್ದ ಜನ ಅವರವರ ಹೆಂಡತಿ, ಮಕ್ಕಳು, ತಂದೆ ತಾಯಿ ಅಥವಾ ಅತ್ತೆ ಮಾವ ಹೀಗೆ ಅವರವರ ಅನುಕೂಲವಿದ್ದಂತೆ ಕರೆತಂದಿದ್ದರು. ಆಗ ಒಟ್ಟು ಇನ್ನೂರೈವತ್ತು ಜನಕ್ಕೆ ಕಡಿಮೆಯಿರುತ್ತಿರಲಿಲ್ಲ. ಕಂಪನಿಯ ಎಲ್ಲ ಜನಗಳೂ ಹೊರಕ್ಕೆ ಹೊರಟರೆ ಒಂದು ಪಾಳೆಯವೇ ಹೊರಟಂತಾಗುತ್ತಿತ್ತು. ಗುಲ್‌ಬರ್ಗ ಕ್ಯಾಂಪು ಸತತವಾಗಿ ಎರಡು ತಿಂಗಳು ನಡೆಯಿತು. ಭೂಮಿರೆಡ್ಡಿ ಬಸಪ್ಪನವರು ವರ್ತಕಸಭೆಯನ್ನು ಸೇರಿಸಿ ಪಾರ್ಟಿಕೊಟ್ಟು ಒಂದು ಭಂಗಾರದ ಪದಕವನ್ನು ಬಹುಮಾನಿಸಿದರು. ಅದೇ ಊರಿನ ಶರಣ ಬಸವೇಶ್ವರ ಸ್ವಾಮಿಯ ಸೇವೆ ಮಾಡಿ, ಆ ದೇವಾಲಯಕ್ಕೆ ಎರಡು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ನಮ್ಮ ಸಂಘದ ಹೆಸರಿನಲ್ಲಿ ಎಲೆಕ್ಟ್ರಿಕ್ ಲೈಟು ಹಾಕಿಸಿದೆವು - ಆ ವೇಳೆಗೆ ಶ್ರೀಮನ್ಮಹಾರಾಜರವರಾದ ಶ್ರೀಕೃಷ್ಣರಾಜ ಭೂಪಾಲರು ನಮ್ಮ ಕುರುಕ್ಷೇತ್ರ ನಾಟಕಕ್ಕಾಗಿಯೇ ಹದಿನೈದು ತಿಂಗಳು ವಯಸ್ಸಿನ ತಾರಾ ಎಂಬ ಆನೆಯನ್ನು ಮಾವಟಿಗನೊಡನೆ ಬಹುಮಾನವಾಗಿ ಕಳುಹಿಸಿಕೊಟ್ಟಿದ್ದರು ; ನಂತರ ನಮ್ಮ ಸಂಘದಲ್ಲಿ ಒಂದು ಆನೆ, ಎರಡು ಅಚ್ಚ ಬಿಳಿಯ ಕುದುರೆಗಳು, ಎರಡು ಜಿಂಕೆ, ನವಿಲು, ಪಾರಿವಾಳದ

ಗುಂಪು, ಮೊಲಗಳು ಆಗಿದ್ದವು. ನಾಟಕವನ್ನು ನೋಡಿ ಜನರು ಇದೇಮಿ ಸರ್ಕಸ್ಸೆ, ನಾಟಕಮಾ ಮನಕೇಮೀ ಗೊತ್ತೇಯ್ಯಲೇದು ಎಂದು ಮಾತಾಡಿಕೊಳ್ಳುತ್ತಿದ್ದರು. ಆ ಊರಿನ ಸುತ್ತಮುತ್ತಲಿನಲ್ಲೆಲ್ಲಾ ಪ್ರಸಿದ್ಧ ಪುರುಷರಾದ ಮಾಣಿಕ್ಯ ಪ್ರಭುವಿನ ಗದ್ದುಗೆಯ ದರ್ಶನ ಮಾಡಿಕೊಂಡು, ವೀರಶೈವ ಮಹಾನಗರವಾಗಿದ್ದು ಬಿಜ್ಜಳ ಮಹಾರಾಜನು ಆಳಿ ಬಸವೇಶ್ವರನು ನಿರ್ಮಿಸಿದ ಅನುಭವ ಮಂಟಪವಿದ್ದು ಅಲ್ಲಮ ಪ್ರಭುವು ಬಿಜಯಂಗೈದು ಕಲ್ಯಾಣ ನಗರವನ್ನು ನೋಡಲು ಹೋದೆವು - ಹಿಂದೆ ವೈಭವದಿಂದ ವಿಜೃಂಭಿಸಿದ್ದ ಸ್ಥಳವು ಈಗ ಕಟುಕರ ಅಂಗಡಿಯ ಸ್ಥಳವಾಗಿತ್ತು. ಆ ಸ್ಥಿತಿಯಲ್ಲಿ ಕಲ್ಯಾಣ ನಗರಿಯನ್ನು ನೋಡಿ ವ್ಯಸನದಿಂದ ಹಿಂತಿರುಗಿ ತಾಂಡೂರಿನಲ್ಲಿದ್ದ ನಾಟಕ ಮಂದಿರವನ್ನು ಗೊತ್ತುಮಾಡಿ ಆ ಕ್ಯಾಂಪು ಪ್ರಾರಂಭಿಸಿದೆವು.

ಧರ್ಮವೀರ ಮತ್ತು ಕರ್ನಾಟಕಾಂಧ್ರ ನಾಟಕ ಸಾರ್ವಭೌಮ

ತಾಂಡೂರಿನಿಂದ ಮುಂದೆ ಹೈದರಬಾದು ಕ್ಯಾಂಪು ಮಾಡಲು ನಿರ್ಧರಿಸಿ ಹೈದರಾಬಾದಿನಲ್ಲಿ ಥಿಯೇಟರು ಕಟ್ಟುವ ಸ್ಥಳವನ್ನು ಬೊಂಬಾಯಿಗೆ ಹೋಗಿ ರಾಜಾಧನ ರಾಜಗಿರ್ಜಿ ಎಂಬ ಮಿಲ್ಲಿನ ಒಡೆಯರನ್ನು ಬಹುವಾಗಿ ಆಶ್ರಯಿಸಿ ಗೌಳಿಗುಡ್ಡದಲ್ಲಿ ಅವರ ಸ್ಥಳವನ್ನು ಪಡೆದು, ಹೈದರಬಾದಿನಲ್ಲಿ ಬಹುಜನ ಮಹಮ್ಮದೀಯ ಅಧಿಕಾರಿಗಳನ್ನು ಆಶ್ರಯಿಸಿ ಟೆಂಪರರಿ ಥಿಯೇಟರನ್ನು ಏಳೆಂಟು ಸಾವಿರ ಹಣ ವ್ಯಯ ಮಾಡಿ ಕಟ್ಟಲಾಯಿತು. ಈ ಹಿಂದೆ ಸಿನಿಮಾ ಮಂದಿರವೊಂದು ಸುಟ್ಟುಹೋಗಿದ್ದ ಕಾರಣ ಲೈಸೆನ್ಸ್ ಕೊಡುವ ಮುಂಚೆ ಇನ್‌ಸ್ಪೆಕ್ಷನ್‌ಗೆ ಬಂದ ಅಧಿಕಾರಿಯು ಬರೇ ಬೊಂಬು ಹಗ್ಗದಿಂದ ಕಟ್ಟಲಾಗಿದ್ದ ಥಿಯೇಟರನ್ನು ನೋಡಿ 'ಏ ಥಿಯೇಟರ್ ಕೊ ಹಮ್ ಲೈಸೆನ್ಸ್ ದಿಯೇತೋ ಸಬ್ ಲೋಗ್ ಕಬರ್ ಸ್ಥಾನ್‌ಕೋ ಜಾಯೇಗಾ' ಎಂದು ಹೇಳಿ ಲೈಸೆನ್ಸ್ ಕೊಡಲು ಬಹಳ ಅಡ್ಡಿ ಮಾಡಿದನು- ಆಗ ಹೊಸದಾಗಿ ಜನರೇಟರ್ ತರಿಸಿ ಕಂಬ ಕಂಬಕ್ಕೂ ಫ್ಯಾನ್‌ಗಳನ್ನು ಹಾಕಿಸಿ, ಫೈರ್ ಎಕ್ಸ್ಟಿಂಗ್ವಿಷರ್‌ಗಳನ್ನು ತರಿಸಿದೆವು. ಆಗ ಶ್ರೀಚೆನ್ನಬಸವೇಶ್ವರನ ಕೃಪೆಯಿಂದ ಲೈಸೆನ್ಸ್ ದೊರೆತು ತಾಂಡೂರಿನಿಂದ ಬಂದು ಹೈದರಾಬಾದಿನಲ್ಲಿ ಯಶಸ್ವಿಯಾಗಿ ನಾಟಕಗಳು ನಡೆಯುತ್ತಿದ್ದವು - ಸ್ವಲ್ಪ ದಿವಸದಲ್ಲಿಯೇ ಭಾರೀ ಮಳೆ ಬಂದು ಮೋರಿಗಳೆಲ್ಲವೂ ತುಂಬಿ ಥಿಯೇಟರಿನಲ್ಲಿ ನೀರು ನುಗ್ಗಿ ಕುರ್ಚಿಗಳು ತೇಲಾಡಿದವು. ಆಗ ಎಂಟು ದಿನ ನಾಟಕ ನಿಲ್ಲಿಸಿ ಕಡಪಕಲ್ಲುಗಳನ್ನು ನೆಲಕ್ಕೆ ಹಾಕಿಸಿ ಪುನಃ ನಾಟಕ ಪ್ರಾರಂಭಿಸಿದೆವು. ಅನಂತರವೂ ಪ್ರೋತ್ಸಾಹ ಚೆನ್ನಾಗಿ ದೊರೆಯಿತು. ಕುರುಕ್ಷೇತ್ರ ಕೃಷ್ಣಲೀಲಾ ಮೊದಲಾದ ನಾಟಕಗಳನ್ನು ಅನಂತರ ಕುರುಕ್ಷೇತ್ರ ನಾಟಕವನ್ನು ತೆಲುಗಿನಲ್ಲಿ ಅಭ್ಯಾಸ ಮಾಡಿ ಆಡಿದೆವು. ಉತ್ಪತ್ತಿ ಬಹಳ ಚೆನ್ನಾಗಾಯಿತು. ಹೈದರಾಬಾದಿನಲ್ಲಿ ಐದು ತಿಂಗಳ ದೀರ್ಘ ಕ್ಯಾಂಪು ಮಾಡಿದೆವೆಂದರೆ ಎಷ್ಟು ಜನಪ್ರಿಯತೆಗಳಿಸಿದ್ದೆವೆಂಬುದನ್ನು ತಿಳಿಯಬಹುದು. ಅಲ್ಲಿನ ನೃಪತುಂಗ ಪ್ರೈಮರಿ, ಮಿಡಲ್ ಮತ್ತು ಹೈಸ್ಕೂಲ್, ವೀರಶೈವ ಸಮಾಜ, ಇನ್ನೂ ಬೇರೆ ಬೇರೆ ಸಂಸ್ಥೆಗಳಿಗೆ ಸುಮಾರು ೨೦,೦೦೦ರೂ.ಗಳಿಗೆ ಕಡಿಮೆಯಿಲ್ಲದೆ ಬೆನಿಫಿಟ್ ನಾಟಕಗಳನ್ನಾಡಿಕೊಟ್ಟೆವು.

ಅಲ್ಲಿನ ವೀರಶೈವ ಸಮಾಜದವರು ಆ ಊರಿನ ವೀರಶೈವ ಮುಖಂಡರನ್ನೆಲ್ಲಾ ಬರಮಾಡಿಸಿ ನಮ್ಮ ಸಂಸ್ಥೆಯವರಿಗೆ ಭೋಜನಕೂಟವನ್ನೇರ್ಪಡಿಸಿ ಫೋಟೋ ತೆಗೆಯಿಸಿ 'ಧರ್ಮವೀರ'ನೆಂದು ಬಿರುದನ್ನಿತ್ತು. ಸನ್ಮಾನಪತ್ರದೊಡನೆ ಬಂಗಾರದ ಪದಕವನ್ನಿತ್ತು ಗೌರವಿಸಿದರು. ಅಲ್ಲಿ ನಮ್ಮ ಸಂಘದ ಮುಖ್ಯನಟರಾಗಿದ್ದ ಬಿ. ರಾಘವೇಂದ್ರರಾಯರ ಲಗ್ನಕ್ಕಾಗಿ ೭೫೦ರೂ.ಗಳನ್ನು ಕೊಡಲಾಯಿತು. ಮತ್ತೊಬ್ಬ ಶಂಕರ ನಾರಾಯಣ ಎಂಬುವರಿಗೆ ಕಂಪನಿಯಲ್ಲಿದ್ದ ಡಿ. ಜಯರಾಯರ ಮಗಳಾದ ಸತ್ಯಶೀಲೆಯೆಂಬ ಕನ್ನೆಯನ್ನಿತ್ತು ಅದೇ ಊರಿನಲ್ಲಿಯೇ ಮದುವೆ ಮಾಡಿಸಿದೆವು. ಈ ಲಗ್ನಕ್ಕಾಗಿ ೧೨೦೦ ರೂ. ಕೊಟ್ಟಿದ್ದೆವು. ನೈಜಾಂ ರಾಜ್ಯದ ಮಂತ್ರಿಗಳಾಗಿದ್ದ ಕಿಸನ್ ಪ್ರಸಾದ್ ಎಂಬುವರು ರಾಜ ಮನೆತನದವರು

ನಮ್ಮ ನಾಟಕವನ್ನು ನೋಡಿ ಸಂತೋಷಪಟ್ಟು ಒಂದು ಮೆಡಲ್ ಬಹುಮಾನಿಸಿದರು. ಪ್ರತಾಪಗಿರ್ಜಿ ಎಂಬುವರು ಬಿ. ಜಯಮ್ಮನಿಗೆ ಒಂದು ಪಚ್ಚೆ ಉಂಗುರವನ್ನು ಬಹುಮಾನ ಮಾಡಿದರು.

ಹೀಗೆ ಹೈದರಾಬಾದಿನಲ್ಲಿ ಕೀರ್ತಿಪತಾಕೆಯನ್ನು ಹಾರಿಸಿ ನಂತರ ಪ್ರತಾಪ ರುದ್ರ ಮಹಾರಾಜನ ರಾಜಧಾನಿಯಾಗಿದ್ದ ಓರಂಗಲ್‌ಗೆ ಕ್ಯಾಂಪು ಮಾಡಿ ಅಲ್ಲಿನ ಗತವೈಭವಗಳನ್ನು ನೆನಪಿಗೆ ತರುತ್ತಿದ್ದ ಸ್ಥಳಗಳನ್ನು ನೋಡಿಕೊಂಡು ಬಂದೆವು. ಅಲ್ಲಿನ ವೈಶ್ಯ ಆರಾಧ್ಯರಾದ ಶ್ರೀಮಂತರು ಕಂಪನಿಯವರನ್ನು ಸತ್ಕರಿಸಿ ಪದಕವೊಂದನ್ನು ಕೊಟ್ಟು ಬೆಜವಾಡಕ್ಕೆ (ವಿಜಯವಾಡ) ಸ್ಪೆಷಲ್ ಟ್ರೈನಿನಲ್ಲಿ ಬೀಳ್ಕೊಟ್ಟರು. ಬೆಜವಾಡ ಊರಿನಲ್ಲಿ ಒಂದೂವರೆ ತಿಂಗಳು ನಾಟಕವನ್ನಾಡಿ ರಾಜಮಹೇಂದ್ರಿಯಲ್ಲಿ ಥಿಯೇಟರು ಕಟ್ಟಿಸಿ ಕ್ಯಾಂಪು ಮಾಡಿದೆವು. ಅಲ್ಲಿ ಉತ್ಪತ್ತಿ ಸಾವಿರದ ಇನ್ನೂರರಿಂದ ಎರಡು ಸಾವಿರ ರೂ.ಗಳವರೆಗೂ ಆಗುತ್ತಿತ್ತು. ಸಂಘಕ್ಕೆ ಒಳ್ಳೆಯ ಕೀರ್ತಿ ಸನ್ಮಾನಗಳು ದೊರೆತವು.

ಆ ಊರಿನಲ್ಲಿ ವ್ಯಾಸ ಮಹರ್ಷಿಗಳ ಮಹಾಭಾರತದ ಹದಿನೆಂಟು ಪರ್ವಗಳನ್ನೂ ತೆಲುಗು ಭಾಷೆಯಲ್ಲಿ ಅತ್ಯಂತ ಮನೋಹರ ಶೈಲಿಯ ಕವಿತೆಯಿಂದ ರಚಿಸಿ, ಮಹಾರಾಜರಿಂದಲೂ, ಮಹಾಜನಗಳಿಂದಲೂ ಸನ್ಮಾನಿತರಾಗಿ ನಗರ ವೀಧಿಗಳಲ್ಲಿ ಗ್ರಂಥಸಹಿತವಾಗಿ ಆನೆಯ ಮೇಲೆ ಮೆರವಣಿಗೆಯನ್ನು ಮಾಡಿಸಿಕೊಂಡು 'ಅಭಿನವ ವ್ಯಾಸಮುನಿ'ಗಳೆಂಬ ಬಿರುದಿನಿಂದ ಪ್ರಖ್ಯಾತರಾಗಿದ್ದ ಮಹಾಮಹೋಪಾಧ್ಯಾಯ ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿಗಳು ನಮ್ಮ ನಾಟಕ ಸಂಘದ ನಾಟಕಗಳನ್ನು ನೋಡಿ ನಮ್ಮ ಮೈಸೂರು ದೇಶವನ್ನೂ, ಇಲ್ಲಿನ ನಾಟಕಗಳನ್ನೂ ಕಲಾಭಿನಯವನ್ನೂ ನಾಗರಿಕೆಗಳನ್ನೂ ಸಹ ಬಹಳವಾಗಿ ಪ್ರಶಂಸಿಸಿದರು, ಆ ಊರಿನ ಮುಖ್ಯಸ್ಥರೂ ಅನೇಕ ಮಂದಿ ವಿದ್ವಾಂಸರೂ, ಶ್ರೀಮಂತರೂ ದೊಡ್ಡ ಸಭೆ ಸೇರಿಸಿ ಮೇಲ್ಕಂಡ ಶ್ರೀಪಾದ ಕೃಷ್ಣಮೂರ್ತಿಗಳವರ ನೇತೃತ್ವದಲ್ಲಿ ಅನೇಕ ಪ್ರಶಸ್ತಿಗಳನ್ನೂ ಕೊಟ್ಟು ನನಗೆ 'ಕರ್ನಾಟಕಾಂಧ್ರ ನಾಟಕ ಸಾರ್ವಭೌಮ' ಎಂಬ ಪ್ರಶಸ್ತಿಯನ್ನು ಪದಕದೊಡನಿತ್ತು ಗೌರವಿಸಿದರು. ಮುಂದೆ ವಿಜಯನಗರದ ಕ್ಯಾಂಪಿನಲ್ಲಿ ನಮ್ಮ ಸಂಘದಲ್ಲಿ ನಡೆಯುತ್ತಿದ್ದ ಶುಕ್ರವಾರದ ಪೂಜೆಗೆ ಪ್ರಸಿದ್ಧ ಪಿಟೀಲು ವಾದನಕಾರರಾದ ದ್ವಾರಂ ವೆಂಕಟಸ್ವಾಮಿ ನಾಯ್ಡುರವರು ತಾವೂ ಪಿಟೀಲು ವಾದ್ಯವನ್ನು ನುಡಿಸಿ ಎಲ್ಲರನ್ನೂ ಸಂತೋಷಪಡಿಸಿದರು. ಸಂಘದ ಪರವಾಗಿ ನಾವು ಅವರಿಗೆ ಒಂದು ಜೊತೆ ಪಂಚೆ ಮತ್ತು ಬಂಗಾರದ ಪದಕವನ್ನಿತ್ತು ಗೌರವಿಸಿದೆವು. ಅಲ್ಲಿಂದ ಕಾಕಿನಾಡ, ಮಚಲೀಪಟ್ಟಣ ಮುಗಿಸಿ ಗುಂಟೂರಿಗೆ ಬಂದೆವು.

ಗುಂಟೂರಿನಲ್ಲಿ ವಿಚಿತ್ರ

ಗುಂಟೂರಿನಲ್ಲಿ ವೈಶ್ಯ ಮಹಾಜನಗಳ ಪ್ರಾಬಲ್ಯ ಹೆಚ್ಚಾಗಿದ್ದಿತು. ಎಲ್ಲರೂ ಹೊಗೆಸೊಪ್ಪಿನ ವ್ಯಾಪಾರಿಗಳು, ದೊಡ್ಡ ವರ್ತಕರು, ಶ್ರೀಮಂತರು. ಇವರು, ಗುಬ್ಬಿಕಂಪನಿಯವರು ಸದಾರಮೆ ನಾಟಕ ಆಡದಿದ್ದರೆ ಲೈಸೆನ್ಸ್ ಕೊಡಬಹುದು ಎಂದು ಹೇಳಿದರು. ಹೀಗೆ ಹೇಳಲು ಕಾರಣವೇನೆಂದರೆ, ಹಿಂದೆ ಬೆಂಗಳೂರಿನಲ್ಲಿ ಸದಾರಮೆ, ಕಬೀರ್‌ದಾಸ್ ಆಡಬೇಕಾದರೆ ಅಲ್ಲಿನ ವೈಶ್ಯರು ನನ್ನ ಮೇಲೆ ವಿವಾದ ಮಾಡಿ ಸದಾರಮೆ ನಾಟಕವನ್ನೂ ಯಾರೂ ನೋಡಬಾರದೆಂದು ಪ್ರತಿಯೊಂದು ಊರಿಗೆ, ಆಂಧ್ರ ಪ್ರದೇಶಕ್ಕೂ ಸೂಚನೆ ಕಳುಹಿಸಿದ್ದರು. ಅದೇ ಕಾರಣದಿಂದ ನಾವು ಸದಾರಮೆ ಗುಂಟೂರಿನಲ್ಲಿ ಆಡಬಾರದೆಂದು ಕೇಳಿದ್ದರು. ಹಾಗೇ ಆಗಲೆಂದು ಒಪ್ಪಿಕೊಂಡು ಇತರೆ ನಾಟಕಗಳನ್ನು ಆಡುತ್ತಿದ್ದೆವು. ಆಗ ಇತರೆ ಜನಗಳು ನೀವು 'ಸದಾರಮೆ' ನಾಟಕ ಆಡಲೇಬೇಕೆಂದು ಒತ್ತಾಯಪಡಿಸಿದರು. ಅಲ್ಲಿನ ಜಿಲ್ಲಾಧಿಕಾರಿಗಳು 'ಚತುರ್ಭುಜ' ಎಂಬ ಹೆಸರಿನವರು, ಉತ್ತರ ಕನ್ನಡ ಜಿಲ್ಲೆಯವರು. ನನ್ನಲ್ಲಿ ತುಂಬಾ ಅಭಿಮಾನಿಗಳು, ಅವರಿಗೂ ಅವರ ಕುಟುಂಬದವರಿಗೂ 'ಸದಾರಮೆ' ನಾಟಕ ನೋಡಬೇಕೆಂಬ ಕುತೂಹಲ ಬಹಳವಾಗಿತ್ತು. ಅವರು ನನ್ನನ್ನು ಕರೆಸಿ ನೀವು 'ಸದಾರಮೆ' ನಾಟಕವನ್ನಾಡಿ ಗಲಾಟೆಯಾಗದಂತೆ ನಾನು ನೋಡಿಕೊಳ್ಳುತ್ತೇನೆಂದು ಧೈರ್ಯಕೊಟ್ಟರು. ಅದರಂತೆ ಆಡಲು ನಿಶ್ಚಯಿಸಿದೆವು. ಅಷ್ಟರಲ್ಲಿ ವೈಶ್ಯ ಮಹಾಜನಗಳು ನಮ್ಮನ್ನು ಕರೆಸಿ ಖಂಡಿತವಾಗಿಯೂ ಸದಾರಮೆ ಆಡಕೂಡದೆಂದು ಹೇಳಿದರು. ಆಗ ನಾನು, ಸ್ವಾಮಿ ನಮ್ಮ ಸಂಸ್ಥೆ ದೊಡ್ಡದು, ಖರ್ಚು ಬಹಳವಿದೆಯಾಗಿ ಆಡದಿದ್ದರೆ ಈ ಊರು ಬಿಟ್ಟು ಹೋಗಲು ಹಣವಿಲ್ಲ. ಇಲ್ಲಿಂದ ಹೋಗಬೇಕಾದರೆ ಐದುಸಾವಿರ ರೂಪಾಯಿಯಾದರೂ ಬೇಕಾಗುತ್ತೆ. ಅದನ್ನಾದರೂ ನೀವೆಲ್ಲರೂ ಸೇರಿ ಕೊಟ್ಟರೆ ಸಂತೋಷ, ಇಲ್ಲವಾದರೆ ನಾವು ಸದಾರಮೆ ಆಡಲೇಬೇಕಾಗುತ್ತದೆ ಎಂದು ಹೇಳಲು, ಅವರು ಅದಕ್ಕೆ ಒಪ್ಪಲಿಲ್ಲ. "ಅದೆಷ್ಟ ಆಡ್ತಾರೋ ಆಡಂಡಿ, ಮೇಮು ಚೂಸ್ಕೊಂಟಾಮು" ಎಂದು ಹೇಳಿ ಅಸಮಾಧಾನದಿಂದ ಹೋಗಿಬಿಟ್ಟರು. ನಂತರ ಜಿಲ್ಲಾಧಿಕಾರಿಗಳ ಬಳಿ ಹೋಗಿ ನಮ್ಮ ಮೇಲೆ ದೂರುಕೊಟ್ಟರು. ಜಿಲ್ಲಾಧಿಕಾರಿಗಳು ನಾವು ಲೈಸೆನ್ಸು ಕೊಟ್ಟಿದ್ದೇವೆ. 'ಆ ನಾಟಕವಾಡಬೇಡಿ ಆ ನಾಟಕವಾಡಿ' ಎಂದು ಹೇಳುವ ಅಧಿಕಾರವಿಲ್ಲ ಎಂದು ಹೇಳಿ ಕಳುಹಿಸಿಬಿಟ್ಟರು. ಆಗ ವೈಶ್ಯ ಮಹಾಜನರು ೧೦,೦೦೦ ನೋಟೀಸುಗಳನ್ನು ಪ್ರಿಂಟು ಮಾಡಿಸಿ ಗುಬ್ಬಿ ನಾಟಕಕ್ಕೆ ಯಾರೂ ಹೋಗಬೇಡಿ ಎಂದು ಪ್ರಚಾರಮಾಡಿದರು. ಮಾರನೆಯ ದಿನ ಥಿಯೇಟರ್ ಮುಂದೆ ಕೃಷ್ಣಲೀಲೆ ಎಂದು ಬೋರ್ಡು ಬರೆಸಿ ಹಾಕಿಸಿ ಸಂಜೆ ಐದು ಘಂಟೆಯಾಗುತ್ತಿದ್ದಂತೆ ಸರಕಾರದ ಇತರೆ ಜನರ ಬೆಂಬಲದಿಂದ 'ಸದಾರಮೆ' ಎಂದು ಬೋರ್ಡು ಬರೆಸಿ, ನೋಟೀಸುಗಳನ್ನು ಹಂಚಿಸಿ ಜಿಲ್ಲಾಧಿಕಾರಿಗಳಿಗೆ ಆಮಂತ್ರಣ ಕೊಟ್ಟೆವು. ಅವರು ದಂಪತಿಗಳು ಬರುವುದಾಗಿ ಹೇಳಿ ಐವತ್ತು ರಿಜರ್ವ್ ಪೋಲೀಸಿನವರನ್ನು ಥಿಯೇಟರಿನ ಸುತ್ತಲೂ ಕಾವಲಿರುವಂತೆ ನಿಯಮಿಸಿದರು. ಆಗ ವೈಶ್ಯ ಮಹಾಜನರು ಸ್ಟ್ರೈಕ್ ಮಾಡಿ ಬುಕಿಂಗ್ ಆಫೀಸು ಬಳಿ ನಿಂತು ನಾಟಕಕ್ಕೆ ಹೋಗುವ

ಜನರಿಗೆ ಟಿಕೇಟ್ ತೆಗೆದುಕೊಳ್ಳಬೇಡಿ ಎಂದು ಬಹುವಿಧವಾಗಿ ಹೇಳಿದರೂ ಪ್ರಯೋಜನವಾಗದೆ ಒಂಭತ್ತು ಗಂಟೆಗೇ ಥಿಯೇಟರು ಭರ್ತಿಯಾಗಿ ೧೬೦೦/- ರೂಪಾಯಿ ಉತ್ಪತ್ತಿಯಾಯಿತು. ರಿಜರ್ವ್ ಪೋಲೀಸಿನವರ ಉಸ್ತುವಾರಿ ಚೆನ್ನಾಗಿಯೂ ಜಬರ್‌ದಸ್ತಾಗಿಯೂ ಇದ್ದುದರಿಂದ ಯಾವ ಗಲಾಟೆಗೂ ಅವಕಾಶವಿಲ್ಲದೆ ಸುರಕ್ಷಿತವಾಗಿ ನಾಟಕ ನಡೆಯಿತು. ಮರುದಿನವೂ ಸದಾರಮೆಯನ್ನೇ ಹಾಕಿದೆವು. ಆ ದಿನವೂ ಥಿಯೇಟರ್ ಭರ್ತಿಯಾಗಿ ಸಾಂಗವಾಗಿ ನಡೆಯಿತು. ಮೂರನೇ ರಾತ್ರಿಯೇ ಸ್ಪೆಷಲ್ ಟ್ರೈನಿನಲ್ಲಿ ನೆಲ್ಲೂರಿಗೆ ಬಂದೆವು. ಹೀಗೆ ಆಂಧ್ರ ಪ್ರದೇಶವನ್ನೆಲ್ಲಾ ಸಂಚರಿಸಿಕೊಂಡು ಬಂದ ತೊಂದರೆಗಳನ್ನೆಲ್ಲಾ ಪರಮಾತ್ಮನ ದಯೆಯಿಂದ ಪರಿಹರಿಸಿಕೊಂಡು ಬೆಂಗಳೂರಿನಗೆ ಬಂದು ಒಂಭತ್ತು ನಾಟಕ ಮಾತ್ರ ಹಾಕಿದೆವು. ಇದೇ ಕ್ಯಾಂಪಿನಲ್ಲಿ ಶ್ರೀ ಹೊನ್ನಪ್ಪ ಭಾಗವತರ್‌ರವರನ್ನು ಮೂರು ವರ್ಷದ ಕರಾರಿನ ಮೇಲೆ ಕಂಪನಿಗೆ ಸೇರಿಸಿಕೊಂಡೆನು.

'ಸುಭದ್ರ' ಚಿತ್ರ

ಮೈಸೂರಿನಲ್ಲಿ ಕುರುಕ್ಷೇತ್ರ ನಾಟಕವನ್ನು ಇನ್ನೂ ಆಡಿರಲಿಲ್ಲ. ಟೌನ್‌ಹಾಲಿನ ಬಳಿ ಭವ್ಯವಾದ ಟೆಂಪರ್‌ವರಿ ಥಿಯೇಟರ್ ಹಾಕಿಸಿ ಪ್ರಾರಂಭದ ದಿನ ಯುವರಾಜರಾದ ಶ್ರೀ ನರಸಿಂಹರಾಜ ಒಡೆಯರ್‌ರವರ ಘನ ಅಧ್ಯಕ್ಷತೆಯಲ್ಲಿ ಕುರುಕ್ಷೇತ್ರ ನಾಟಕವಾಡಿದೆವು. ಆ ದಿನ ಅವರು ತಮ್ಮ ಜೊತೆಯಲ್ಲಿ ಈಗಿನ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರ್‌ರವರನ್ನು ಕರೆದುಕೊಂಡು ಬಂದು, ವಿನೋದವಾಗಿ 'ವೀರಣ್ಣನವರೇ, ನಿಮ್ಮ ಪರ್ಮಿಷನ್ ಇಲ್ಲದೆ ಪುಟ್ಟಬುದ್ಧಿಯವರನ್ನು ಕರೆತಂದಿದ್ದೇನೆ' ಎಂದು ಹೇಳಿ ನಾಟಕ ನೋಡಲು ಕುಳಿತರು. ನಂತರ ಜಗನ್ಮೋಹನ ಬಂಗಲೆಯಲ್ಲಿಯೂ ಸಹ ಕುರುಕ್ಷೇತ್ರ ಮತ್ತು ಇತರ ನಾಟಕಗಳನ್ನು ಆಡಿಸಿ ನೋಡಿದರು.

ಮೈಸೂರಿನಿಂದ ಹಾಸನ, ಶಿವಮೊಗ್ಗ ಕ್ಯಾಂಪು ಮಾಡಿದೆವು. ಶಿವಮೊಗ್ಗದಲ್ಲಿ ಹೊಸದಾಗಿ ತುಳಜಪ್ಪ, ಹೊನ್ನಾಳಿ ನಾರಾಯಣರಾವ್ ಮತ್ತು ಚೌಡಮ್ಮನವರು ಸಂಘಕ್ಕೆ ಸೇರಿದರು ಅದೇ ಕ್ಯಾಂಪಿನಲ್ಲಿ (೧೯೩೯) ನಟಭಯಂಕರ ಎಂ. ಗಂಗಾಧರರಾವ್, ಎಂ. ಸುಬ್ಬರಾಯರು ಸಂಘವನ್ನು ಬಿಟ್ಟುಹೋದರು. ನಾವು ಅಲ್ಲಿಂದ ಮಂಗಳೂರಿಗೆ ಹೋಗಿ ನಂತರ ಕೊಯಮತ್ತೂರು, ತಿರ್ಪೂರು, ಸೇಲಂ, ಧರ್ಮಪುರಿ ಕ್ಯಾಂಪುಗಳನ್ನು ಮುಗಿಸಿಕೊಂಡು ಬೆಂಗಳೂರಿಗೆ ಬಂದೆವು. ೧೯೩೯ನೇ ಜುಲೈ ೨೧ರಲ್ಲಿ ಕೊಯಮತ್ತೂರು ಕ್ಯಾಂಪು ಮಾಡಿದ್ದಾಗ ಬೆಂಗಳೂರಿನಲ್ಲಿ ನನ್ನ ಶ್ರೀಮತಿಯವರಿಗೆ ಗಂಡುಮಗು ಜನನವಾಗಿ ಅದಕ್ಕೆ ಶಿವರುದ್ರಪ್ಪ (ಶಿವರಾಜ್)ನೆಂದು ನಾಮಕರಣ ಮಾಡಲಾಯಿತು. ಪುನಃ ಗಂಗಾಧರರಾಯರು ಸುಬ್ಬರಾಯರು ಕಂಪನಿಗೆ ಬಂದರು.

ಬೆಂಗಳೂರಿಗೆ ಬಂದಾಗ ಶ್ರೀ ಹೊನ್ನಪ್ಪಭಾಗವತರವರು ಸಿನಿಮಾದಲ್ಲಿ ಅಭಿನಯಿಸಲು ಅಪ್ಪಣೆ ಪಡೆದು ಹೋದರು. ೧೯೪೦ನೇ ಜನವರಿಗೆ, ದಾವಣಗೆರೆ ಕ್ಯಾಂಪು ಮಾಡಿದಾಗ ದಾವಣಗೆರೆಯ ಚಿನ್ನಬೆಳ್ಳಿ ವ್ಯಾಪಾರಿಗಳಾದ ಶ್ರೀ ಮದ್ದೂರಾಯಪ್ಪ ನವರು ಕಟ್ಟಿಸಿದ್ದ ಸಿನೆಮಾ ಟಾಕೀಸನ್ನು ತಿಂಗಳಿಗೆ ೫೦೦/- ರೂ. ಬಾಡಿಗೆ ಗೊತ್ತುಮಾಡಿ ಹತ್ತುವರ್ಷಗಳವರೆಗೆ ವಿನೋದಾ ಟಾಕೀಸ್ ಎಂಬ ಹೆಸರಿನಿಂದ ನಡೆಸಲು ತೆಗೆದುಕೊಂಡೆನು - ಆ ನಂತರ ಚಿತ್ರದುರ್ಗದಲ್ಲಿ ಕ್ಯಾಂಪುಮಾಡಿ ಅಲ್ಲಿದ್ದಾಗಲೇ ತುಮಕೂರಿನಲ್ಲಿದ್ದ ಬೆಂಗಳೂರು ಸಿದ್ದಲಿಂಗಪ್ಪನವರ ಜಮೀನನ್ನು ೨೫ ವರ್ಷ ಲೀಸಿಗೆ ಬರೆಸಿಕೊಂಡು ನಾಟಕಶಾಲೆಯೊಂದನ್ನು ೪೦,೦೦೦ ರೂಪಾಯಿಗಳಿಂದ ಕಟ್ಟಿಸಿ ೧೯೪೦ನೇ ಇಸ್ವಿಯಲ್ಲಿ ಅಲ್ಲೇ ಕುರುಕ್ಷೇತ್ರ ನಾಟಕದ ಪ್ರಾರಂಭೋತ್ಸವವನ್ನು ಜಿಲ್ಲಾಧಿಕಾರಿಗಳಿಂದ ನೆರವೇರಿಸಿ ಕೆಲವು ನಾಟಕಗಳನ್ನು ಮಾತ್ರ ಆಡಿ ದಸರಾ ಕಾಲಕ್ಕೆ ಮೈಸೂರಿಗೆ ಹೋದೆವು.

ಬೆಂಗಳೂರು ಗಾಂಧಿನಗರದಲ್ಲಿ ಆ ವೇಳೆಗೆ ನಾನು ಹೊಸದಾಗಿ ಎರಡು ಮನೆಗಳನ್ನು ಕಟ್ಟಿಸಿದ್ದೆ. ಮೈಸೂರಿನಿಂದ ಅದರ ಗೃಹಪ್ರವೇಶ ಸಮಾರಂಭಕ್ಕೆ ಬಂದೆನು. ಆ ಸಮಾರಂಭದ ಅಂಗವಾಗಿ ಟಿ.ಆರ್. ಮಹಲಿಂಗಂರವರ ವೇಣುವಾದನ ಕಚೇರಿಯನ್ನಿಟ್ಟಿದ್ದೆವು.

ಹಿಂದೆ ಬೆಂಗಳೂರು ಕ್ಯಾಂಪು ಮಾಡಿದ್ದ ಕಾಲದಲ್ಲಿ ಸುಭದ್ರ ಚಿತ್ರವನ್ನು ತೆಗೆಯಬೇಕೆಂಬ ಯೋಚನೆ ಬಂದಿತ್ತು. ಈಗ ಕವಿಗಳಾದ ಶ್ರೀ ಬಿ. ಪುಟ್ಟಸ್ವಾಮಯ್ಯನವರು ವೆಂಕಣ್ಣಾಚಾರ್ಯರೆಂಬ ಒಬ್ಬ ಭಾಗಸ್ಥರನ್ನು ಕರೆತಂದರು. ಅವರಲ್ಲಿ ಭಾಗದ ವಿಚಾರ, ಪೂನಾದಲ್ಲಿ ಚಿತ್ರ ತೆಗೆಯುವುದು, ಮೊದಲಾದ ಕರಾರುಗಳೆಲ್ಲವನ್ನೂ ಮಾಡಿಕೊಂಡು ಪೂನಾಗೆ ಹೋಗಿ ಸ್ಟುಡಿಯೋದವರಲ್ಲಿ ಮಾತನಾಡಿ ಏರ್ಪಾಟು ಮಾಡಿದೆ ಬೆಂಗಳೂರಿಗೆ ಹಿಂತಿರುಗಿ ಸಂಘದ ನಟರುಗಳಿಗೆ ನನ್ನ ತೀರ್ಮಾನವನ್ನೂ ಕರಾರುಗಳನ್ನೂ ತಿಳಿಸಿದೆ. ಹೊನ್ನಪ್ಪ ಭಾಗವತರ್, ರಾಘವೇಂದ್ರರಾವ್, ಗಿರಿಮಾಜಿ ವಾಸುದೇವರಾವ್, ಬಿ. ಜಯಮ್ಮ, ರಾಮಚಂದ್ರಶಾಸ್ತ್ರಿ ಇತರೆ ಕೆಲವರು ನನ್ನ ಕರಾರುಗಳಿಗೆ ಒಪ್ಪಿದರು - ಮತ್ತೆ ಕೆಲವರು ಒಪ್ಪಲಿಲ್ಲ. ಒಪ್ಪದಿದ್ದವರನ್ನು ಸಂಘದಲ್ಲಿಯೇ ಬಿಟ್ಟು ಸಂಘಕ್ಕೆ ತೊಂದರೆ ಬಾರದಂತೆ ಸರಿಯಾದ ವ್ಯವಸ್ಥೆಮಾಡಿದೆ. ಪೂನಾಕ್ಕೆ ಹೊರಡುವ ಮುನ್ನ ಸಂಘದವರೆಲ್ಲರನ್ನೂ ಕರೆಸಿ ಟೀಪಾರ್ಟಿಯೊಂದನ್ನು ಇಟ್ಟುಕೊಂಡು "ಸಂಘವನ್ನು ನಡೆಸಿಕೊಂಡು ಹೋಗಲು ನನ್ನ ಅಳಿಯನಾದ ಎಂ.ಆರ್. ಚನ್ನಪ್ಪನಿಗೆ ವಹಿಸಿರುತ್ತೇನೆ. ತಾವುಗಳೆಲ್ಲರೂ ಆತನಲ್ಲಿ ಸಹಕರಿಸಿಕೊಂಡು ಹೋಗಬೇಕೆಂದು" ತಿಳಿಸಿ ೧೯೪೦ನೇ ಡಿಸೆಂಬರ್ ಮಾಹೆಯಲ್ಲಿ ಕೆಲವು ಮಂದಿ ನಟನಟಿಯರೊಂದಿಗೆ ಪೂನಾಕ್ಕೆ ಬಂದು ಎರಡು ಬಂಗಲೆಗಳನ್ನು ಅರುಣ ಸ್ಟುಡಿಯೋ ಸಮೀಪದಲ್ಲಿ ಗೊತ್ತುಮಾಡಿ ಇಳಿದುಕೊಂಡೆವು.

ಅಲ್ಲಿಯೇ ಕಥೆಯ ಸ್ಕ್ರಿಪ್ಟನ್ನು ಬರೆಯಿಸಿ ನಿರ್ದೇಶನಕ್ಕೆ ಪಿ. ಪುಲ್ಲಯ್ಯ, ಬಿ.ಎ. ರವರನ್ನು ಗೊತ್ತುಮಾಡಿದೆ. ಪುಲ್ಲಯ್ಯನವರೇ ಸ್ಕ್ರಿಪ್ಟ್ ಬರೆದು ಕವಿಕೇಸರಿ ಬೆಳ್ಳಾವೆ ನರಹರಿ ಶಾಸ್ತ್ರಿಗಳು ಅದನ್ನು ಸರಿಪಡಿಸಿದರು. ಹಾಡುಗಳ ಸಾಹಿತ್ಯವನ್ನು ನರಹರಿ ಶಾಸ್ತ್ರಿಗಳೇ ಬರೆದರು. ಸಂಗೀತ ನಿರ್ದೇಶನಕ್ಕಾಗಿ ಮೈಸೂರಿಗೆ ಬಂದು ಆಸ್ಥಾನ ವಿದ್ವಾನ್ ದೇವೇಂದ್ರಪ್ಪನವರನ್ನು, ಅವರ ಪಾರ್ಟಿಯನ್ನು ಗೊತ್ತುಮಾಡಿ ಬಂದೆನು. ಅಲ್ಲದೆ ಪೂನಾದಲ್ಲಿಯೇ ಸುಭದ್ರಾ ಪರಿಣಯ ಚಿತ್ರದ ಪ್ರಾಕ್ಟೀಸ್ ಪ್ರಾರಂಭವಾಯ್ತು. ಒಳ್ಳೆಯ ಮುಹೂರ್ತ ನೋಡಿ ಕ್ಯಾಮರಾ ಪೂಜೆ ಮಾಡಿಸಿ, ಪ್ರಸಿದ್ಧ ಡೈರೆಕ್ಟರ್‌ರವರಾದ ವಿ.ಶಾಂತಾರಾಂರವರ ಅಮೃತ ಹಸ್ತದಿಂದ ಕ್ಯಾಮರಾ ಸ್ವಿಚ್ ಆನ್ ಮಾಡಿಸಿದೆವು. ಚಿತ್ರದ ಕೆಲಸ ಆರಂಭವಾಗಿ ತಡೆಯಿಲ್ಲದೆ ನಡೆಯುತ್ತಿತ್ತು. ಒಮ್ಮೆ ಔಟ್‌ಡೋರ್ ಚಿತ್ರೀಕರಣಕ್ಕಾಗಿ ಕಾರಿನಲ್ಲಿ ಹೋಗುವಾಗ್ಗೆ ಆಕ್ಸಿಡೆಂಟಾಗಿ ನನ್ನ ತಲೆಗೆ ಪೆಟ್ಟು ಬಿದ್ದು ತುಂಬಾ ತೊಂದರೆಯಾಯಿತು. ಇದರ ಜೊತೆಗೆ ಹೊನ್ನಪ್ಪ ಭಾಗವತರು ಶೂಟಿಂಗಿಗಾಗಿ ಕೊಲ್ಹಾಪುರಕ್ಕೆ ಬಂದಾಗ ಅಂದಿನ ಶೂಟಿಂಗ್ ನಡೆಯದೆ ತೊಂದರೆಯಾಯಿತು. ಮಾರನೆಯ ದಿನ ಹೊನ್ನಪ್ಪನವರು ಶೂಟಿಂಗಿಗೆ ಬೆಂಗಳೂರಿಗೆ ಹೊರಟುಹೋದರು. ಹೀಗಾಗಿ ಈ ಕೆಲಸದಲ್ಲಿ ನನಗೂ ಅನುಭವವಿಲ್ಲದೆ ಎಡವುತ್ತಾ ಕುಂಟುತ್ತಾ ಹತ್ತು - ಹನ್ನೊಂದು ತಿಂಗಳಿಗೆ ಚಿತ್ರ ಪೂರೈಸಿತು. ಇನ್ನು ಪ್ರಿಂಟು, ಕಾಪಿ, ರೀ ರಿಕಾರ್ಡಿಂಗ್ ಉಳಿದಿತ್ತು. ಆ ಕೆಲಸ ಬೊಂಬಾಯಿನ ಸ್ಟುಡಿಯೋನಲ್ಲಿಯೇ ಆಗಬೇಕಾಗಿತ್ತು. ಚಿತ್ರೀಕರಣದ ಕಾರ್ಯದ ಪ್ರಾರಂಭದಲ್ಲಿ ಭಾಗಸ್ಥರಾದ ವೆಂಕಣ್ಣಾಚಾರ್ಯರು ಎರಡು - ಮೂರು ಸಾರಿ ಬಂದವರು ಅನಂತರ ಬರಲೇ ಇಲ್ಲ. ಪ್ರಾರಂಭದಲ್ಲಿ ಕೊಟ್ಟಿದ್ದ ೧೫,೦೦೦ ರೂಪಾಯಿಗಳು ವಿನಾ

ಮತ್ತೆ ಹಣವನ್ನೂ ಕೊಡಲಿಲ್ಲ. ಆ ವೇಳೆಗೆ ಚಿತ್ರಕ್ಕೆ ೬೦,೦೦೦ ರೂಪಾಯಿ ಖರ್ಚಾಗಿದ್ದಿತು. ನನ್ನ ೧೫,೦೦೦/- ರೂ. ಭಾಗಸ್ಥರಾದ ವೆಂಕಣ್ಣಾಚಾರ್ಯರು ಕೊಟ್ಟಿದ್ದ ೧೫,೦೦೦/- ಒಟ್ಟು ೩೦,೦೦೦/ ರೂ. ಜಾತ ೬೦,೦೦೦/- ರೂಪಾಯಿಗಳನ್ನು ಡಾ. ಪಟೇಲ್‌ರವರಿಂದ ಬೊಂಬಾಯಿಗೆ ಹೋಗಿ ಆಗಾಗ್ಗೆ ತೆಗೆದುಕೊಂಡು ಬರುತ್ತಿದ್ದೆ. ಚಿತ್ರ ಪೂರೈಸಿದರೂ ಭಾಗಸ್ಥರು ಬರಲೇ ಇಲ್ಲ. ವಿಧಿಯಿಲ್ಲದೆ ಅವರಿಗೆ ನೋಟೀಸು ಕೊಟ್ಟು ಪುನಃ ಇಪ್ಪತ್ತು ಸಾವಿರ ರೂಪಾಯಿಗಳನ್ನು ಡಾಕ್ಟರ್ ಪಟೇಲರ ಹತ್ತಿರ ತಂದು ಚಿತ್ರದ ಪ್ರಿಂಟುಗಳನ್ನು ತಯಾರ್ಮಾಡಿಸಿ, ಬೆಂಗಳೂರಿಗೆ ಬಂದು, ಮೈಸೂರು ಚಾಮುಂಡೇಶ್ವರಿ ಟಾಕೀಸಿನಲ್ಲಿ ರಿಲೀಜ್ ಮಾಡಲು ಗೊತ್ತುಮಾಡಿದೆ. ಆ ಭಾಗಸ್ಥರು ಬಂದು ತಂಟೆ ಮಾಡಿದರು. ಆಗ ಕೋರ್ಟಿಗೆ ಹೋಗುವುದುಚಿತವಲ್ಲವೆಂದು ಆಫೀಸಿನಲ್ಲಿ ಪಂಚಾಯಿತರ ಮುಖಾಂತರವೇ ತೀರ್ಮಾನ ಮಾಡಿಕೊಂಡೆನು. ಭಾಗಸ್ಥರ ಅವಿವೇಕದಿಂದ ತುಂಬ ಕಷ್ಟನಷ್ಟವಾಗಿ ಎಷ್ಟು ಕಷ್ಟಪಟ್ಟರೂ ಏನೂ ಪ್ರಯೋಜನವಿಲ್ಲವಾಯ್ತು. ಇದಕ್ಕೇ ದುರದೃಷ್ಟವೆಂದು ಹೇಳಬೇಕು. ಸುಭದ್ರ ಚಿತ್ರವನ್ನು ಹಂಚಿಕೆದಾರರಿಗೆ ಕೊಟ್ಟು ಕೆಲವು ಭಾಗದ ಚಿತ್ರದ ಹಕ್ಕನ್ನು ಭಾಗಸ್ಥರಿಗೆ ಕೊಟ್ಟು ಕೊಂಚ ಋಣವನ್ನು ತಲೆಯಮೇಲೆ ಹೊತ್ತದಾಯಿತು.

ಜೀವನ ನಾಟಕ

ಅದೇ ವರುಷ ಅಂದರೆ ೧೯೪೨ನೇ ಇಸವಿಯ ದಸರಾ ಸಮಾರಂಭಧಲ್ಲಿ ಶ್ರೀ ಜಯಚಾಮರಾಜ ಒಡೆಯರವರು ನನಗೆ 'ನಾಟಕರತ್ನಂ' ಎಂಬ ಬಿರುದನ್ನು ರತ್ನ ಖಚಿತವಾದ ಗಂಡಭೇರುಂಡವನ್ನೊಳಗೊಂಡ ಕಂಕಣವನ್ನು ಆಶೀರ್ವಾದಪೂರ್ವಕ ದಯಪಾಲಿಸಿದರು.

ಸಂಘದ ಮುಖ್ಯ ನಟರುಗಳಾಗಿದ್ದ ಗಂಗಾಧರರಾಯರು, ಸುಬ್ಬರಾಯರು, ಗುರುಮೂರ್ತಪ್ಪನವರು, ಕೇಶವಮೂರ್ತಿಗಳು, ಮ್ಯಾನೇಜಿಂಗ್ ನರಸಿಂಹಮೂರ್ತಿಯವರು, ಮುರಾರಾಚಾರ್ ಇವರುಗಳೇ ಮೊದಲಾದವರು ತಮ್ಮನ್ನು ಚಿತ್ರಕ್ಕೆ ತೆಗೆದುಕೊಳ್ಳದೆ ಬಿಟ್ಟರೆಂಬ ಅಸಮಾಧಾನದಿಂದ ಸಂಸ್ಥೆಯನ್ನು ಈ ವೇಳೆಗೆ ಬಿಟ್ಟುಹೋಗಿದ್ದರು. ಉಳಿದವರೊಡನೆ ನಾಟಕಗಳನ್ನು ಅಭ್ಯಾಸಮಾಡಿಸಿ ಮದ್ರಾಸಿಗೆ ಸಂಘವನ್ನು ತೆಗೆದುಕೊಂಡುಹೋದೆ. ಎರಡನೆಯ ಮಹಾಯುದ್ಧದ ಸಮಯವಾಗಿದ್ದರಿಂದ ಉತ್ಪತ್ತಿ ಸಮರ್ಪಕವಾಗಿ ಆಗಲು ಅವಕಾಶವಾಗಲಿಲ್ಲ. ಬಿ. ಜಯಮ್ಮನವರಿಗೆ ೬-೧-೪೨ರಲ್ಲಿ ಗಂಡುಮಗುವು ಜನನವಾಗಿ ಗುರುಸ್ವಾಮಿಯೆಂದು ಹೆಸರಿಟ್ಟೆವು.

ಜೀವನ ನಾಟಕ ಚಿತ್ರವನ್ನು ತೆಗೆಯಬೇಕೆಂಬ ಇಚ್ಛೆಯಿಂದ ಕೊಯಮತ್ತೂರಿಗೆ ಹೋಗಿ ಸ್ಟುಡಿಯೋ ಗೊತ್ತುಮಾಡಿಕೊಂಡು ಗೊತ್ತುಮಾಡಿಕೊಂಡು ಬಂದೆ. ಪ್ರಸಿದ್ಧ ಸಾಹಿತಿಗಳಾದ ಅ.ನ. ಕೃಷ್ಣರಾಯರನ್ನು ನೋಡಿ ಅವರಿಂದ ಕಥೆ ಬರೆಸಿ, ಸಹಾಯಕ್ಕೆ ಅವರನ್ನೂ ಕರೆದುಕೊಂಡು, ಡೈರೆಕ್ಷನ್ನಿಗೆ ವಹಾಬ್ ಎಂಬುವರನ್ನು ಗೊತ್ತುಮಾಡಿದೆ. ಅ.ನ. ಕೃಷ್ಣರಾಯರನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗಿ ಆಗ ಹೆಸರುಗಳಿಸಿದ್ದ ಶಾಂತಾ ಹುಬ್ಳೀಕರ್ ಎಂಬಾಕೆಯನ್ನೂ ಕೆಂಪರಾಜ ಅರಸ್‌ರವರನ್ನೂ ಗೊತ್ತು ಮಾಡಿದೆವು. ಕೊಯಮತ್ತೂರಿನ ಸೆಂಟ್ರಲ್ ಸ್ಟುಡಿಯೋನಲ್ಲಿ ಕಾಲ್‌ಷೀಟ್ ಒಂದಕ್ಕೆ ೨೫೦/- ರೂ. ನಂತೆ ಮಾತನಾಡಲಾಗಿತ್ತು. ಔಟ್‌ಡೋರ್ ಶೂಟಿಂಗಿಗೆ ಮೈಸೂರಿನ ಬೃಂದಾವನ ಗಾರ್ಡನ್ಸ್ (ಕನ್ನಂಬಾಡಿ)ಗೆ ಹೋಗಿ ಆರು ತಿಂಗಳಿಗೆ ಚಿತ್ರ ಪೂರೈಸಿದೆವು. ೧೯೪೨ನೇ ಅಕ್ಟೋಬರ್ ಮಾಹೆಯಲ್ಲಿ ರಿಲೀಜ್ ಮಾಡಿದೆವು.

ಗ್ರಹಗತಿಗಳು ತುಂಬಾ ಕ್ರೂರವಾಗಿದ್ದಿತು. ನನ್ನ ಅಳಿಯನಾದ ಎಂ.ಆರ್. ಚನ್ನಪ್ಪನು ಮನಸ್ತಾಪ ಮಾಡಿಕೊಂಡಿದ್ದರಿಂದ ಎರಡು ತಿಂಗಳು ತಿಪಟೂರಿನಲ್ಲಿ ಸಂಘವನ್ನು ನಿಲ್ಲಿಸಿ, ಸೀನರಿಗಳನ್ನು ತಿಪಟೂರಿನಲ್ಲಿಯೇ ಇಟ್ಟಿದ್ದೆ. ಆ ವೇಳೆಯಲ್ಲಿ ತಿಪಟೂರಿನಲ್ಲಿ ಸುಮಾರು ಎಂಟು ಹತ್ತು ಸಾವಿರ ರೂ. ಬಾಳುವ ಡ್ರೆಸ್ಸು, ಸಾಮಾನುಗಳು ಕಳುವಾಗಿ ಹೋದುವು. ಅದೇ ಸಮಯದಲ್ಲಿ ಯುದ್ಧದ ಭಯ ಹೆಚ್ಚಿ ಬೆಂಗಳೂರು ಬಿಟ್ಟು ನನ್ನ ಸಂಸಾರವನ್ನು ಗುಬ್ಬಿಗೆ ಕರೆತಂದೆ. ಗುಬ್ಬಿಗೆ ಹೋಗುವಾಗ್ಗೆ ಶಿವಾನಂದ ಥಿಯೇಟರನ್ನು (Movieland Talkies) ಶ್ರೀ ಸಿ.ವಿ. ನರಸಿಂಹಯ್ಯಂಗಾರ್‌ರವರಿಗೆ ಬಹು ಅಗ್ಗವಾದ ಬೆಲೆಗೆ ಅಂದರೆ ೯೦೦೦/- ರೂ.ಗಳಿಗೆ ಮಾರಿದೆ.

೧೯೧೭ರಲ್ಲಿ ನನಗೆ ಯಜಮಾನಿಕೆ ಬಂದು ೧೯೪೧ರ ವರೆವಿಗೂ ದುಡಿದು ಬಹು ಕಷ್ಟದಿಂದ ಸಂಪಾದಿಸಿದ ಹಣವನ್ನೆಲ್ಲಾ ನಾಟಕ ಕಲೆಯ ಅಭಿವೃದ್ಧಿಗೂ ಚಿತ್ರಕಲೆಗೂ ವಿನಿಯೋಗಿಸಿದೆ. ಸಾಗರ್ ಚಿತ್ರಮಂದಿರವನ್ನು ಕಟ್ಟುವಾಗ ಮಾಡಿದ ಸಾಲ ಹಾಗೆಯೇ ನಿಂತಿತು.

ಜೀವನ ನಾಟಕ ರಿಲೀಜ್ ಆದನಂತರ ಚಿತ್ರದುರ್ಗದ ಮಹಾಜನರು ೧೯೪೨ರಲ್ಲಿ ನನಗಾಗಿ ಒಂದು ಸತ್ಕಾರಕೂಟಸಮಾರಂಭವನ್ನು ಈಗಿನ ಮಂತ್ರಿಗಳಾದ ಶ್ರೀಮಾನ್ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ನಾನು ಭಾಷಣ ಮಾಡುವಾಗ್ಗೆ ಬೆಂಗಳೂರಿನಲ್ಲಿ ಲಿಮಿಟೆಡ್ ಸಿನೆಮಾ ಕಂಪನಿಯನ್ನು ಮಾಡುತ್ತೇನೆಂದು ಹೇಳಿದೆ. ಆಗ ಎಲ್ಲರೂ ಸಂತೋಷದಿಂದ ಹರ್ಷಧ್ವನಿಮಾಡಿ ಸಹಕರಿಸುವುದಾಗಿ ಒಪ್ಪಿಕೊಂಡರು. ನಿಜಲಿಂಗಪ್ಪನವರು ನನ್ನಸಹಾಯಕ್ಕಾಗಿ ನನ್ನ ಜೊತೆಗೆ ಸಿ.ಆರ್. ಬಸವರಾಜು ಬಿ.ಎ ಬಿ.ಎಲ್.ರವರನ್ನೂ, ದುಮ್ಮಿ ಮುರಿಗಪ್ಪನವರನ್ನೂ ಎಸ್. ಗುರುನಾಥ್‌ರವರನ್ನೂ ಕಳುಹಿಸಿದರು. ನಾವು ನಾಲ್ಕು ಜನರೂ ಸೇರಿ ಬೆಂಗಳೂರಿನಲ್ಲಿ ಕರ್ನಾಟಕ ಫಿಲಂ ಕಾರ್ಪೊರೇಷನ್ ಎಂಬ ಹೆಸರಿನಿಂದ ಕಂಪನಿಯನ್ನು ರಿಜಿಸ್ಟರ್ ಮಾಡಿಸಿ ಷೇರುಗಳನ್ನು ಕ್ಯಾನ್‌ವಾಸ್ ಮಾಡಿ ನಾಲ್ಕು ಲಕ್ಷ ರೂಪಾಯಿಗಳನ್ನು ಜೊತೆ ಮಾಡುವುದರಲ್ಲಿಯೇ ಕೆಲವಾರು ದಿನಗಳು ಕಳೆದುವು. ಆದರೆ ಯುದ್ಧ ಕಾಲವಾದ್ದರಿಂದ ಮಿಷನರಿ ಸಾಮಾನುಗಳು ಸಿಗುವುದು ದುಸ್ತರವಾಗಿ ಬೆಂಗಳೂರಿನಲ್ಲಿಯೇ ಕರ್ನಾಟಕ ಫಿಲಂ ಡಿಸ್ಟ್ರಿಬ್ಯೂಟರ್ಸ್ ಎಂಬುದಾಗಿ ತೆರೆದೆವು. ಅನಂತರ ಜಯಮ್ಮನವರನ್ನು ಭರ್ತೃಹರಿ, ಮತ್ತು ಬಿ.ಎನ್. ರೆಡ್ಡಿಯವರ ಸ್ವರ್ಗಸೀಮ ಚಿತ್ರಗಳಿಗೆ ಕಳುಹಿಸಿದೆ.

ಹೇಮರೆಡ್ಡಿ ಮಲ್ಲಮ್ಮ

ನಮ್ಮ ಸಂಘವು ಮೈಸೂರಿನಲ್ಲಿ ನಾಟಕವಾಡುತ್ತಿದ್ದಾಗ್ಗೆ ಎಂ.ಆರ್. ಚನ್ನಪ್ಪ, ರಾಜಮ್ಮ, ಕಾವೇರಮ್ಮ (ರಾಜಕುಮಾರಿ) ಮೊದಲಾದವರು ಸಂಘವನ್ನು ಬಿಟ್ಟುಹೋದರು. ಕೆಲದಿನಗಳ ನಂತರ ಎ.ಆರ್. ಚೆನ್ನಪ್ಪನು ನನ್ನ ಮೇಲೆ ವಿರುದ್ಧವಾಗಿ ಎಡತೊರೆ (ಕೆ.ಆರ್.ನಗರ)ಯಲ್ಲಿ ರಾಮಯ್ಯಶೆಟ್ಟರ ಸಹಕಾರದಿಂದ ಒಂದು ನಾಟಕ ಸಂಸ್ಥೆಯನ್ನು ಕಟ್ಟಿ ಕೆಲ ನಟರನ್ನು ನಮ್ಮ ಸಂಘದಿಂದ ಕರೆದುಕೊಂಡು ಹೋದುದರಿಂದ ನಾನು ತುಂಬಾ ಕಷ್ಟಗಳಿಗೆ ಎರವಾಗಬೇಕಾಯಿತು. ಸಂಸ್ಥೆಯನ್ನು ನಿಲ್ಲಿಸದೆ ಹಾಗೆಯೇ ನಡೆಸಿಕೊಂಡು ಬರುತ್ತಾ ೧೯೪೪ನೇ ಇಸವಿಯಲ್ಲಿ ಹೇಮರೆಡ್ಡಿ ಮಲ್ಲಮ್ಮನ ಚಿತ್ರವನ್ನು ತೆಗೆಯಲು ಯೋಚಿಸಿ ಮದರಾಸಿಗೆ ಹೋಗಿ ಸ್ಟುಡಿಯೊ ಗೊತ್ತುಮಾಡಿಕೊಂಡುಬಂದೆನು. ಆ ಸಮಯದಲ್ಲಿ ಮದರಾಸಿನ ಸೌಂದರರಾಜನ್ ಎಂಬುವರು ನನ್ನಲ್ಲಿಗೆ ಬಂದು ತಾವು ಭಾಗಕ್ಕೆ ಸೇರುವುದಾಗಿ ಡೈರೆಕ್ಟ್ ಸಹ ಮಾಡುವುದಾಗಿಯೂ ಹೇಳಿ ನನ್ನನ್ನು ಕರೆದುಕೊಂಡು ಹೋದರು.

ನಂತರ ನಾನು ನನಗೆ ಬೇಕಾಗುವ ನಟವರ್ಗದವರನ್ನು ಕರೆದುಕೊಂಡು ಮದ್ರಾಸಿಗೆ ಹೋಗಿ ಟಿ. ನಗರದ ಕೋಟ್ಸ್ ರೋಡಿನಲ್ಲಿ ಮನೆ ಗೊತ್ತುಮಾಡಿಕೊಂಡು ಚಿತ್ರದ ಅಭ್ಯಾಸಕ್ಕೆ ಮೊದಲು ಮಾಡಿದೆ. ಕವಿಕೇಸರಿ ಬೆಳ್ಳಾವಿ ನರಹರಿ ಶಾಸ್ತ್ರಿಗಳಿಂದ ಕಥೆ ಬರೆಯಿಸಿ ಅದು ಚಿತ್ರಕ್ಕೆ ಸರಿಹೋಗದೆ ರಾಮಯ್ಯನವರಿಂದ ಬರೆಸಿದೆವು. ಅದೂ ಸರಿಹೋಗದೆ ಜಿತನ್ ಬೆನರ್ಜಿಯೆಂಬ ಉತ್ತಮ ಡೈರೆಕ್ಟರ ಸಲಹೆ ತೆಗೆದುಕೊಂಡು ಪುನಃ ನರಹರಿಶಾಸ್ತ್ರಿಗಳಿಂದಲೇ ಬರೆಯಿಸಿ ಶೂಟಿಂಗ್‌ಗೆ ಮೊದಲು ಮಾಡಿದೆವು.

ಮೊದಲನೆಯ ದಿನ ನನ್ನ ಭಾಗಸ್ಥರೆಂದು ಹೇಳಲಾದ ಸೌಂದರರಾಜ ಐಯ್ಯಂಗಾರ್ಯರೇ ಡೈರೆಕ್ಟ್ ಮಾಡಿ ಮೂರು - ನಾಲ್ಕು ದಿನ ಶೂಟಿಂಗ್ ಮಾಡಿದರು. ಅದುವರೆಗೂ ನಮಗೂ ಅವರಿಗೂ ಭಾಗದ ಅಗ್ರಿಮೆಂಟು ಮಾಡಿಕೊಂಡಿರಲಿಲ್ಲ. ಎಲ್ಲ ಕೆಲಸಗಳಿಗೂ ನಾನೇ ಖರ್ಚು ಮಾಡುತ್ತಿದ್ದೆ. ಅವರಿಗೆ ೩೦,೦೦೦ ರೂಪಾಯಿಗಳು ಖರ್ಚಾಗಿದ್ದವು. ಅನಿರೀಕ್ಷಿತವಾಗಿ ನಮ್ಮ ಡೈರೆಕ್ಟರ್‌ರವರಾದ ಸೌಂದರರಾಜನ್ ಅರ್ಥಾತ್ ಸುಂದರರಾಜಯ್ಯಂಗಾರ್ಯರು ಅಮೆರಿಕಾಗೆ ಹೋಗುವ ಸಂದರ್ಭ ಒದಗಿತು. ಆಗ ನಾನು, ನೀವು ಅಮೆರಿಕಾಗೆ ಹೋಗುತ್ತಿದ್ದೀರಿ, ಈಗ ನಾನು ಮಾಡುವುದಾದರೂ ಏನು? ಎಂದು ಕೇಳಿದೆ. ಅವರು 'ಜಿತೆನ್ ಬ್ಯಾನರ್ಜಿಯವರಿಗೆ ನಿರ್ದೇಶಿಸಲು ಹೇಳುತ್ತೇನೆ, ನೀವು ಚಿತ್ರವನ್ನು ಪೂರ್ತಿ ಮಾಡಿ' ಎಂದರು. ಹಣವನ್ನು ಕೊಡಿರೆಂದು ಕೇಳಿದಕ್ಕೆ 'ನಾನು ಹಣವನ್ನು ಕೊಡಲಾಗುವುದಿಲ್ಲ, ನಿಮಗೆ ಇಷ್ಟವಿದ್ದರೆ ಭಾಗಕ್ಕೆ ಇಟ್ಟುಕೊಳ್ಳಿ ಇಲ್ಲವಾದರೆ ಬಿಡಿ' ಎಂದು ಹೇಳಿಬಿಟ್ಟರು. ನಾನು ಭೂಮಿಗೆ ಇಳಿದುಹೋದೆ. ಏಕೆಂದರೆ, ಮದರಾಸು ಕನ್ನಡ ರಾಜ್ಯವಲ್ಲ; ಫಿಲಂ ವ್ಯವಹಾರ ಮದರಾಸಿನಲ್ಲಿ ನನಗೆ ಹೊಸದು. ಎಲ್ಲರೂ ಅವರ ಜನಗಳೇ. ಅಲ್ಲದೆ ಸ್ಟುಡಿಯೋ ಜನಗಳೆಲ್ಲಾ ಅವರು ಹೇಳಿದಂತೆ ಕೇಳುತ್ತಿದ್ದರೇ ಹೊರತು ನಮ್ಮ ಮಾತು ಯಾರೂ ಕೇಳುತ್ತಿರಲಿಲ್ಲ. ಹೀಗಿರುವಾಗ ನನ್ನ ಸ್ಥಿತಿ ಏನಾಗಿರಬೇಕು

ಎಂಬುದನ್ನು ವಾಚಕರು ಊಹಿಸಬಹುದು. ನನಗೆ ದಿಕ್ಕು ತೋಚದಂತಾಗಿ ದೈವೇಚ್ಛೆ ಇದ್ದಂತಾಗಲಿ ಎಂದು ಸುಮ್ಮನಾಗಿ ಅಗ್ರಿಮೆಂಟ್ ಮಾಡಿದ್ದಾಯಿತು. ಆಗ ಭಾಗಸ್ಥರು ಬ್ಯಾನರ್ಜಿಯವರಿಗೆ ಡೈರೆಕ್ಷನ್ ಮಾಡಲು ಹೇಳಿ ಅಮೆರಿಕಾಗೆ ಹೊರಟು ಹೋದರು. 'ಹೇಮರೆಡ್ಡಿ ಮಲ್ಲಮ್ಮ' ಚಿತ್ರದ ಸಂಗೀತಕ್ಕೆ ವಿ. ನಾಗಯ್ಯನವರನ್ನೂ, ಈಶ್ವರ ಪಾತ್ರಕ್ಕೆ ಹೊನ್ನಪ್ಪಭಾಗವತರ್‌ರವರನ್ನೂ, ಹೇಮರೆಡ್ಡಿ ಪಾತ್ರಕ್ಕೆ ಸಿ.ಬಿ. ಮಲ್ಲಪ್ಪನವರನ್ನೂ, ವೇಮನನ ಪಾತ್ರಕ್ಕೆ ಕು.ರಾ. ಸೀತರಾಮಶಾಸ್ತ್ರಿಗಳನ್ನೂ, ಅತ್ತೆ ಪಾತ್ರಕ್ಕೆ ಲಕ್ಷ್ಮಮ್ಮಸಾನಿಯವರನ್ನೂ, ಮಲ್ಲಮ್ಮನ ಪಾತ್ರಕ್ಕೆ ಜಯಮ್ಮನನ್ನೂ ಗೊತ್ತು ಮಾಡಿ ನಾನು ಭರಮರೆಡ್ಡಿ ಅಂದರೆ ಮಲ್ಲಮ್ಮನ ಗಂಡನ ಪಾತ್ರವನ್ನೂ ವಹಿಸಿಕೊಂಡೆ. ಚಿತ್ರವು ಅರ್ಧ ಪೂರೈಸಿದ್ದಾಗ ನನ್ನ ತಂದೆಯವರಿಗೆ ಅನಾರೋಗ್ಯವೆಂದು ಟೆಲಿಗ್ರಾಂ ಬಂದಿತು. ಯುದ್ಧದ ಕಾಲವಾದುದರಿಂದ ಟೆಲಿಗ್ರಾಂ ಆಗಲೀ, ರೈಲುಗಳಾಗಲೀ ಕಾಲಕ್ಕೆ ಸರಿಯಾಗಿ ಬರುತ್ತಿರಲಿಲ್ಲ - ನಾನು ಗುಬ್ಬಿಗೆ ಬಂದ ಮಾರನೆಯ ದಿನವೇ ನನ್ನ ತೀರ್ಥರೂಪುರವರಾದ ಹಂಪಣ್ಣನವರು ಕೈಲಾಸವಾಸಿಗಳಾದರು. ನಾನು ಅಲ್ಲಿಯೇ ಇದ್ದು ಕರ್ಮಾದಿಗಳನ್ನು ಪೂರೈಸಿಕೊಂಡು ಮದರಾಸಿಗೆ ಹಿಂತಿರುಗಿ ಚಿತ್ರದ ಕಾರ್ಯ ಮುಂದುವರಿಸಿದೆ. ಅದೇ ಸಮಯದಲ್ಲಿ ಅದೇ ಸ್ಟುಡಿಯೋನಲ್ಲಿ ದಕ್ಷಿಣ ಭಾರತದಲ್ಲೆಲ್ಲಾ ಹೆಸರಾದ ಶ್ರೀಮತಿ ಎಂ.ಎಸ್. ಸುಬ್ಬಲಕ್ಷ್ಮಿ, ವಿ. ನಾಗಯ್ಯ ಇವರನ್ನೊಳಗೊಂಡು, ಹೆಸರಾಂತ ಆರ್ಟ್ ಡೈರೆಕ್ಟರ್‌ರವರಿಂದ ಸೆಟ್ಟಿಂಗ್ಸ್‌ಗಳ ಡಿಸೈನ್ ಪ್ರಕಾರ ದೊಡ್ಡ ದೊಡ್ಡ ಸೆಟ್‌ಗಳನ್ನು ಹಾಕಿಸಿ ತಯಾರಾದ ಸುಪ್ರಸಿದ್ಧ ಭಕ್ತ ಮೀರಾ ಚಿತ್ರವೂ ತಯಾರಾಗುತ್ತಿತ್ತು. ಮ್ಯೂಸಿಕ್‌ಗೆ ಮೂವತ್ತು ಮೂವತ್ತೆರಡು ವಾದ್ಯಗಳು ಉಪಯೋಗಿಸಲ್ಪಟ್ಟಿದ್ದವು. ಮೀರಾಬಾಯಿ ಚಿತ್ರ ಶೂಟಿಂಗ್ ಇಲ್ಲದ ಕಾಲದಲ್ಲಿ ನಮ್ಮ ಚಿತ್ರ 'ಹೇಮರೆಡ್ಡಿ ಮಲ್ಲಮ್ಮ'ನ ಶೂಟಿಂಗ್ ಹರುಕು ಮುರುಕು ಸೆಟ್ಟಿಂಗ್‌ನಲ್ಲಿ ನಡೆಯಬೇಕಾಗಿತ್ತು. ಹಾಗೂ ಹೀಗೂ ಚಿತ್ರ ಮುಗಿಯಬೇಕಾದರೆ ಹತ್ತು ಹನ್ನೊಂದು ತಿಂಗಳಾಗಿತ್ತು. ಟ್ರಯಲ್ ಹಾಕಿ ನೋಡಿದರೆ ವಿಜೃಂಭಣೆಯಿಂದ ತೆಗೆದ ಮೀರಾ ಚಿತ್ರಕ್ಕೂ ಉದಾಸೀನದಿಂದ ತೆಗೆದ ಮಲ್ಲಮ್ಮನ ಚಿತ್ರಕ್ಕೂ ಭೂಮ್ಯಾಕಾಶದಷ್ಟು ವ್ಯತ್ಯಾಸ ಕಾಣುತ್ತಿತ್ತು.

ಹೀಗಿದ್ದೂ 'ಹೇಮರೆಡ್ಡಿ ಮಲ್ಲಮ್ಮ' ಚಿತ್ರ ಬಹಳ ಚೆನ್ನಾಗಿ ಬಂದಿದ್ದು ರೀ ರಿಕಾರ್ಡಿಂಗ್, ಕಾಪಿಗಳು ತಯಾರಾಗಬೇಕಾಗಿತ್ತು. ಆ ಕೆಲಸವನ್ನೂ ಪೂರೈಸಿ ಚಿತ್ರವನ್ನು ಬೆಂಗಳೂರು, ತುಮಕೂರು, ಮೈಸೂರು, ದಾವಣಗೆರೆ, ಚಿತ್ರದುರ್ಗಗಳಲ್ಲಿ ರಿಲೀಜು ಮಾಡಲು ಪ್ರಯತ್ನಿಸಿ, ಒಂದು ದಿನ ಟೆಕ್ನಿಕಲ್ ಡಿಪಾರ್ಟುಮೆಂಟಿನವರಿಗೆ ಪಾರ್ಟಿ ಕೊಡುವ ಏರ್ಪಾಟು ಮಾಡಿ ಕೆಲವರಿಗೆ ಉಂಗುರಗಳನ್ನು ಬಹುಮಾನ ಮಾಡಲೂ ಏರ್ಪಾಟು ಮಾಡಿದ್ದೆವು. ಆ ದಿನವೇ, ಅಮೆರಿಕಾಕ್ಕೆ ಹೋಗಿದ್ದ ಕೇವಲ ಹೆಸರಿನ ಭಾಗಸ್ಥರಾದ ಶ್ರೀ ಸುಂದರರಾಜಯ್ಯಂಗಾರ್‌ರವರು ಬಂದು ಅಂದಿನ ಸಮಾರಂಭದಲ್ಲಿ ಭಾಗಿಗಳಾದರು. ಚಿತ್ರ ಬಿಡುಗಡೆಯಾಗುವ ಮೊದಲೇ ನನ್ನ ಮಾತೋಶ್ರೀಯವರು ಗುಬ್ಬಿಯಲ್ಲಿ ಶಿವೈಕ್ಯರಾದರು. ಆಗ ಗುಬ್ಬಿಗೆ ಹೋಗಿ ಕರ್ಮಾದಿಗಳನ್ನು ಪೂರೈಸಿ ಚಿತ್ರವನ್ನು ಆರು ಚಿತ್ರಮಂದಿರಗಳಲ್ಲಿ ೧೯೪೫ರಲ್ಲಿ ಬಿಡುಗಡೆ ಮಾಡಿದೆವು. ಚಿತ್ರದ ಬಿಡುಗಡೆ ಸಮಯದಲ್ಲಿ ಬೆಂಗಳೂರಿಗೆ ಬಂದಿದ್ದ ಭಾಗಸ್ಥರಾದ - ಅಂದರೆ ದುಡ್ಡು ದುಗ್ಗಾಣಿ ಕೊಡದ ಭಾಗಸ್ಥರು ತಮ್ಮ ಭಾಗ

ಕೊಡಬೇಕೆಂದು ತಂಟೆ ತಕರಾರಿಗೆ ಕೂತರು. ಅಗ್ರಿಮೆಂಟ್ ಬರೆದು ಕೊಟ್ಟಿದ್ದ ಕಾರಣ ಬಾಯಿಮುಚ್ಚಿಕೊಂಡು ೨೦,೦೦೦ ರೂಪಾಯಿಗಳನ್ನು ಕೊಡಲೊಪ್ಪಿ, ಕೆಲದಿನಗಳ ನಂತರ ಕೊಟ್ಟು ಬಿಡುಗಡೆ ಮಾಡಿಕೊಂಡೆನು. ಅದು ಒಂದು ಘಟ್ಟ. ಈ ರೀತಿ ಗ್ರಹಚಾರಗಳು ಒಂದಾದ ಮೇಲೊಂದರಂತೆ ಬರುತ್ತಿದ್ದುವು. ಭಗವಂತನ ಆಶೀರ್ವಾದದಿಂದ ಚಿತ್ರಕ್ಕೆ ಒಳ್ಳೆಯ ಕೀರ್ತಿ ಬಂದುದೇ ಅಲ್ಲದೆ ಉತ್ಪತ್ತಿಯೂ ಚೆನ್ನಾಗಿ ಆಗಿ ನನ್ನ ಸ್ಥಿತಿಗತಿ ತುಂಬಾ ಉತ್ತಮವಾಯಿತು.

ವಜ್ರಮಹೋತ್ಸವ

೧೯೪೩ನೇ ಇಸವಿಯಲ್ಲಿ ಬೆಂಗಳೂರು ಗಾಂಧಿನಗರದಲ್ಲಿರುವ ಗೋದೂರಾಯರ ಮಠದ ಕೆಲವು ಭಾಗವನ್ನು ವರ್ಷಕ್ಕೆ ೫೦೦ ರೂಪಾಯಿ ಬಾಡಿಗೆಯಂತೆ ೫೦ ವರ್ಷದ ಲೀಜಿಗೆ ಗೊತ್ತು ಮಾಡಿ ಮೇಲ್ಕಂಡ ಗೋದೂರಾಯರ ಮಠದ ಮುಖ್ಯಸ್ಥರಿಂದ ಕರಾರು ಮಾಡಿಸಿಕೊಂಡು ರಿಜಿಸ್ಟರ್ ಮಾಡಿಸಿದೆ. ಅದಾದ ಸುಮಾರು ಒಂದು ಒಂದೂವರೆ ತಿಂಗಳಲ್ಲಿಯೇ ಮುನಿಸಿಪಾಲಿಟಿಯವರು ಆ ಜಾಗಗಳನ್ನು ಸೈಟುಗಳನ್ನು ಮಾಡಬೇಕೆಂಬ ಅಭಿಪ್ರಾಯದಿಂದ (Acquire) ವಶ ಮಾಡಿಕೊಳ್ಳಲು ಬಂದರು - ಅದಕ್ಕೆ ತಡೆಯುವ (Stay) ಆರ್ಡರನ್ನು ತಂದು ನಿಲ್ಲಿಸಲಾಯಿತು. ಅನಂತರ ಸ್ವಾಟು ಇನ್‌ಸ್ಪೆಕ್ಷನ್ನಿಗೆ ಮಂತ್ರಿಗಳಾಗಿದ್ದ ರಾಜಗೋಪಾಲಾಚಾರ್‌ರವರು, ಕೆಲವು ಆಫೀಸರುಗಳು, ಶ್ರೀ ಸಿ.ವಿ. ನರಸಿಂಹಯ್ಯಂಗಾರ್‌ರವರು, ಬೇಲೂರು ಶ್ರೀನಿವಾಸಯ್ಯಂಗಾರ್, ಇನ್ನೂ ಇತರ ಖಾಸಗಿ ದೊಡ್ಡಮನುಷ್ಯರು ಸೇರಿ ಸ್ಥಳವನ್ನು ಪರಿಶೀಲಿಸಿ ಮುನಿಸಿಪಾಲಿಟಿಯವರು ಈ ಜಾಗವನ್ನು ಅಕ್ವೈರ್ ಮಾಡಿಕೊಂಡು, ವೀರಣ್ಣವರಿಗೆ ನಾಟಕದ ಥಿಯೇಟರಿಗೆ ಬೇಕಾಗುವಷ್ಟು ಸ್ಥಳವನ್ನು ಫ್ರೀಯಾಗಿ ಕೊಡಲಿ ಎಂದು ತೀರ್ಮಾನಿಸಿದರು. ಆ ಸ್ಥಳದಲ್ಲಿ ಲೈಸೆನ್ಸ್ ತೆಗೆದುಕೊಂಡು ಥಿಯೇಟರನ್ನು ಕಟ್ಟಲು ಪ್ರಾರಂಭಿಸಿದೆ. ಅಲ್ಲಿ ಇದ್ದ ದೊಡ್ಡ ಹಳ್ಳವನ್ನು ಮುಚ್ಚಲು ಆದ ಪ್ರಯಾಸ, ಖರ್ಚು ಹೇಳಲಸದಳವಾಗಿದೆ. ಅಂತೂ ತುಂಬಾ ಕಷ್ಟಪಟ್ಟು ವಿಶೇಷ ಹಣ ವ್ಯಯಮಾಡಿ ಥಿಯೇಟರನ್ನು ಹತ್ತು ತಿಂಗಳಲ್ಲಿ ಕಟ್ಟಿ ಪೂರೈಸಿ ಗುಬ್ಬಿ ಥಿಯೇಟರ್ ಎಂಬ ಹೆಸರಿನಿಂದ ಶ್ರೀ ರಾಯನ್‌ರವರ ಅಮೃತ ಹಸ್ತದಿಂದ ಪ್ರಾರಂಭೋತ್ಸವವನ್ನು ಶ್ರೀಕೃಷ್ಣಲೀಲಾ ನಾಟಕದೊಂದಿಗೆ ನೆರವೇರಿಸಿದೆ.

ಗುಬ್ಬಿ ಥಿಯೇಟರಿನಲ್ಲಿ ಐದು ಆರು ತಿಂಗಳುಗಳು ನಾಟಕಗಳನ್ನಾಡಿ ಕಳೆದ ಮೇಲೆ ಮದ್ರಾಸಿನಿಂದ ಶ್ರೀ ಶಕ್ತಿ ನಾಟಕ ಮನ್ರಂ ಸಂಘದವರು ಬಂದು ನಾಟಕಗಳನ್ನಾಡಲು ಪ್ರಾರಂಭಿಸಿದರು. ಅವರಲ್ಲಿ ವಿಧಿ, ಮನೋಹರನ್, ಕುಳಿವಿಷಂ ಮೊದಲಾದ ನಾಟಕಗಳೂ ತುಂಬಾ ಹೆಸರು ಗಳಿಸಿದ್ದವು - ಅವರಲ್ಲಿ ಕೆಲವರು ನಟರುಗಳು ತುಂಬಾ ಚೆನ್ನಾಗಿ ಅಭಿನಯಿಸುತ್ತಿದ್ದರು. ಒಂದು ಸಾರಿ ಅವರ ನಾಟಕಕ್ಕೆ ಹೋಗಿ ನೋಡುತ್ತಿದ್ದಾಗ, ಒಬ್ಬ ನಟನ ಅಭಿನಯವು ತುಂಬಾ ಚೆನ್ನಾಗಿದ್ದು ನನ್ನನ್ನು ಆಕರ್ಷಿಸಿತು. ಆಗ ನಾನು ರಂಗಮಂಚದ ಮೇಲೆ ಹೋಗಿ ಆತನ ಕಲಾಕೌಶಲ್ಯವನ್ನು ಮೆಚ್ಚಿ ಸಂತೋಷದಿಂದ ನಿನ್ನ ಭವಿಷ್ಯ ಬಹಳ ಚೆನ್ನಾಗಿರುತ್ತೆ ಎಂಬುದಕ್ಕೆ ಈ ದಿನ ನೀನು ಅಭಿನಯಿಸಿದ ಶ್ರೇಷ್ಠ ಅಭಿನಯವೇ ಆಧಾರವಾಗಿದೆ. ಜಾಗ್ರತೆ ಮುಂದುವರಿಯಲು ಭಗವಂತನು ನಿನಗೆ ಮಂಗಳವನ್ನುಂಟುಮಾಡಲೆಂದು ಹಾರೈಸಿ ಒಂದು ರಜತ ಪಾತ್ರೆಯನ್ನು ಆಶೀರ್ವದಿಸಿಕೊಟ್ಟೆ. ಅದಾಗಿ ಹದಿನೈದು ಇಪ್ಪತ್ತು ದಿನಗಳಲ್ಲಿಯೇ ಆತನನ್ನು ಮದ್ರಾಸಿಗೆ 'ಪರಾಶಕ್ತಿ' ತಮಿಳು ಚಿತ್ರಕ್ಕೆ ಬುಕ್ ಮಾಡಿ ಕರೆದುಕೊಂಡು ಹೋದರೆಂದು ತಿಳಿಯಿತು. ಆತನೇ ಇಂದು ಇಡೀ ಭಾರತದಲ್ಲಿ ಕೀರ್ತಿ ಗಳಿಸಿರುವ ನಟಿಗರ್ ತಿಲಕಂ ಶ್ರೀ ಶಿವಾಜಿ ಗಣೇಶನ್.

ನಮ್ಮ ಸಂಘವು ಸಾಗರದಲ್ಲಿ ಮೊಕ್ಕಾಂ ಮಾಡಿತ್ತು. ಹಿಂದೆಯೇ ಕಂಪನಿಯ ಮೇಲೆ ಅಸಮಧಾನಗೊಂಡು ನನ್ನ ಸೋದರಳಿಯ ಕಂಪನಿಯನ್ನು ಬಿಟ್ಟು ಹೋಗಿ (ಕೆ.ಆರ್. ನಗರ) ಎಡತೊರೆ ರಾಮಯ್ಯ ಶೆಟ್ಟರೆಂಬ ಶ್ರೀಮಂತರೊಡನೆ ಸೇರಿ ನಾಟಕ ಸಂಘವನ್ನು ಏರ್ಪಡಿಸಿ ಕೆಲವು ದಿನ ನಾಟಕಗಳನ್ನಾಡಿ ಆ ಸಂಘದೊಡೆಯರೊಡನೆ ಕಲಹವಾಡಿ ಪುನಃ ತನ್ನ ಸ್ನೇಹಿತರುಗಳೊಡನೆ ಸಾಗರಕ್ಕೆ ಬಂದು ನನ್ನ ಅಪರಾಧಗಳನ್ನು ಮನ್ನಿಸಬೇಕೆಂದು ಕೇಳಿಕೊಂಡನು. ಸೋದರಳಿಯನೆಂಬ ಅಭಿಮಾನದ ಮೇಲೆ ಸಂಘಕ್ಕೆ ಪುನಃ ಸೇರಿಸಿಕೊಂಡು ತಿಳುವಳಿಕೆಯನ್ನು ಹೇಳಿದ್ದಾಯಿತು. ಸಾಗರ ಕ್ಯಾಂಪು ಮುಗಿದು ಸ್ಟೇಜು ಬಿಚ್ಚುವ ಸಮಯದಲ್ಲಿ ನಮ್ಮ ಸಂಘದ ಮೇಸ್ತ್ರಿ ತಿಮ್ಮಯ್ಯ ಮೇಲಿನಿಂದ ಅಕಸ್ಮಾತ್ ಬಿದ್ದು ಸ್ಥಳದಲ್ಲಿಯೇ ತೀರಿಕೊಂಡನು ಅದನ್ನು ದೊಡ್ಡದಾಗಿ ಮಾಡಿಕೊಂಡು ಕೆಲವರು ನನ್ನ ಮೇಲೆ ದೂರುಮಾಡಿ ಅರ್ಜಿ ಹಾಕಿದರು. ಶ್ರೀ ಚನ್ನಬಸವೇಶ್ವರ ಸ್ವಾಮಿಯ ಕೃಪೆಯಿಂದ ಏನೂ ನಡೆಯದೆ ಆ ತೊಂದರೆಯಿಂದ ಪಾರಾದೆವು. ನಾನು ಮೇಸ್ತ್ರಿ ತಿಮ್ಮಯ್ಯನ ಹೆಂಡತಿಯನ್ನು ಕರೆಸಿ ನಾಲ್ಕು ಎಕರೆ ಹೊಲವನ್ನು ಬಿಲ್ಲೆಪಾಳ್ಯ ಎಂಬಲ್ಲಿ ಕೊಡಿಸಿ ಎರಡು ನೂರು ರೂಪಾಯಿಗಳನ್ನೂ ಕೊಟ್ಟೆ. ಇದೇ ಸಮಯದಲ್ಲಿ, ಅಂದರೆ ೧೯೪೬ನೇ ನವೆಂಬರ್ ಮಾಹೆಯಲ್ಲಿ ಚಿ. ಹೇಮಲತಾ ಎಂಬ ಪುತ್ರಿ ಜಯಮ್ಮನಿಗೆ ಜನಿಸಿತು- ಆಕೆ ಈಗ ನೃತ್ಯದಲ್ಲಿ ತರಪೇತಿಯನ್ನು ಪಡೆದು ಸಿನಿಮಾರಂಗದಲ್ಲಿ ಲತಾದೇವಿ ಎಂಬ ಹೆಸರಿನಿಂದ ಪ್ರವೇಶ ಮಾಡಿದ್ದಾಳೆ.

೧೯೪೭ನೇ ಇಸವಿಯಲ್ಲಿ ನಮ್ಮ ಸಂಘವು ಸಾಗರದಿಂದ ತಿಪಟೂರಿಗೆ ಬಂದಿತು. ಆಗ ನನ್ನ ಪುತ್ರಿಯಾದ ಗಿರಿಜಾಂಬ ಎಂಬ ಕನ್ಯೆಯನ್ನು ಸೋದರಳಿಯನಾದ ಚನ್ನಪ್ಪನಿಗೆ ಧಾರೆಯೆರೆದು ಗುಬ್ಬಿಯ ಧರ್ಮಪ್ರವರ್ತಕ ಶೆಟ್ಟಿ ಬಸಪ್ಪನವರ ಛತ್ರದಲ್ಲಿ ತುಂಬಾ ವಿಜೃಂಭಣೆಯಿಂದ ಲಗ್ನಕಾರ್ಯವನ್ನು ನೆರವೇರಿಸಿದೆ. ಅದೇ ಇಸ್ವಿಯಲ್ಲಿ ಮೇಮಾಹೆಯಲ್ಲಿ ಹಿಂದೂ ಮುಸ್ಲಿಮರ ಗಲಭೆ ಪ್ರಾರಂಭವಾಗಿ ತಿಪಟೂರಿನಲ್ಲಿ ನಮ್ಮ ಥಿಯೇಟರ್ ಉಳಿದದ್ದು ಶ್ರೀ ಚೆನ್ನಬಸವೇಶ್ವರ ಸ್ವಾಮಿ ಕೃಪೆಯೆಂದು ಧಾರಾಳವಾಗಿ ಹೇಳಬಹುದು. ಆ ಕಾರಣದಿಂದ ರಾತ್ರಿ ವೇಳೆಯಲ್ಲಿ ಮನೆ ಬಿಟ್ಟು ಯಾರೂ ಹೊರಗೆ ಹೋಗದೆ ನಾಟಕಕ್ಕೆ ಕಲೆಕ್ಷನ್ ಆಗಲಿಲ್ಲ. ಆಗ ಕೂಡಲೇ ಕ್ಯಾಂಪು ಕ್ಲೋಸು ಮಾಡಿ ಬೆಂಗಳೂರಿಗೆ ಬಂದವು. ಸಂಘದ ವಜ್ರ ಮಹೋತ್ಸವವನ್ನು ಆಚರಿಸುವ ಸಲುವಾಗಿ ಅದರ ಕಾಣಿಕೆಯೆಂದು ಶ್ರೀ ಹುಣಸೂರು ಕೃಷ್ಣಮೂರ್ತಿಗಳಿಂದ 'ರಾಜಾ ಗೋಪೀಚಂದ್' ಎಂಬ ಹೊಸ ನಾಟಕವನ್ನು ಬರೆಯಿಸಿ ಅದಕ್ಕೆ ತಕ್ಕ ಸೀನರಿಗಳನ್ನು ಬರೆಯಿಸಿ ಬೆಂಗಳೂರಿನಲ್ಲಿ ಆಡಿ, ಮೈಸೂರಿನ ಟೌನ್‌ಹಾಲ್ ಪಕ್ಕದಲ್ಲಿ ಥಿಯೇಟರು ಹಾಕಿಸಿ ನಾಟಕ ಪ್ರಾರಂಭಿಸಿದೆವು.

ನಂತರ ಎಗ್ಸಿಬಿಷನ್ ಹಾಲಿನಲ್ಲಿ ಡೈಮಂಡ್ ಜೂಬಿಲಿ ಸಮಾರಂಭಕ್ಕಾಗಿ ಒಂದು ಸಮಿತಿಯನ್ನು ಸ್ಥಾಪಿಸಿ ಭರದಿಂದ ಏರ್ಪಾಡು ನಡೆಯುತ್ತಿತ್ತು. ೧೯೪೮ರಲ್ಲಿ ಕನ್ನಡ ರಂಗಭೂಮಿಯ ಶತಮಾನೋತ್ಸವ ಮತ್ತು ಗುಬ್ಬಿ ಶ್ರೀ ಚೆನ್ನಬಸವೇಶ್ವರ ಸ್ವಾಮಿ ನಾಟಕ ಮಂಡಳಿಯ ವಜ್ರಮಹೋತ್ಸವ ಸಮಾರಂಭ ಎರಡೂ ಸಹ ಮೂರು ನಾಲ್ಕು ದಿನಗಳು ನಡೆಯಿತು. ಶ್ರೀಗಳಾದ ಬಿ.ಜಿ. ಖೇರ್, ಕೆ.ಸಿ. ರೆಡ್ಡಿಯವರು, ರಾಜ್ಯಪಾಲರಾದ

ಶ್ರೀ ಜಯಚಾಮರಾಜ ಒಡೆಯರ್‌ರವರುಗಳು, ಸಮಾರಂಭಗಳಲ್ಲಿ ಭಾಗವಹಿಸಿದ್ದರು. ಕಲಾವಿದರುಗಳೂ, ಕಲಾಭಿಮಾನಿಗಳೂ ಪರಸ್ಥಳಗಳಿಂದ ಬಂದಿದ್ದು ಬಹಳ ಜನ ನೆರೆದಿದ್ದರು. ಈ ಸಮಯದಲ್ಲಿ ನಾಟ್ಯಕಲಾವಿಶಾರದ ದಿವಂಗತ ಎಂ.ಸಿ. ಮಹದೇವಸ್ವಾಮಿಯವರು ನಮ್ಮ ಸಂಘದ ಈ ಕಾರ್ಯಸಮಾರಂಭದಲ್ಲಿ ಮೊದಲನೆಯವರಾಗಿ ನಿಂತು ತುಂಬಾ ಶ್ರಮಿಸಿರುತ್ತಾರೆಂದರೆ ಅತಿಶಯೋಕ್ತಿಯಾಗಲಾರದು. ಪ್ರತಿಯೊಬ್ಬ ನಟನಿಗೂ ಪಂಚಲೋಹದ ನಟರಾಜನ ವಿಗ್ರಹವನ್ನು ಕೊಡಲಾಯಿತು. ವಜ್ರಮಹೋತ್ಸವದ ನೆನಪಿಗಾಗಿ ನನಗೆ ಒಂದು ಸುವರ್ಣ ಹಾರವನ್ನು ಸಮಿತಿಯವರು ಕೊಟ್ಟರು.

ಬೆಂಗಳೂರಿನಲ್ಲಿ ಜ್ಯೇಷ್ಠ ಪುತ್ರ ಚನ್ನಬಸವಣ್ಣನ ಲಗ್ನ ಮಾಡಲು ನಿಶ್ಚೈಸಿ ಸಂಘವನ್ನು ಬೆಂಗಳೂರಿಗೆ ಕ್ಯಾಂಪುಮಾಡಿ ಕರೆತರಲಾಯಿತು. ಬೆಂಗಳೂರು ಕಂಟೋನ್ಮೆಂಟಿನ ಮ. ರಾ. ಮುನಿಯಪ್ಪನವರ ಕುಮಾರಿ ಪಾರ್ವತಮ್ಮ ಎಂಬ ಕನ್ಯೆಯನ್ನು ನಿಶ್ಚಯಿಸಿ ೧೯೪೯ನೇ ಜೂನ್ ತಿಂಗಳಲ್ಲಿ ಬಸಪ್ಪ ಕಾಲೇಜಿನಲ್ಲಿ (ಈಗಿನ ರೇಣುಕಾಚಾರ್ಯ ಕಾಲೇಜು) ಲಗ್ನಕಾರ್ಯವನ್ನು ಸಾಂಗವಾಗಿ ನೆರವೇರಿಸಿದೆನು.

ಗುಣಸಾಗರಿ ಕಥೆ

ಹಿಂದೆ ನಮ್ಮ ತಾಯಿಯವರು ತಮ್ಮ ಬಂಧುಬಳಗದವರ ಮನೆಗಳಲ್ಲಿ ಶುಭಕಾರ್ಯ ನಡೆಯುತ್ತಿದ್ದ ಸಮಯದಲ್ಲಿ ಜಾನಪದ ಹಾಡುಗಳನ್ನು ಹೇಳುತ್ತಿದ್ದುದನ್ನು ಕೇಳಿದ್ದೆ. ಅದು ನೆನಪಿಗೆ ಬಂದು ನನ್ನ ಮನಸ್ಸಿಗೆ ಬಹುವಾಗಿ ಹಿಡಿಸಿದ್ದ ಗುಣಸಾಗರಿ ಕಥೆಯನ್ನು ನನ್ನ ತಾಯಿಯವರ ಜ್ಞಾಪಕಾರ್ಥವಾಗಿ ಚಿತ್ರಿಸಬೇಕೆಂಬ ಆಕಾಂಕ್ಷೆಯಾಯಿತು. ಅದರ ಹಾಡುಗಳು ಯಾರು ಯಾರಿಗೆ ಬರುತ್ತದೆಯೋ ಹುಡುಕಿ ಅವರುಗಳಿಂದ ಆ ಹಾಡುಗಳನ್ನು ಜೋಡಿಸಿಕೊಂಡು ಅನಂತರ ಒಂದು ಕಥೆಯನ್ನು ನಿರ್ಮಿಸಿ ಚಿತ್ರತೆಗೆಯಲು ಹೆಚ್.ಎಲ್.ಎನ್. ಸಿಂಹರವರನ್ನು ಗೊತ್ತುಮಾಡಿದೆ. ಮದ್ರಾಸಿಗೆ ಹೋಗಿ ಎ.ವಿ. ಮೇಯಪ್ಪ ಚೆಟ್ಟಿಯಾರ್‌ರವರನ್ನು ಕಂಡು ಭಾಗಕ್ಕೆ ಗೊತ್ತುಮಾಡಿಕೊಂಡು, ಅವರೊಂದು ಭಾಗ, ಕರ್ನಾಟಕ ಫಿಲಂಸ್ ಲಿಮಿಟೆಡ್ ಇವರದು ಒಂದು ಭಾಗ. ನನ್ನದು ಅಂದರೆ ಗುಬ್ಬಿ ಫಿಲಂಸ್ ಒಂದುಭಾಗವೆಂದು ತೀರ್ಮಾನಿಸಿ ಅದರಂತೆ ಅಗ್ರಿಮೆಂಟ್ ಮಾಡಿಕೊಂಡೆವು. ಹೀಗೆ ಗುಬ್ಬಿ ಕರ್ಣಾಟಕ ಪ್ರೊಡಕ್ಷನ್ಸ್ ಉದಯವಾಯಿತು.

ಇದೇ ಸಮಯದಲ್ಲಿ ನನ್ನ ಮತ್ತೊಬ್ಬ ಮಗಳಾದ ರೇವಮ್ಮನ ಲಗ್ನಕಾರ್ಯ ಒದಗಿ ಬಂದಿತು. ಬೆಂಗಳೂರಿನ ಶ್ರೀಮಂತ ಶ್ರೀ ಶಿವನಂಜಪ್ಪನವರ ಮೊದಲನೆ ಮಕ್ಕಳಾದ ಈಶ್ವರಪ್ಪ,ಬಿ.ಇ. ಅವವಿಗೆ ನನ್ನ ಕುಮಾರಿ ರೇವಮ್ಮನನ್ನು ಕೊಟ್ಟು ಶ್ರೀಜಯದೇವ ಹಾಸ್ಟೆಲಿನಲ್ಲಿ ವಿಜೃಂಭಣೆಯಿಂದ ಮದುವೆಯನ್ನು ನೆರವೇರಿಸಿದೆ. ಈ ಕಾರ್ಯಕ್ಕೆ ದೊಡ್ಡ ದೊಡ್ಡ ವರ್ತಕರೂ, ಅಧಿಕಾರಿಗಳೂ ಆಗಮಿಸಿ ಆಶೀರ್ವದಿಸಿದರಲ್ಲದೆ ಮೈಸೂರು ಮಹಾರಾಜರವರು ಆಶೀರ್ವಾದ ರೂಪದಲ್ಲಿ ಖಿಲ್ಲತ್ತುಗಳನ್ನು ದಯಪಾಲಿಸಿದರು. ಇಷ್ಟರಲ್ಲಿ ಸೋದರಳಿಯನ ಕಥೆ ಪುನಃ ಪ್ರಾರಂಭವಾಗಿ ಅಸಮಾಧಾನದಿಂದ ಹೊರಟುನಿಂತಿದ್ದು, ರೇವಮ್ಮನ ಲಗ್ನಕಾರ್ಯದ ಸಲುವಾಗಿ ಸುಮ್ಮನಾಗಿದ್ದು, ನಂತರ ಅಳಿಯದೇವರು ನನ್ನೊಡನೆ ಲೆಕ್ಕಾಚಾರ ಮಾಡಿಕೊಂಡು ಬರಬೇಕಾದ ಹಣವನ್ನು ತೆಗೆದುಕೊಂಡು ಹೊರಟುಹೋದರು.

ಈ ಕಾರಣದಿಂದಲೂ, ಗುಣಸಾಗರಿ ಚಿತ್ರದ ತಯಾರಿಕೆ ಬಗ್ಗೆ ನಾನೇ ಹೆಚ್ಚಾಗಿ ಓಡಾಡಬೇಕಾಗಿ ಬಂದದ್ದರಿಂದಲೂ ಕೆಲವು ತಿಂಗಳು ಸಂಸ್ಥೆಯನ್ನು ಅನಿವಾರ್ಯ ನಿಲ್ಲಿಸಬೇಕಾಯ್ತು. ಆದರೂ ಸಹ ಗುಣಸಾಗರಿ ಚಿತ್ರಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವಂತೆಯೇ ಬೆಂಗಳೂರಿನಲ್ಲಿಯೇ ಒಂದು ಸಂಸ್ಥೆಯನ್ನು ಸದಾ ಇರಿಸಬೇಕೆಂಬ ಇಚ್ಛೆಯುಂಟಾಗಿ ನಟರನ್ನು ಶೇಖರಿಸಲು ಪ್ರಚಾರ ಮಾಡಿದೆನು. ಬಿ. ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ' ನಾಟಕ ರಿಹರ್ಸಲ್‌ಗೆ ಆರಿಸಿಕೊಂಡದ್ದಾಯಿತು. ಹೊಸದಾಗಿ ಬಂದ ನಟನಟಿಯರುಗಳನ್ನು ಸಭೆ ಸೇರಿಸಿ 'ನಾನು ನಿಮಗೆ ತಿಂಗಳು ಸಂಬಳ ಕೊಡಲಾಗುವುದಿಲ್ಲ. ನಿಮಗೆ ಇಲ್ಲಿಗೆ ಬಂದುಹೋಗಲು ಖರ್ಚು ಕೊಡುತ್ತೇನೆ. ಕಾಫಿ ತಿಂಡಿ ಏರ್ಪಾಟು ಮಾಡುತ್ತೇನೆ. ನಾಟಕಗಳಾದ ನಂತರ ಉತ್ಪತ್ತಿ ನೋಡಿಕೊಂಡು, ಖರ್ಚು ಜಮ ನೋಡಿಕೊಂಡು ವ್ಯವಸ್ಥೆ ಮಾಡುತ್ತೇನೆ' ಎಂದು ಮಾತನಾಡಿದೆ. ಅದಕ್ಕೆ ಎಲ್ಲರೂ ಒಪ್ಪಿದರು.

ಅವರೆಲ್ಲರೂ ಬೆಂಗಳೂರಿನಲ್ಲಿಯೇ ಸರ್ಕಾರಿ ಕೆಲಸಗಳಲ್ಲಿ ಬ್ಯಾಂಕುಗಳಲ್ಲಿ ಇದ್ದವರು. ಗೌತಮಬುದ್ಧ ನಾಟಕದ ಸೀನರಿಗಳಿಗೆ ಹನ್ನೆರಡು ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಸ್ಪೆಷಲ್ಲಾಗಿ ತಯಾರಿಸಿದೆ. ನಟರೆಲ್ಲರೂ ಹೊಸಬರೇ ಆಗಿದ್ದರೂ ನಾಟಕ ಕೆಡದೆ ಚೆನ್ನಾಗಿಯೇ ಬಂದಿತು. ಶಿವರಾತ್ರಿಯ ದಿನ ಗೌತಮಬುದ್ಧ, ಬೇಡರಕಣ್ಣಪ್ಪ ಪಾತ್ರವನ್ನೂ ಜಿ.ವಿ. ಅಯ್ಯರ್ ಪೂಜಾರಿ, ನರಸಿಂಹರಾಜು ಪೂಜಾರಿಯ ಮಗ ಕಾಶಿ ಪಾತ್ರವನ್ನು ಅಭಿನಯಿಸಿದ್ದರು. ಈ ನಾಟಕಗಳಾದ ನಂತರ ನಟರುಗಳು ಸಂಬಳ ಮಾಡಬೇಕೆಂದು ಗಲಭೆಯಾರಂಭಮಾಡಿದರು. ಇನ್ನು ಸಂಬಳ ಮಾಡಿದರೆ ಒಂದೇ ಊರಿನಲ್ಲಿ ನಡೆಯುವುದು ಸಾಧ್ಯವಾಗಲಾರದೆಂದು ಯೋಚಿಸಿ, ಹೊಸ ಸಂಸ್ಥೆಗಾಗಿ ಖರ್ಚುಮಾಡಿದ್ದ ಹನ್ನೆರಡು ಸಾವಿರ ರೂಪಾಯಿಗಳಿಗೆ ತರ್ಪಣ ಬಿಟ್ಟು ಹೊಸ ಸಂಸ್ಥೆಯನ್ನು ನಿಲ್ಲಿಸಲಾಯಿತು. ಅದನ್ನು ನಿಲ್ಲಿಸಿ ಒಂದು ತಿಂಗಳೊಳಗಾಗಿಯೇ ತುಂಬಾ ಬೇಸರವಾಯಿತು. ಅರುವತ್ತು ವರ್ಷಗಳ ದೀರ್ಘಕಾಲ ನಾಟಕ ಸಂಸ್ಥೆಯಲ್ಲಿಯೇ ಒಡನಾಡಿ, ನರನಾಡಿಗಳಲ್ಲೆಲ್ಲಾ ನಾಟಕದ ಕಲೆಯೇ ಸಂಚರಿಸುತ್ತಿರುವುದರಿಂದ ಆ ಒಂದು ತಿಂಗಳೂ ಸಹ ಕಾಲ ಕಳೆಯಲಾಗಲಿಲ್ಲ.

ಅರವತ್ತು ವರ್ಷಗಳ ಕಾಲ ಚೆನ್ನಬಸವೇಶ್ವರ ಕೃಪೆಯಿಂದ ನಡೆದುಬಂದ ಸಂಸ್ಥೆಯನ್ನು ನಿಲ್ಲಿಸಬಾರದೆಂದು ಯೋಚಿಸಿ ಅದನ್ನು ನಡೆಸಲು ಅನುಭವ ಅರ್ಹತೆಯುಳ್ಳ ನಾಟ್ಯಕಲಾವಿಶಾರದ ಎಂ.ಸಿ. ಮಹದೇವಸ್ವಾಮಿಯವರಿಗೆ ವಹಿಸಬೇಕೆಂದು ನಿರ್ಧರಿಸಿದೆ ನನ್ನ ಗ್ರಹಗತಿ ಕ್ರೂರವಾಗಿತ್ತೆಂದು ಕಾಣುತ್ತೆ. ಪುನಃ ನನ್ನ ಅಳಿಯದೇವರಾದ ಎಂ.ಆರ್. ಚೆನ್ನಪ್ಪನವರು ನನ್ನ ಕುಮಾರ ಚಿ. ಚನ್ನಬಸವಣ್ಣ ಇಬ್ಬರೂ ಜೊತೆಯಾಗಿ ಬಂದು ನಾವುಗಳು ಇದ್ದು ಅನ್ಯರಿಗೇತಕ್ಕೆ ಸಂಸ್ಥೆಯನ್ನು ವಹಿಸುವುದು? ಇದು ಸರಿಯಲ್ಲ - ದಯವಿಟ್ಟು ನಮಗೆ ವಹಿಸಿಕೊಡಿ, ನಾವು ಸರಿಯಾದ ರೀತಿಯಿಂದ ನಿಮ್ಮ ಹೆಸರಿನಲ್ಲಿಯೇ ನಡೆಸಿಕೊಂಡು ಹೋಗುತ್ತೇವೆಂದು ಬಹಳವಾಗಿ ಬೇಡಿಕೊಂಡರು. ನನಗೆ ಚೆನ್ನಪ್ಪನವರ ವಿದ್ಯಮಾನಗಳೆಲ್ಲ ತುಂಬ ಅನುಭವವಿದ್ದುದರಿಂದ ಒಪ್ಪಿಕೊಳ್ಳಲಿಲ್ಲ. ಅದಕ್ಕೆ ನನ್ನ ಜೊತೆಗಾತಿಯಾದ ಜಯಮ್ಮನನ್ನು ಮಧ್ಯಸ್ಥಿಕೆ ಮಾಡಿಸಿ ಒಪ್ಪಿಸಿದರು ನಂತರ "ನಮಗೆ ಹತ್ತು ಹನ್ನೆರಡು ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಡಿಸಿ, ಎಲ್ಲಾ ರೀತಿಯಿಂದಲೂ ಹೊಸ ಏರ್ಪಾಟು ಮಾಡಬೇಕಾಗುತ್ತೆ - ನಾವು ತೆಗೆದುಕೊಂಡ ಹಣವನ್ನು ಬಡ್ಡಿಸಮೇತ ನಾವೇ ತೀರಿಸಿಕೊಳ್ಳುತ್ತೇವೆ. ನಿಮಗೆ ತಿಂಗಳಿಗೆ ಎಷ್ಟು ಹಣ ಕೊಡಬೇಕೆಂದೂ ಕೇಳಿದರು. "ನೀವು ಸಂಸ್ಥೆಯನ್ನು ಚೆನ್ನಾಗಿ ನಡೆಸಿ, ಅದು ಚೆನ್ನಾಗಿ ನಡೆದು ನೀವು ಏನು ಕೊಟ್ಟರೂ ತೆಗೆದುಕೊಳ್ಳುತ್ತೇನೆ. ಮುಖ್ಯವಾಗಿ ಸಂಘವು ನಡೆಯುತ್ತಿದ್ದರೆ ನೂರಾರು ಜನಗಳ ಸಂಸಾರ ನಡೆಯಲು ಅವಕಾಶವಾಗುತ್ತದೆ. ದೇವರು ನಿಮಗೆ ಸದ್ಬುದ್ಧಿಯನ್ನು ಕೊಡಲಿ" ಎಂದು ಹೇಳಿ ನಾಟಕದ ಸಾಮಾನುಗಳನ್ನೂ ಹದಿನಾಲ್ಕು ಸಾವಿರ ರೂಪಾಯಿಗಳನ್ನೂ ಕೊಟ್ಟು ನಟರುಗಳೆಲ್ಲರನ್ನೂ ಕರೆಯಿಸಿಕೊಟ್ಟು ಅಳಿಯದೇವರಿಗೂ ನನ್ನ ಪುತ್ರನಾದ ಚಿ. ಚನ್ನಬಸಪ್ಪನಿಗೂ ತಕ್ಕ ವಿವೇಕ ಹೇಳಿ ನಾನು ಮದ್ರಾಸಿಗೆ ಗುಣಸಾಗರಿ ಚಿತ್ರ ತೆಗೆಯುವ ಕಾರ್ಯಕ್ಕೆ ಹೊರಟುಹೋದೆ.

ಗುಣಸಾಗರಿ ಚಿತ್ರಕ್ಕೆ ಪಂಡರಿಬಾಯಿ, ಜಯಮ್ಮ, ಕೃಷ್ಣಕುಮಾರಿ, ರಾಜಸುಲೋಚನ, ಹೊನ್ನಪ್ಪಭಾಗವತರ್, ಬಾಲಯ್ಯ, ಬಸವರಾಜ್, ಹನುಮಂತಾಚಾರ್ ಮೊದಲಾದವರನ್ನು ಗೊತ್ತುಮಾಡಿ ಚಿತ್ರೀಕರಣ ಪ್ರಾರಂಭಮಾಡಬೇಕೆನ್ನುವಾಗ ಚೆಟ್ಟಿಯಾರ್‌ರವರು ತಮಿಳಿನಲ್ಲಿ ಕೂಡ ತೆಗೆಯಬೇಕೆಂದು ಹೇಳಿದರು. ಅದರಂತೆಯೇ ನಿರ್ಧರಿಸಿದ್ದಾಯಿತು. ಇದಕ್ಕೆ ಬೇಕಾಗುವ ಹಣಕ್ಕೆ ಶ್ರೀ ಮೂಲಾರಂಗಪ್ಪನವರಿಂದ (೨, ೫೦,೦೦೦) ಎರಡೂವರೆ ಲಕ್ಷ ರೂಪಾಯಿಗಳನ್ನು ಸಾಲ ಪಡೆದೆ. ಅರಸೀಕೆರೆಯಲ್ಲಿದ್ದ ಜಿನ್ನಿಂಗ್ ಮಿಲ್ ಒಂದನ್ನು ಎಪ್ಪತ್ತೈದು ಸಾವಿರ ರೂ.ಗಳಿಗೆ ಕ್ರಯಕ್ಕೆ ಪಡೆದು ಉಳಿದ ಹಣವನ್ನು ಚಿತ್ರಕ್ಕಾಗಿ ಉಪಯೋಗಿಸಿದೆ. ಚಿತ್ರದ ಹಾಡುಗಳಿಗೆ ಶ್ರೀ ಕು.ರಾ. ಸೀತಾರಾಮಶಾಸ್ತ್ರಿಗಳಿಂದ ಸಾಹಿತ್ಯ ಬರೆಸಿದುದಾಯ್ತು. ಚಿತ್ರೀಕರಣ ಕಾರ್ಯವಾರಂಭವಾಯಿತು. ಅದೇ ಸಮಯದಲ್ಲಿ ಎ.ವಿ.ಎಂರವರು ಲೈಫ್ ಹಿಂದೂ ಚಿತ್ರ ತೆಗೆಯುತ್ತಿದ್ದರು. ಅದು ಅವರ ಸ್ವಂತ ಚಿತ್ರ. ಅದರ ಕಾರ್ಯದಲ್ಲಿ ತೊಡಗಿದ್ದುದರಿಂದ ನಮ್ಮ ಕೆಲಸ ಮುಂದೆ ಸಾಗಲು ಅವಕಾಶವಿಲ್ಲದೆ ಒಂದು ವರ್ಷ ಸಾವಕಾಶವಾಯ್ತು. ನಮ್ಮ ದುರ್ದೈವದಿಂದಲೋ ಎಂಬಂತೆ ನಟರುಗಳ ನಾನಾಕಾರಣಗಳಿಂದ ಮತ್ತೆ ಒಂದೂವರೆ ವರ್ಷ ನಿಧಾನವಾಗಿ ಚಿತ್ರದ ಕಾರ್ಯ ಬೀಳುತ್ತಾ ಏಳುತ್ತಾ ಮೂರು ವರ್ಷದೊಳಗೆ ಕನ್ನಡ, ತಮಿಳು ಎರಡು ಭಾಷೆಯಲ್ಲಿ ಚಿತ್ರವು ಪೂರೈಸಿ ರಜತಪರದೆಯ ಮೇಲೆ ಬೀಳುವದರೊಳಗಾಗಿ ನಾನು ಪಟ್ಟ ಶ್ರಮ ಭಗವಂತನಿಗೆ ಗೊತ್ತು. ನನ್ನ ಆಯುಷ್ ಪ್ರಮಾಣವೇ ಮುಗಿದು ಹೋಯಿತು ಎನ್ನುವಂತಾಯಿತು. ಚಿತ್ರ ಮುಗಿಸುವುದಕ್ಕಾಗಿ ಮೈಸೂರಿನ ಸಾಹುಕಾರ್ ತುಮ್ಮನೇರಳೆ ಮಾದಪ್ಪನವರಿಂದ ಮತ್ತೆ ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ಸಾಲ ತಂದುದಾಗಿತ್ತು.

ಚಿತ್ರ ಬಿಡುಗಡೆಯಾಗಿ ಪ್ರತಿಊರಿನಲ್ಲಿಯೂ ಒಳ್ಳೆ ಹೆಸರು, ಒಳ್ಳೆ ಉತ್ಪತ್ತಿ ಆಯಿತು - ಕನ್ನಡ ಗುಣಸಾಗರಿಗೆ ಬಹು ಚೆನ್ನಾಗಿ ಪ್ರೋತ್ಸಾಹ ಸಿಕ್ಕಿ ಕನ್ನಡ, ತಮಿಳು ಎರಡು ಚಿತ್ರಗಳಿಗೂ ಹಾಕಿದ್ದ ಹನ್ನೊಂದು ಲಕ್ಷ ರೂಪಾಯಿ ಬಂಡವಾಳದಲ್ಲಿ ಕನ್ನಡ ಚಿತ್ರಕ್ಕೆ ನಾಲ್ಕೂವರೆ ಲಕ್ಷ ರೂಪಾಯಿ ವಸೂಲಾಯಿತು. ತಮಿಳಿನ ಗುಣಸಾಗರಿಗೆ 'ಸತ್ಯಶೋಧನೈ' ಎಂದು ಹೆಸರಿಟ್ಟಿದ್ದು, ಆ ಚಿತ್ರಕ್ಕೆ ಕೇವಲ ಎರಡು ಲಕ್ಷ ರೂಪಾಯಿ ವಸೂಲಾಗಿ, ಒಟ್ಟು ನಾಲ್ಕೂವರೆ ಲಕ್ಷ ರೂಪಾಯಿ ನಷ್ಟವಾಗಿ ನನ್ನ ಭಾಗಕ್ಕೆ ಸುಮಾರು ಒಂದೂವರೆ ಲಕ್ಷರೂಪಾಯಿ ಬಡ್ಡಿ ವಗೈರೆ ಸೇರಿ ನಷ್ಟವಾಗಿ ನನ್ನ ಸತ್ಯಶೋಧನೆಯೇ ಆಯಿತು.

ನಾಟಕಸಂಘದ ಪುನರ್ ವ್ಯವಸ್ಥೆ

ನಾನು 'ಗುಣಸಾಗರಿ' ಚಿತ್ರ ತಯಾರಿಕೆಯಲ್ಲಿ ಮದ್ರಾಸಿನಲ್ಲಿದ್ದಾಗ್ಗೆ ಇತ್ತ ಸಂಘದಲ್ಲಿ ನನ್ನ ಮಗನಾದ ಚನ್ನಬಸವಣ್ಣನಿಗೂ, ಅಳಿಯದೇವರಾದ ಚನ್ನಪ್ಪನಿಗೂ ಹೊಂದಾಣಿಕೆಯಾಗದೆ ಮನಸ್ತಾಪ ಪ್ರಾರಂಭವಾಗಿ ನನ್ನ ಚಿರಂಜೀವಿಯನ್ನು ಮದ್ರಾಸಿಗೆ ಕರೆಸಿಕೊಳ್ಳಬೇಕಾಯಿತು. ಕೆಲವು ತಿಂಗಳುಗಳ ನಂತರ ಅಂದರೆ ಸಂಘವು ಹುಬ್ಬಳ್ಳಿ ಕ್ಯಾಂಪಿನಲ್ಲಿದ್ದಾಗ್ಗೆ ನಾನು ಹೋಗಿ ಅಲ್ಲಿನ ಸಂದರ್ಭ ನೋಡಿದರೆ ನನ್ನ ಕಂಪನಿಯ ಸಾಮಾನುಗಳೇ ನನ್ನ ಸುಪರ್ದಿಗೆ ಬರುವಂತೆ ತೋರಲಿಲ್ಲ. ಆಗ ಅಲ್ಲಿನ ಗಣ್ಯವರ್ತಕರನ್ನು ಸೇರಿಸಿ, ಸಾಮ, ದಾನ, ಭೇದ, ದಂಡಗಳನ್ನುಪಯೋಗಿಸಿ ಅಳಿಯದೇವರನ್ನೂ ಅವರ ಅನುಯಾಯಿಗಳನ್ನು ಹೊರಕ್ಕೆ ಕಳುಹಿಸಿ ಸಂಸ್ಥೆಯ ಜನರನ್ನು, ಸಲಕರಣೆಗಳನ್ನು ನನ್ನ ಶಕ್ತಿ ಸಾಮರ್ಥ್ಯಗಳನ್ನೆಲ್ಲಾ ವೆಚ್ಚ ಮಾಡಿ ಬಹು ಕಷ್ಟದಿಂದ ನನ್ನ ಸ್ವಾಧೀನಕ್ಕೆ ತೆಗೆದುಕೊಂಡದ್ದಾಯಿತು.

ಪುನಃ ದಾವಣಗೆರೆಗೆ ಬಂದು ಸಂಘವನ್ನು ಪುನರ್ವ್ಯವಸ್ಥೆಗೊಳಿಸಿ ಅಡ್ಡದಾರಿ, ಕಾಲಚಕ್ರ ಎಂಬ ಹೊಸ ನಾಟಕಗಳನ್ನು ತಯಾರ್ಮಾಡಿಕೊಂಡು ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಚಿತ್ರದುರ್ಗ, ಬಳ್ಳಾರಿಗಳಿಗೆ ಕಳುಹಿಸಿ, ಮೇಲ್ವಿಚಾರಣೆಗೆ ಚನ್ನಬಸವಣ್ಣನನ್ನು ನೇಮಿಸಿ ನಾನು ಹದಿನೈದು ಇಪ್ಪತ್ತು ದಿನಗಳಿಗೆ ಹೋಗಿ ಬರುತ್ತಿದ್ದೆ. ಸಂಘವು ಮೊದಲಿನಂತೆ ವ್ಯವಸ್ಥೆಯಿಂದ ನಡೆಯುತ್ತಿತ್ತು. ನಾನು ಮೊದಲಿನಂತೆ ಪಾತ್ರ ವಹಿಸದೆ ಕ್ಯಾಂಪಿಗೆ ಮೂರು ನಾಲ್ಕು ದಿನ ಜಯಮ್ಮನೊಡನೆ ಸದಾರಮೆ, ಪ್ರಭಾಮಣಿ, ಗುಲೆಬಕಾವಲಿ ನಾಟಕಗಳನ್ನಾಡಿಕೊಂಡು ಬರುತ್ತಿದ್ದೆ.

ಸಂಘವು ಬಳ್ಳಾರಿಯಲ್ಲಿದ್ದಾಗ್ಗೆ ಒಂದು ಬಹು ದುಃಖದ ಘಟನೆ ನಡೆಯಿತು. 'ಸದಾರಮೆ' ನಾಟಕ ಹಾಕಿ ನಾಟಕ ಮಂದಿರವು ಭರ್ತಿಯಾಗಿ ನಾಟಕ ನಡೆದು ಅರ್ಧ ನಾಟಕ ಆಗಿದೆ. ಆಗ ನಮ್ಮ ಸಂಸ್ಥೆಗೆ ೧೯೧೭ ನೆಯ ಇಸ್ವಿಯಿಂದಲೂ ನನ್ನ ಕಷ್ಟ ಸುಖಕ್ಕೆ ಭಾಗಿಯಾಗಿದ್ದು ಮುಖ್ಯ ಆಧಾರಸ್ತಂಭದಂತಿದ್ದ, ನಾನು ಗಾಂಧರ್ವ ವಿವಾಹವಾಗಿದ್ದ ಜಿ. ಸುಂದರಮ್ಮನು ನಾಲ್ಕು ಐದು ತಿಂಗಳುಗಳಿಂದ ಕ್ಯಾನ್ಸರ್‌ನಿಂದ ನರಳುತ್ತಿದ್ದು (೨೫-೧೨-೫೪) ರಾತ್ರಿ ಶಿವಶಿವಯೆಂದು ಇಹಲೋಕವನ್ನು ತ್ಯಜಿಸಿದಳು. ಪುತ್ರಿಯರಾದ ಸ್ವರ್ಣಮ್ಮ, ಮಾಲತಮ್ಮನವರುಗಳು ನನ್ನೊಡನೆ 'ಸದಾರಮೆ'ಯಲ್ಲಿ ಅಭಿನಯಿಸುತ್ತಿದ್ದರು. ಅರ್ಧ ನಾಟಕದಲ್ಲಿ ನನಗೆ ಈ ವರ್ತಮಾನ ತಿಳಿದೊಡನೆಯೇ ನನಗೆ ದಿಕ್ಕೇ ತೋರದಂತಾಯ್ತು. ನಾನು ಕಳ್ಳನ ಪಾತ್ರದಲ್ಲಿದ್ದೆ. ಇನ್ನು ಈ ಸಮಾಚಾರವನ್ನು ಮಕ್ಕಳಿಗೆ ತಿಳಿಸಿದಲ್ಲಿ ನಾಟಕ ನಿಂತು ರಸಭಂಗವಾಗಿ, ಸ್ಥಳದ, ಪರಸ್ಥಳದ ಪ್ರೇಕ್ಷಕರಿಗೆ ಉತ್ಸಾಹಭಂಗರಾಗಿ ರಸಭಂಗವಾಗುತ್ತದೆ ಎಂದು ಯೋಚಿಸಿ, ನಾಟಕ ಮುಂದುವರಿಸಿದೆ. ತನ್ನ ಮನೆಯಲ್ಲಿ ಶವ ಇದ್ದಿದ್ದರೂ ಸಹ ರಂಗಭೂಮಿಯ ಮೇಲೆ ಅದನ್ನು ತೋರಗೊಡದೆ ನಲಿದಾಡುತ್ತ ಅಭಿನಯಿಸುತ್ತ ಪ್ರೇಕ್ಷಕರ ಮೆಚ್ಚುಗೆಯನ್ನು ಪಡೆಯುವುದು ನಟನಾದವನ ಕರ್ತವ್ಯವೆಂದು ಭಾವಿಸಿ ಚೆನ್ನಬಸವೇಶ್ವರಸ್ವಾಮಿಯನ್ನು ಧ್ಯಾನಿಸಿ ಸಂಯಮ ತಂದುಕೊಂಡು. ಬಂದ

ದುಃಖವನ್ನು ತಡೆದುಕೊಂಡು ನಾಟಕವನ್ನು ಮುಗಿಸಿದೆನು. ನಂತರ ಮಕ್ಕಳನ್ನು ಕರೆದುಕೊಂಡು ಮನೆಗೆ ಬಂದಾಗ ಅವರಿಗೆ ತಾಯಿಯ ನಿಧನದ ವಾರ್ತೆಯನ್ನು ತಿಳಿಸಿದಾಗ ಅವರ ಶೋಕವನ್ನು ನೋಡಲಾರದೆ ಹೋದೆ. ಮರುದಿನ ಮುಂದಿನ ಕಾರ್ಯಗಳನ್ನು ನೆರವೇರಿದ್ದಾಯಿತು. ನಮ್ಮ ಸಂಘವು ಅವಿಚ್ಛಿನ್ನವಾಗಿ ನಡೆದುಕೊಂಡು ಬರಲು ಸುಂದರಮ್ಮ ಜಯಮ್ಮನವರುಗಳು ದುಡಿದುದೇ ಅಲ್ಲದೆ ಅವರ ಪುತ್ರಿಯರೂ ಸಹ ತಮ್ಮ ಕಿಶೋರಾವಸ್ಥೆಯಿಂದಲೂ ಸಂಸ್ಥೆಯ ಆಧಾರ ಸ್ತಂಭಗಳಂತೆ ನಿಂತುಕೊಂಡು ಬಂದಿರುವುದೇ ಮುಖ್ಯ ಕಾರಣವೆಂದರೆ ಅತಿಶಯೋಕ್ತಿಯಾಗಲಾರದು.

ಇದೇ ಸಮಯದಲ್ಲಿ ಮದ್ರಾಸಿನಲ್ಲಿ 'ಬೇಡರ ಕಣ್ಣಪ್ಪ' ಚಿತ್ರವನ್ನು ತೆಗೆಯಬೇಕೆಂದು ನಿರ್ಧರಿಸಿ ಮುತ್ತುರಾಜು, ಜಿ.ವಿ. ಅಯ್ಯರ್ ಮತ್ತು ನರಸಿಂಹರಾಜು, ಬಾಲಕೃಷ್ಣ, ಪಂಡರಿಭಾಯಿ, ರಾಜಸುಲೋಚನ ಮೊದಲಾದವರನ್ನು ಸೇರಿಸಿಕೊಂಡು ಪ್ರಾರಂಭಮಾಡಿ ಐದು ತಿಂಗಳಲ್ಲಿಯೇ ಮುಗಿಸಿ ಬಿಡುಗಡೆ ಮಾಡಿದೆವು. ಚಿತ್ರವು ಚೆನ್ನಾಗಿ ಬಂದು ಒಳ್ಳೆಯ ಹೆಸರನ್ನೂ ತಂದುದಲ್ಲದೆ ಆದಾಯವನ್ನೂ ಕೊಟ್ಟಿತು. ಮುತ್ತುರಾಜು ರಾಜಕುಮಾರನಾಗಿ ಕೀರ್ತಿಯನ್ನು ಹೊಂದಲು ಇಲ್ಲಿಂದ ಆರಂಭವಾಯಿತು.

ದಶಾವತಾರ

ಬೆಂಗಳೂರಿನಲ್ಲಿ ಅದ್ದೂರಿಯಿಂದ 'ದಶಾವತಾರ' ನಾಟಕ ತಯಾರಿಸಬೇಕೆಂದು ಕೊಂಡು ನಮ್ಮ ಪೇಯಿಂಟರ್‌ಗಳಾದ ಜಿ. ಚನ್ನಬಸಪ್ಪ, ಜಿ.ವಿ. ನರಸಿಂಹಯ್ಯನವರುಗಳ ಜೊತೆಗೆ ಮದರಾಸಿನಿಂದ ಸುಬ್ರಾಯಲು ನಾಯ್ದುರವರನ್ನು ಗೋಲ್ಡ್ ಪೆಯಿಂಟರ್ ಕುಪ್ಪಸ್ವಾಮಿ ರಾಜುರವರನ್ನು ಕರೆಸಿದೆನು. ಮೌಲ್ಡಿಂಗ್ ಕೆಲಸಕ್ಕೆ ಮೈಸೂರಿನ ಎಸ್.ವಿ. ರಾಜು, ಬೆಂಗಳೂರಿನ ಗಂಗಣ್ಣ, ನಂಜುಂಡಯ್ಯನವರನ್ನೂ ಗೊತ್ತುಮಾಡಿ ಒಂದು ವರ್ಷಕ್ಕಿಂತಲೂ ಹೆಚ್ಚುಕಾಲ ಸೀನರಿಗಳನ್ನು ತಯಾರು ಮಾಡಿಸಿದೆ. ನಾಟಕಕ್ಕೆ ಸಾಹಿತ್ಯವನ್ನು ಬಿ. ಪುಟ್ಟಸ್ವಾಮಯ್ಯನವರೇ ಒದಗಿಸಿಕೊಟ್ಟರು. ಸಂಗೀತ ನಿರ್ದೇಶನದ ಹೊಣೆ ಶ್ರೀ ಪಿ. ಕಾಳಿಂಗರಾಯರು ತೆಗೆದುಕೊಂಡರು. ಈ ಸಮಯದಲ್ಲಿ ನನ್ನನ್ನು ಒಳ್ಳೆಯ ಪ್ರಮುಖ ನಟನೆಂದು ಗೌರವಿಸಿರುವುದಾಗ ಕೇಂದ್ರ ಸಂಗೀತ ನಾಟಕ ಅಕಾಡೆಮಿಯಿಂದ ಟೆಲಿಗ್ರಾಂ ಬಂದು ಗೌರವ ಸಮಾರಂಭವನ್ನು ೧೯೫೫ನೇ ಮಾರ್ಚಿ ೨೬ರಂದು ಇಟ್ಟು ಕೊಂಡಿರುವುದಾಗಿ ಪತ್ರವೂ ಬಂದಿತು. ನನ್ನ ಸಂಗಡ ಬಾಲಗಂಧರ್ವ, ರಾಜರತ್ನಂಪಿಳ್ಳೆ, ಬಾಲಸರಸ್ವತಿ, ಮಹಾರಾಜಪುರಂ, ವಿಶ್ವನಾಥ ಐಯ್ಯರ್, ಶಂಭುಮಹಾರಾಜ್, ಗೋವಿಂದರಾವ್ ಬುರ್‌ಹಾನ್‌ಪುರ್‌ಕರ್, ಅನಂತ್, ಮನೋಹರ್ ಜೋಷಿ, ಇವರಿಗೆ ಸನ್ಮಾನ ಪತ್ರಗಳನ್ನು, ಬಹುಮಾನಗಳೊಡನೆ ಕೊಡಲು ಏರ್ಪಾಡಾಗಿದ್ದಿತು. ಇದುವರೆಗೆ ಅಂದರೆ ಕಲಾವಿದರ ಗೌರವಸಮಾರಂಭ ೧೯೫೧ರಿಂದಲೇ ಪ್ರಾರಂಭವಾಗಿದ್ದು ನಾಟಕ ಕಲಾವಿದರಿಗೆ ೧೯೫೪-೫೫ನೇ ಸಾಲಿನಿಂದ ಆರಂಭಿಸಿ ನನ್ನಿಂದಲೇ ಆರಂಭವಾಗಿತ್ತು. ಇದು ಇಡೀ ಕರ್ನಾಟಕಕ್ಕೆ ಕೀರ್ತಿತಂದ ಮಹತ್ಸಾಧನೆಯೆಂದೂ ಕಲಾಮಾತೆಗೆ ನಾನು ನಿರಂತರ ಸೇವೆ ಸಲ್ಲಿಸಿದುದರ ಪ್ರತಿಫಲವೆಂದೂ ನನ್ನ ಭಾವನೆ.

ಮಾರನೆಯ ದಿನವೇ ನಾವುಗಳು, ನಾನು, ಜಯಮ್ಮ, ನನ್ನ ಎರಡನೇ ಮಗನಾದ ರಾಜಶೇಖರ್, ನಮ್ಮ ಮ್ಯಾನೇಜರ್‌ರವರಾದ ಎಸ್.ಪಿ. ನರಸಿಂಹಮೂರ್ತಿ, ಎಂ.ಎ.,ರವರು ಡೆಲ್ಲಿಗೆ ಹೊರಟು ಸಮಾರಂಭದಲ್ಲಿ ಭಾಗವಹಿಸಿದೆವು. ರಾಷ್ಟ್ರಾಧ್ಯಕ್ಷರಾದ ಬಾಬು ರಾಜೇಂದ್ರಪ್ರಸಾದ್‌ರವರ ಅಮೃತಹಸ್ತದಿಂದ ಭಂಗಾರದ ಕಮಲದ ಹೂ ಇರುವ ತಟ್ಟೆಯೊಂದನ್ನು ಕಾಶ್ಮೀರಿನ ಕುಸುರಿ ಕೆಲಸ ಉಳ್ಳ ಜರತಾರಿಯ ವಸ್ತ್ರದೊಂದಿಗೆ ಒಂದು ಸಾವಿರ ರೂಪಾಯಿಗಳನ್ನೂ, ಅರ್ಹತಾ ಪತ್ರವನ್ನೂ ಸ್ವೀಕರಿಸಿದೆನು. ಆ ಸರಳ ಸಮಾರಂಭದಲ್ಲಿ ನನ್ನಲ್ಲಿ ಚಿರಸ್ಮರಣೀಯವಾಗಿದೆ. ಡೆಲ್ಲಿಯ ಕರ್ನಾಟಕ ಸಂಘದವರೂ ಸ್ಪೀಕರ್‌ರವರಾಗಿದ್ದ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿಯೂ ಸತ್ಕರಾ ಕೂಟವೊಂದನ್ನು ಏರ್ಪಡಿಸಿದ್ದರು.

ನಂತರ ನಾನು ಸೀದಾ ಕಂಪನಿ ಇದ್ದ ಸ್ಥಳಕ್ಕೆ ಅಂದರೆ ಗದಗ್ ಕ್ಯಾಂಪಿಗೆ ಹೊರಟು ಬಂದೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯವರು ನನ್ನನ್ನು ಗೌರವಿಸಿದ್ದಕ್ಕಾಗಿ ಗದಗಿನ ಪುರಜನರು ದೊಡ್ಡ ಸಭೆಗೂಡಿಸಿ ಸತ್ಕಾರ ಕೊಟ್ಟು ಸನ್ಮಾನಪತ್ರ ದಯಪಾಲಿಸಿದರು.

ಇಷ್ಟರಲ್ಲಿ 'ದಶಾವತಾರ'ದ ಸೀನರಿಗಳು ಮುಕ್ಕಾಲು ಭಾಗ ಪೂರ್ತಿಯಾಗಿದ್ದು, ಕವಿಗಳಾದ ಬಿ. ಪುಟ್ಟಸ್ವಾಮಯ್ಯನವರು ನಾಟಕವನ್ನು ಪೂರ್ತಿ ಬರೆದು ಸಿದ್ಧಗೊಳಿಸಿದ್ದರು. ನಾವು ಗದಗ್ ಕ್ಯಾಂಪು ಪೂರೈಸಿ ಬೆಂಗಳೂರಿಗೆ ಬಂದು ಸುಮಾರು ಒಂದೂವರೆ ತಿಂಗಳು ನಾಟಕಗಳನ್ನಾಡದೆ ಒಂದೇ ಸಮನೆ 'ದಶಾವತಾರ' ನಾಟಕದ ರಿಹರ್ಸಲ್, ಮತ್ತಿತರ ಸಿದ್ಧತೆಗಳಲ್ಲಿ ತೊಡಗಿದೆವು. ಮಾನ್ಯ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್‌ರವರ ಅಮೃತ ಹಸ್ತದಿಂದ 'ದಶಾವತಾರ' ನಾಟಕದ ಉದ್ಘಾಟನಾ ಸಮಾರಂಭ ೧೯೫೫ನೇ ಜೂನ್ ೧೫ನೇ ತಾರೀಖಿನಂದು ಬಹು ವಿಜೃಂಭಣೆಯಿಂದ ನಡೆಯಿತು. ಕಿಕ್ಕಿರಿದ ಪ್ರೇಕ್ಷಕವೃಂದದ ಸಮ್ಮುಖದಲ್ಲಿ ಮಹಾರಾಜರಿಗೆ ಒಂದು ಬಿನ್ನವತ್ತಳೆಯನ್ನು ಸಮರ್ಪಿಸಿದೆವು. ಕಂಪನಿಯ ಎಲ್ಲ ಸದಸ್ಯರೂ ಸೇರಿ ನನಗೆ ಗಂಗಾವತರಣದ ದೃಶ್ಯವನ್ನೊಳಗೊಂಡ ರಜತ ಚಿತ್ರವನ್ನು ಬಹುಮಾನಿಸಿದರು. ಇದೇ ಸಮಯದಲ್ಲಿ ನಗರಭವನದಲ್ಲಿ ರಾಜ್ಯದ ಮೈಸೂರು ಸಂಗೀತ ನಾಟಕ ಅಕಾಡೆಮಿಯವರೂ ಸಹ ನನ್ನನ್ನು ಗೌರವಿಸಿ, ನಟರಾಜನ ವಿಗ್ರಹ, ಗಂಧದ ಪೆಟ್ಟಿಗೆ, ಕಲಾಬತ್ತಿನ ಶಾಲು ಜೋಡಿಗಳನ್ನು ಬಹುಮಾನಿಸಿ ಸತ್ಕರಿಸಿದರು.

'ದಶಾವತಾರ' ನಾಟಕ ಒಂದೇ ಸಮನೆ ನೂರ ಇಪ್ಪತ್ತೆಂಟು ನಾಟಕಗಳಾದ ನಂತರ ಮೈಸೂರು ನಗರಕ್ಕೆ ದಸರಾವೇಳೆಗೆ ಹೊರಟೆವು. ಬೆಂಗಳೂರು ಕ್ಯಾಂಪಿನಲ್ಲಿ ಬಾ. ಸೂರ್ಯನಾರಾಯಣ ಮೂರ್ತಿ ಎಂಬ ಯುವಕನು ಸಂಘಕ್ಕೆ ಸೇರಿದ. ಒಳ್ಳೆ ರೂಪು. ಅಂಗಸೌಷ್ಠವ ಮತ್ತು ಅಭಿನಯದಲ್ಲಿ ತುಂಬಾ ಅಭಿರುಚಿ. ಮೈಸೂರಿಗೆ ಹೋಗಿ ಕ್ಯಾಂಪು ಮುಗಿಯುವುದರೊಳಗೆ ಸಿನಿಮಾ ರಂಗಕ್ಕೆ ಸೇರಿದ. 'ಭಾಗ್ಯಚಕ್ರ' ಚಿತ್ರಕ್ಕೆ ಒಪ್ಪಿಕೊಂಡು ಸಂಘಕ್ಕೆ ನಮಸ್ಕಾರ ಹಾಕಿದ. ಆತನೇ ಇಂದು ಕೀರ್ತಿಯನ್ನು ಪಡೆದು ಸ್ವಂತ ನಿರ್ಮಾಪಕನಾಗಲಿರುವ ಶ್ರೀ ಉದಯಕುಮಾರ್.

ಮೈಸೂರಿನಲ್ಲಿ ಈ ಭಾರಿ ಸುಬ್ಬರಾಯನ ಕೆರೆಯಲ್ಲಿ ಥಿಯೇಟರ್ ಹಾಕಿಸಿ ಎರಡು ತಿಂಗಳು ನಾಟಕವಾಡಿದೆವು. ಆಗ ಬೆಂಗಳೂರಿನಲ್ಲಿ ನಮ್ಮ ಜನರಲ್ ಮ್ಯಾನೇಜರ್‌ರವರಾಗಿದ್ದ ಶ್ರೀ ಎಸ್.ಪಿ. ನರಸಿಂಹಮೂರ್ತಿ, ಎಂ.ಎ., ರವರು ದೈವಾಧೀನರಾದರು. ಅವರು ಮೊದಲು ಕಂಪನಿಯಲ್ಲಿದ್ದು ಬಿ.ಎ. ಮುಗಿಸಿದ್ದಾಗ್ಗೆ ಮುಂದಕ್ಕೆ ಎಂ.ಎ. ಓದಲು ಕಿಂಚಿತ್ ಅವಕಾಶ ಕೊಟ್ಟು ಸಹಾಯಮಾಡಿದುದಕ್ಕೆ ಕೃತಜ್ಞತೆಯಿಂದ ಸ್ಮರಿಸಿಕೊಂಡು ಡಬ್ಬಲ್ ಗ್ರಾಜುಯೇಟ್ ಆದನಂತರ, ಆಜೀವ ಪರ್ಯಂತ ನಮ್ಮಲ್ಲಿಯೇ ದುಡಿದರು. ಅವರು ದೈವಾಧೀನರಾದದ್ದು ನಮ್ಮ ದೌರ್ಭಾಗ್ಯ.

ಮೈಸೂರು ಕ್ಯಾಂಪಿನಲ್ಲಿಯೇ ಪ್ರಖ್ಯಾತ ಕಾದಂಬರಿಕಾರರಾದ ಶ್ರೀ ತ.ರಾ. ಸುಬ್ಬರಾಯರಿಂದ ನಾವು ಬರೆಸಿದ 'ಜ್ವಾಲಾ' ನಾಟಕದ ತಯಾರಿಯಲ್ಲಿ ತೊಡಗಿದೆವು. ಆ ಸಮಯದಲ್ಲಿಯೇ ನನ್ನ ಮಗನಾದ ಶಿವಾನಂದ ಸ್ವಾಮಿಗೆ ಗತಿಸಿಹೋದ ನಟಿ ಸುಂದರಮ್ಮನ ಅಭೀಷ್ಟದಂತೆ ಬಳ್ಳಾರಿಯ ಆಮಿದ್ಯಾಲ್ ವೆಂಕಪ್ಪನವರ ತಮ್ಮ ರಂಗಪ್ಪನವರ ಮಗಳಾದ ಮೇನಕಾ ಎಂಬ ವಧುವನ್ನು ತಂದು ಪಶ್ಚಿಮವಾಹಿನಿಯಲ್ಲಿ ೧೯೫೫ನೇ ಡಿಸೆಂಬರ್

ಎಂಟರಂದು ಲಗ್ನಕಾರ್ಯವನ್ನು ನೆರವೇರಿಸಿದೆವು. 'ಜ್ವಾಲಾ' ನಾಟಕ ಕೇವಲ ಮೂರು ಪ್ರದರ್ಶನಗಳು ನಡೆದವು. ಪ್ರದರ್ಶನದಲ್ಲಿ ರಂಗಸಜ್ಜಿಕೆ ಜೋಡಿಸಲು ಕಾಲಾವಕಾಶ ಇರುತ್ತಿರಲಿಲ್ಲ ಮತ್ತು 'ಜ್ವಾಲಾ' ಪಾತ್ರಧಾರಿಣಿಗೆ ದೃಶ್ಯದಿಂದ ದೃಶ್ಯಕ್ಕೆ ಉಡುಪು ಬದಲಾಯಿಸಲೂ ವೇಳೆ ಸಿಗುತ್ತಿರಲಿಲ್ಲವಾಗಿ ಸೂಕ್ತ ಮಾರ್ಪಾಟು ಮಾಡಿಕೊಡಬೇಕೆಂದು ಶ್ರೀ ತ.ರಾ.ಸು.ರವರಿಗೆ ತಿಳಿಸಿದೆವು. ಮಾರ್ಪಾಟಾದ 'ಜ್ವಾಲೆ'ಯು ಇನ್ನೂ ತವರು ಮನೆಯಲ್ಲಿಯೇ ನಿಂತಿರುತ್ತಾಳೆ.

ನಾವು ಮಂಡ್ಯ ಕ್ಯಾಂಪಿನಲ್ಲಿದ್ದಾಗ ಕುಂಭಕೋಣದಲ್ಲಿ ಹನ್ನೆರಡು ವರ್ಷಗಳಿಗೆ ಒಂದು ಸಾರಿ ನಡೆಯುವ ಕುಂಭಮೇಳ ಜಾತ್ರೆಗೆ ಕಂಟ್ರಾಕ್ಟ್‌ಗೆ ಒಪ್ಪಿಕೊಳ್ಳಬೇಕೆಂದು ಮದ್ರಾಸಿನ ಎ.ವಿ.ಎಂ. ಚೆಟ್ಟಿಯಾರರು ಶಿಫಾರಸ್ಸು ಮಾಡಿದ್ದ ಮೇರೆಗೆ ಕುಂಭಕೋಣದ ಮುನಿಸಿಪಲ್ ಕಮೀಷನರ್‌ರವರೊಂದಿಗೆ ಮೂವತ್ತು ನಾಟಕಗಳಿಗೆ ನಲವತ್ತು ಸಾವಿರ ರೂ.ಗಳಂತೆ ಕರಾರು ಮಾಡಿಕೊಂಡು ೧೯೫೬ರ ಫೆಬ್ರವರಿಯಲ್ಲಿ ಕುಂಭಕೋಣಕ್ಕೆ ಹೋದೆವು.

ಜಾತ್ರೆಗೆ ಎಂಟು - ಹತ್ತು ಲಕ್ಷ ಜನ ಸೇರಿದ್ದಿತಾದರೂ ನಮ್ಮ ನಾಟಕಗಳು ಕನ್ನಡ ಭಾಷೆಯಾದುದರಿಂದ ತಮಿಳು ಜನಕ್ಕೆ ಅರ್ಥವಾಗುತ್ತಿರಲಿಲ್ಲ.

ಹೀಗಾಗಿ ಸಮರ್ಪಕವಾದ ಉತ್ಪತ್ತಿಯಾಗಲಿಲ್ಲ. ಕಂಟ್ರಾಕ್ಟಿನವರಿಗೆ ನಷ್ಟವಾಗಿ ನಮಗೆ ಕೊಡಬೇಕಾದ ನಲವತ್ತು ಸಾವಿರ ರೂ.ಗಳಲ್ಲಿ ಮೂವತ್ತು ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟರು. ಆದರೆ ನಮ್ಮ ಸಂಘದ ಪ್ರತಿಯೊಬ್ಬರನ್ನೂ ಬಹು ಮರ್ಯಾದೆಯಿಂದ ಸತ್ಕರಿಸಿ ಬೀಳ್ಕೊಟ್ಟರು.

ಅಲ್ಲಿಂದ ನಮ್ಮ ಸಂಘದವರುಗಳ ಅಪೇಕ್ಷೆಯಂತೆ ದಕ್ಷಿಣ ಭಾರತದ ಪುಣ್ಯಸ್ಥಳಗಳಾದ ಮಧುರೆ, ರಾಮೇಶ್ವರ, ಮಲೆ ಸುಬ್ರಹ್ಮಣ್ಯ ಸ್ವಾಮಿ, ಪಳನಿ, ಚಿದಂಬರ, ತಂಜಾವೂರು, ಶ್ರೀರಂಗ, ತಾಯಿಮಲೆ, ಜಂಬುಕೇಶ್ವರ, ನ್ಯಾಮಕಲ್ಲು, ಇತ್ಯಾದಿಗಳನ್ನು ದರ್ಶನ ಮಾಡಿಕೊಂಡು ದಾವಣಗೆರೆ ಕ್ಯಾಂಪು ಮಾಡಿದೆವು. ಆಗ 'ದಶಾವತಾರದ' ಸೀನರಿಗಳು ಉತ್ತಮವಾಗಿದ್ದುದಲ್ಲದೆ ಸಂಘದಲ್ಲಿ ಅತ್ಯುತ್ತಮ ನಟರುಗಳಾದ ರಾಘವೇಂದ್ರರಾವ್, ಈಶ್ವರಪ್ಪ, ಶ್ರೀಕಂಠಮೂರ್ತಿ, ಮುರುಡೇಶಗವಾಯಿ, ಸಿದ್ದಲಿಂಗಪ್ಪ, ಎಂ.ಎಸ್. ಆರಾಧ್ಯ, ಪುಟ್ಟಬಸಪ್ಪ, ರಾಯನ್, ಅಚ್ಯುತರಾವ್ ಮತ್ತು ಬಿ. ಜಯಮ್ಮ, ಸ್ವರ್ಣಮ್ಮ, ಮಾಲತಮ್ಮ, ತುಳಸಮ್ಮ, ಕೃಷ್ಣಾಬಾಯಿ, ಶಾರದಮ್ಮ, ವೆಂಕಟೇಶ ಕುಮಾರಿ, ದುರ್ಗಮ್ಮ, ಶಾರದಮ್ಮ ಮೊದಲಾದ ನಟಿಯರುಗಳೂ ಇದ್ದರು. ನೃತ್ಯತಂಡದಲ್ಲಿ ಆನಂದರಾವ್, ವಸಂತಕುಮಾರ್, ಲಲಿತಮ್ಮ ಮೊದಲಾದವರೂ ಇದ್ದರು. ಕಂಪನಿಯಲ್ಲಿ ಪೂರ್ತ ಸೆಟ್ ಬಹಳ ಚೆನ್ನಾಗಿದ್ದುದರಿಂದ 'ದಶಾವತಾರ' ನಾಟಕವನ್ನು ಹಿಂದಿಯಲ್ಲಿ ಆಡಿಸಬೇಕೆಂಬ ಆಸೆಯುಂಟಾಯ್ತು.

ಆಗ ಬಹು ವರ್ಷ ನಮ್ಮ ಕಂಪೆನಿಯಲ್ಲಿಯೇ ಇದ್ದು ಕಾಶಿಗೆ ಹೋಗಿ ಹಿಂದಿಯನ್ನು ಅಭ್ಯಾಸ ಮಾಡುತ್ತಿದ್ದ ಚಿ. ಬಿ.ವಿ. ಕಾರಂತನೆಂಬ ವಿದ್ಯಾರ್ಥಿಯಿಂದ ದಶಾವತಾರವನ್ನು

ಹಿಂದಿಗೆ ತರ್ಜುಮೆ ಮಾಡಿಸಿ, ಅಭ್ಯಾಸಕ್ಕೆ ಪ್ರಾರಂಭಿಸಿ, ಎರಡು ತಿಂಗಳು ಸತತವಾಗಿ ಅಭ್ಯಾಸ ಮಾಡಿಸಿದೆ. ಆಗ ನಮ್ಮದು ರಾಯಚೂರು ಕ್ಯಾಂಪು. ಹಿಂದಿ ನಾಟಕವನ್ನು ಹೈದರಾಬಾದ್, ಬೊಂಬಾಯಿ ಮೂಲ್ಕ ಡೆಲ್ಲಿಗೂ ತೆಗೆದುಕೊಂಡು ಹೋಗಬೇಕೆಂಬ ಆಕಾಂಕ್ಷೆ ಬಹಳವಾಗಿತ್ತು. ಆದರೆ ನನ್ನ ಗ್ರಹಚಾರ ಕ್ರೂರವಾಗಿತ್ತು. ಅದೇ ಸಮಯದಲ್ಲಿ ಮೈಸೂರಿನಲ್ಲಿ ದಿ. ಶ್ರೀ ಎಂ.ಸಿ. ಮಹದೇವಸ್ವಾಮಿಯವರು ಕನ್ನಡ ಥಿಯೇಟರ್ಸ್‌ನ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿನಲ್ಲಿ ಸಂಘವೊಂದನ್ನು ಪ್ರಾರಂಭಿಸಿದರು. ಅವರು ನಮ್ಮ ಕಂಪನಿಯಲ್ಲಿಯೇ ಹದಿನೈದು ಇಪ್ಪತ್ತು ವರ್ಷಗಳು ಇದ್ದು ಡೈಮಂಡ್ ಜೂಬಲಿ ಆದನಂತರ ಸಂಘವನ್ನು ಬಿಟ್ಟಿದ್ದು ಒಳಾಡಾತಳಿತ ಹೊರಾಡಳಿತಗಳನ್ನೆಲ್ಲಾ ಚೆನ್ನಾಗಿ ಅರಿತಿದ್ದುದರಿಂದ ಜನಗಳ ಪರಿಚಯವನ್ನು, ಸಂಸ್ಥೆ ನಡೆಸುವ ರೀತಿ ನೀತಿಗಳನ್ನು ಚೆನ್ನಾಗಿ ಅರಿತಿದ್ದು ನುರಿತಿದ್ದುದರಿಂದ ನಮ್ಮ ಸಂಸ್ಥೆಯಲ್ಲಿ ಮುಖ್ಯರಾಗಿದ್ದು ಹಿಂದಿ ನಾಟಕಗಳನ್ನಾಡಲು ಸಿದ್ಧರಾಗಿ ತಯಾರಾಗಿದ್ದ ಶ್ರೀ ಶ್ರೀಕಂಠಮೂರ್ತಿ, ಪುಟ್ಟಬಸಪ್ಪ, ಕ್ಲಾರಿನೆಟ್ ಲಿಂಗಪ್ಪ ಮುಂತಾದವರಿಗೆ ಮುಂಗಡ ಹಣವನ್ನು ಕೊಟ್ಟು ಕರಾರು ಪತ್ರಗಳನ್ನು ಬರೆಸಿಕೊಂಡು ಬಿಟ್ಟಿದ್ದರು. ಈ ವಿಚಾರ ನನಗೆ ತಿಳುದ ಕೂಡಲೇ ಮಹದೇವಸ್ವಾಮಿಯವರಿಗೆ ನಾನು ಹಿಂದಿ ಭಾಷೆಯಲ್ಲಿ ನಾಟಕ ಅಭ್ಯಾಸ ಮಾಡಿಸಿರುತ್ತೇನೆ. ಹೈದರಾಬಾದ್, ಬೊಂಬಾಯಿ, ಡೆಲ್ಲಿ ಮೊದಲಾಗಿ ಉತ್ತರ ಇಂಡಿಯಾದ ದೊಡ್ಡ ಸಂಚಾರವಿಟ್ಟುಕೊಂಡಿದ್ದೇನೆ. ಆದ್ದರಿಂದ ದಯವಿಟ್ಟು ನೀವು ಕರಾರು ಮಾಡಿಸಿಕೊಂಡಿರುವ ನಟರುಗಳನ್ನು ಬಿಟ್ಟು ಕೊಡಿ ಎಂದು ಪತ್ರ ಬರೆದುಕೊಂಡೆ. ಆದರೆ ನನ್ನ ಪತ್ರಕ್ಕೆ ಅವರು ಬೆಲೆ ಕೊಡದೆ ಧಿಕ್ಕರಿಸಿದ್ದರಿಂದ ಯತ್ನವಿಲ್ಲದೆ ಡೆಲ್ಲಿಸಂಚಾರವನ್ನು ಬಿಟ್ಟು ಗುಲ್ಬರ್ಗ, ಬಿಜಾಪುರ, ಹುಬ್ಬಳ್ಳಿಗೆ ಬಂದುದಾಯ್ತು.

ಹುಣ್ಣಿನ ಮೇಲೆಯೇ ಕುರು

ಆ ಸಮಯದಲ್ಲಿ ನಮ್ಮ ಕಂಪನಿಯಲ್ಲಿ ಸುಮಾರು ಇಪ್ಪತ್ತು ವರ್ಷಗಳಿಂದಲೂ ಪಾತ್ರಗಳನ್ನಭಿಸುತ್ತ, ಚಲನ ಚಿತ್ರಗಳಲ್ಲೂ ಅಭಿನಯಿಸಿದ್ದ ಬಿ. ರಾಘವೇಂದ್ರರಾಯರು ಸ್ವಂತ ಕಂಪನಿಯನ್ನು ಮಾಡಬೇಕೆಂದು ನಿರ್ಧರಿಸಿ ತಾವು ಹೊರಟಿದ್ದೂ ಅಲ್ಲದೆ ಅವರಿಗೆ ಬೇಕಾದ ನಾಲ್ಕಾರು ಜನರನ್ನು ಕರೆದುಕೊಂಡು ಹೋದರು. ಆ ಪೆಟ್ಟು ಸುಧಾರಿಸಿಕೊಂಡು ಬೆಳಗಾಂ, ಕಾರವಾರ, ರಾಮದುರ್ಗ, ಸಿರ್ಸಿ, ಬಾಗಲಕೋಟೆ, ಸೊಲ್ಲಾಪುರ, ಅಕ್ಕಲ್‌ಕೋಟೆಗೆ ಬಂದು ಅಲ್ಲಿಂದ ಚಿತ್ರದುರ್ಗ, ಸಾಗರಕ್ಕೆ ಬಂದುದಾಯಿತು.

ಹೀಗಾಗಿ ಮುಖ್ಯ ನಟರುಗಳು ಸಂಘದಿಂದ ಹೊರಟ ಬಂದನಂತರ ಬಿಗಿಯಾಗಿ ಕಟ್ಟಿದ್ದ ಕಟ್ಟಡ ಸಡಿಲವಾಗಿ ಕುಸಿಯಲು ಪ್ರಾರಂಭವಾಯಿತು. ಆಗ ಕೆಲವು ಹೊಸ ನಟರನ್ನು ಸೇರಿಸಿಕೊಂಡು ಕ್ಯಾಂಪು ಮಾಡಿದೆವು.

ಹುಣ್ಣಿನ ಮೇಲೆಯೇ ಕುರು ಎದ್ದಂತೆ ಇದುವರೆವಿಗೂ ಪೆಟ್ಟನ್ನು ತಿಂದು ಸುಧಾರಿಸಿಕೊಳ್ಳುವಷ್ಟರಲ್ಲಿಯೇ ಮತ್ತೊಂದು ಆಘಾತವನ್ನೆದುರಿಸಬೇಕಾಯಿತು. ನನ್ನ ಅಳಿಯ ದೇವರಾದ ಎಂ.ಆರ್. ಚನ್ನಪ್ಪನವರು ಮೈಸೂರಿನ ಶ್ರೀಮಂತರೂ, ದೊಡ್ಡ ಕಂಟ್ರಾಕ್ಟರೂ ಆದ ಶ್ರೀ ಬೋರಯ್ಯ ಬಸವಯ್ಯನವರಿಂದ ಬೆಂಬಲ ಪಡೆದು ಗಾಯತ್ರಿ ನಾಟಕ ಮಂಡಳಿ ಎಂಬ ಹೆಸರಿನಲ್ಲಿ ಅರವತ್ತು - ಎಪ್ಪತ್ತು ಸಾವಿರ ಬಂಡವಾಳದಲ್ಲಿ ನಾಟಕ ಸಂಘವೊಂದನ್ನು ಪ್ರೈವೇಟ್ ಲಿಮಿಟೆಡ್ ಕಂಪನಿಯನ್ನಾಗಿ ಪ್ರಾರಂಭಿಸಿದರು. ಅದೇ ಸಮಯದಲ್ಲಿ ನಮ್ಮ ಸಂಘವು ಹಾಸನದಲ್ಲಿದ್ದು ನಾಟಕಗಳು ನಡೆಯುತ್ತಿದ್ದವು. ಅಳಿಯಂದಿರು ನ್ಯಾಯಾನ್ಯಾಯಗಳನ್ನು ಯೋಚಿಸಿದೆ, ನಟಿನಟರುಗಳಿಗೆ ದುರ್ಬೋಧನೆ ಮಾಡಿ, ಹಣದ ಆಸೆ ತೋರಿಸಿ ಒಳಗೊಳಗೇ ಮುಖ್ಯ ನಟನಟಿಯರು, ವಾದ್ಯದವರು, ಸ್ಟೇಜಿನವರು, ಮೇಸ್ತ್ರಿ ಮೊದಲಾಗಿ ಸುಮಾರು ಇಪ್ಪತ್ತೈದು ಜನರನ್ನು ನಾನಿಲ್ಲದೆ ವೇಳೆಯಲ್ಲಿ ಒಂದೇ ದಿವಸ ಅಪಹರಿಸಿಕೊಂಡು ಹೋದರು ; ಗುಬ್ಬಿ ಕಂಪನಿಯ ಬಾಗಿಲನ್ನು ಹದಿನೈದು ದಿನಗಳೊಳಗೆ ಮುಚ್ಚಿಸುತ್ತೇನೆಂಬ ಹಟವನ್ನೂ ತೊಟ್ಟರು. ಆಗ ನನ್ನ ಮತ್ತು ಸಂಸ್ಥೆಯ ಗತಿ ಏನಾಗಿರಬಹುದೆಂದು ಹೇಳಬೇಕಾಗಿಲ್ಲ.

ಆದರೆ ಶ್ರೀ ಚನ್ನಬಸವೇಶ್ವರ ಸ್ವಾಮಿಯ ಕೃಪೆಯಿಂದ ಬಾಗಿಲು ಮುಚ್ಚಲಿಲ್ಲ. ಅನೇಕ ಕಷ್ಟಗಳನ್ನು ಎದುರಿಸಿ, ಧೈರ್ಯದಿಂದ ಓಡಾಡಿ, ಬೇರೆ ನಟರನ್ನು ಕೂಡಿಸಿ ನಿಯಮಿತ ದಿನದಂದು ಭದ್ರಾವತಿಯಲ್ಲಿ ನಾಟಕ ಪ್ರಾರಂಭಿಸಿಯೇ ಬಿಟ್ಟೆವು.

ಅಲ್ಲಿಂದ ಮುಂದೆ ಸಾಗರ ಕ್ಯಾಂಪಿಗೆ ಹೋಗಬೇಕೆಂದು ನಿರ್ಧರಿಸಿ ಥಿಯೇಟರು ಹಾಕಲು ಹಾಸನದ ಪಾರ್ಶ್ವನಾಥರವರಿಗೆ ಎರಡೂವರೆ ಸಾವಿರ ರೂಪಾಯಿಗಳಿಗೆ ಕಂಟ್ರಾಕ್ಟು ಕೊಟ್ಟು ಹಾಕಿಸಿ ನಾಟಕವಾಡಲುಪಕ್ರಮಿಸಿದೆವು. ಅಲ್ಲಿಗೆ ಹಿರಣ್ಣಯ್ಯ ಮಿತ್ರ ಮಂಡಳಿಯವರೂ ಬರಬೇಕೆಂದು ಯೋಚಿಸಿದ್ದರಂತೆ. ನಾವು ಸಾಗರಕ್ಕೆ ಬಂದದ್ದು ಅವರಿಗೆ

ಅಸಮಾಧಾನವಾಯಿತು. ನಮ್ಮ ಸಂಸ್ಥೆಯಲ್ಲಿಯೇ ಬಹುವರುಷಗಳ ಕಾಲವಿದ್ದು ಸ್ಟೇಜು ಮೇಸ್ತ್ರಿಯಾಗಿದ್ದ ಮುನಿರಂಗಪ್ಪ ಎಂಬುವರು ಆಗಲೇ ಹಿರಣ್ಣಯ್ಯ ಮಿತ್ರಮಂಡಳಿಯಲ್ಲಿ ಮ್ಯಾನೇಜಿಂಗ್ ಪ್ರೊಪ್ರಾಯಿಟರ್ ಆಗಿದ್ದು, ನಮ್ಮ ಸಂಸ್ಥೆಯ ಮೇಲೆ ಬೇಸರಪಟ್ಟರು. ಹೀಗಾಗಿ ವಿನಾಕಾರಣ ನಮ್ಮ ಸಂಸ್ಥೆಯು ನಿಷ್ಠುರಕ್ಕೆ ಗುರಿಯಾಗಿ ಅನನುಕೂಲತೆಗಳನ್ನೆದುರಿಸ ಬೇಕಾಯ್ತು.

ಹೊಸ ಹೊಸ ನಟರನ್ನು ಸೇರಿಸಿಕೊಂಡು, ಹಳೆಯ ಜನರಿಗೆ ಸಂಬಳಗಳನ್ನು ಜಾಸ್ತಿಮಾಡಿ ನಿಲ್ಲಿಸಿಕೊಂಡಿದ್ದಾಗಿತ್ತು. ಕೆಲವು ನಟರುಗಳು ಅಡ್ವಾನ್ಸ್ ತೆಗೆದುಕೊಂಡು, ಅಗ್ರಿಮೆಂಟ್ ಬರೆದುಕೊಟ್ಟು ಕೆಲವು ದಿನಗಳ ನಂತರ ದುರ್ಬೋಧನೆಯಿಂದ ಅಡ್ವಾನ್ಸ್ ಹಣವನ್ನು ಹಿಂದಕ್ಕೆ ಕಳುಹಿಸಿದರು. ಪುಟ್ಟ ಬಸಪ್ಪನವರು ಮತ್ತು ಯೋಗ ನರಸಿಂಹಯ್ಯನವರು ವಾಯಿದೆ ಹಾಕಿ ಅಗ್ರಿಮೆಂಟು ಬರೆದುಕೊಟ್ಟಿದ್ದರೂ ಬಾರದೆ ಹೋದದ್ದು ಸಂಸ್ಥೆಯ ದುರದೃಷ್ಟ.

ಇನ್ನೊಂದು ದುರ್ಘಟನೆ ಸಾಗರದಲ್ಲಿ ನಡೆಯಿತು. ಬೆಂಗಳೂರಿನ ಇಬ್ಬರು ಹೆಣ್ಣುಹುಡುಗಿಯರಿಗೆ ಐದುನೂರು ರೂಪಾಯಿ ಅಡ್ವಾನ್ಸ್ ಕೊಟ್ಟು, ಸಾಗರ ಕ್ಯಾಂಪಿಗೆ ಬಂದು ಹದಿನೈದು ದಿನಗಳಿದ್ದರು. ಆ ಹದಿನೈದು ದಿನಗಳು ಅವರನ್ನು ಸುಧಾರಿಸಬೇಕಾದರೆ ಸಾಕು ಸಾಕಾಗಿಹೋಯಿತು. ಈ ಕಲೆ ಅವರಿಗೆ ತೀರ ಹೊಸದು. ಆದರೂ ತಾವು ಸಖಿ ಪಾತ್ರವನ್ನು ಅಭಿನಯಿಸುವುದಿಲ್ಲವೆಂದು ಹೇಳುತ್ತಿದ್ದು ಬಹಳ ತೊಂದರೆ ಕೊಡುತ್ತಿದ್ದರು. ಅವರವರೇ ಜಗಳವಾಡಿಕೊಂಡು, ಒಂದು ಹುಡುಗಿ ಅಲ್ಲಿ ಭಾವಿಯೊಂದಕ್ಕೆ ಬಿದ್ದುಬಿಟ್ಟಳು. ನನ್ನ ಪುಣ್ಯ, ಬಾವಿಯಲ್ಲಿ ನೀರಿರಲಿಲ್ಲವಾಗಿ ಪ್ರಾಣ ಹೋಗಲಿಲ್ಲ. ಪ್ರಾಣಹೋಗಿದ್ದರೆ ಜೊತೆಯಲ್ಲಿ ನನ್ನ ಪ್ರಾಣವೂ ಹೋಗುವಂತಾಗುತ್ತಿತ್ತು. ಆಗ ತುಂಬಾ ಭಯಪಟ್ಟು ಬೆಂಗಳೂರಿಗೆ ಕಳುಹಿಸಿ ಅವರಿಗೂ, ಅವರಿಗೆ ಕೊಟ್ಟಿದ್ದ ಐದುನೂರು ರೂಪಾಯಿಗಳಿಗೂ ನಮಸ್ಕಾರ ಹಾಕಿದೆನು. ಹೀಗಾಗಿ ಸಂಘಕ್ಕೆ ಏಟಿನ ಮೇಲೆ ಏಟು, ತೊಂದರೆಯ ಮೇಲೆ ತೊಂದರೆಗಳಾಗಿ, ಸಂಬಳಗಳೆಲ್ಲಾ ಹೆಚ್ಚಿಕೊಂಡು ಹೋಗಿ ತುಂಬಾ ಕಷ್ಟದಿಂದ ತಿಪಟೂರಿಗೆ ಬಂದೆವು.

ಅಣ್ಣ-ತಮ್ಮ

ತಿಪಟೂರಿಗೆ ಬರುವುದರೊಳಗಾಗಿ ಗಾಯಿತ್ರಿ ಕಂಪನಿಗೆ ಹೋಗಿದ್ದ ಜನಗಳಲ್ಲಿ ಕೆಲವರು ಬೇಸರಗೊಂಡು ತಮ್ಮ ತಮ್ಮ ಊರಿಗೆ ಹಿಂತಿರುಗಿದ್ದರು. ಅವರ ಪೈಕಿ ಎಂ.ಎಸ್. ಆರಾಧ್ಯರೆಂಬುವರು ಪುನಃ ನಮ್ಮಲ್ಲಿಗೆ ಬರುತ್ತೇವೆಂದು ಬೇರೆಯವರಿಂದ ಪತ್ರ ಬರೆಸಿದ್ದರು. ಕಲೆಯ ಮೇಲಿನ ಅಭಿಮಾನದಿಂದಲೂ ಸರಿಯಾದ ನಟನಾದುದರಿಂದಲೂ ಆತನು ಮಾಡಿದ ಅನ್ಯಾಯವನ್ನೆಲ್ಲಾ ಬದಿಗೊತ್ತಿ, ಮೈಸೂರಿಗೆ ಹೋಗಿ, ಕರೆಯಿಸಿ, ಒಬ್ಬ ದೊಡ್ಡ ಮನುಷ್ಯರ ಸಮಕ್ಷಮ ಮಾತನಾಡಿ ಒಂದು ಸಾವಿರ ರೂಪಾಯಿಗಳನ್ನು ಮುಂಗಡ ಕೊಟ್ಟು ಐದು ವರ್ಷಗಳಿಗೆ ಕರಾರು ಬರೆಸಿ ತಿಪಟೂರಿಗೆ ಕಳುಹಿಸಿದೆನು.

ಗದಗಿನ ಶ್ರೀ ಹೆಚ್.ಟಿ. ಮಹಾಂತೇಶ ಶಾಸ್ತ್ರಿಗಳು ಹಿಂದೆ ನಮ್ಮ ಸಂಸ್ಥೆಗೆ 'ಮಹಾತಾಯಿ' ಎಂಬ ನಾಟಕವನ್ನು ಬರೆದು ಅದನ್ನು ಆಡಿ ಕಾರಣಾಂತರ ನಿಂತಿತು. ಅದನ್ನು ತಿಪಟೂರಿನಲ್ಲಿ ಪುನಃ ಅಭ್ಯಾಸ ಮಾಡಿಸಿ ಆಡಿಸಿದರು. ಅಲ್ಲಿಂದ ಮಂಡ್ಯಕ್ಕೆ ಹೋಗಿ ಮೈಸೂರಿನಲ್ಲಿ ಪುರಭವನದಲ್ಲಿ 'ಅಣ್ಣತಮ್ಮ' ಮೂವತ್ತು ನಾಟಕಗಳನ್ನು ಆಡಿ 'ಸದಾರಮೆ' ಮೂರು ನಾಲ್ಕು ಪ್ರದರ್ಶನವನ್ನಾಡಿ ಅನಂತರ ಸಂಸ್ಥೆಯನ್ನು ನಂಜನಗೂಡಿಗೆ ಕಳುಹಿಸಿದೆ. ಅಂದರೆ ಇತ್ತೀಚೆಗೆ ಸದಾ ಸಂಸ್ಥೆಯಲ್ಲಿ ನಾನಿರುತ್ತಿರಲಿಲ್ಲ. ನನ್ನ ಜ್ಯೇಷ್ಠಪುತ್ರನಾದ ಚೆನ್ನಬಸವಣ್ಣನ ಆಡಳಿತದಲ್ಲಿ ಬಿಟ್ಟು ಆಗಾಗ್ಗೆ ಬಂದು ವಿಚಾರಿಸಿಕೊಂಡು ಹೋಗುತ್ತಿದ್ದೆ. ನಂಜನಗೂಡಿನಲ್ಲಿ ಎರಡು ತಿಂಗಳು ಒಂದೇ ಸಮನೆ ಚೆನ್ನಾಗಿ ನಡೆಯಿತಾದರೂ ಮುಂದೆ ಟಿ. ನರಸೀಪುರ, ಕೊಳ್ಳೇಗಾಲ, ಮಳವಳ್ಳಿ, ಕನಕಪುರ, ಚನ್ನಪಟ್ಟಣಗಳಲ್ಲಿ ತುಂಬಾ ನಷ್ಟವಾಯಿತು. ಸದರಿ ನಷ್ಟವನ್ನು ತುಂಬಿಕೊಳ್ಳಲು ನಾನು ಮತ್ತು ಶ್ರೀಮತಿ ಜಯಮ್ಮ ಇಬ್ಬರೂ ಪ್ರತಿಕ್ಯಾಂಪಿನಲ್ಲಿ ಶ್ರೀಚನ್ನಬಸವೇಶ್ವರ ಸ್ವಾಮಿಯ ಸೇವೆಯೆಂದು ಒಂದೆರಡು ನಾಟಕಗಳನ್ನಾಡಿ ಬರುತ್ತಿದ್ದೆವು. ಈಚೆಗೆ ನಿದ್ದೆಕೆಟ್ಟು ಪಾರ್ಟುಮಾಡಲು ಎಪ್ಪತ್ತು ವರ್ಷಗಳಾದ ನನಗೆ ಸಾಧ್ಯವಾಗುತ್ತಿರಲಿಲ್ಲ. ಚನ್ನಪಟ್ಟಣದಲ್ಲಿ ಹೋಗಿ ನೋಡಲಾಗಿ 'ಅಣ್ಣತಮ್ಮ' ನಾಟಕದ ಸೀನರಿಗಳು ಹಳೆಯದಾಗಿದ್ದುದರಿಂದ, ನಮ್ಮಲ್ಲಿ ಬಹುವರ್ಷಗಳಿಂದಲೂ ಪೆಯಿಂಟರ್ ಆಗಿ ಇದ್ದ ಜಿ.ವಿ. ನರಸಿಂಹಯ್ಯನವರಿಂದ ಹೊಸ ಸೀನರಿಗಳನ್ನು ಬರೆಯಿಸಿ ಪ್ರಪ್ರಥಮವಾಗಿ ತ್ರಿವಿಭಾಗ ರಂಗಸಜ್ಜಿಕೆಯೊಂದಿಗೆ 'ಅಣ್ಣ-ತಮ್ಮ' ನಾಟಕವನ್ನು ೧೯೬೧ನೇ ಜೂನ್ ಹದಿನೆಂಟರಂದು ಬೆಂಗಳೂರಿನಲ್ಲಿ ಪ್ರಾರಂಭಿಸಿದೆವು. ಅದಕ್ಕಾಗಿಯೇ ಮದ್ರಾಸಿಗೆ ಹೋಗಿ ಬಿ.ಆರ್. ಪಂತಲುರವರಿಂದ ಚಲಿಸುವ ಮೋಡವನ್ನು ತೋರಿಸುವ ಎಫೆಕ್ಟ್ ಡಿಕ್ಸ್ (Effect Disc) ಅನ್ನು ಎರಡು ಸಾವಿರ ರೂಪಾಯಿಗಳಿಗೆ ಕೊಂಡು ತಂದೆವು. ಹದಿನೈದು ದಿನಗಳು ಮಳೆಯಿಲ್ಲದೆ ಚೆನ್ನಾಗಿ ನಡೆದು ನಾಟಕಗಳಿಗೆ ಒಳ್ಳೆ ಹೆಸರು ಬಂದು ಉತ್ಪತ್ತಿಯೂ ಚೆನ್ನಾಗಿ ಆಯಿತು. ಆ ನಂತರ ಮಳೆ ಪ್ರಾರಂಭವಾಗಿದ್ದರಿಂದ ಉತ್ಪತ್ತಿ ಸಾಧಾರಣ ಆಗುತ್ತಿತ್ತು. ಒಟ್ಟು ಒಂದುನೂರ ಇಪ್ಪತ್ತೈದು ನಾಟಕಗಳನ್ನು ಆಡಿದೆವು. ನೂರನೆಯ ಪ್ರದರ್ಶನದ ಸಮಯದಲ್ಲಿ, ನಮ್ಮ ಸಂಘಕ್ಕೆ 'ಅಣ್ಣ-ತಮ್ಮ', 'ಆದರ್ಶ ಪುತ್ರ' ಮತ್ತು 'ಮಹಾತಾಯಿ'

ನಾಟಕಗಳನ್ನು ಬರೆದುಕೊಟ್ಟ ಕವಿಗಳಾದ ಶ್ರೀ ಮಹಾಂತೇಶ ಶಾಸ್ತ್ರಿಗಳವರನ್ನು ಕರೆಯಿಸಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಆಸ್ಥಾನವಿದ್ವಾನ್, ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರ ಅಮೃತಹಸ್ತದಿಂದ ಮುಖ್ಯ ಮಂತ್ರಿಗಳಾಗಿದ್ದ ಬಿ.ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ 'ಕವಿರತ್ನ' ಎಂಬ ಬಿರುದಿನೊಂದಿಗೆ ಒಂದು ಬಂಗಾರದ ಪದಕವನ್ನು ಕೊಟ್ಟು ಗೌರವಿಸಿದೆವು.

ದಾವಣಗೆರೆ ಕ್ಯಾಂಪಿನಲ್ಲಿ ನಮ್ಮ ಗ್ರಹಗತಿಗಳು ಚೆನ್ನಾಗಿಲ್ಲದ್ದರಿಂದ ಒಂದು ತಿಂಗಳು ಅಲ್ಲಿಯ ಕಂಟ್ರಾಕ್ಟರ್‌ರವರಾದ ಶರಭಣ್ಣನವರಿಗೆ ಕಂಟ್ರಾಕ್ಟ್ ಕೊಟ್ಟೆವು. ಉತ್ಪತ್ತಿ ಚೆನ್ನಾಗಿ ಆಗಲು ಪ್ರಾರಂಭವಾದ ಮೇಲೆ ಮತ್ತೊಂದು ತಿಂಗಳು ಸ್ವಂತ ಆಡಿಕೊಂಡು ತೀರ್ಥಹಳ್ಳಿಗೆ ಹೋದೆವು. ನಮ್ಮ ಪ್ರತಿಯೊಂದು ನಾಟಕಕ್ಕೂ ಉತ್ಪತ್ತಿ ಚೆನ್ನಾಗಿ ಆಯಿತು. ಆಗ ಮದ್ರಾಸಿಗೆ ಹೋಗಿ ಅನೇಕ ತರಹ ವಾದ್ಯಗಳನ್ನು ನುಡಿಸುವ 'ಕ್ಲೇ ವಯೋಲಿನ್' ಎಂಬ ವಾದ್ಯವನ್ನು ೫೦೦೦/- ರೂ.ಗಳಿಗೆ ತಂದೆ. ಅದು ವಿದ್ಯುತ್ ಶಕ್ತಿ ಮೂಲಕ ಬಾರಿಸುವಂತಾದ್ದು. ಅದೇ ಸಮಯದಲ್ಲಿ ಕೇಂದ್ರ ಸರ್ಕಾರದವರು ಹೊಸ ನಾಟಕಗಳನ್ನಾಡಲು ೭೫೦೦/- ರೂಪಾಯಿಗಳನ್ನು ಕೊಡುವುದಾಗಿ ಪ್ರಚಾರ ಮಾಡಿದ್ದರು. ಅದಕ್ಕೆ ನಾವು ಪ್ರಯತ್ನಿಸಿ ೪,೦೦೦/- ರೂ.ಗಳನ್ನು ಮುಂಗಡ ಪಡೆದು ಮೈಸೂರಿನ ಅನಂತರಾವ್‌ರವರು ಬರೆದಿದ್ದ 'ಲವಕುಶ' ನಾಟಕವನ್ನು ಆಡಲು ನಿರ್ಧರಿಸಿದೆವು.

ಸೀನರಿಗಳನ್ನು ಬರೆಯಲು ಪೆಯಿಂಟರ್‌ಗಳಾದ ಶ್ರೀ ಜಿ. ಚನ್ನಬಸಪ್ಪ, ಮತ್ತು ಜಿ.ವಿ. ನರಸಿಂಹಯ್ಯನವರನ್ನು ಗೊತ್ತುಮಾಡಿ, ಮೌಲ್ಡಿಂಗ್ ಕೆಲಸಗಳಿಗಾಗಿ ಮೈಸೂರಿನ ಶ್ರೀ ಎಂ.ಸಿ. ವೀರರವರನ್ನು ಕರೆಯಿಸಿ ಮುಂಭಾಗದ ಫ್ರೇಂ, ಮತ್ತು ಇತರ ಕೆಲ್ಸಗಳನ್ನು ವಹಿಸಿದೆ.

ಸಂಸ್ಥೆಯು ತೀರ್ಥಹಳ್ಳಿಯಿಂದ ಮಂಗಳೂರಿಗೆ ಹೋಗಿ ೧೯೬೨ನೇ ಫೆಬ್ರವರಿ ಮಾಹೆ ತಾರೀಖು ೧೦ ರಂದು 'ಅಣ್ಣ-ತಮ್ಮ' ನಾಟಕವನ್ನು ಪ್ರಾರಂಭಿಸಿದೆವು. ಹಿಂದೆಯೂ 'ದಶಾವತಾರ' ನಾಟಕಕ್ಕೆ ಬಹು ಚೆನ್ನಾಗಿ ಪ್ರೋತ್ಸಾಹ ಕೊಟ್ಟಿದ್ದ ಮಂಗಳೂರಿನ ರಸಿಕರು ಈ ಬಾರಿಯೂ ಪ್ರೋತ್ಸಾಹವನ್ನಿತ್ತರು - ಆ ಬೆಂಬಲದಿಂದ ೮೦ ನಾಟಕಗಳು ಒಂದೇ ಸಮನೆ ನಡೆಯಿತು. ಉತ್ಪತ್ತಿ ಇಳಿಯಲಿಲ್ಲ.

ಹಿಂದಿನ ಬಾರಿ ಬಂದಾಗ್ಗೆ 'ದಶಾವತಾರ', 'ಸಾಹುಕಾರ' ಎರಡೇ ನಾಟಕಗಳನ್ನಾಡಿದಿರಿ, ಈ ಬಾರಿ ಕೇವಲ 'ಅಣ್ಣ ತಮ್ಮ' ನಾಟಕದಲ್ಲೇ ಕ್ಯಾಂಪು ಮುಗಿಸಬೇಡಿ - ನಿಮ್ಮ ಇತರ ನಾಟಕಗಳನ್ನು ನಾವು ನೋಡಿ ಆನಂದಿಸಲು ಅವಕಾಶ ಕೊಡಿ ಎಂದು ಪತ್ರಗಳು ಕಲಾಭಿಮಾನಿಗಳಿಂದ ಬರಲು ಪ್ರಾರಂಭವಾದ್ದರಿಂದ 'ಅಣ್ಣ-ತಮ್ಮ' ಕೊನೆ ಮಾಡಿದೆವು. ೭೫ನೇ 'ಅಣ್ಣ-ತಮ್ಮ' ನಾಟಕದ ಉತ್ಪತ್ತಿಯಾದ ಎರಡು ಸಾವಿರ ರೂಪಾಯಿಗಳನ್ನು ಉಡುಪಿಯ ಅದಮಾರು ಮಠದವರು ಕಟ್ಟಲಿರುವ ಛತ್ರದ ಸಹಾಯಾರ್ಥ ಕೊಡಲಾಯಿತು ಪುನಃ ಸಾಮಕಾರ ನಾಟಕವನ್ನಾಡಿ ಇತರ ನಾಟಕಗಳನ್ನಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೆವು. ನಮ್ಮ ದುರಾದೃಷ್ಟ !!

೧೯೬೨ನೇ ಮೇ ೧೬ನೇ ತಾರೀಖಿನ ದಿನ ವಿಪರೀತ ಮಳೆ ಬಂದು ನಾವು ಕಟ್ಟಿಸಿದ್ದ ರಂಗಮಂದಿರವು ಕುಸಿದು ಭೂಗತವಾಯಿತು. ಪರದೆ, ಸೀನರಿ, ಲೈಟು ವಗೈರೆ ಬಹುಮಟ್ಟಿಗೆ ನಾಶವಾಗಿ ತುಂಬಾ ನಷ್ಟವಾಯಿತು. ದೇವರ ಕೃಪೆಯಿಂದ ಯಾರಿಗೂ ಪ್ರಾಣಾಪಾಯವಾಗಲಿಲ್ಲ. ಬಹುಶಃ ಮಂಗಳೂರಿನಲ್ಲಿದ್ದಾಗ್ಗೆ, ಧರ್ಮಸ್ಥಳ, ಸುಬ್ರಹ್ಮಣ್ಯ, ಉಡುಪಿಯ ಅಷ್ಟಮಠಗಳು ಮೊದಲಾದ ಪುಣ್ಯ ಸ್ಥಳಗಳನ್ನು ನೋಡಿಕೊಂಡು ಬಂದಿದ್ದರ ಫಲವಿದ್ದರೂ ಇರಬಹುದು.

ಈ ವೇಳೆಗೆ ತರೀಕೆರೆ ಕ್ಯಾಂಪು ಮಾಡಬೇಕೆಂದು ಯೋಚಿಸಿ, ಲೈಸೆನ್ಸ್ ವಗೈರೆ ಆಗಿದ್ದರೂ ಅದನ್ನು ವಜಾಮಾಡಿ ನನ್ನ ಚಿ. ಚನ್ನಬಸವಣ್ಣನವರು ಅರಸೀಕೆರೆ ಕ್ಯಾಂಪು ಗೊತ್ತುಮಾಡಿದರು. ಕುಸಿದು ಬಿದ್ದಿದ್ದ ಸಾಮಾನುಗಳಲ್ಲಿ ಹರಿದು ಮುರಿದು ಹೋದ ಸಾಮಾನುಗಳನ್ನು ಬಿಟ್ಟು ಸಾಧಾರಣವಾಗಿದ್ದ ಸಾಮಾನುಗಳಿಗೆ ರೀಟಚ್ ಮಾಡಿಸಿಕೊಂಡು ಅರಸೀಕೆರೆಯಲ್ಲಿ ಪ್ರಾರಂಭಿಸಿದೆವು. ಒಂದೂವರೆ ತಿಂಗಳು ನಷ್ಟದಲ್ಲಿಯೇ ನಡೆಯಿತು. ಅದೇ ಊರಿನಲ್ಲಿ ಕವಿರತ್ನ ಶ್ರೀ ಮಹಾಂತೇಶ ಶಾಸ್ತ್ರಿಗಳವರಿಂದ ಬರೆಸಿದ್ದ 'ಪುರುಷಪಶು' ಎಂಬ ಸಾಮಾಜಿಕ ಅವರಿಂದಲೇ ಅಭ್ಯಾಸ ಮಾಡಿಸಿ ಅರಸೀಕೆರೆಯಲ್ಲಿಯೇ ನಾಟಕವನ್ನು ೧೯೬೨ ಜುಲೈ ೨೬ನೇ ತಾರೀಖು ಅಭಿನಯಿಸಲಾಯಿತು. ಅದೇ ಊರಿನಲ್ಲೇ ಸಂಸ್ಥೆಯ ಜನರನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿ ಎರಡುಕಡೆ ನಾಟಕವನ್ನಾಡೋಣವೆಂದು ನನ್ನ ಚಿರಂಜೀವಿಗಳಾದ ಚೆನ್ನಬಸವಣ್ಣ, ರಾಜಶೇಖರ್, ಶಿವರಾಜ್ ಮೂವರೂ ಮಾತನಾಡಿಕೊಂಡು ಅದರಂತೆಯೇ ಒಂದನ್ನು ದೊಡ್ಡಬಳ್ಳಾಪುರಕ್ಕೂ ಮತ್ತೊಂದನ್ನು ಚಾಮರಾಜ ನಗರಕ್ಕೂ ಕಳುಹಿಸಬೇಕೆಂದು ಯೋಚಿಸಿ ನನ್ನ ಸಲಹೆಯನ್ನು ಕೇಳಿದರು. ನಾನು ಸಮ್ಮತಿಸಲಿಲ್ಲ. ಆದಾಗ್ಯೂ ಅನನುಭವದಿಂದ ಅವರ ಇಷ್ಟಪ್ರಕಾರ ಎರಡು ಸಂಸ್ಥೆ ಮಾಡಿ ಹೊರಟರು. ದೊಡ್ಡಬಳ್ಳಾಪುರಕ್ಕೆ ಹೋಗಿದ್ದ ಭಾಗ ಕೆಲವು ದಿನಗಳು ನಾಟಕಗಳನ್ನಾಡಿ ನಂತರ ಚಾಮರಾಜನಗರಕ್ಕೆ ಹೋಗಿ ಪುನಃ ಅದೇ ಸಂಸ್ಥೆಗೆ ಸೇರಿಕೊಂಡಿತು - ನನ್ನ ಸಲಹೆ ಕೇಳದಿದ್ದುದರಿಂದ ಹದಿನೈದು ಸಾವಿರ ರೂಪಾಯಿಗಳವರೆಗೂ ನಷ್ಟವಾಯಿತು. ಆ ಸಮಯದಲ್ಲಿ ಮೈಸೂರಿನ ದಸರಾ ಎಗ್ಸಿಬಿಷನ್ ಕಮಿಟಿಯವರು 'ಅಣ್ಣ-ತಮ್ಮ' ನಾಟಕವನ್ನಾಡಲು ಆಹ್ವಾನಿಸಿದರು. ಆಗ ಅಲ್ಲಿನ ಪುರಭವನದಲ್ಲಿ ಒಂದು ವಾರ ನಾಟಕವನ್ನಾಡಲು ಗೊತ್ತುಮಾಡಿ ಬಂದ ಹಣವನ್ನೂ ಅದರ ಜೊತೆಗೆ ಮತ್ತಷ್ಟು ಹಣವನ್ನೂ ಕೊಟ್ಟು ತುಮಕೂರಿಗೆ ಸಂಸ್ಥೆಯನ್ನು ಕರೆತಂದದ್ದಾಯಿತು.

ಲವ-ಕುಶ

ತುಮಕೂರಿನಲ್ಲಿ ನಾಟಕಗಳನ್ನಾಡುತ್ತಿದ್ದು 'ಅಮೃತ'ವೆಂಬ ಹೊಸ ಸಾಮಾಜಿಕ ನಾಟಕವನ್ನು ಕವಿಗಳಾದ ಮಾಂಡ್ರೆಯವರಿಂದ ಅಭ್ಯಾಸ ಮಾಡಿಸುತ್ತಿದ್ದ ಹಾಗೆಯೇ 'ಲವ-ಕುಶ' ನಾಟಕವನ್ನು ಮೈಸೂರು ಅನಂತರಾಮಯ್ಯನವರೆಂಬ ಕವಿಗಳಿಂದ ತೆಗೆದುಕೊಂಡು ಎರಡು ವರುಷಗಳಿಂದ ಮೂಲೆಯಲ್ಲಿ ಹುದುಗಿಟ್ಟಿದ್ದ ಪುಸ್ತಕವನ್ನ ಹೊರಗೆ ತೆಗೆದು ತುಮಕೂರಿನಲ್ಲಿದ್ದ ನಟವರ್ಗದ ಜನಗಳಲ್ಲಿ ಎರಡು ಭಾಗ ವಿಂಗಡಿಸಿ 'ಅಮೃತ'ವೆಂಬ ಸಾಮಾಜಿಕ ನಾಟಕ ಮತ್ತು 'ಲವ-ಕುಶ'ವೆಂಬ ಪೌರಾಣಿಕ ನಾಟಕವನ್ನು ಅಭ್ಯಾಸಕ್ಕೆ ತೆಗೆದುಕೊಂಡೆವು. ಹಾಡುಗಳ ಧಾಟಿಗೆ ಶ್ರೀ ಕಾಳಿಂಗರಾಯರನ್ನೂ, ನೃತ್ಯಸಂಯೋಜನೆಗೆ ಶ್ರೀ ಆನೂರು ಸೂರ್ಯನಾರಾಯಣ ರವರನ್ನೂ, ಸಾಹಿತ್ಯಕ್ಕೆ ಶ್ರೀ ಬಿ. ಪುಟ್ಟಸ್ವಾಮಯ್ಯ ಮತ್ತು ಕು.ರಾ. ಸೀತಾರಾಮ ಶಾಸ್ತ್ರಿಗಳನ್ನೂ ಒಪ್ಪಿಸಿ ಅಭ್ಯಾಸ ಮಾಡಿಸಿದೆವು. ಈ ಬಾರಿ ಚಲಿಸುವ ರಂಗಮಂಚದ ಪ್ರಯೋಗವನ್ನು ಮಾಡಬೇಕೆಂದು ನಿರ್ಧರಿಸಿ ಚಿ. ಚೆನ್ನಬಸವಣ್ಣನು ಅದರ ಮೇಲೆಯೇ ಹಲವು ದಿನಗಳು ಪ್ರಯೋಗ ನಡೆಸಿ ತುಮಕೂರು ಕ್ಯಾಂಪಿನಲ್ಲಿ 'ಲವ-ಕುಶ' ನಾಟಕದಲ್ಲಿ ಪ್ರಯೋಗ ಮಾಡಲು ನಿರ್ಧರಿಸಿದ.

ನಾನೇ ತುಮಕೂರಿಗೆ ಒಂದು ತಿಂಗಳು ಕಾಲ ಹೋಗಿ ಬರುತ್ತಿದ್ದು ಬೆಂಗಳೂರಿನಲ್ಲಿ ಸೀನರಿಗಳನ್ನು ಬರೆಸಿ ಸಿದ್ಧಪಡಿಸುತ್ತಲಿದ್ದು ತುಮಕೂರಿನಲ್ಲಿ 'ಅಮೃತ' ಸಾಮಾಜಿಕ ನಾಟಕವನ್ನು ರಂಗಭೂಮಿಯ ಮೇಲೆ ಅಭಿನಯಿಸಿದೆವು. ಕಂಪೆನಿಯಲ್ಲಿದ್ದ ಜನಗಳಲ್ಲಿ ಎರಡು ವರ್ಗ ವಿಂಗಡಿಸಿದ್ದುದರಲ್ಲಿ ಸರಿಯಾದ ನಟರುಗಳನ್ನೆಲ್ಲಾ 'ಲವ-ಕುಶ'ಕ್ಕೆ ಹಾಕಿಕೊಂಡಿದ್ದರಿಂದ 'ಅಮೃತ'ವೆಂಬ ಸಾಮಾಜಿಕ ನಾಟಕಕ್ಕೆ ಸರಿಯಾದ ನಟರುಗಳಿಲ್ಲದೆಯೆ, ಮತ್ತು ನಾಟಕದಲ್ಲಿ ಹಾಸ್ಯಕ್ಕೆ ಅವಕಾಶವಿಲ್ಲದೆಯೆ ನಾಟಕ ಕಳೆಯಾಗದೆ ಶೋಭಿಸಲಿಲ್ಲ. ಮೂರು ನಾಟಕಗಳನ್ನು ಮಾತ್ರ ಅಭಿನಯಿಸಿ ಅಷ್ಟಕ್ಕೆ ಕೈ ಬಿಟ್ಟೆವು. ಅನಂತರ 'ಲವ-ಕುಶ' ನಾಟಕ ಅಭ್ಯಾಸ ಮಾಡಿ ತುಮಕೂರಿನಲ್ಲಿ ತಾ. ೧೩-೧೨-೬೨ರಲ್ಲಿ ಅರ್ಥಸಚಿವರಾದ ಶ್ರೀ ಬಿ.ಡಿ ಜತ್ತಿಯವರ ಘನ ಅಧ್ಯಕ್ಷತೆಯಲ್ಲಿ 'ಲವ-ಕುಶ' ನಾಟಕ ಪ್ರಾರಂಭೋತ್ಸವವನ್ನು ಮಾಡಿ ನಾಟಕವಾಡಿದೆವು. ನಾಟಕವು ಯಶಸ್ವಿಯಾಗಿ ನಡೆದು ಒಳ್ಳೇ ಪ್ರೋತ್ಸಾಹ ದೊರೆಯಿತು. ರೂ. ೧೨೦೦ ರಿಂದ ೧೫೦೦ ರವರೆಗೂ ಉತ್ಪತ್ತಿಯಾಯಿತು. ಲವ-ಕುಶರ ಪಾತ್ರವನ್ನು ನನ್ನ ಮೊಮ್ಮಕ್ಕಳಾದ ಜಯಶ್ರೀ ಎಂಬ ನಟಿಯೂ, ಗಂಗಮ್ಮನೆಂಬ ನಟಿಯೂ, ರಾಮನ ಪಾತ್ರವನ್ನು ಅಳಿಯನಾದ ಬಸವರಾಜುವೆಂಬ ಶ್ರೇಷ್ಠ ನಟನೂ ಸೀತೆಯ ಪಾತ್ರವನ್ನು ಮಗಳಾದ ಮಾಲತಮ್ಮ ಎಂಬ ಮೂವತ್ತು ವರ್ಷ ರಂಗಭೂಮಿಯ ಅನುಭವವುಳ್ಳ ನಟಿಯೂ ಅಭಿನಯಿಸಿ 'ಲವ-ಕುಶ' ನಾಟಕಕ್ಕೆ ಒಳ್ಳೆ ಶೋಭೆಯನ್ನುಂಟುಮಾಡಿ ಕೀರ್ತಿಯನ್ನು ತಂದರು.

ತುಮಕೂರಿನಲ್ಲಿ ಹನ್ನೆರಡು ಹದಿಮೂರು ನಾಟಕಗಳಾನ್ನಾಡಿ ಅನಂತರ ಹಾಸನದ ಜಾತ್ರೆಗೆ ಸಂಸ್ಥೆಯನ್ನು ತೆಗೆದುಕೊಂಡು ಹೋಗಿ ಜಾತ್ರೆಯಲ್ಲಿ 'ಲವ-ಕುಶ' ನಾಟಕವೊಂದನ್ನೇ

ಇಪ್ಪತ್ತು ನಾಟಕಗಳನ್ನಾಡಿದರು. ಅದೇ ಹಾಸನದಲ್ಲಿ 'ಕ್ಯಾಟಲ್ ಶೋ ಕಮಿಟಿ'ಯವರಿಗೆ ನಮ್ಮ ನಾಟಕದ ಕಂಪೆನಿಯವರು ಕಾಂಪ್ಲಿಮೆಂಟರಿ ಪಾಸ್ ವಗೈರೆ ಕೊಡದಿದ್ದುದರಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಕಂಪನಿಯವರ ಮೇಲೆ ಬೇಸರ ಹುಟ್ಟಿ ಜಾತ್ರೆಗೆ ಬಂದಿದ್ದ ಕಲಾವಿದರುಗಳಿಗೆ, ಇತರ ನಾಟಕ ಮಂಡಲಿಯವರಿಗೆ ಮತ್ತು ಎಲ್ಲಾ ವಿಧದ ಅಂಗಡಿಯವರುಗಳಿಗೆ ಮೆಚ್ಚಿಗೆ ಪತ್ರಗಳನ್ನು (ಸರ್ಟಿಫಿಕೇಟ್) ಕೊಟ್ಟು ನಮ್ಮ ಕಂಪೆನಿಗೆ ಮಾತ್ರ ಕೊಡದೆ ತಿರಸ್ಕರಿಸಿದುದು ಮನಸ್ಸಿಗೆ ಕೊಂಚ ವ್ಯಥೆಯಾಯಿತು. ಇದೂ ಒಂದು ನಮ್ಮ ಗ್ರಹಗತಿಗಳ ಕ್ರೂರ ಫಲವೆಂದು ಭಾವಿಸಬೇಕಾಯಿತು. ಹಾಗೆಯೇ ಹಾಸನದ ಜಾತ್ರೆ ಪೂರೈಸಿಕೊಂಡು ಪುನಃ ತುಮಕೂರಿಗೆ ಕ್ಯಾಂಪು ಬಂದಿದ್ದಾಯಿತು. ಆ ವೇಳೆಗೆ ನಮ್ಮ ಕಂಪೆನಿಯ ಮುಖ್ಯ ನಟಿಯಾಗಿದ್ದ ಬಿ. ಜಯಮ್ಮನ ಅನಾರೋಗ್ಯದಿಂದ ಕಂಪೆನಿಗೆ ಹೋಗಲು ಅವಕಾಶವಾಗಲಿಲ್ಲ. ಸಂಸ್ಥೆಯು ತುಮಕೂರಿನಿಂದ ದೊಡ್ಡ ಬಳ್ಳಾಪುರ, ಕೋಲಾರ, ಚಿಂತಾಮಣಿ, ಕುಣಿಗಲ್‌ಗೆ ಬಂದಿತು. ಕುಣಿಗಲ್ ಕ್ಯಾಂಪಿನಲ್ಲಿ ನಮ್ಮ ಸಂಘವು ಇದ್ದಾಗ್ಗೆ ಬೆಂಗಳೂರಿನಲ್ಲಿ ಕನ್ನಡ ಥಿಯೇಟರ್ಸ್, ಹಿರಣ್ಣಯ್ಯ ಮಿತ್ರಮಂಡಳಿ ಮತ್ತು ಚಿಂದೋಡಿ ವೀರಪ್ಪನವರ ಕಂಪೆನಿ ಈ ಮೂರು ಕಂಪೆನಿಗಳೂ ನಾಟಕಗಳನ್ನಾಡು ತ್ತಿದ್ದುವು. ಅದೇ ಕಾಲಕ್ಕೆ ಡೆಲ್ಲಿಯಿಂದ ಸಾಂಗ್ ಅಂಡ್ ಡ್ರಾಮ ಡಿವಿಜನ್ನಿನ ನಾಟಕ ವಿಭಾಗದವರು ಕರ್ನಲ್ ಗುಪ್ತೆಯವರ ನೇತೃತ್ವದಲ್ಲಿ ಮೂರು ನಾಟಕಗಳನ್ನು ಪುರಭವನದಲ್ಲಿ ಅಭಿನಯಿಸಿದರು - ಬೆಂಗಳೂರು ನಗರದಲ್ಲಿ ನಾಲ್ಕು ಸಂಘಗಳು ಒಟ್ಟಿಗೆ ಇದ್ದುದು ಇದೇ ಮೊದಲನೇ ಸಾರಿ ಎನ್ನಬಹುದು. ಆಗ ನಾನು ಈ ನಾಲ್ಕೂ ಮಂಡಳಿಯ ಜನರನ್ನೆಲ್ಲಾ ಆಹ್ವಾನಿಸಿ, ನಮ್ಮ ಗುಬ್ಬಿ ರಂಗಮಂದಿರದಲ್ಲಿ ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದೆನು. ಏಕೆಂದರೆ ಇಂತಹ ಸುಸಂದರ್ಭ ದೊರಕುವುದೇ ದುರ್ಲಭ.

ಈ ನಂತರ ಪುನಃ ಡೆಲ್ಲಿಗೆ ಹೋಗಬೇಕಾದ ಪ್ರಮೇಯ ಬಂದಿತು. ರಾಷ್ಟ್ರಪತಿಗಳವರ ಮತ್ತು ಫಿನ್ಲೆಂಡ್ ರಾಷ್ಟ್ರಾಧ್ಯಕ್ಷರ ಕೆಕೊನೆಸ್‌ರವರ ಘನ ಸಮ್ಮುಖದಲ್ಲಿ ಫೆಬ್ರವರಿ ೧೩ನೇ ತಾರೀಖು ರಾಷ್ಟ್ರಪತಿ ಭವನದಲ್ಲಿ ನನ್ನ ಪುತ್ರಿ ಚಿ. ಲತಾಳ ನೃತ್ಯವಿತ್ತು. ಅಂದು ಮಧ್ಯಾಹ್ನ ನಾವುಗಳು ರಾಷ್ಟ್ರಪತಿ ರಾಧಾಕೃಷ್ಣನ್‌ರವರನ್ನು ಭೇಟಿಮಾಡಿದ್ದಾಗ್ಗೆ ಅವರು ಹಿಂದೆ ಮೈಸೂರಿನಲ್ಲಿದ್ದಾಗ್ಗೆ ನಮ್ಮ 'ರಾಜಭಕ್ತಿ' ನಾಟಕಕ್ಕೆ ಬಂದಿದ್ದರ ನೆನಪು ಮಾಡಿದೆ - ಆ ಅಲ್ಪ ಸಮಯದಲ್ಲಿ ಅವರು ನಮ್ಮೊಡನೆ ಪ್ರೇಮದಿಂದ ಬೆರೆತು ಮನಬಿಚ್ಚಿ ಮಾತನಾಡಿದ್ದನ್ನೂ, ಅವರು ಆಗಿನ ಕಾಲದ ಹಾಡುಗಳನ್ನು ನೆನೆಸಿ ಹೇಳಿದುದನ್ನೂ ನಾನೆಂದೂ ಮರೆಯಲಾರೆ. ಆ ದಿವ್ಯ ಅನುಭವದಿಂದಾದ ಆನಂದ ಚಿರಸ್ಮರಣೀಯವಾದದ್ದು. ಆ ಅಲ್ಪ ಅವಧಿಯ ಕೊನೆಯಲ್ಲಿ ಅವರು ನಮ್ಮನ್ನು ಬೀಳ್ಕೊಟ್ಟಾಗ ನಮ್ಮ ಅವರ ಬೇರ್ಪಡೆಯ ವೇದನೆ ಸಹಜವಾಗಿ ನಮ್ಮೆಲ್ಲರಲ್ಲೂ ಮೂಡಿತು.

ನಂತರ ನಮ್ಮ ಸಂಘವು ನಷ್ಟಗಳನ್ನನುಭವಿಸುತ್ತಾ ಕೆ.ಆರ್. ನಗರ, ಮಡಕೇರಿ, ಸೋಮವಾರಪೇಟೆ, ನಂಜನಗೂಡು ಮುಗಿಸಿ ಮಂಡ್ಯ ಕ್ಯಾಂಪಿಗೆ ಬಂದಿತು. 'ಲವ-ಕುಶ' ಪ್ರಾರಂಭಿಸಿದ ಮೇಲೆ ಬೆಂಗಳೂರಿಗೆ ಬಂದಿರಲಿಲ್ಲವಾಗಿ ಮುಂದೆ ಬೆಂಗಳೂರಿಗೆ ಬರಬೇಕೆಂದು ಕೆಲವು ಸೀನುಗಳನ್ನು ಪುನಃ ಹೊಸದಾಗಿ ಮಾಡಿಸಿದೆ.

ಈ ಮಧ್ಯೆ ತಿಪಟೂರಿನಲ್ಲಿ ನನ್ನ ಪರಮ ಸ್ನೇಹಿತರಾದ ಶ್ರೀ ಕರಿಬಸವಯ್ಯನವರು, ನಾನು ೨೫ ವರ್ಷಗಳಿಂದ ವಿನೋದ ಟಾಕೀಸಿನ ಹೆಸರಿನಲ್ಲಿ ಭಾಗದಿಂದ ನಡೆಸುತ್ತಿದ್ದ ಚಿತ್ರಮಂದಿರವನ್ನು ಸ್ಥಳವಂದಿಗರಾದ ತಮಗೆ ಬಿಟ್ಟು ಕೊಡಬೇಕೆಂದು ಕೇಳಿಕೊಳ್ಳಲಾಗಿ ಅವರಿಗೆ ಪ್ರತಿ ಹೇಳದೆ ಸಂತೋಷದಿಂದ ಅವರಿಗೆ ವಹಿಸಿಕೊಟ್ಟು ನನಗೆ ಬರಬೇಕಾಗಿದ್ದ ಮೊಬಲಗು ತೆಗೆದುಕೊಂಡು ಅವರ ಅಪ್ಪಣೆ ತೆಗೆದುಕೊಂಡು ಬಂದುಬಿಟ್ಟೆ.

ಈ ಮಧ್ಯೆ ಬೊಂಬಾಯಿನಲ್ಲಿ ಅದಮಾರು ಮಠದ ಸ್ವಾಮಿಯವರು ನಡೆಸುತ್ತಿರುವ ಕಾಲೇಜಿಗಾಗಿ ನನ್ನ ಕುಮಾರಿ ಚಿ. ಲತಾದೇವಿಯ ನೃತ್ಯವನ್ನು ಸಹಾಯಾರ್ಥವಾಗಿ ಕೊಡಬೇಕೆಂದು ಹೇಳಿದ್ದರ ಮೇರೆಗೆ ಬೊಂಬಾಯಿಗೆ ಹೋಗಿ ಅಲ್ಲಿಯ ಷಣ್ಮುಖಾನಂದ ಥಿಯೇಟರಿನಲ್ಲಿ ಮತ್ತು ಬೇರೊಂದು ರಂಗಮಂದಿರದಲ್ಲಿ ಎರಡು ನೃತ್ಯ ಪ್ರದರ್ಶನಗಳನ್ನು ನಡೆಸಿ ಬಂದೆವು.

ಮಂಡ್ಯದಲ್ಲಿ ಆಡಿಕೊಂಡು ಬೆಂಗಳೂರಿಗೆ ಬಂದು ಗುಬ್ಬಿ ಥಿಯೇಟರಿನಲ್ಲಿ 'ಲವ-ಕುಶ' ನಾಟಕವನ್ನಾಡಲು ಪ್ರಾರಂಭಿಸಿ ಕಾಲೇಜಿ ಪ್ರಿನ್ಸಿಪಾಲ್ ಷಡಕ್ಷರ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಾಟಕ ಪ್ರಾರಂಭಿಸಿದೆವು. ನಾಟಕಕ್ಕೆ ಒಳ್ಳೆ ಹೆಸರೂ ಬಂದಿತು. ಕನ್ನಡ ನಾಟಕ ರಂಗಭೂಮಿ ಚರಿತ್ರೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಚಲಿಸುವ ರಂಗಸಜ್ಜಿಕೆಯನ್ನು ಅಳವಡಿಸಿದುದು ಇದೇ ಪ್ರಥಮ ಪ್ರಯೋಗ.

ಆ ಹೊತ್ತಿಗೆ ಸರಿಯಾಗಿ ತೆಲುಗು 'ಲವಕುಶ' (ಕಲರ್ ಚಿತ್ರ) ಮಿನರ್ವ ಟಾಕೀಸ್‌ನಲ್ಲಿ ಮೂರು ತಿಂಗಳಿಂದಲೂ ನಡೆಯುತ್ತಿದ್ದುದರ ಕಾರಣ, ನಮ್ಮ ನಾಟಕಕ್ಕೆ ತಕ್ಕಷ್ಟು ಪ್ರೋತ್ಸಾಹ, ಉತ್ಪತ್ತಿ ದೊರೆಯದೆ ಸಾಧಾರಣ ಉತ್ಪತ್ತಿ ಆಗುತ್ತಿತ್ತು. ಹಾಗೂ ಮಿನರ್ವ ಟಾಕೀಸ್ ಆದ ನಂತರ ಇತರೆ ಟಾಕೀಸ್‌ಗಳಲ್ಲಿಯೂ ಸಹಾ 'ಲವಕುಶ' ಚಿತ್ರ ನಡೆಯುತ್ತಲೇ ಇತ್ತು. ನಮಗೆ ಉತ್ಪತ್ತಿ ಕಡಿಮೆ ಆಗುತ್ತ ಬರಲು 'ಲವ-ಕುಶ' ಚಿತ್ರವೇ ಮುಖ್ಯ ಕಾರಣವಾಯಿತು.

ಅವಶ್ಯಮನುಭೋಕ್ತವ್ಯಂ

ಅಷ್ಟರಲ್ಲಿ ಸಂಸ್ಥೆಯಲ್ಲಿ ದೊಡ್ಡ ಗಂಡಾಂತರವೇ ಒದಗಿತು. 'ಲವಕುಶ' ನಾಟಕ ನಡೆಯುತ್ತಿದ್ದ ಒಂದು ಪ್ರವೇಶ ತೀರಿಸಿಕೊಂಡು ರಂಗಭೂಮಿಯಿಂದ ಒಳಗಡೆ ಬರುವಾಗ್ಗೆ ಸೀತೆ ಪಾತ್ರಧಾರಿಣಿ ಮಗಳಾದ ಮಾಲತಮ್ಮನಿಗೆ ಕಾಲಿಗೆ ವಿದ್ಯುತ್ ಕರಂಟ್ ಹೊಡೆದು ಕೂಡಲೆ ಕೆಳಗೆ ಬಿದ್ದು ಎರಡು ಕಾಲಿನ ಮೂಳೆಗಳು ಮುರಿದು ತುಂಬಾ ಆಘಾತವಾಯಿತು. ಆಗಿನ ದೃಶ್ಯ ಬರೆಯಲಸದಳ. ಪತಿಯ ಅಪ್ಪಣೆ ಪಡೆದು ಉತ್ಸಾಹದಿಂದ ಋಷ್ಯಾಶ್ರಮಕ್ಕೆ ಬಂದು ಋಷಿಪತ್ನಿಯರಿಗೆ ದಾನ, ಧರ್ಮಗಳನ್ನು ಕೊಟ್ಟು ಪಟ್ಟಣದ ಬೇಸರ ಕಳೆಯಲು ಋಷಿಪತ್ನಿಯರ ಜೊತೆಯಲ್ಲಿ ಕೆಲವು ದಿನಗಳು ವನವಿಹಾರದಲ್ಲಿಯೇ ಸಂತೋಷದಿಂದ ಕಾಲ ಕಳೆಯಬೇಕೆಂಬ ಮನೋಭಾವದಿಂದ ಬಂದ ಸೀತೆಯು ಕಾಡಿಗೆ ಲಕ್ಷ್ಮಣನ ಜೊತೆಯಲ್ಲಿ ಬಂದು ಲಕ್ಷ್ಮಣನ ಬಾಯಿಯಿಂದ ಬಂದ ಪತಿವಿಯೋಗದ ವಾರ್ತೆಯನ್ನು ಕೇಳಿ ಸಿಡಿಲು ಬಡಿದಂತೆ ಬೆಚ್ಚಿ ಬಿದ್ದು ಮೂರ್ಛಿತಳಾಗಿ ಚೇತರಿಸಿಕೊಂಡು ದಿಗ್ಭ್ರಮೆಯಿಂದ ಹಾರಾಡಿ, ಚೀರಾಡಿ, ಕೊನೆಗೆ ಲಕ್ಷ್ಮಣನನ್ನು ಪಟ್ಟಣಕ್ಕೆ ಕಳುಹಿಸಿ ನನಗೆ ಯಾರೂ ಬೇಡವೆಂದು ಹೇಳಿ ಏಕಾಂಗಿಯಾಗಿ ದಿಕ್ಕು ಕಾಣದೆ ಆತ್ಮಹತ್ಯೆನ್ನು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಬರುತ್ತಿದ್ದ ದೃಶ್ಯದಲ್ಲಿ ಕರೆಂಟ್ ಹೊಡೆದು ಪ್ರಾಣಾಪಾಯ ಆಯಿತೆನ್ನುವ ಹಾಗೆಯೇ ಮಾಲತಮ್ಮನ ಹಾರಾಟ, ಚೀರಾಟ, ಬೊಬ್ಬೆ ಹೊಡೆಯುವ ಸದ್ದಾಯಿತು. ಆಗ ಸಂಘದವರಲ್ಲಿ ಹಾರಾಟ, ಚೀರಾಟ, ಪ್ರಾರಂಭವಾಯಿತು. ಆಗ ಹೊರಗಡೆ ಪ್ರೇಕ್ಷಕರ ಗಾಬರಿ, ಹಾರಾಟ, ಚೀರಾಟ, ಸೀತೆಗೆ (ಮಾಲತಮ್ಮನಿಗೆ) ಏನು ಗತಿಯಾಯಿತೋ, ಏನೋ ಎಂಬ ಭೀಕರ ಶಬ್ದಗಳು, ಅಯ್ಯೋ ಪಾಪ, ಎಂಬ ಆರ್ತ ಧ್ವನಿಗಳು ನಾನಾ ತರಹವಾಗಿದ್ದವು.

ಈ ಸಮಾಚಾರವು ಮನೆಯಲ್ಲಿದ್ದ ನನಗೆ ತಿಳಿದ ಕೂಡಲೆ ಸಮೀಪದಲ್ಲಿಯೇ ಇದ್ದ ಥಿಯೇಟರಿಗೆ ಧಾವಿಸಿ ಗಾಬರಿಯಿಂದ ಓಡಿಬಂದು ನೋಡುವಲ್ಲಿ ಸೀತೆಯಾಗಿದ್ದ ಮಾಲತಮ್ಮನ ಸ್ಥಿತಿಬಹಳ ಚಿಂತಾಜನಕವಾಗಿತ್ತು. ನೋಡಲು ಸಹ ಸಾಧ್ಯವಾಗದಂತಾಗಿತ್ತು. ಹೊರಗಡೆ ಪ್ರೇಕ್ಷಕರ ಗಲಭೆ, ಒಳಗಡೆ ನಮ್ಮ ಸಂಘದವರ ಪೇಚಾಟ, ಮಾಲತಮ್ಮನ ಗೋಳಾಟ, ನನ್ನ ಮನಸ್ಸಿನ ಸಂಕಟ ತಾಳಲಾರದೆ ಬಹು ದುಃಖಪಟ್ಟು ಹಾಸ್ಪಿಟಲ್‌ನಿಂದ ಅಂಬುಲೆನ್ಸ ಕಾರು ತರಿಸಲು ಫೋನ್ ಮಾಡಿ, ರಂಗಭೂಮಿಯ ಮೇಲೆ ವ್ಯವಸ್ಥಾಪಕರನ್ನು ಕಳುಹಿಸಿ, ನಡೆದ ಸಮಾಚಾರ ಸ್ಥಿತಿಯನ್ನು ಪ್ರೇಕ್ಷಕರಿಗೆ ತಿಳುಹಿಸಿ ಕಾಲಾವಕಾಶವನ್ನು ತೆಗೆದುಕೊಂಡು ಸೀತೆ ಪಾತ್ರವನ್ನು ಪ್ರಭಾದೇವಿಗೆ ಹಾಕಿ ನಾಟಕವನ್ನು ನಿಲ್ಲಿಸದೆ ಮುಂದುವರಿಸಿದೆನು. ಅನಂತರ ಮಾಲತಮ್ಮನನ್ನು ತಕ್ಷಣವೆ ಹಾಸ್ಪಿಟಲಿಗೆ ದಾಖಲ್ಮಾಡಿದೆವು. ಹಾಸ್ಪಿಟಲಿನಲ್ಲಿ ಚಿಕಿತ್ಸೆಗೆ ಪ್ರಾರಂಭವಾಯಿತು. ಸೀತಾದೇವಿಯ ಉಪಚಾರಕ್ಕೆ ರಾಮಚಂದ್ರನೆ ನಿಂತಿರುವಂತೆ ರಾಮನ ಪಾತ್ರ ಮಾಡುತ್ತಿದ್ದ ಮಾಲತಮ್ಮನ ಪತಿಯಾದ ನನ್ನ ಅಳಿಯ ಬಸವರಾಜ ಎಂಬ ನಟನೇ ಮಾಲತಮ್ಮನ ಶುಶ್ರೂಷೆ ಮಾಡಲು ನಿಂತರು. ದಿನವಹಿ

ನಾಟಕದಲ್ಲಿ ಪಾತ್ರಮಾಡುವ ಕಾಲ ವಿನಾ ಉಳಿದ ಕಾಲದಲ್ಲಿ ಹಾಸ್ಪಿಟಲ್‌ಗೆ (೪ನೇ ನಂಬರ್ ವಾರ್ಡ್), ನಾನು, ನನ್ನ ಕುಟುಂಬದವರು, ಪರಿವಾರದವರು ತಿರುಗುತ್ತಿದ್ದು ಒಂಭತ್ತು ತಿಂಗಳ ಕಾಲ ಕಳೆದು ಹತ್ತನೆಯ ತಿಂಗಳಿಗೆ ಸೀತೆಯಾಗಿದ್ದ ಮಾಲತಮ್ಮನ ಪ್ರತಿಯಾಗಿ ಕುಂಟು ಮಾಲತಮ್ಮನನ್ನು ಕರೆದುಕೊಂಡು ಬರಬೇಕಾದರೆ ನನ್ನ ಮತ್ತು ನನ್ನ ಕುಟುಂಬದವರ ದುಃಖವೆಷ್ಟಿರಬೇಕೆಂಬುದು ಪ್ರಾಜ್ಞ ಓದುಗರಿಗೆ ಗೊತ್ತಾಗದಿರದು. ಮಾಲತಮ್ಮನನ್ನು ಹಾಸ್ಪಿಟಲಿನಿಂದ ಕರೆತರುವುದರೊಳಗೆ ದಾನ, ದಯೆ, ದಾಕ್ಷಿಣ್ಯದ ಖರ್ಚಿಗೆ ಮಿತಿ ಇಲ್ಲದಷ್ಟಾಯಿತು. ಒಟ್ಟಿನಲ್ಲಿ ಪ್ರಾಣಾಪಾಯವಾಗಲಿಲ್ಲ. ನಮ್ಮ ಅದೃಷ್ಯ, ಪರಮೇಶ್ವರನ ಕೃಪೆ.

ಮಗಳಾಗಿ ಹುಟ್ಟಿ ನಾಲ್ಕನೆಯ ವಯಸ್ಸಿನಲ್ಲಿಯೇ ಧ್ರುವ ಚರಿತ್ರೆಯಲ್ಲಿ ಉತ್ತಮನ ಪಾತ್ರದ ಮುದ್ದು ಮಾತುಗಳನ್ನು ಆಡಿ ಜನರನ್ನು ಮೆಚ್ಚಿಸಿ ದಿನೇ ದಿನೇ ರಂಗಭೂಮಿ ಸೇವೆ ಮಾಡುತ್ತ ಮೂವತ್ತೈದು ವರ್ಷ ಒಂದೇ ಸಮನಾಗಿ ವಿಶ್ರಾಂತಿಯಿಲ್ಲದೆ ರಂಗಭೂಮಿಯಲ್ಲಿ ಜನಗಳಲ್ಲಿ ಉತ್ತಮ ಕಲಾವಿದೆಯೆನಿಸಿಕೊಂಡಿದ್ದ ಮಾಲತಮ್ಮನ ಕಲಾದೇವಿಯ ಸೇವೆ ೯-೧೧-೬೪ನೆಯ ದಿನ ವಿದ್ಯುಚ್ಛಕ್ತಿ ಸೋಂಕಿನ ದೆಸೆಯಿಂದ ಮುಕ್ತಾಯವಾಯಿತು. ಇಲ್ಲವಾದರೆ ತನ್ನ ಕೈಲಾಗುವವರೆಗೂ ಕಲಾ ಮಾತೆಯ ಸೇವೆ ಮಾಡಬೇಕೆಂಬ ಸದಿಚ್ಛೆಯು ಸಂಪೂರ್ಣವಾಗಿತ್ತೆಂಬುದು ಆಗಾಗ್ಗೆ ಆಕೆಯ ಬಾಯಲ್ಲಿ ಬರುತ್ತಿದ್ದ ಮಾತುಗಳಿಂದಲೇ ನನಗೆ ಅರಿವಾಗಿತ್ತು. ಆದರೆ ದೈವದ ಇಚ್ಛೆ ಮಾತ್ರ ಹಾಗಿರದೆ ಬೇರೆಯಾಗಿತ್ತು. ನೀನೊಲಿದರೆ ಕೊರಡು ಕೊನರುವುದಯ್ಯ - ಒಲಿಯದಿದ್ದರೆ ಕೊರಡು ಗೆದ್ದಲು ಹಿಡಿದು ಮಣ್ಣು ತಿನ್ನುವುದಯ್ಯ ಎಂಬ ನಾಣ್ಣುಡಿಯಂತೆ ದೈವ ಒಲಿದರೆ ದರಿದ್ರನೂ ಧನಿಕನಾಗಬಹುದು, ಒಲಿಯದಿದ್ದರೆ ದರಿದ್ರನಿಗಿಂತಲೂ ಅಧೋಗತಿಯಾಗುವನು ಎನ್ನುವಂತೆ ಮುಂದಿನ ಕಥೆಯಾಗಿರುತ್ತದೆ. ನನ್ನ ಮಗಳಾದ ಮಾಲತಮ್ಮ – ಅಲ್ಲ ಅಲ್ಲ ಕುಂಟು ಮಾಲತಮ್ಮನನ್ನು ಹಾಸ್ಪಿಟಲಿನಿಂದ ಕರೆತಂದರು.

ಅಷ್ಟರೊಳಗೆ ಸಂಸ್ಥೆಯು ಬೆಂಗಳೂರಿನಲ್ಲಿ 'ಲವಕುಶ' ೧೨೦ ನಾಟಕಗಳನ್ನಾಡಿ ಮುಂದೆ ಶಿವಮೊಗ್ಗ ಡಿಸ್ಟ್ರಿಕ್ಟ್ ಆನವಟ್ಟಿ ಹತ್ತಿರದ ಜಾತ್ರೆಗೆ ಕಂಟ್ರಾಕ್ಟ್ ಮೇಲೆ ಹೋಗಿ ಬೇರೆ ಬೇರೆ ಊರುಗಳಿಗೆ ಹೋಗಿ ಮಾಲತಮ್ಮನನ್ನುಹಾಸ್ಪಿಟಲಿನಿಂದ ಕರೆದುಕೊಂಡು ಬಂದಾಗ ತುಮಕೂರು ಜಿಲ್ಲೆ ಚಿಕ್ಕನಾಯ್ಕನ ಹಳ್ಳಿಯಲ್ಲಿ ನಾಟಕಗಳನ್ನಾಡುತ್ತಿತ್ತು. ಬೆಂಗಳೂರಿನಿಂದ ಸಂಸ್ಥೆಯು ಜಾತ್ರೆಗೆ ಹೋದಾಗ್ಯೆ, ರಾಮನ ಪಾತ್ರ ಮಾಡುತ್ತಿದ್ದ ಮಾಲತಮ್ಮನ ಪತಿಯು ಮಾಲತಮ್ಮನ ಉಪಚಾರಕ್ಕಾಗಿ ಬೆಂಗಳೂರಿನಲ್ಲಿಯೇ ನೆಲಸಬೇಕಾಯಿತು. ಆಗಿನಿಂದ ನನ್ನ ಮೊದಲನೇ ಮಗನಾದ ಜಿ.ವಿ. ಚನ್ನಬಸವಣ್ಣನವನೇ ರಾಮನ ಪಾತ್ರ ಮಾಡಬೇಕಾಯಿತು.

ಆ ಸಮಯಕ್ಕೆ ಸರಿಯಾಗಿ ಮದ್ರಾಸಿನಲ್ಲಿದ್ದ ನನ್ನ ನಾಲ್ಕನೆಯ ಮಗ ಅಂದರೆ 'ಜೇನುಗೂಡು' ಚಿತ್ರದ ನೆಚ್ಚಿನ ನಟನಾದ ಶಿವರಾಜನೆಂಬ ನಟನು ಬೆಂಗಳೂರಿಗೆ ಬಂದನು. ಎರಡು ಮೂರು ದಿನ ಕಳೆದ ನಂತರ ಚಿಕ್ಕನಾಯಕನ ಹಳ್ಳಿಗೆ ಹೋಗಿ ಸಂಸ್ಥೆಯಲ್ಲಿ ಎಲ್ಲ

ನಟರುಗಳನ್ನೂ ಅಣ್ಣಂದಿರುಗಳನ್ನೂ ನೋಡಿಕೊಂಡು ಬರೋಣವೆಂದು ನನ್ನಿಂದ ಹಠಮಾಡಿ ಹಣ ತೆಗೆದುಕೊಂಡು ತಂದಿದ್ದ ಸ್ಕೂಟರ್ ಮೇಲೆ ಭಾವ ಬಸವರಾಜನನ್ನು ಕೂಡಿಸಿಕೊಂಡು ಚಿಕ್ಕ ನಾಯ್ಕನ ಹಳ್ಳಿಗೆ ಹೋಗಿ ಅಲ್ಲಿ ಆಡುತ್ತಿದ್ದ 'ಲವ-ಕುಶ' ನಾಟಕವನ್ನು ನೋಡಿದರು. ರಾಮನ ಪಾತ್ರವನ್ನು ಮಾಡುತ್ತಿದ್ದ ಅಳಿಯ ಬಸವರಾಜು ಈಗ ರಾಮನ ಪಾತ್ರ ಮಾಡುತ್ತಿರುವ ಭಾವಮೈದುನನಾದ ಚೆನ್ನಬಸವಣ್ಣನನ್ನು ನೋಡಿ ಸಂತೋಷದಿಂದ ಮೈದಡವಿ ಆಶೀರ್ವದಿಸಿ "ಚೆನ್ನಾಗಿ ಪಾತ್ರ ಮಾಡುತ್ತೀಯೆ, ರಾಮನ ಆಶೀರ್ವಾದ ಸಂಪೂರ್ಣವಾಗಿರಲಿ" ಎಂದು ಆಶೀರ್ವದಿಸಿ ಅಲ್ಲಿಂದ ಬರುವ ಮಾರ್ಗದಲ್ಲಿ ತುರುವೇಕೆರೆಯಲ್ಲಿದ್ದ ಹಿರಣ್ಣಯ್ಯ ಮಿತ್ರಮಂಡಲಿಗೆ ಹೋಗಿ ಅಲ್ಲಿ ನಾಟಕ ನೋಡಿಕೊಂಡು ಮರುದಿನ ಬೆಳಿಗ್ಗೆ ಕಾಫಿ ಕುಡಿದುಕೊಂಡು ಸ್ನೇಹಿತರಾದ ಮಾಸ್ಟರ್ ಹಿರಣ್ಣಯ್ಯ (ನರಸಿಂಹಮೂರ್ತಿ) ಮತ್ತು ಮುನಿರಂಗಪ್ಪನವರ ಅಪ್ಪಣೆ ಪಡೆದು ಮರಣ ವಾಹನ ಸ್ಕೂಟರ್ ಮೇಲೆ ಕುಳಿತು ಇಬ್ಬರೂ ಪ್ರಯಾಣಮಾಡಿದರು. ಡ್ರೈವಿಂಗ ಮಾಡುತ್ತಿದ್ದವನು ನನ್ನ ಮಗ ಶಿವರಾಜು, ಹಿಂದೆ ಕುಳಿತಿದ್ದವನು ಅಳಿಯ ಬಸವರಾಜು. ಈ ಹಿಂದೆ ಚಿಕ್ಕನಾಯ್ಕನ ಹಳ್ಳಿಯಲ್ಲಿ ನಾಟಕ ನೋಡಿ, ತುರವೇಕೆರೆಯಲ್ಲಿಯೂ ನಾಟಕ ನೋಡಿ ನಿದ್ರೆ ಇಲ್ಲದೆ ಇದ್ದುದರಿಂದ ಅಳಿಯ ಬಸವರಾಜುವು ನಿದ್ರೆ ತಡೆಯಲಾರದೆ ಗುಬ್ಬಿಗೆ ಒಂದು ಮೈಲಿ ದೂರ ಫಾಸಲೆಯಲ್ಲಿ ಸ್ಕೂಟರ್‌ನಿಂದ ಕೆಳಗೆ ಬಿದ್ದು ಕಾಲು ಸ್ಕೂಟರಿಗೆ ಸಿಕ್ಕಿಕೊಂಡು ಮೂರುನಾಲ್ಕು ಮಾರು ಎಳೆದುಕೊಂಡು ಬಂದ ಮೇಲೆ ಡ್ರೈವಿಂಗ್ ಮಾಡುತ್ತಿದ್ದ ನನ್ನ ಕುಮಾರ ಶಿವರಾಜು ಈ ದೃಶ್ಯ ನೋಡಿದ ಕೂಡಲೇ ಅವನೂ ಸಹಾ ಕೆಳಗೆ ಬಿದ್ದುಬಿಟ್ಟನಂತೆ. ಆಗ ಅಳಿಯ ಬಸವರಾಜು ಒಂದು ಕಡೆ, ಶಿವರಾಜು ಒಂದು ಕಡೆ, ಸ್ಕೂಟರ್ ಒಂದು ಕಡೆ - ಈ ರೀತಿ ಬಿದ್ದಿರುವ ದೃಶ್ಯವನ್ನು ರಸ್ತೆಯಲ್ಲಿ ಕಲ್ಲು ಕೆಲಸ ಮಾಡುತ್ತಿದ್ದ ಜನಗಳು ನೋಡಿ ಓಡಿ ಬಂದು ಎತ್ತಿ ಕೂಡಿಸುತ್ತಿದ್ದ ಹಾಗೆಯೇ ತಿಪಟೂರಿನ ಕಡೆಯಿಂದ ಒಂದು ಕಾರು ಬಂದು ಈ ದೃಶ್ಯವನ್ನು ನೋಡಿ ನಿಲ್ಲಿಸಿ ಇವರುಗಳು ಯಾರೆಂಬುದನ್ನು ತಿಳಿದುಕೊಂಡು ಈ ಇಬ್ಬರನ್ನು ಕಾರಿಗೆ ಹಾಕಿಕೊಂಡು ಗುಬ್ಬಿಗೆ ತಂದು ನನ್ನ ಪರಮಾಪ್ತರಾದ ಡಾಕ್ಟರ್ ಶ್ರೀ ಭಾಸ್ಕರರ ಷಾಪಿನಲ್ಲಿ ತಂದು ಬಿಟ್ಟುಹೋದರು.

ಡಾಕ್ಟರ್ ಭಾಸ್ಕರವರು ನನಗೆ ವರ್ತಮಾನ ಕೊಟ್ಟಕೂಡಲೆ ಧಾವಿಸಿ ಗಾಬರಿಯಿಂದ ಬಂದು ನೋಡಲು ನನ್ನ ಕಣ್ಣುಗಳಿಗೆ ಕತ್ತಲು ಕವಿದಂತೆ ಆಗಿ ಮಂಕಾಗಿ ಬಿಟ್ಟೆ ನಂತರ ಕಣ್ಣುಗಳನ್ನು ಪಿಳುಕಿಸಿ ನೋಡುತ್ತಿದ್ದರೆ, ಬಸವರಾಜು ಬುರುಡೆಯಲ್ಲಿ ರಕ್ತಸ್ರಾವವಾಗುತ್ತಿದ್ದು ಬುದ್ಧಿಭ್ರಮಣೆಯಾಗಿ ಸಿಕ್ಕಿದಂತೆ ತೊದಲು ತೊದಲು ಮಾತನಾಡುತ್ತಿದ್ದರು. ಶಿವರಾಜನ ಬೆನ್ನಿನ ಮೂಳೆಗೆ ಪೆಟ್ಟು, ಕಾಲಿಗೆ ಪೆಟ್ಟು ಬಿದ್ದು ಬಟ್ಟೆಬರೆ ಎಲ್ಲಾ ರಕ್ತಮಯವಾಗಿತ್ತು. ಮೂಕನಾಗಿ ಕುಳಿತು ದೃಶ್ಯವನ್ನು ನೋಡುತ್ತಿದ್ದ ನನ್ನ ಮನಸ್ಸಿನ ಸ್ಥಿತಿ ಏನಾಯಿತೆಂಬುದನ್ನು ವರ್ಣಿಸಿ ಬರೆಯಲು ಅಶಕ್ತನಾಗಿದ್ದೇನೆ. ಅಲ್ಲಿಂದ ಕೂಡಲೆ ಡಾಕ್ಟರ್ ಭಾಸ್ಕರರ ಸಲಹೆಯಂತೆ ಕಾರಿನಲ್ಲಿ ಇಬ್ಬರನ್ನೂ ತುಮಕೂರು ಜನರಲ್ ಹಾಸ್ಪೆಟಲಿಗೆ ಕರೆ ತರುವಾಗ್ಯೆ ಕಾರಿನಲ್ಲಿ ಬಸವರಾಜುರವರ ಸ್ಥಿತಿ ನೋಡಲಸದಳವಾಗಿತ್ತು. ನಾನು ಪಕ್ಕದಲ್ಲಿಯೇ ಕುಳಿತುಕೊಂಡು ಆಗಾಗ್ಯೆ ಮಾತನಾಡಿಸುತ್ತ ಮಧ್ಯಾಹ್ನ ೧ ೧/೨ ಘಂಟೆಗೆ ತುಮಕೂರು ಜನರಲ್ ಹಾಸ್ಪೆಟಲಿಗೆ

ಬಂದು ಡಿ.ಯಂ.ರವರನ್ನು ನೋಡಿ ವಿಷಯವನ್ನು ತಿಳುಹಿಸಿ ಈ ಜೀವಶ್ರವಗಳನ್ನು ಹಾಸ್ಪೆಟಲಿಗೆ ಸೇರಿಸಿ ಪುನಃ ಡಾಕ್ಟರನ್ನು ನೋಡಿ ವಿಷಯವನ್ನೆಲ್ಲಾ ವಿವರವಾಗಿ ಹೇಳಿಕೊಂಡೆ.

ಆದರೆ ನಮ್ಮಗಳ ಆತುರಕ್ಕೆ ತಕ್ಕಂತೆ ಚಿಕಿತ್ಸೆಗೆ ಅವಕಾಶವಾಗಲಿಲ್ಲ. ಡಾಕ್ಟರ್ ಸಾಹೇಬರವರು ಅಷ್ಟಾಗಿ ಶ್ರದ್ಧೆ ತೋರಿದ್ದು ಕಂಡುಬರಲಿಲ್ಲ. ಅದೆಲ್ಲಿಗೋ ಅರ್ಜೆಂಟ್ ಹೋಗಿ ಬರುತ್ತೇನೆಂದು ಹೊರಟು ಹೋದರು. ನಾನೂ ಸಹಾ ಊಟ, ಉಪಚಾರ ಏನೂ ಇಲ್ಲದೆ ಹಾಸ್ಪೆಟಲಿನಲ್ಲಿ ಇಬ್ಬರನ್ನೂ ಹಾಸಿಗೆಯಲ್ಲಿ ಮಲಗಿಸಿ ಛಾರ್ಜಿನಲ್ಲಿದ್ದ ಡಾಕ್ಟರು ಇಂಜಕ್ಷನ್ ವಗೈರೆ ಕೊಡುವಂತೆ ತಿಳಿಸಿ ಕೂಡಲೆ ಬೆಂಗಳೂರಿಗೆ ಹೊರಟು ಬಂದು ವಿಕ್ಟೋರಿಯಾ ಹಾಸ್ಪಿಟಲಿನಲ್ಲಿ ಮಾಲತಮ್ಮನ ಕಾಲಿಗೆ ಚಿಕಿತ್ಸೆ ಮಾಡುತ್ತಿದ್ದ ಡಾಕ್ಟರಿಗೆ ಈ ಸಮಾಚಾರ ತಿಳಿಹಿಸಿದೆ. ಅವರು ಕೂಡಲೆ ನೀವು ಡಾಕ್ಟರ್ ವರ್ಮರವವನ್ನು ಕರೆದುಕೊಂಡು ತುಮಕೂರಿಗೆ ಹೋಗಿರಿ ಎಂದು ಹೇಳಲು, ಅವರ ಸಲಹೆಯಂತೆ ವರ್ಮರನ್ನು ನೋಡಲು ಹೋದೆ. ಆದರೆ ಬಸವರಾಜನ ದುರಾದೃಷ್ಟದಿಂದಲೋ, ನನ್ನ ಗ್ರಹಚಾರದಿಂದಲೋ, ಆ ದಿನವೇ ಡಾಕ್ಟರ್ ವರ್ಮರವರು ಅಮೆರಿಕಾಕ್ಕೆ ಪ್ರಯಾಣ ಮಾಡಿದ್ದರು.

ಆಗ ನಾನು ಇಂಗು ತಿಂದ ಮಂಗನಂತೆ ಮನೆಗೆ ಬಂದೆ. ಅಷ್ಟು ಹೊತ್ತಿಗೆ ಸಾಯಂಕಾಲ ಐದು ಘಂಟೆಯಾಗಿತ್ತು. ಈ ಸಮಾಚಾರವನ್ನು ಬಸವರಾಜುರವರ ತಂದೆ, ತಾಯಿಗಳಿಗೆ ಹೇಗೆ ತಿಳುಹಿಸಲಿ ಮತ್ತು ಪತ್ನಿಗೆ ಹೇಗೆ ತಿಳುಹಿಸಲಿ, ದೇವರೇ ಎಂದು ಬಹಳವಾಗಿ ಯೋಚಿಸಿ ಧೈರ್ಯತಂದುಕೊಂಡು ನಡೆದ ಸಮಾಚಾರವನ್ನು ಇವರುಗಳಿಗೆ ತಿಳಿಸಿದೆನು. ಕೂಡಲೇ ಮಾತಾಪಿತೃಗಳ ರೋದನ ಪ್ರಾರಂಭವಾಯಿತು. ಪಾಪ ವಯಸ್ಸಿಗೆ ಬಂದು, ಕಲೆಯಲ್ಲಿ ಒಳ್ಳೆ ಕೀರ್ತಿ ತರುತ್ತಿರುವ ಮತ್ತು ಸಿನಿಮಾ ರಂಗದಲ್ಲಿ ಪ್ರಖ್ಯಾತಿಗೆ ಬಂದುಹಣ ಸಂಪಾದನೆ ಮಾಡುತ್ತಿರುವ ಮಗನಿಗೆ ಈ ರೀತಿಯ ಮರಣ ಬಂದುದರಿಂದ ಮಾತಾ ಪಿತೃಗಳಿಗೆ ದುಃಖ ಬರುವುದಿಲ್ಲವೇ? ತಂದೆ, ತಾಯಿ, ತಂಗಿ, ಪತ್ನಿ, ಐದು ವರುಷದ ಸುಂದರವಾದ ಪುಟ್ಟ ಮಗು ಇವರುಗಳ ದುಃಖ ಹೇಳತೀರದು. ನನ್ನ ದುಃಖವೂ ಸಹಾ ಕಡಿಮೆಯಾದುದಲ್ಲವೆಂಬುದು ದೇವರಿಗೂ ಗೊತ್ತು, ಸರ್ವರಿಗೂ ಗೊತ್ತು. ಆದರೂ ಧೈರ್ಯಂ ಸರ್ವತ್ರ ಸಾಧನಂ ಎಂಬ ನಾಣ್ನುಡಿಯಂತೆ ಧೈರ್ಯ ತೆಗೆದುಕೊಂಡು ಎಲ್ಲರನ್ನೂ ತುಮಕೂರಿಗೆ ಕರೆದುಕೊಂಡು ಬಂದೆ. ನೋಡಿದರು ಬಸವರಾಜುವಿನ ಜೀವಶ್ರವವನ್ನು. ಪ್ರಾರಂಭವಾಯಿತು ರೋದನ. ಎಷ್ಟು ಹೊತ್ತು ಹೀಗೆಯೇ ಇದ್ದೀತು? ಕೆಲವು ಘಂಟೆಗಳ ಕಾಲವಾದ ನಂತರ ತುಮಕೂರಿನಲ್ಲಿ ನನ್ನ ಎರಡನೇ ಮಗ ರಾಜಶೇಖರನ ಮನೆಯಲ್ಲಿ ಊಟ, ಉಪಚಾರಗಳನ್ನು ಮಾಡಿಸಿ ಆ ರಾತ್ರಿ ಅಲ್ಲಿಯೇ ಇಟ್ಟುಕೊಂಡಿದ್ದು ಆ ಒಳಗೆ ಡಿ.ಯಂ.ರವರಿಗೂ ಇತರೆ ಡಾಕ್ಟರವರಿಗೂ ಬಹಳವಾಗಿ ಹೇಳಿಕೊಂಡೆವು. ಅವರೂ ಕೂಡ ಶ್ರಮ, ಶ್ರದ್ಧೆ, ವಹಿಸಿ ಚಿಕಿತ್ಸೆ ಮಾಡಿದರೂ ಯಮಧರ್ಮರಾಯನಿಗೆ ಕರುಣ ಬಾರದೆ ಪಾಶ ಬೀರಿ ಇಹಲೋಕದಿಂದ, ಪರಲೋಕಕ್ಕೆಳೆಯುತ್ತಿರುವಾಗ್ಗೆ ಬಿಡಿಸಿಕೊಳ್ಳಿರೆಂದು ನಮಗೆ ಕಣ್ಣಿನಿಂದ ಸೂಚನೆ ಕೊಡುತ್ತಿದ್ದು ಕೊನೆಗೆ ಯಾವುದೂ ಸಾಧ್ಯವಾಗದೆ ಯಮಧರ್ಮನ ಛಲವೇ ನಡೆಯಿತು. ಸೆಳೆದುಕೊಂಡು ಹೋಗಿಯೇ ಬಿಟ್ಟ. ಬಸವರಾಜರು ಇಹಲೋಕದಿಂದ

ತೆರಳಿ ಪರಲೋಕ ಯಾತ್ರೆ ಮಾಡಿಯೇ ಬಿಟ್ಟರು. 'ಲವ ಕುಶ' ನಾಟಕದಲ್ಲಿ ಸೀತೆ ಪಾತ್ರವಹಿಸುತ್ತಿದ್ದ ನನ್ನ ಎರಡನೇ ಮಗಳಾದ ಮಾಲತಮ್ಮ ಮತ್ತು ಈಕೆಯ ಅಕ್ಕನಾದ ನನ್ನ ಮೊದಲನೆಯ ಮಗಳಾದ ಸುವರ್ಣಮ್ಮ ಎಂಬ ನಟಿ ಇವರಿಬ್ಬರೂ ನನ್ನ ಮೊದಲನೆಯ ಪತ್ನಿಯ ಮಕ್ಕಳು. ಈ ಒಂದು ಎರಡನೆಯ ಮಕ್ಕಳು ತಮ್ಮ ತಮ್ಮ ನಾಲ್ಕು-ಐದನೆಯ ವಯಸ್ಸಿನಿಂದಲೂ ರಂಗಭೂಮಿಯ ಮೇಲೆ ಬಂದು, ರಂಗಮಂಟಪದಲ್ಲಿಯೇ ಕಲಾದೇವಿಯ ಸೇವೆ ಮಾಡಿಕೊಂಡು ತಮ್ಮ ಜೀವಿತವನ್ನೆಲ್ಲಾ ಕಲಾದೇವಿ ಸೇವೆಗಾಗಿಯೇ ಮುಡುಪಾಗಿಟ್ಟು ಅದರಂತೆಯೇ ವಿಶ್ರಾಂತಿಯಿಲ್ಲದೆ ಕಲಾ ಸೇವೆಯನ್ನು ಮಾಡುತ್ತಾ ಬಂದಿರುವರು. ಈಗಲೂ ನನ್ನ ಒಂದನೆಯ ಮಗಳಾದ ಸುವರ್ನಮ್ಮನೆಂಬ ನಟಿಗೆ ನಲವತ್ತಾರು ವರ್ಷಗಳಾಗಿದ್ದಾಗ್ಯೂ ಇನ್ನೂ ಆ ವಯಸ್ಸಿಗೆ ತಕ್ಕ ಪಾತ್ರಗಳನ್ನು ಮಾಡುತ್ತಾ ಗುಬ್ಬಿ ಕಂಪನಿಯಲ್ಲಿ ಕಲಾಸೇವೆ ಮಾಡುತ್ತಿದ್ದಾಳೆ. ಇವರಂತೆಯೇ ನನ್ನ ಎರಡನೇ ಮಗಳಾದ ಮಾಲತಮ್ಮನು ತನ್ನ ನಾಲ್ಕನೆಯ ವಯಸ್ಸಿನಿಂದ ನಲವತ್ತಮೂರು ವರ್ಷ ವಯಸ್ಸಿನವರಿಗೂ ಕಲಾಸೇವೆ ಮಾಡಿ ತನ್ನ ಅಕ್ಕನಂತೆಯೇ ಜೀವಿತವನ್ನೇ ಕಲಾಸೇವೆಗೆ ಮುಡುಪಾಗಿ ಇಟ್ಟಿದ್ದವಳು ವಿಧಿಯಿಲ್ಲದೆ ವಿದ್ಯುಚ್ಛಕ್ತಿಯ ಪ್ರತಾಪಕ್ಕೆ ಸಿಕ್ಕಿ ಕಾಲಿನ ಮೂಳೆಗಳು ಮುರಿದು ಅಂಗವಿಹೀನೆಯಾಗಿ ಕಲಾದೇವಿಯ ಪಾದಕ್ಕೆ ಶರಣು ಹೊಡೆದು ಮನೆಯಲ್ಲಿ ಕುಳಿತುಕೊಳ್ಳಬೇಕಾಯಿತು. ಈಕೆಯ ಒಂದನೆಯ ಮಗಳಾದ ಜಯಶ್ರೀ ಎಂಬ ಕಿರಿಯ ನಟಿ ತನ್ನ ತಾಯಿ ಮಾಲತಮ್ಮನ ಹಾಗೆಯೇ ನಾಲ್ಕನೆಯ ವಯಸ್ಸಿನಲ್ಲಿಯೇ ರಂಗಭೂಮಿಯ ಮೇಲೆ ಬಂದು ಚಿಕ್ಕ ಬಾಲಕೃಷ್ಣ, ಪ್ರಹ್ಲಾದ, ಮತ್ತಿತರೇ ಸಾಮಾಜಿಕ ನಾಟಕಗಳಲ್ಲಿ ವಯಸ್ಸಿಗೆ ತಕ್ಕ ಪಾತ್ರವನ್ನು ಮಾಡುತ್ತಿದ್ದು ದಶಾವತಾರದಲ್ಲಿ ಪ್ರಹ್ಲಾದನ ಪಾತ್ರ, ಲವಕುಶದಲ್ಲಿ ಲವನ ಪಾತ್ರವನ್ನು ಮಾಡಿತ್ತಿದ್ದಾಳೆ. ಸುವರ್ಣಮ್ಮ ಮಾಲತಮ್ಮ ಇವರುಗಳ ತಾಯಿ, ನನಗೆ ಒಂದನೇ ಪತ್ನಿಯಾದಗ ಜಿ. ಸುಂದರಮ್ಮ ಎಂಬಾಕೆಯು ಸಹ ಉತ್ತಮ ನಟಿಯಾಗಿ 'ಹರಿಶ್ಚಂದ್ರ' ನಾಟಕದಲ್ಲಿ ಚಂದ್ರಮತಿಯ, ರಾಜಭಕ್ತಿಯಲ್ಲಿ 'ದೇವಾಂಗನೆ'ಯ ಪಾತ್ರವನ್ನು 'ಕರ್ನಾಟಕ ಸಾಮ್ರಾಜ್ಯ'ದಲ್ಲಿ ತೇಜಸ್ವಿನಿಯ ಪಾತ್ರವನ್ನು ಬಹು ಚೆನ್ನಾಗಿ ಅಭಿನಯಿಸಿ ಅತ್ಯುತ್ತಮ ಕೀರ್ತಿಗಳಿಸಿದ್ದಳೆಂದರೆ ಅತಿಶಯೋಕ್ತಿಯಾಗಲಾರದು. ಮತ್ತು ಸುಂದರಮ್ಮನ ಮಗ ಅಂದರೆ ನನ್ನ ಮೂರನೆಯ ಮಗ ಶಿವಾನಂದನೆಂಬ ನಟನು ರಂಗಭೂಮಿಯ ಮೇಲೆ ನಟಿಸುತ್ತಿರುವುದಲ್ಲದೆ ವಾಕ್ಚಿತ್ರಗಳಲ್ಲಿ ನಟಿಸುತ್ತಲಿದ್ದಾನೆ. ಮಗಳು ಮಾಲಾತಮ್ಮನ ಎರಡನೇ ಮಗಳು ಅಂದರೆ ಬಸವರಾಜನ ಮಗಳು ಪಪ್ಪಿ, ಪದ್ಮಶ್ರೀ ಎನ್ನುವ ಕಿರಿಯ ನಟಿ ಸಹಾ ಮೂರನೆಯ ವಯಸ್ಸಿನಲ್ಲಿಯೇ ರಂಗಪ್ರವೇಶಿಸಿದಳು. ಐದನೆಯ ವಯಸ್ಸಿನಲ್ಲಿಯೇ ಮಾವನ ಮಗಳು ಎಂಬ ಚಿತ್ರದಲ್ಲಿ ಪಾತ್ರವಹಿಸಿದ್ದಾಳೆ. ಹೀಗೆ ನನ್ನ ಕುಟುಂಬದವರೆಲ್ಲರೂ ಕಲಾವಿದರಾಗಿದ್ದಾರೆ. ಮತ್ತು ನನ್ನ ಮೂರನೆಯ ಪತ್ನಿ ಬಿ. ಜಯಮ್ಮನು ನಮ್ಮ ಕಂಪನಿಗೆ ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ಸೇರಿದಳು. ೧೯೨೮ನೆಯ ಇಸ್ವಿಯಲ್ಲಿ ಬಂದು ವಯಸ್ಸಿಗೆ ತಕ್ಕ ಪಾತ್ರಗಳನ್ನು ಮಾಡುತ್ತಾ, ಕೊನೆಗೆ ಮುಖ್ಯಪಾತ್ರಗಳನ್ನು ಮಾಡುತ್ತಾ ಮಾಡುತ್ತಾ ಶ್ರೇಷ್ಠ ನಟ ಎನ್ನಿಸಿಕೊಂಡು ಬೆಂಗಳೂರಿನಲ್ಲಿಯೇ ೧೯೩೦ರಲ್ಲಿ ನನ್ನ ಸ್ವಂತ ಸ್ಟುಡಿಯೋದಲ್ಲಿ ಅಂದರೆ ಮೂಕ ಚಿತ್ರದಲ್ಲಿ "ಹಿಜ್ ಲವ್ ಅಫೇರ್" ಚಿತ್ರದಲ್ಲಿ, ಎರಡನೆಯ ಚಿತ್ರ 'ಹರಿಮಾಯ'ದಲ್ಲಿ ರುಕ್ಮಿಣಿ

ಪಾತ್ರವನ್ನು ಸಹ ಮಾಡಿರುತ್ತಾಳೆ. ಕೊನೆಗೆ ಗುಬ್ಬಿ ನಾಟಕ ಕಂಪನಿಯಲ್ಲಿ ಎಲ್ಲಾ ಮುಖ್ಯ ಪಾತ್ರಗಳನ್ನೂ ಮಾಡುತ್ತಿದ್ದು ೧೯೪೦ ರಲ್ಲಿ ನಾನು ತೆಗೆದ 'ಸುಭದ್ರಾ' ಚಿತ್ರದಲ್ಲಿ ಅಂದರೆ ಪುಣೆಯಲ್ಲಿರುವ ಅರುಣ್ ಸ್ಟುಡಿಯೋ ಗೊತ್ತುಮಾಡಿ ಪ್ರಸಿದ್ಧ ಡೈರೆಕ್ಟರಾದ ಶ್ರೀ ಶಾಂತಾರಾಂರವರಿಂದ ಚಿತ್ರದ ಪ್ರಾರಂಭೋತ್ಸವವನ್ನು ಮಾಡಿಸಿದ ಚಿತ್ರದಲ್ಲಿ ಕಥಾನಾಯಕಿಯಾಗಿ ೧೯೪೨ನೇ ಇಸವಿಯಲ್ಲಿ ಕೊಯಮತ್ತೂರು ಸೆಂಟರ್ ಸ್ಟುಡಿಯೋದಲ್ಲಿ ನಾನು ತೆಗೆದ 'ಜೀವನ ನಾಟಕ'ದ ಚಿತ್ರದಲ್ಲಿ ಮುಖ್ಯ ಪಾತ್ರ ಮಾಡಿ ೪೩-೪೪ನೆಯ ಇಸವಿಯಲ್ಲಿ ನಮ್ಮ ಸ್ವಂತ ಚಿತ್ರ 'ಹೇಮರೆಡ್ಡಿ ಮಲ್ಲಮ್ಮ'ದಲ್ಲಿ ಮಲ್ಲಮ್ಮನ ಪಾತ್ರವನ್ನು ತುಂಬಾ ಯಶಸ್ವಿಯಾಗಿ ಮಾಡಿ ಒಳ್ಳೆಯ ಕೀರ್ತಿಯನ್ನು ಪಡೆದಿರುತ್ತಾಳೆ. ಅನಂತರ ತೆಲುಗು ಭಾಷೆಯಲ್ಲಿ ಬಿ. ಎನ್. ರೆಡ್ಡಿಯವರ ಡೈರೆಕ್ಷನ್‌ನಲ್ಲಿ ಸ್ವರ್ಗಸೀಮದಲ್ಲಿ ಮುಖ್ಯ ಪಾತ್ರ ಮಾಡಿ ಗುಣಸಾಗರಿ, ಮುನಿಷಿ ತ್ಯಾಗಯ್ಯ, ಬ್ರಂಹರಥಂ, ಮಂತ್ರದಂಡಂ ಮುಂತಾದ ಅನೇಕ ತೆಲುಗು ತಮಿಳು ವಾಕ್ಚಿತ್ರದಲ್ಲಿ ಅಭಿನಯಿಸುತ್ತಿದ್ದು ರಂಗಭೂಮಿಯ ಮೇಲೆಸೇವೆ ಮಾಡುತ್ತಲೇ ಇದ್ದು ೧೯೫೪ರಿಂದ 'ದಶಾವತಾರ'ದಲ್ಲಿ ಕಯಾದು ಪಾತ್ರ, 'ಅಣ್ಣತಮ್ಮ' ನಾಟಕದಲ್ಲಿ ಮುಖ್ಯಪಾತ್ರ ಅನ್ನಪೂರ್ಣ ಮಾಡುತ್ತಲಿದ್ದು, ಆಗಾಗ್ಗೆ ಸಂಗೀತ ಕಛೇರಿ ಮಾಡುತ್ತಲೂ ಆಕಾಶವಾಣಿಯಲ್ಲಿ ಸೇವೆ ಮಾಡುತ್ತ ಕೊನೆಗೆ ೧೯೬೪ರಿಂದ ಶರೀರದ ಅಸ್ವಸ್ಥತೆಯಿಂದ ನಿದ್ರೆ ಕೆಡುವುದಕ್ಕಾಗದೆ ರಂಗಭೂಮಿಯ ಮೇಲೆ ಕಲಾ ಸೇವೆ ಮಾಡುವುದನ್ನು ನಿಲ್ಲಿಸಿರುತ್ತಾರೆ. ಇವರು ಕನ್ನಡ, ತೆಲುಗು, ತಮಿಳು ಭಾಷೆಯಲ್ಲಿ ಪಾತ್ರಮಾಡಿ ತ್ರಿಭಾಷಾ ತಾರೆ ಎಂಬ ಹೆಸರು ಗಳಿಸಿರುತ್ತಾರೆ. ತಾಯಿ ತಂದೆಯಂತೆಯೇ ಮಗಳು ಹೇಮಲತಾ ಸಹಾ ರಂಗಭೂಮಿಯಲ್ಲಿ ಕಲಾ ಸೇವೆ ಮಾಡುತ್ತ ಬಾಲಕೃಷ್ಣನ ಪಾತ್ರ, 'ದಶಾವತಾರ'ದಲ್ಲಿ ಪ್ರಹ್ಲಾದನ ಪಾತ್ರ, ಅಕ್ಕ ಮಹಾದೇವಿಯಲ್ಲಿ ಕುರುಡಿಯ ಪಾತ್ರ ಇತರೇ ನಾಟಕಗಳಲ್ಲಿಯೂ ಸಂದರ್ಭಾನುಸಾರ ಎಲ್ಲ ಪಾತ್ರಗಳನ್ನೂ ಮಾಡುತ್ತಲಿದ್ದು ೧೯೬೨ರಿಂದ ಭರತನಾಟ್ಯ ಅಭ್ಯಾಸ ಮಾಡಿ ನಮ್ಮ ಮಹಾರಾಜರಾದ ಜಯಚಾಮರಾಜಒಡೆಯರಿಂದ ರಂಗಪ್ರವೇಶ ಮಹೋತ್ಸವದ ಕಾರ್ಯ ತಾ. ೧೦-೬-೧೯೬೩ರಲ್ಲಿ ನೆರವೇರಿತು. ತದನಂತರ ಬೊಂಬಾಯಿಯಲ್ಲಿ, ಇಲ್ಲಿ ರಾಜ್ಯಪಾಲರಾಗಿದ್ದ ಮಂಗಳದಾಸ ಪಕ್ವಾಸರವರು ಘನ ಅಧ್ಯಕ್ಷತೆಯಲ್ಲಿ ನನ್ನ ಮಗಳಾದ ಲತಾದೇವಿಯ ನೃತ್ಯ ನಡೆಯಿತು. ಕಳೆದ ವರ್ಷ ದೆಹಲಿಯಲ್ಲಿ ರಾಷ್ಟ್ರಪತಿ ಭವನದಲ್ಲಿ ಫಿನ್ಲೆಂಡ್ ರಾಷ್ಟ್ರಪತಿ ಶ್ರೀ ಕಕ್ಕೋನೆನ್ ಮತ್ತು ಭಾರತದ ರಾಷ್ಟ್ರಪತಿ ಶ್ರೀ ರಾಧಾಕೃಷ್ಣನ್ ಅವರ ಸಮ್ಮುಕ್ಷಮ ನಡೆಯಿತು. ಅಲ್ಲದೆ ಬೆಂಗಳೂರಿನಲ್ಲಿ ರವೀಂದ್ರ ಕಲಾಮಂದಿರದ ಷೇಕ್ಸ್‌ಪಿಯರ್ ಡ್ರಾಮಾ ಕಂಪನಿಯವರು ಸಮಕ್ಷಮ ಮತ್ತು ರಷ್ಯಾ ತಂಡದವರ ಸಮಕ್ಷಮ ಕೂಡಾ ನನ್ನ ಮಗಳಾದ ಲತಾದೇವಿಯ ನೃತ್ಯ ನಡೆದಿರುತ್ತೆ. ಹೀಗೆ ನನ್ನ ಎರಡು ಕುಟುಂಬ ಜನವೆಲ್ಲಾ ಶ್ರೇಷ್ಠ ಕಲಾವಿದೆಯರು. ಪುಟ್ಟ ಪುಟ್ಟ ಮಕ್ಕಳಲ್ಲಿಯೂ ಕೂಡ ಕಲೆಯ ಲಕ್ಷಣಗಳು ಕಾಣುತ್ತಲಿವೆ. ಹೀಗೆ ಕಲೆಯ ಶ್ರೇಣಿಯೇ ನನ್ನ ಕುಟುಂಬವಾದುದರಿಂದ ಅನೇಕ ಸಾರಿ ವಿಧ ವಿಧವಾದ ಎಡರು ತೊಡರು ಬಂದಾಗ್ಯೂ ಬೆಟ್ಟದ ಹಾಗೆ ಬಂದು ಮಂಜಿನಂತೆ ಕರಗಿ ಹೋಗುತ್ತಿತ್ತು. ಇದಕ್ಕೆ ಮುಖ್ಯವಾಗಿ ಪರಮೇಶ್ವರನ ಕೃಪೆ, ಮಹಾಜನಗಳ ಬೆಂಬಲವೇ ಕಾರಣ.

ಹೀಗೆಯೇ ಅನೇಕ ಗಂಡಾಂತರಗಳು ಬಂದಿದ್ದರೂ ೧೯೬೪ರ ವರೆಗೆ ಯಾವ ಹಾನಿ, ಅಪಾಯಗಳಾಗದೆ ಇದ್ದು ೧೯೬೪ರಲ್ಲಿ ನನ್ನ ಮಗಳು ಉತ್ತಮ ನಟಿಯಾದ ಮಾಲತಮ್ಮನು ಈ ರೀತಿ ಅಂಗಹೀನವಾಗಿರುವುದನ್ನು ನೋಡುತ್ತಾ ವ್ಯಥೆಪಡುತ್ತಿದ್ದಂತೆಯೇ ಅಳಿಯ ಶ್ರೇಷ್ಠನಟನಾದ ಬಸವರಾಜರಿಗೆ ಈ ರೀತ ಸ್ಕೂಟರಿನಿಂದ ಅಪಮೃತ್ಯು ಸಂಭವಿಸಿರುವುದು ತುಂಬಾ ದುಃಖವಾಗುವುದಲ್ಲದೆ. ಮನಸ್ಸಿಗ ಜುಗುಪ್ಸೆಯಾಯಿತು. ಉತ್ತಮ ನಟಿಯಾದ ಮಗಳ ಕಾಲು ಹೋದುವು. ಶ್ರೇಷ್ಠ ನಟನಾದ ಅಳಿಯನ ಅಪಮೃತ್ಯುವು ಸಂಭವಿಸಿದ್ದು, ೧೯೬೪ರಿಂದ ಪತ್ನಿ ತ್ರಿಭಾಷಾ ತಾರೆ ಬಿ. ಜಯಮ್ಮನಿಗೆ ಅಸ್ವಸ್ಥತೆಯಿಂದ ಪಾತ್ರ ಧರಿಸಲು ಸಾಧ್ಯವಾಗದೆ ಹೋದದ್ದು - ಹೀಗೆ ಒಂದರ ಮೇಲೊಂದು ಅನಾನುಕೂಲ, ವಿಘಾತಗಳು ಬಂದುವು. ಈ ಕಾರಣಗಳಿಂದ ನನ್ನ ಆರೋಗ್ಯವು ಕೆಡುತ್ತಾ ಬಂದು ಬೇಸರ ಜುಗುಪ್ಸೆ, ನಿರಾಶೆ, ಹುಟ್ಟಿ ನನಗೂ ಕೂಡ ರಂಗಭೂಮಿಗೆ ಪ್ರವೇಶಮಾಡಲು ಮನಸ್ಸಾಗದೆ ಬಿಟ್ಟುಬಿಟ್ಟೆ. ಮತ್ತು ಮನಸ್ಸಿಗೆ ದಿನೇ ದಿನೇ ಯೋಚನೆಯು ಪ್ರಬಲವಾಯಿತು.

ತುಮಕೂರಿನಲ್ಲಿ ಥಿಯೇಟರು ಕಟ್ಟಬೇಕೆಂಬ ಬಹುದಿನದ ಹಂಬಲಿದ್ದು ಅದಕ್ಕೆ ಆಗಬೇಕಾದ ಸ್ಥಳವನ್ನು ಸಹ ತೆಗೆದುಕೊಂಡಿದ್ದರಿಂದ ಕಟ್ಟಲೇ ಬೇಕೆಂದು ಎರಡು ಲಕ್ಷರೂಪಾಯಿಗಳು ಸಾಲ ತೆಗೆದು ಪ್ರಾರಂಭ ಮಾಡಿ ತಳಹದಿ ಹಾಕಿಸಿದ್ದಾಗಿತ್ತು. ಅಷ್ಟರೊಳಗೆ ನಾಟಕದ ಕಂಪನಿಯ ವಿಚಾರವಾಗಿ ಸಂಪೂರ್ಣ ಅನುಭವ ಪರಿಶ್ರಮವಿದ್ದ ನನ್ನ ಮಾತಿಗೆ ಬೆಲೆ ಕೊಡದೆ ಹುಡುಗತನದ ಪ್ರಭಾವದಿಂದ ಉಪೇಕ್ಷೆ ಮಾಡಿದುದರಿಂದ ಋಣಭಾದೆ ತಲೆಯ ಮೇಲೆ ಹೊರಬೇಕಾಯಿತು. ಆಗ ತುಮಕೂರಿನಲ್ಲಿ ಥಿಯೇಟರ್ ಕಟ್ಟಲು ಸಾಲವಾಗಿ ತೆಗೆದುಕೊಂಡ ಹಣದಲ್ಲಿ ನಾಟಕಕ್ಕೆ ಮಾಡಿದ ಋಣವನ್ನು ತೀರಿಸಬೇಕಾಗಿ ಬಂತು. ನಾಟಕದ ಋಣವು ತೀರಿದ ನಂತರ ಥಿಯೇಟರ್ ಕಟ್ಟಲು ಬರಿಗೈಯಾಯಿತು. ಅದೇ ಕಾಲದಲ್ಲಿ ಥಿಯೇಟರ್ ಕಟ್ಟಿಸುತ್ತಿದ್ದ ಇಂಜಿನೀಯರ್ ಶ್ರೀಯುತ ಗಂಗಾಧರನ್‌ರವರು ತೀರಿಕೊಂಡರು. ಇವರು ತೀರಿಕೊಂಡು ಹಣವು ತೀರಿ ಹೋದುದರಿಂದ ಮುಂದಿನ ದಾರಿ ಕಾಣದೆ ತುಂಬಾ ಯೋಚನೆಯಾಯಿತು. ಪುನಃ "ಮರಳಿ ಯತ್ನವ ಮಾಡು" ಎನ್ನುವ ಗಾದೆಯಂತೆ ತುಮಕೂರಿನಲ್ಲಿ ಇಪ್ಪತ್ತೈದು ವರ್ಷಗಳಿಂದಲೂ ನಮ್ಮ ಥಿಯೇಟರ್ ಇದ್ದು ಈಗ ಇಲ್ಲದಂತಾಗುತ್ತಲ್ಲಾ ಎಂಬ ವಿವೇಚನೆಯಿಂದ ಥಿಯೇಟರನ್ನು ಕಟ್ಟಲೇಬೇಕೆಂಬ ನಿರ್ಧಾರದಿಂದ ಸಾಗರ್ ಟಾಕೀಸ್ ನಡೆಸುತ್ತಿದ್ದ ಮಾಲೀಕರಾದ ಶ್ರೀ ಹರ್ಷದ್ ಬಾಯಿ ಪಟೇಲ್‌ರಲ್ಲಿ ಪುನಃ ಒಂದೂವರೆ ಲಕ್ಷರೂಪಾಯಿಗಳನ್ನು ತೆಗೆದುಕೊಂಡು ತಿಂಗಳಿಗೆ ಮೂರುಸಾವಿರ ಬಾಡಿಗೆಯ ಮೇಲೆ ಏಳು ವರ್ಷ, ಐದು ಸಾವಿರ ರೂಪಾಯಿಯಂತೆ ಒಂಬತ್ತು ವರ್ಷ ಅಗ್ರಿಮೆಂಟ್ ಮಾಡಿ ಥಿಯೇಟರ್ ಕೆಲಸಕ್ಕೆ ಪ್ರಾರಂಭಿಸಿದೆ. ಇಂಜಿನಿಯರ್ ಶ್ರೀಗುರುಬಸಪ್ಪನವರ ಮೇಲ್ವಿಚಾರಣೆಯಲ್ಲಿ ಮೊದಲಿಂದಲೂ ಮೇಸ್ತ್ರೀ ಕೆಲಸ ಮಾಡುತ್ತಿರುವ ಶ್ರೀ ತಿಮ್ಮಯ್ಯನವರಿಂದ ಕೆಲಸ ಮಾಡಿಸಿಕೊಂಡು ಬಂದೆ.

ಈ ವೇಳೆಗೆ ಹಿಂದೆ ಸ್ಟುಡಿಯೋ ಸ್ಥಾಪನೆಗೆ ಎರಡು ಸಾರಿ ಪ್ರಯತ್ನ ಪಟ್ಟು ವಿಫಲವಾಗಿದ್ದೆ. ಮೂರನೇ ಸಾರಿಗೆ ನನ್ನ ಆತ್ಮೀಯರೂ ಗೆಳೆಯರೂ ಆದ ಶ್ರೀ. ಟಿ.ಎಸ್.

ಕರಿಬಸಯ್ಯನವರು ನನ್ನನ್ನು ಹುರಿದುಂಬಿಸಿ ೧೬-೩-೧೯೬೬ರಲ್ಲಿ ಮಾನ್ಯರಾದ ಶ್ರೀ ಕೆ.ವಿ. ಶಂಕರಗೌಡ, ಶ್ರೀ ರತ್ನವರ್ಮ ಹೆಗ್ಗಡೆ, ಶ್ರೀ ಅಂದಾನಪ್ಪ ದೊಡ್ಡ ಮೇಟಿ, ಶ್ರೀ ನಿರ್ವಾಣಪ್ಪ ಶೆಟ್ಟಿ, ಶ್ರೀ ಚಾಮರಾಜ, ಶ್ರೀ ಜಿ.ಕೆ. ಮಲ್ಲಪ್ಪ. ಶ್ರೀ ಚಿನ್ನಪ್ಪನಾಯ್ಡು ಮತ್ತು ಇತರ ಗೆಳೆಯರೊಂದಿಗೆ ಶ್ರೀ ಕಂಠೀರವ ಸ್ಟುಡಿಯೋಸ್ ಲಿಮಿಟೆಡ್ ಎಂಬ ಸಂಸ್ಥೆಯನ್ನ ಪ್ರಾರಂಭಿಸಿದೆವು. ಅದಕ್ಕೆ ಎಲ್ಲ ರೀತಿಯ ಪ್ರೋತ್ಸಾಹ ಬೆಂಬಲಗಳು ದೊರೆಯುತ್ತಿದ್ದು ಕರ್ನಾಟಕದಲ್ಲಿ ಮೊದಲನೇ ದರ್ಜೆಯ ಸ್ಟುಡಿಯೋ ಆಗುವ ಭರವಸೆಯಿದೆ.

ಹಿಂದೆ ಬರೆದಂತೆ ಮಾಲತಮ್ಮನಿಗೆ ವಿದ್ಯುಚ್ಛಕ್ತಿ ಪ್ರವಾಹದಿಂದ ಅನಾನುಕೂಲವಾಗಿದ್ದರಿಂದಲೂ, ಸ್ಕೂಟರ್ ವಿಘಾತದಿಂದ ಬಸವರಾಜು ಮರಣಿಸಿದ್ದರಿಂದಲೂ, ಮಗ ಶಿವರಾಜುವಿನ ಬೆನ್ನೆಲುಬಿಗೆ ಏಟು ಬಿದ್ದಿದ್ದರಿಂದಲೂ, ಮನಸ್ಸಿಗೆ ಬಹಳ ಆಘಾತವಾಗಿ, ನನ್ನ ಶರೀರ ಪ್ರಕೃತಿ ಕ್ಷೀಣಿಸುತ್ತಾ ಬಂತಲ್ಲದೆ ವ್ರಣದ ಮೇಲೆ ಶಸ್ತ್ರದ ಚಿಕಿತ್ಸೆ ಎನ್ನುವ ಹಾಗೆ ಈ ಕಾಲದಲ್ಲಿ ಋಣಬಾಧೆ ಮರುಕಳಿಸುತ್ತಾ ಬಂದು ನಿದ್ರಾಹಾರ ಕಡಿಮೆಯಾಗಿ ಋಣದ ಭಯ ಹೆಚ್ಚಾಗುತ್ತಾ ಬಂದು ನಾನು ಋಣಮುಕ್ತನಾಗದೆ ಋಣಪಾತಕನಾಗಿ ಹೋಗಬೇಕಾಗುವುದಲ್ಲಾ ಎಂಬ ಕೊರಗು ನನ್ನನ್ನು ಬಾಧಿಸುತ್ತಲೇ ಇತ್ತು. ಇದೂ ಅಲ್ಲದೆ ನಾಟಕ ಕಂಪನಿ ದೂರ ದೇಶದಲ್ಲಿದ್ದು ಅದರ ಸ್ಥಿತಿ ಅಷ್ಟು ಸಮರ್ಪಕವಾಗಿರಲಿಲ್ಲ. ಶಿವರಾಜನ ಶರೀರ ಸ್ಥಿತಿಯು ಉತ್ತಮವಾಗಿರಲಿಲ್ಲ. ಈ ಕಾರಣದಿಂದ ಎಷ್ಟೋ ತೊಂದರೆಯಾದರೂ ಋಣಮುಕ್ತನಾಗಬೇಕೆಂದು ಮನಸ್ಸನ್ನು ಸ್ತಿಮಿತಕ್ಕೆ ತಂದು ಸಾಗರ್ ಟಾಕೀಸನ್ನು ಕಟ್ಟಿದ ಲಾಗಾಯ್ತು ದ್ರವ್ಯ ಸಹಾಯ ಮಾಡಿಕೊಂಡು ಬಂದು, ಈವರೆಗೂ ಸಹಾಯ ಮಾಡುತ್ತಿದ್ದು ಮೊದಲಿನಿಂದಲೂ ಸಾಗರ್ ಟಾಕೀಸ್ ನಡೆಸಿಕೊಂಡಿದ್ದ ಶ್ರೀ ರಾವ್‌ಜಿಭಾಯಿ ಪಟೇಲ್ ರವರ ಮಕ್ಕಳಾದ ಶ್ರೀ ಹರ್ಷಭಾಯ್ ಪಟೇಲ್ ರವರಿಗೆ ಏಳು ಮುಕ್ಕಾಲು ಲಕ್ಷಕ್ಕೆ ಕ್ರಯಕ್ಕೆ ಗೊತ್ತುಮಾಡಿ ರಿಜಿಸ್ಟರ್ ಮಾಡಿಸಿದ್ದಾಯ್ತು. ಬಂದ ಹಣದಲ್ಲಿ ಅವರ ಹಣವನ್ನು ತೀರಿಸಿ, ಇನ್‌ಕಮ್‌ಟ್ಯಾಕ್ಸ್ ಬಾಬ್ತು ಇದ್ದ ಬಾಕಿಯನ್ನು ತೀರಿಸಿ ಉಳಿದ ಹಣವನ್ನು ತುಮಕೂರಿನ ಟಾಕೀಸ್ ಕಟ್ಟಡಕ್ಕೆ ಉಪಯೋಗಿಸಲಾಯಿತು.

೧೮೮೪ನೇ ಇಸವಿಯಲ್ಲಿ ಗುಬ್ಬಿ ಚೆನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಸಭಾ ಎಂಬ ಹೆಸರಿನಲ್ಲಿ ಪ್ರಾರಂಭವಾಗಿ ಗುಬ್ಬಿ ಚಂದಣ್ಣನವರ ಆಳ್ವಿಕೆಯಲ್ಲಿ ಕನ್ನಡನಾಡಿನ ಕೆಲವು ಭಾಗಗಳಲ್ಲಿ ಸಂಚರಿಸಿ ಸಂಸ್ಥೆಯನ್ನು ಅಳಿಸದೆ ಮೂವತ್ತುಮೂರು ವರ್ಷ ಉಳಿಸಿಕೊಂಡು ಬಂದು ಅದೇ ಸಂಸ್ಥೆಯಲ್ಲಿ ಬಹು ವರ್ಷಗಳಿಂದ ಇದ್ದ ನನ್ನ ಆಳ್ವಿಕೆಗೆ ೧೯೧೭ನೇ ಜುಲೈ ೧೩ನೇ ತಾರೀಖಿನ ದಿವಸ ಒಪ್ಪಿಸಿದರು. ಅಂದಿನಿಂದಲೂ ಅರ್ಧಶತಮಾನ ಕಾಲ ಇದೇ ಸಂಸ್ಥೆಯನ್ನು ದಕ್ಷಿಣ ಕನ್ನಡ ಜಿಲ್ಲಾ, ತಮಿಳುನಾಡು, ಉತ್ತರ ಕನ್ನಡ, ನೈಜಾಂ ಮಹಾರಾಷ್ಟ್ರ, ಆಂಧ್ರಾ ನಾಡುಗಳಲ್ಲೆಲ್ಲಾ ಕನ್ನಡ ನಾಟಕ ಸಂಸ್ಥೆಯಲ್ಲೇ ಸಂಚಾರ ಮಾಡಿ ಮೈಸೂರಿನ ಕನ್ನಡ ಕಲೆಯ ಧ್ವಜ ಪತಾಕೆಯನ್ನು ಹಾರಿಸಿಕೊಂಡು ರಾಜಾಧಿರಾಜರುಗಳಲ್ಲದೆ ಮಹನೀಯರುಗಳಿಂದ ಸನ್ಮಾನ ಪತ್ರಗಳನ್ನು, ಅಗಣಿತ

ಬಿರುದಾವಳಿಗಳನ್ನು ಪಡೆದು ಕೊನೆಗೆ ಕೇಂದ್ರ ರಾಷ್ಟ್ರಪತಿಗಳಿಂದಲೂ ಬಹುಮಾನವನ್ನು ಮತ್ತು ಯೋಗ್ಯತಾ ಪತ್ರವನ್ನು ಪಡೆದ ಈ ವ್ಯಕ್ತಿಯು ಇಲ್ಲಿಗೆ ಋಣಮುಕ್ತನಾದಂತಾಯಿತು.

ಒಂದು ದೊಡ್ಡ ಭಾರ ಕಡಿಮೆಯಾಯಿತೆಂದು ಸಮಾಧಾನದ ನಿಟ್ಟುಸಿರನ್ನು ಬಿಡುವಷ್ಟರಲ್ಲಿ ದೊಡ್ಡ ಆಘಾತವೆಂಬಂತೆ ಚಿ. ಶಿವರಾಜ್ ಬೆನ್ನುನೋವು ಜಾಸ್ತಿಯಾಗಿ ನಿಶ್ಶಕ್ತಿ ಹೊಂದಿ ಗದಗ್ ಕ್ಯಾಂಪಿನಿಂದ ಹೊರಟು ಬಂದು ಬೆಂಗಳೂರನ್ನು ಮುಟ್ಟಿದ. ತಕ್ಷಣವೇ ವಿಕ್ಟೋರಿಯಾ ಆಸ್ಪತ್ರೆಗೆ ಡಾ. ಶ್ರೀನಿವಾಸಮೂರ್ತಿಯವರ ಮೇಲ್ವಿಚಾರಣೆಯಲ್ಲಿ ಸೇರಿಸಲಾಯ್ತು. ಸುಮಾರು ಒಂದೂವರೆ ತಿಂಗಳವರೆಗೂ ಖಾಯಿಲೆಯ ಬಗ್ಗೆ ಖಚಿತವಾಗಿ ಗೊತ್ತಾಗಲಿಲ್ಲ. ವಿಕ್ಟೋರಿಯಾ ಆಸ್ಪತ್ರೆಗೆ ನ್ಯೂರೋ ಸರ್ಜನ್ ಡಾ. ಮಣಿಯವರೂ ಬಂದು ಎಲ್ಲ ಪರೀಕ್ಷೆಮಾಡಿದರೂ ಏನೂ ತಿಳಿಯಲಿಲ್ಲ. ಅಲ್ಲಿಂದ ಚಾಮರಾಜಪೇಟೆಯಲ್ಲಿನ ಜ್ಯೂಬಿಲಿ ನರ್ಸಿಂಗ್ ಹೋಂಗೆ ಬದಲಾಯಿಸಿ ಅಲ್ಲಿ ಪುನಃ ಮೊದಲಿನಿಂದ ಪರೀಕ್ಷಿಸಲಾಗಿ ಶಿವರಾಜನಿಗೆ ಕ್ಯಾನ್ಸರ್ ರೋಗವು ಆಕ್ರಮಿಸಿರುವುದರಿಂದ ಭಗವಂತನೇ ಉಳಿಸಬೇಕಾಗಿದೆಯೆಂದರು. ದೊಡ್ಡ ದೊಡ್ಡ ಡಾಕ್ಟರುಗಳೇ ಬಂದು ಪರೀಕ್ಷೆ ಮಾಡಿ ದಿನ ಬಿಟ್ಟು ದಿನ ರಕ್ತ ಕೊಟ್ಟರೂ ಉತ್ತಮಗೊಳ್ಳುವ ಸೂಚನೆಯಿರಲಿಲ್ಲ. ವೆಲ್ಲೂರಿಗೆ ಹೋಗಿ ಅಲ್ಲಿಂದ ಡಾಕ್ಟರುಗಳನ್ನು ಕರೆದುಕೊಂಡು ಬಂದು ಅವರುಗಳ ಸಲಹೆಯಂತೆ ವೆಲ್ಲೂರಿಗೆ ಕರೆದುಕೊಂಡು ಹೋದೆವು.

ಆದರೆ ಪಾಪಿ ಏಳು ಸಮುದ್ರ ಹೊಕ್ಕರೂ ಮೊಳಕಾಲುದ್ದ ನೀರೇ ಎಂಬಂತಾಯಿತು ನಮ್ಮಗಳ ಪಾಡು. ವೆಲ್ಲೂರಿಗೆ ಎಲ್ಲರೂ ಇಡೀ ಕುಟುಂಬವೇ ಅಂದರೆ ಶಿವರಾಜುವಿನ ಅಕ್ಕ, ಅಣ್ಣಂದಿರು, ತಾಯಿ, ತಂದೆ ಎಲ್ಲರೂ ಎರಡು ಕಾರಿನಲ್ಲಿ ಹೊರಟೆವು. ಅಲ್ಲಿ ಮುಖ್ಯರಾದ ಸೂಪರಿಂಡೆಂಟ್ ಏಜಾಕ್‌ರವರನ್ನು ನೋಡಿ ಅವರ ಸಲಹೆಯಂತೆ ಅಲ್ಲಿಯೇ ಹನ್ನೆರಡು ದಿನ ದಿನವಹಿ ಚಿಕಿತ್ಸೆ, ಹಳೆ ರಕ್ತ ತೆಗೆದು ಹೊಸ ರಕ್ತ ಕೊಡುವುದು, ಇಂಜಕ್ಷನ್ ಇತ್ಯಾದಿ ನಡೆಯುತ್ತಲೇ ಇದ್ದು ಹತ್ತನೆಯ ದಿನ ದೊಡ್ಡ ಡಾಕ್ಟರ್ ಮತ್ತು ಲೇಡಿ ಡಾಕ್ಟರ್ ಕೊನೆಯ ಸಾರಿ ಬಂದು ನೋಡಿ ಇದು ಲಿಕೋಮಿಯ ಖಾಯಿಲೆ ತುಂಬಾ ಮೀರಿ ಹೋಗಿರುತ್ತೆ ಇನ್ನು ಹದಿನೈದು ದಿನಗಳು ಮಾತ್ರ ಪ್ರಾಣವಿರುತ್ತೆ ಇಲ್ಲಿ ಪ್ರಯೋಜನವಿಲ್ಲ ಕರೆದುಕೊಂಡು ಹೋಗಬಹುದು ಎಂದು ಹೇಳಿದರು.

ಆಗ ನನಗೆ ತಡೆಯಲಾರದ ದುಃಖ ಉಕ್ಕಿ ಬಂದುದನ್ನು ವಿಧಿ ಇಲ್ಲದೆ ತಡೆದುಕೊಂಡು, ನಮ್ಮ ದುರದೃಷ್ಟಕ್ಕೆ ಸ್ವರ್ಗಕ್ಕೆ ಬಂದರೂ ನಮ್ಮ ಪಾಲಿಗೆ ಅದು ನರಕವಾಯಿತೆಂದುಕೊಂಡು ಎಷ್ಟು ಆಸೆ, ಆಕಾಂಕ್ಷೆ, ಉತ್ಸಾಹಗಳಿಂದ ವೆಲ್ಲೂರಿಗೆ ಹೋದೆವೋ ಅಷ್ಟೇ ನಿರಾಶೆ, ನಿರುತ್ಸಾಹ, ದುಃಖಗಳಿಂದ ಕೂಡಿ ಚಿ. ಶಿವರಾಜುವನ್ನು ಕರೆದುಕೊಂಡು ಹಿಂತಿರುಗಬೇಕಾಯಿತು. ವೆಲ್ಲೂರಿನ ಘಟಾನುಘಟಿಗಳಾದ ಡಾಕ್ಟರುಗಳೂ ಸಹಾ ಈ ಖಾಯಿಲೆಯನ್ನು ಗುಣಮಾಡಲು ಅಸಮರ್ಥರಾಗಿದ್ದರು. ದೊಡ್ಡ ಕಾರ್ಮುಗಿಲೇ ನಮ್ಮಗಳನ್ನು ಆವರಿಸಿತ್ತು. ಕಂಪೆನಿಗೆ ಪತ್ರ ಬರೆದು ದೊಡ್ಡ ಮಗನಾದ ಚಿ. ಚೆನ್ನಬಸವಣ್ಣ, ಸೊಸೆ ಪಾರ್ವತಮ್ಮನನ್ನು ಕರೆಸಿದೆವು. ಅವರುಗಳು ಬಂದು ಎಲ್ಲವನ್ನೂ ವಿವರವಾಗಿ

ಕೇಳಿದರು. ಮನುಷ್ಯನಿಗೆ ಎಷ್ಟೇ ಕಷ್ಟ ಬಂದರೂ, ಮುಳುಗುವವನಿಗೆ ಹುಲ್ಲು ಕಡ್ಡಿಯೇ ಆಧಾರವಾದೀತೋ ಎಂಬಂತೆ ಇನ್ನೂ ಶಿವರಾಜ್ ಬದುಕಬಹುದೋ ಏನೋ, ಗ್ರಹಗತಿಗಳು ಕ್ರೂರವಾಗಿರಬಹು, ಶಾಂತಿ ಮಾಡಿಸೋಣವೆಂದು ನಿರ್ಧಾರ ಮಾಡಿಕೊಂಡು ಬಂದ ದಿನವೇ ೧೦-೧೦ ೧/೨ ಗಂಟೆಯಲ್ಲಿ ಮೈಸೂರಿನಲ್ಲಿರುವ ಶಿವರುದ್ರಸ್ವಾಮಿಯವರನ್ನು ಕಂಡು ವಿವರಗಳನ್ನು ತಿಳಿದುಕೊಂಡು ಬರಲು ಶೇಷಾಚಾರ್ ಎಂಬುವರನ್ನು ಕರೆದುಕೊಂಡು ಕಾರಿನಲ್ಲಿ ಹೋದರು.

ದೈವವೇ ಶತ್ರುಸ್ಥಾನದಲ್ಲಿ ವಿರೋಧವಾಗಿ ನಡೆಯುತ್ತಿರುವಲ್ಲಿ ಹುಲು ಮನುಜ ಚಿ. ಚನ್ನಬಸವಣ್ಣನ ಪ್ರಯತ್ನವೇನು ನಡೆದೀತು? ನಡೆಯಲಿಲ್ಲ. ಮೈಸೂರಿಗೆ ಹೊಸ ಕಾರಿನಲ್ಲಿ ಪ್ರಯಾಣ ಮಾಡಿ ಶ್ರೀರಂಗಪಟ್ಟಣ ದಾಟಿ ಮೈಸೂರಿಗೆ ಆರು ಮೈಲಿ ಫಾಸಲೆಯಲ್ಲಿ ಮುಂದೆ ಹೋಗುತ್ತಿದ್ದ ಎತ್ತಿನ ಗಾಡಿಯ ಎತ್ತುಗಳನ್ನು ಹಾರನ್ನಿನ ಶಬ್ದಕ್ಕೆ ಗಾಬರಿಯಾಗಿ ಹಿಂದಕ್ಕೆ ಜಗ್ಗಿದ್ದರಿಂದ ಕಾರಿನ ಬಾನೆಟ್‌ಗೆ ಹೊಡೆದು ಬಾನೆಟ್ ಮಡಿಸಿಕೊಂಡು ಹಿಂದೆ ಬಂದು ಗಾಜು ಒಡೆದು ಕಾರಿನಲ್ಲಿದ್ದ ಮೂವರಿಗೂ ಪೆಟ್ಟು ತಗುಲಿ ಒಬ್ಬೊಬ್ಬರು ಒಂದೊಂದು ದಿಕ್ಕಿಗೆಸೆಯಲ್ಪಟ್ಟರು. ಇದೇ ವಿಧಿಯ ಆಟ! ಹೀಗೆ ಪ್ರಜ್ಞಾಶೂನ್ಯರಾಗಿ ಬಿದ್ದಿದ್ದ ಇವರನ್ನು ನೋಡಿ ಎತ್ತಿನ ಗಾಡಿಯ ಜನರೇ ಮರುಕದಿಂದಲೂ, ಗಾಬರಿಯಿಂದಲೂ, ಮೈಸೂರಿಗೆ ಹೋಗುತ್ತಿದ್ದ ಲಾರಿಯನ್ನು ನಿಲ್ಲಿಸಿ ಪರಿಸ್ಥಿತಿಯನ್ನು ವಿವರಿಸಿ ಗಾಯಗೊಂಡವರನ್ನು ಲಾರಿಯಲ್ಲಿ ಹಾಕಿಕೊಂಡು ಕೃಷ್ಣರಾಜೇಂದ್ರ ಆಸ್ಪತ್ರೆಯನ್ನು ತಲುಪುವಷ್ಟರಲ್ಲಿ ಬೆಳಗಿನ ಏಳು ಗಂಟೆಯಾಗಿತ್ತು.

ಚನ್ನಬಸವಣ್ಣ ಮತ್ತು ಶೇಷಾಚಾರ್‌ರವರನ್ನು ಆ ದುರವಸ್ಥೆಯಲ್ಲಿಯೂ ಗುರುತು ಹಿಡಿದ ಕೆಲವರು ಅಲ್ಲಿಯೇ ನಾಟಕವಾಡುತ್ತಿದ್ದ ಮಾಸ್ಟರ್ ಹಿರಣ್ಣಯ್ಯನವರ ಮಂಡಳಿ ಭಾಗಸ್ಥರಾದ ಮುನಿರಂಗಪ್ಪನವರಿಗೆ ಹೇಳಿ ಕಳುಹಿಸಿದರು ಕೂಡಲೆ ಅವರು ಹೊರಟು ಬಂದು ಆಸ್ಪತ್ರೆಗೆ ಇವರುಗಳನ್ನು ಅಡ್ಮಿಟ್ ಮಾಡಿಸಿ ಶ್ರೀಮತಿ ಜಯಮ್ಮನಿಗೆ ಟ್ರಂಕಾಲ್ ಮಾಡಿದರು. ಆ ಹೊತ್ತಿಗೆ ಮಧ್ಯಾಹ್ನ ೧೧ ೧/೨ ೧೨ರ ಸಮಯ. ವಿಚಾರ ತಿಳಿದ ಕೂಡಲೆ ಗಾಬರಿಯಾಗಿ ಜಯಮ್ಮ ಬೇರೆ ಕಾರೊಂದನ್ನು ತೆಗೆದುಕೊಂಡು ಮೈಸೂರಿಗೆ ಎರಡು ಗಂಟೆಗೆ ಹೋಗಿ ಶಿವರಾಜ್‌ನ ಪರಿಸ್ಥಿತಿಯನ್ನು ಅಲ್ಲಿನ ಡಾಕ್ಟರುಗಳಿಗೆ ವಿವರಿಸಿ ಅಲ್ಲಿಂದ ಗಾಯಗೊಂಡ ಮೂರು ಜನರನ್ನೂ ಕಾರಿನಲ್ಲಿ ಕರೆದುಕೊಂಡು ನೇರವಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಬಂದು ಬಹುವಾಗಿ ಪೆಟ್ಟು ಬಿದ್ದಿದ್ದ ಪಾರ್ವತಮ್ಮನನ್ನೂ, ಶೇಷಾಚಾರ್‌ರವರನ್ನೂ ಸೇರಿಸಿ ಸ್ವಲ್ಪ ಪೆಟ್ಟು ತಗಲಿದ್ದ ಚನ್ನಬಸವಣ್ಣನನ್ನು ಮಾತ್ರ ಕರೆದುಕೊಂಡು ಮನೆಗೆ ಬಂದಾಗ ರಾತ್ರಿ ೧೦ ಗಂಟೆಯಾಗಿತ್ತು. ಬೆಂಗಳೂರಿನಲ್ಲಿ ಮಧ್ಯಾಹ್ನದಿಂದಲೂ ಸಾವಿನೊಡನೆ ಹೋರಾಟ ನಡೆಸುತ್ತಿದ್ದ ಶಿವರಾಜನನ್ನು ಮೈಸೂರಿಗೆ ಹೋಗಿದ್ದವರು ಬರುವವರೆಗೂ ಮೃತ್ಯುವಿನ ದವಡೆಯಿಂದ ಉಳಿಸಲು ಆಮ್ಲಜನಕವನ್ನು ಜ್ಯೂಬಿಲಿ ನರ್ಸಿಂಗ್ ಹೋಂನಿಂದ ತರಿಸಿಕೊಟ್ಟು ಸೆಣಸಾಟ ನಡೆಸುತ್ತಿದ್ದೆವು. ಅಣ್ಣ ಮತ್ತು ಚಿಕ್ಕಮ್ಮನ ದರ್ಶನಕ್ಕಾಗಿಯೇ ಶಿವರಾಜನ ಪ್ರಾಣಪಕ್ಷಿ ಕಾತರದಿಂದ

ನಿರೀಕ್ಷಿಸುತ್ತಿತ್ತೋ ಎಂಬಂತೆ ಅವರುಗಳು ಬಂದ ನಂತರ ಅವರುಗಳನ್ನು ನೋಡುತ್ತಾ ಶಿವರಾಜನ ಆತ್ಮವು ಶಿವ ಶಿವ ಎಂದು ಶಿವನ ಪಾದದಲ್ಲಿ ಐಕ್ಯವಾಯಿತು. ಅಂದು ತಾ. ೨೧-೧೦-೧೯೬೬.

ಮಾರನೆಯ ದಿನ ಅಂತ್ಯ ಕರ್ಮಗಳನ್ನೆಲ್ಲಾ ಮುಗಿಸಿ ಭಾರವಾದ ಮನಸ್ಸುಗಳಿಂದ ಹಿಂತಿರುಗಿದೆವು. ಮನಸ್ಸಿನ ದುಗುಡ, ತಳಮಳವೆಲ್ಲಾ ಕಮ್ಮಿಯಾಗದೆ ದ್ವಿಗುಣವಾಗಿಯೇ ಇದ್ದುವು. ಕಳೆದ ಮೂರು ವರ್ಷಗಳಲ್ಲಿ ಎಂತೆಂತಹ ಬದಲಾವಣೆಗಳಾದುವು ಎಂಬುದನ್ನು ಯೋಚಿಸಿದೆ. ನನ್ನ ಮಗಳಿಗೆ ವಿದ್ಯುದಾಘಾತವಾಗಿ ಎರಡು ಕಾಲುಗಳ ಮೂಳೆಗಳೂ ಮುರಿದದ್ದು ತಾ. ೯.೧೧.೧೯೬೪ರಲ್ಲಿ. ಅಳಿಯ ಬಸವರಾಜು ಸ್ಕೂಟರಿನಿಂದ ಕೆಳಗೆ ಬಿದ್ದು ಮೃತ್ಯುವನ್ನಪ್ಪಿದುದು ತಾ. ೨೦.೮.೧೯೬೫. ಮುದ್ದಿನ ಮಗ ಶಿವರಾಜನ ಶಿವೈಕ್ಯನಾದದ್ದು ೨೧-೧೦-೧೯೬೬. "ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ!" ಎಂಬಂತೆ ದೈವ ನಿಯಮವನ್ನು ಮೀರಲು ನಾವು ಎಂದಿಗೂ ಶಕ್ತರಲ್ಲ.

ನಂತರ ನನ್ನ ಸೊಸೆ ಪಾರ್ವತಮ್ಮನಿಗೆ ಸುಮಾರು ನಾಲ್ಕುವರೆ ಗಂಟೆಗಳ ಆಪರೇಷನ್ ನಡೆದು ಆಕೆ ಮೃತ್ಯುವಿನ ದವಡೆಯಿಂದ ನುಸುಳಿ ಪಾರಾಗಿ ಬಂದದ್ದು ನಮ್ಮ ಮೇಲೆ ವಿಧಿಗೆ ಕರುಣೆ ಕಿಂಚಿತ್ತಾದರೂ ಇದೆಯಲ್ಲ ಎಂಬ ಸಮಾಧಾನವಾಯಿತು. ಅದರಂತೆ ಕಾರಿನ ಅಪಘಾತಕ್ಕೀಡಾಗಿದ್ದ ಶ್ರೀ ಶೇಷಾಚಾರ್‌ರವರೂ ಸಹಾ ಗುಣಮುಖರಾದರು.

ಈ ಮೇಲ್ಕಂಡ ಆಘಾತಗಳಿಂದ ತುಮಕೂರಿನ ಟಾಕೀಸಿನ ಕಟ್ಟಡದ ಕಾರ್ಯ ನಾಲ್ಕೈದು ತಿಂಗಳ ಕಾಲ ನಿಧಾನವಾಯಿತು. ಈಗ ಅದು ಮುಕ್ತಾಯಘಟ್ಟದಲ್ಲಿದ್ದು ಮುಂದಿನ ತಿಂಗಳಲ್ಲಿ ಅದರ ಪ್ರಾರಂಭೋತ್ಸವವನ್ನು ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಶಿವಕುಮಾರಸ್ವಾಮಿಗಳವರ ನೇತೃತ್ವದಲ್ಲಿ ನೆರವೇರಿಸಬೇಕೆಂಬ ಇಚ್ಛೆಯುಳ್ಳವನಾಗಿದ್ದೇನೆ.

ಇದನ್ನು ಭಗವಂತನು ಸುಲಲಿತವಾಗಿ ನೆರವೇರಿಸಲೆಂದು ಹಾರೈಸುತ್ತೇನೆ.

ಅನುಬಂಧಗಳು

ಅನುಬಂಧ ೧

ಶ್ರೀಮನ್ ಮಹಾರಾಜರ ಭಾಷಣ

ಮೈಸೂರು ಶ್ರೀಮನ್ ಮಹಾರಾಜರವರು ಶ್ರೀಜಯಚಾಮರಾಜ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ., ಯವರು ಬೆಂಗಳೂರು ನಗರದಲ್ಲಿ ಗುಬ್ಬಿ ಶ್ರೀ ಚೆನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕಮಂಡಲಿಯ ೭೧ನೇ ವರ್ಷದ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಂಡಲಿಯವರ "ದಶಾವತಾರ" ಎಂಬ ಪೌರಾಣಿಕ ನಾಟಕವನ್ನು ಪ್ರಾರಂಭಗೊಳಿಸುತ್ತಾ ಅಪ್ಪಣೆಕೊಡಿಸಿದ ಭಾಷಣ.

(೧೯೫೫ನೇ ಇಸವಿ ಜೂನ್ ತಿಂಗಳು ೧೫ನೆಯ ತಾರೀಖು, ಬುಧವಾರ)

ನಾಟಕರತ್ನ ವೀರಣ್ಣನವರೆ, ಮಹಿಳೆಯರೆ ಮತ್ತು ಮಹಾಶಯರೆ,

ಕರ್ನಾಟಕ ದೇಶದಲ್ಲಿಯೂ, ದಕ್ಷಿಣ ಭಾರತದಲ್ಲಿಯೂ ಅತ್ಯಂತ ಜನಪ್ರಿಯವೆನಿಸಿಕೊಂಡಿರುವ ಗುಬ್ಬಿ ಶ್ರೀ ಚೆನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಮಂಡಲಿಯ ೭೧ನೇ ವರ್ಷದ ಮಹೋತ್ಸವದಲ್ಲಿ ಭಾಗವಹಿಸುವ ಸದವಕಾಶ ಪ್ರಾಪ್ತವಾಗಿರುವುದಕ್ಕಾಗಿಯೂ, ಮಂಡಲಿಯವರು ಹೊಸದಾಗಿ ಸಿದ್ಧಗೊಳಿಸಿರುವ "ದಶಾವತಾರ" ಎಂಬ ಪೌರಾಣಿಕ ನಾಟಕದ ಪ್ರಾರಂಭೋತ್ಸವ ನಡೆಸುವ ಅವಕಾಶ ಪ್ರಾಪ್ತವಾದುದಕ್ಕಾಗಿಯೂ, ನಾವು ಬಹಳವಾಗಿ ಸಂತೋಷಪಡುತ್ತೇವೆ.

ಈ ಸನ್ನಿವೇಶದಲ್ಲಿ ಗುಬ್ಬಿ ನಾಟಕಮಂಡಲಿಯ ಪರವಾಗಿ ಅತ್ಯಂತ ಮಮತೆಯಿಂದ ನಮಗೆ ಒಪ್ಪಿಸಿರುವ ಸನ್ಮಾನ ಪತ್ರಿಕೆಯಲ್ಲಿ ನಮ್ಮ ವಿಷಯವಾಗಿಯೂ, ನಮ್ಮ ರಾಜಮನೆತನದ ಹಿರಿಯರ ವಿಷಯವಾಗಿಯೂ ವ್ಯಕ್ತಪಡಿಸಿರುವ ಗೌರವ ಪೂರ್ಣವಾದ ಅಭಿಪ್ರಾಯಗಳಿಗಾಗಿ ನಾವು ಮಂಡಲಿಯವರಿಗೆ ಕೃತಜ್ಞರಾಗಿದ್ದೇವೆ.

ಮೈಸೂರಿನ ಅರಸುಮನೆತನದಲ್ಲಿ ಸುಪ್ರಸಿದ್ಧರಾಗಿರುವ ಶ್ರೀ ಚಿಕ್ಕದೇವರಾಜ ಒಡೆಯರು, ಸಿಂಗರಾರ್ಯ ಎಂಬ ತಮ್ಮ ಆಸ್ಥಾನ ಕವಿಯಿಂದ "ಮಿತ್ರವಿಂದಾಗೋವಿಂದ" ಎಂಬ ನಾಟಕವನ್ನು ಬರೆಸಿದ ಸಂಗತಿಯನ್ನು, ಮಹಾನುಭಾವರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು ಕಾಳಿದಾಸ ಮಹಾಕವಿಯ ನಾಟಕತ್ರಯಗಳಾದ ಅಭಿಜ್ಞಾನ ಶಾಕುಂತಲ, ವಿಕ್ರಮೋರ್ವಶೀಯ, ಮಾಳವಿಕಾಗ್ನಿಮಿತ್ರಗಳನ್ನು ಕನ್ನಡಕ್ಕೆ ಅನುವಾದ ಮಾಡಿದರೆಂಬುದನ್ನು, ನಮ್ಮ ಪಿತಾಮಹರಾದ ಶ್ರೀ ಚಾಮರಾಜ ಒಡೆಯರು ಅಭಿನವ ಕಾಳಿದಾಸ ಶ್ರೀಮಾನ್ ಬಸವಪ್ಪಶಾಸ್ತ್ರಿಗಳೇ ಮೊದಲಾದ ಕವಿ ಶ್ರೇಷ್ಠರಿಂದ ಅಭಿಜ್ಞಾನ ಶಾಕುಂತಲ, ಚಂಡಕೌಶಿಕ, ರತ್ನಾವಳಿ, ಉತ್ತರ ರಾಮ ಚರಿತೆ, ಶೂರಸೇನ ಚರಿತೆ ಮೊದಲಾದ ಶ್ರೇಷ್ಠ ನಾಟಕಗಳನ್ನು ಕನ್ನಡದಲ್ಲಿ ಬರೆಸಿ ತಮ್ಮ ಹೆಸರಿನ ಒಂದು ನಾಟಕ ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ಬಗೆಬಗೆಯ ಸಹಾಯಗಳನ್ನು ಕಲ್ಪಿಸಿಕೊಟ್ಟು ಕನ್ನಡ

ರಂಗಭೂಮಿಗೆ ನವಚೈತನ್ಯವನ್ನುಂಟುಮಾಡಿದರೆಂಬುದನ್ನು, ನಮ್ಮ ಪೂಜ್ಯ ದೊಡ್ಡಪ್ಪಂದಿರು ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರು ಮತ್ತು ನಮ್ಮ ಪೂಜ್ಯ ಪಿತೃವರ್ಯರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರು ಕನ್ನಡ ರಂಗಭೂಮಿಗೆ ಹಾಗೂ ಗುಬ್ಬಿ ನಾಟಕಮಂಡಲಿಯವರಿಗೆ ಕಾಲಕಾಲಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಟ್ಟು ಅನುಗ್ರಹಿಸಿದ ರೆಂಬುದನ್ನು ಇಂದು ನಿಮ್ಮ ವಿಜ್ಞಾಪನಾ ಪತ್ರಿಕೆಯಲ್ಲಿ ಉಲ್ಲೇಖಿಸಿರುವುದನ್ನು ಕೇಳಿ ನಮಗೆ ಹೆಚ್ಚಿನ ಸಂತೋಷ ಉಂಟಾಗಿದೆ. ದೇಶಾಭಿಮಾನ ಪೂರ್ಣವೂ, ಕಲಾಭಿಮಾನದ್ಯೋತಕವೂ ಆದ ಇಂತಹ ಸವಿ ನೆನಪುಗಳನ್ನು ನೀವು ಇಂದು ನಮಗೆ ತಂದುಕೊಟ್ಟುದಕ್ಕಾಗಿ ನಿಮ್ಮನ್ನು ಕೃತಜ್ಞತೆಯಿಂದ ವಂದಿಸುತ್ತೇವೆ. ಇದೇ ಸಂದರ್ಭದಲ್ಲಿ ಕಲಾಭಿಮಾನಿಗಳಾದ ಮತ್ತು ಉಜ್ವಲ ದೇಶಾಭಿಮಾನಿಗಳಾದ ನಮ್ಮ ಪ್ರಪಿತಾಮಹರು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು, ನಮ್ಮ ನಾಡಿನ ಜನರಿಗೆ ಬಹು ಪ್ರಿಯವೆನಿಸಿರುವ ಬಯಲಾಟಗಳು ಅಥವಾ "ದಶಾವತಾರ" ಆಟಗಳನ್ನು ಆಡುವ ಜನರನ್ನು ಮಂಗಳೂರು ಮೊದಲಾದ ಕಡೆಗಳಿಂದ ಕರೆಯಿಸಿ ಮೈಸೂರಿನಲ್ಲಿ ಅವರಿಗೆ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಆ ಬಯಲಾಟದ ಕಲೆಗೂ ಹೆಚ್ಚು ಪ್ರೋತ್ಸಾಹವಿತ್ತರೆಂಬ ವಿಷಯವನ್ನು ನಾವು ಇಂದು ನಿಮ್ಮ ಗಮನಕ್ಕೆ ತರಲು ಬಯಸುತ್ತೇವೆ.

ಎಲ್ಲ ದೇಶದ ಸಾಹಿತ್ಯದಲ್ಲಿಯೂ ನಾಟಕಗಳಿಗೆ ಹೆಚ್ಚಿನ ಗೌರವವಿದೆ. ಪ್ರಪಂಚದ ಪ್ರಖ್ಯಾತ ಮತ್ತು ಪ್ರಾಚೀನ ಭಾಷೆಗಳಾದ ಸಂಸ್ಕೃತ, ಗ್ರೀಕ್ ಮತ್ತು ಇಂಗ್ಲೀಷ್ ಸಾಹಿತ್ಯಗಳಿಗೆ ಈ ಮಾತು ಹೆಚ್ಚಾಗಿ ಅನ್ವಯಿಸುತ್ತದೆ. "ಕಾವ್ಯೇಷು ನಾಟಕಂ ರಮ್ಯಂ, ನಾಟಕೇಷು ಶಕುಂತಲಾ" ಎಂಬ ವಾಕ್ಯವು ಕಾವ್ಯಗಳಲ್ಲಿ ನಾಟಕವೂ ನಾಟಕಗಳಲ್ಲಿ ಅಭಿಜ್ಞಾನ ಶಾಕುಂತಲವೂ ಶ್ರೇಷ್ಠ ಎಂಬ ಅಭಿಪ್ರಾಯವನ್ನೇ ಹೇಳುತ್ತದೆ. 'ನಾಟಕಾಂತ ಸಾಹಿತ್ಯ' ಎಂಬ ಮಾತು ಈ ವಾದವನ್ನೇ ಸಮರ್ಥಿಸುತ್ತದೆ. ಒಂದು ದೇಶದ ನಾಗರಿಕತೆಯನ್ನು ತಿಳಿಯಬೇಕಾದರೆ ಆ ದೇಶದ "ಒಂದು ರಂಗಭೂಮಿಯನ್ನು ನೋಡಿದರಾಯ್ತು" ಎಂಬ ಪ್ರಾಜ್ಞರ ಮಾತೊಂದಿದೆ. ಈ ವಾಕ್ಯದ ತಾತ್ಪರ್ಯ ಆ ದೇಶದ ಸಂಗೀತ, ಸಾಹಿತ್ಯ, ನೃತ್ಯ, ಚಿತ್ರ, ಶಿಲ್ಪ, ಜನಜೀವನ, ಇವೆಲ್ಲವುಗಳನ್ನೂ ಆ ರಂಗಭೂಮಿಯಲ್ಲಿ ಕಾಣಬಹುದು ಎಂಬುದೇ ಆಗಿದೆ. ನಿಮ್ಮ ಸನ್ಮಾನ ಪತ್ರಿಕೆಯಲ್ಲಿ ಹೇಳಿರುವಂತೆ ರಂಗಭೂಮಿಯು ಜನಸಾಮಾನ್ಯರ ವಿಶ್ವವಿದ್ಯಾನಿಲಯ-ಎಂಬ ಮಾತು ಸಹಜವಾಗಿಯೇ ಇದೆ. ನಾಟಕವು ಜನಜೀವನದ ಪ್ರತಿಬಿಂಬ. ಜನತೆಯನ್ನು ಸಂತೋಷಗೊಳಿಸುವುದು, ಸನ್ಮಾರ್ಗಕ್ಕೆ ಒಯ್ಯುವುದು, ಜೀವನಾನುಭವಗಳನ್ನು ಬೋಧಿಸುವುದು, ಕಲಾಭಿರುಚಿಯನ್ನು ಹೆಚ್ಚಿಸುವುದು ಇವುಗಳೇ ನಾಟಕದ ಮುಖ್ಯೋದ್ದೇಶಗಳು. ಈ ಕಾರಣದಿಂದಲೇ ಎಲ್ಲಾ ಕಾಲಗಳಲ್ಲಿಯೂ, ಎಲ್ಲಾ ದೇಶಗಳಲ್ಲಿಯೂ ನಾಟಕಗಳಿಗೆ ಪ್ರಾಮುಖ್ಯವಿದೆ.

ನಮ್ಮ ಭಾರತ ಭೂಮಿಯಲ್ಲಿ ಸುಮಾರು ೨,೦೦೦ ವರ್ಷಗಳಷ್ಟು ಹಿಂದಿನಿಂದ ಭಾಸ, ಕಾಳಿದಾಸ, ಭವಭೂತಿ, ಶ್ರೀಹರ್ಷ, ಶೂದ್ರಕ ಮೊದಲಾದ ಮಹಾಕವಿಗಳು ಲೋಕಮಾನ್ಯಗಳಾದ ನಾಟಕಗಳನ್ನು ಬರೆದು ಖ್ಯಾತಿಗೊಂಡಿದ್ದಾರೆ. ಭಾಸ ಮಹಾಕವಿಯ

ಸರ್ವೋತ್ಕೃಷ್ಟ ಕಲಾಕೃತಿಗಳಾದ ಸ್ವಪ್ನವಾಸವದತ್ತ, ಪ್ರತಿಮಾ ಮತ್ತು ಪಾಂಚರಾತ್ರ ಮೊದಲಾದ ನಾಟಕಗಳು ತಮ್ಮ ಅಪೂರ್ವ ಪ್ರತಿಭೆಯಿಂದ ಲೋಕದ ಮನ್ನಣೆಗೆ ಪಾತ್ರವೆನಿಸಿವೆ. ಕಾಳಿದಾಸನ ಶಾಕುಂತಲ, ಭವಭೂತಿಯ ಉತ್ತರ ರಾಮಚರಿತೆ, ಶೂದ್ರಕನ ಮೃಚ್ಛಕಟಿಕ ಎಂಬ ನಾಟಕಗಳು ವಿಶ್ವ ಸಾಹಿತ್ಯದಲ್ಲಿ ಪರಿಗಣಿಸಲು ಅರ್ಹವಾಗಿವೆ. ಭಾಸನ ನಾಟಕೀಯತೆ, ಕಾಳಿದಾಸನ ವಸ್ತುವಿನ್ಯಾಸ, ಭವಭೂತಿಯ ರಸಪ್ರತಿಪಾದನೆ, ಶೂದ್ರಕನ ವಿನೂತನತೆ ಇವು ಭಾರತೀಯರ ಪ್ರತಿಭೆಗೆ ಸುಸ್ಪಷ್ಟವಾದ ನಿದರ್ಶನಗಳೆನಿಸಿವೆ. ಇನ್ನು ನಮ್ಮ ಕನ್ನಡನಾಡಿನ ನಾಟಕಗಳ ಕಡೆಗೆ ನಮ್ಮ ದೃಷ್ಟಿಯನ್ನು ಹರಿಸೋಣ. ಇದುವರೆವಿಗೆ ತಿಳಿದುಬಂದಿರುವ ಪ್ರಕಾರ ಪೂರ್ವೋಕ್ತ 'ಮಿತ್ರವಿಂದಾಗೋವಿಂದ' ಎಂಬ ನಾಟಕವೇ ಕನ್ನಡದಲ್ಲಿ ಮೊದಲನೆಯ ನಾಟಕವಾಗಿದೆ. ಆದರೂ ವಿದ್ವಾಂಸರು ಹಲವು ಸಂಶೋಧನೆಗಳನ್ನು ನಡೆಸಿ ಇದಕ್ಕೂ ಮೊದಲು ಕನ್ನಡದಲ್ಲಿ ನಾಟಕಗಳು ರಚನೆಯಾಗಿದ್ದಿರಬಹುದು ಎಂದು ತರ್ಕಿಸಿದ್ದಾರೆ. ಇದು ಸಂಶೋಧಕರಿಗೆ ಮೀಸಲಾದ ವಿಷಯವಾಗಿದೆ. ಕನ್ನಡ ಸಾಹಿತ್ಯ ಒಂದರಲ್ಲೇ ಅಲ್ಲ, ತಮಿಳು, ತೆಲುಗು, ಮಲೆಯಾಳ ಸಾಹಿತ್ಯದಲ್ಲೂ ಕೂಡ ಬಹಳ ಹಿಂದಿನ ಕಾಲದಲ್ಲಿ ನಾಟಕಗಳು ರಚನೆಯಾಗದಿರಲು ಕಾರಣವೇನು? ಇದಕ್ಕೆ ಮುಖ್ಯವಾದ ಕಾರಣ ದ್ರಾವಿಡ ಸಂಸ್ಕೃತಿ ಪ್ರಧಾನವಾದ ಈ ದಕ್ಷಿಣ ಭಾರತದಲ್ಲಿ ಮೊದಲಿನಿಂದಲೂ ಬಳಕೆಯಲ್ಲಿದ್ದ ಬಯಲಾಟ, ಯಕ್ಷಗಾನ ಅಥವಾ ಭಾಗವತರ ನಾಟಕಗಳು ಹೆಚ್ಚು ಜನಪ್ರಿಯವಾಗಿದ್ದುದು ಕಾರಣವಾಗಿರಬಹುದು. ಹಲವು ವಿದ್ವಾಂಸರ ಅಭಿಪ್ರಾಯದಂತೆ ಯಕ್ಷಗಾನ ಮೊದಲಾದ ನೃತ್ಯ ನಾಟಕಗಳು ಇಂದಿನ ನಮ್ಮ ನಾಟಕಗಳಿಗೆ ಮಾತೃಸ್ಥಾನವೆಂದು ಊಹಿಸಲು ಅವಕಾಶವಿದೆ. ನಮ್ಮ ಮೈಸೂರು ರಾಜ್ಯದಲ್ಲಿಯೂ, ಮಂಗಳೂರು, ಕಾರವಾರ ಮೊದಲಾದ ಭಾಗಗಳಲ್ಲಿಯೂ ಇಂದಿಗೂ ಕಲಾಪೂರ್ಣವಾಗಿ ಈ ಬಯಲಾಟಗಳು ಅಭಿನಯಿಸಲ್ಪಡುವುದನ್ನು ನೋಡಬಹುದು. ಈ ಯಕ್ಷಗಾನ ಪ್ರಬಂಧಗಳೇ ಮರಾಠಿ ನಾಟಕಗಳಿಗೆ ಮಾರ್ಗದರ್ಶನಗಳಾದುವೆಂದು ಕೆಲವರು ಹೇಳುತ್ತಾರೆ.

ಇತ್ತೀಚಿನ ಕನ್ನಡ ಸಾಹಿತ್ಯದಲ್ಲಿ ಕಥೆ, ಕಾದಂಬರಿ, ಭಾವಗೀತೆಗಳ ಜತೆಜತೆಯಲ್ಲಿಯೇ ನೂತನ ನಾಟಕ ರಚನೆಯ ಕಾರ್ಯವೂ ಬಿರುಸಾಗಿ ನಡೆಯುತ್ತಿದೆ. ನಮ್ಮ ವಿದ್ವಾಂಸರು ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳನ್ನು ಬರೆಯುತ್ತಿದ್ದಾರೆ. ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು ಅಶ್ವತ್ಥಾಮನ್ ಮತ್ತು ಪಾರಶಿಕರು ಎಂಬ ನಾಟಕಗಳನ್ನು ರಚಿಸಿ ಗ್ರೀಕ್ ರುದ್ರನಾಟಕಗಳ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಟ್ಟಿದ್ದಾರೆ. ಕೀರ್ತಿಶೇಷರಾದ ಕೈಲಾಸಂರವರು ಟೊಳ್ಳುಗಟ್ಟಿ. ಹೋಂ ರೂಲ್, ಏಕಲವ್ಯ ಮೊದಲಾದ ನಾಟಕಗಳನ್ನು ರಚಿಸಿ ಕನ್ನಡದಲ್ಲಿ ಕ್ರಾಂತಿಯನ್ನು ಎಸಗಿದ್ದಾರೆ.

ಭಾರತ ಸರ್ಕಾರದವರೂ, ಪ್ರಾಂತೀಯ ಸರ್ಕಾರದವರೂ ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಚಿತ್ರ, ಶಿಲ್ಪ ಮೊದಲಾದವುಗಳ ಏಳಿಗೆಗಾಗಿ ಈಗ ಗಮನವಿತ್ತಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿಯೂ ಈ ಪ್ರಯತ್ನ ಬಲವಾಗಿ ಮುಂದುವರಿಯುತ್ತಿದೆ.

ನಮ್ಮ ಸರ್ಕಾರದವರು ಸಂಸ್ಕೃತಿ ಮತ್ತು ನೃತ್ಯ, ನಾಟಕ, ಸಂಗೀತ ಇವುಗಳ ಅಭಿವೃದ್ಧಿಗಾಗಿ ಬಹಳವಾಗಿ ಪ್ರೋತ್ಸಾಹವಿತ್ತಿದ್ದಾರೆ. ಇದು ನಿಜವಾಗಿಯೂ ಅಭಿನಂದನೀಯ ಕಾರ್ಯವೇ ಸರಿ. ಗುಬ್ಬಿ ಶ್ರೀ ಚೆನ್ನಬಸವೇಶ್ವರ ನಾಟಕಮಂಡಲಿಯವರು ೭೦ ವರ್ಷಗಳಷ್ಟು ಹಿಂದಿನಿಂದ ತಮ್ಮ ಸಂಸ್ಥೆಯ ಮೂಲಕವಾಗಿ ಸತತವಾಗಿ ಪ್ರಯತ್ನಿಸಿ ಹೆಚ್ಚಿನ ಕಲಾಸೇವೆಯನ್ನು ಮಾಡಿರುತ್ತಾರೆ. ಮಂಡಲಿಯ ಪೌರಾಣಿಕ ನಾಟಕಗಳಾದ ಕುರುಕ್ಷೇತ್ರ, ಕೃಷ್ಣಲೀಲಾ, ಕಬೀರ್‌ದಾಸ್, ಅಕ್ಕಮಹಾದೇವಿ ಮೊದಲಾದುವು ಹೆಚ್ಚು ಜನಪ್ರಿಯವೆನಿಸಿವೆ. ಈ ಮಂಡಲಿಯ ಪ್ರಾರಂಭಕಾಲದಲ್ಲಿ ಆಡುತ್ತಿದ್ದು ಇಂದಿಗೂ ರಂಗಭೂಮಿಯ ಮೇಲೆ ಪ್ರದರ್ಶಿಸಲ್ಪಡುತ್ತಿರುವ ಸದಾರಮೆ, ಗುಲೇಬಕಾವಲಿ ಮೊದಲಾದನಾಟಕಗಳು ಅಂದಿನಿಂದ ಇಂದಿನವರೆವಿಗೆ ಒಂದೇ ಸಮನೆ ಜನಪ್ರಿಯತೆಯನ್ನು ಹೊಂದಿರುವುದು ಆಶ್ಚರ್ಯಕರ ಸಂಗತಿಯಾಗಿದೆ. ಸುಮಾರು ೬೦ ವರ್ಷಗಳಷ್ಟು ಹಿಂದಿನಿಂದ ರಂಗಭೂಮಿಯಲ್ಲಿ ಒಂದೇಸಮನಾಗಿ ವಿವಿಧಪಾತ್ರಗಳನ್ನು ವಹಿಸಿ ಕಲಾಸೇವೆಯನ್ನು ಮಾಡುತ್ತಿರುವ ಶ್ರೀ ವೀರಣ್ಣನವರ ಉತ್ಸಾಹವೂ, ಸಾಹಸವೂ ಅಭಿನಂದನೀಯವೆನಿಸಿದೆ. ಶ್ರೀ ವೀರಣ್ಣನವರು ಹಾಸ್ಯರಸ ಪ್ರಧಾನಪಾತ್ರಗಳನ್ನು ನಿರ್ವಹಿಸುವುದರಲ್ಲಿ ಪ್ರಖ್ಯಾತರಾಗಿದ್ದಾರೆ. ಇದು ಭಗವಂತನು ಅವರಿಗೆ ಕರುಣಿಸಿದ ಕೃಪಾವಿಶೇಷವೆನ್ನಬಹುದು.

ಗುಬ್ಬಿ ನಾಟಕಮಂಡಲಿಯಲ್ಲಿ ಮೊದಲಿನಿಂದಲೂ ಗಣ್ಯರಾದ ನಟನಟಿಯರು ಇರುವುದು ಒಂದು ಭಾಗ್ಯ ವಿಶೇಷವೇ ಸರಿ. ನಿಮ್ಮ ಸನ್ಮಾನ ಪತ್ರಿಕೆಯಲ್ಲಿ ತಿಳಿಸಿರುವಂತೆ ಶ್ರೀ ಸಿ.ಬಿ. ಮಲ್ಲಪ್ಪನವರು, ಶ್ರೀ ಎಂ.ಎನ್. ಗಂಗಾಧರರಾಯರು, ಶ್ರೀಮತಿ ಬಿ. ಜಯಮ್ಮನವರು, ದಿವಂಗತೆ ಜಿ. ಸುಂದರಮ್ಮನವರು ಮೊದಲಾದವರು ಈ ಮಂಡಲಿಯ ಕೀರ್ತಿಗೌರವಗಳನ್ನು ಹೆಚ್ಚಿಸಿದ್ದಾರೆಂದು ನಾವು ಭಾವಿಸಬಹುದು. ಈ ಮಂಡಲಿಯ ಆಡಳಿತ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಿದ ಇಂದು ಶಾಸನ ಸಭಾಸದಸ್ಯರಾಗಿರುವ ನಾಟ್ಯಕಲಾವಿಶಾರದ ಶ್ರೀ ಎಂ.ಸಿ. ಮಹದೇವಸ್ವಾಮಿಯವರು ಮತ್ತು ಬಹಳ ಹಿಂದಿನ ಕಾಲದಿಂದಲೂ ಈ ಮಂಡಲಿಯ ಸೇವೆಯಲ್ಲಿ ನಿರತರಾಗಿರುವ ಶ್ರೀ ಎನ್. ಪಿ. ನರಸಿಂಹಮೂರ್ತಿಯವರು ಈ ಸಮಯದಲ್ಲಿ ನಮ್ಮ ಸ್ಮರಣೆಗೆ ಅರ್ಹರಾಗಿದ್ದಾರೆ. ಗುಬ್ಬಿ ನಾಟಕ ಮಂಡಲಿಯವರು ಕಾಲೋಚಿತವಾಗಿ ಚಲನಚಿತ್ರ ಕೈಗಾರಿಕೆಗೂ ಪ್ರವೇಶಿಸಿ ಸುಭದ್ರಾ, ಸದಾರಮೆ, ಹೇಮರೆಡ್ಡಿ ಮಲ್ಲಮ್ಮ, ಗುಣಸಾಗರಿ, ಬೇಡರ ಕಣ್ಣಪ್ಪ ಮೊದಲಾದ ಕನ್ನಡ ಚಿತ್ರಗಳನ್ನು ತಯಾರಿಸಿರುವುದರ ಮೂಲಕವಾಗಿಯೂ ಕನ್ನಡನಾಡು ನುಡಿಗಳಿಗೆ ಹೆಚ್ಚಿನ ಸೇವೆಯನ್ನು ಸಲ್ಲಿಸಿರುತ್ತಾರೆ. ಈ ಮಂಡಲಿಯ ಮಾಲೀಕರಾದ ನಾಟಕರತ್ನ ಶ್ರೀ ವೀರಣ್ಣನವರು ಅನೇಕ ಧರ್ಮಸಂಸ್ಥೆಗಳಿಗೆ ಉದಾರವಾಗಿ ದ್ರವ್ಯಸಹಾಯ ಮಾಡಿರುತ್ತಾರೆ. ತಮಿಳು, ತೆಲುಗು ದೇಶಗಳಲ್ಲೂ ಸಂಚರಿಸಿ ಅಲ್ಲಿಯೂ ಕನ್ನಡಿಗರ ಪ್ರತಿಭೆಯನ್ನು ಪ್ರದರ್ಶಿಸಿರುತ್ತಾರೆ. ಪ್ರಕೃತ ಮಂಡಲಿಯವರು ಈ ದಿನದಿಂದ ರಂಗಭೂಮಿಯ ಮೇಲೆ ಪ್ರದರ್ಶಿಸಲಿರುವ "ದಶಾವತಾರ" ನಾಟಕವು ನಾಡಿನ ಜನರ ಮನಸ್ಸನ್ನು ತನ್ನ ಕಡೆಗೆ ಸೆಳೆದಿದೆ.

ನಾಟಕರತ್ನ ಶ್ರೀ ವೀರಣ್ಣನವರು ಭಾರತ ರಾಷ್ಟ್ರಾಧ್ಯಕ್ಷರಿಂದ ಸನ್ಮಾನಿತರಾಗಿ ಅಪೂರ್ವವಾದ ಕೀರ್ತಿಗೌರವಗಳಿಂದ ಕೂಡಿರುತ್ತಾರೆ ಮತ್ತು ಶ್ರೀ ವೀರಣ್ಣನವರಿಗೆ ಬಂದ ಈ ಗೌರವವು ಕನ್ನಡ ರಂಗಭೂಮಿಗೆ ಪ್ರಾಪ್ತವಾದ ಗೌರವವೆಂದು ನಾವು ಭಾವಿಸುತ್ತೇವೆ. ಈ ಮಹೋತ್ಸವದ ಸನ್ನಿವೇಶದಲ್ಲಿ ಮಂಡಲಿಯ ನಟನಟೀ ವರ್ಗದವರೂ, ಆಡಳಿತ ವರ್ಗದವರೂ ಶ್ರೀ ವೀರಣ್ಣನವರಿಗೆ ಗಂಗಾವತರಣ ಚಿತ್ರವುಳ್ಳ ರಜತ ಕಲಾಕೃತಿಯನ್ನು ಕೊಡಬೇಕೆಂದು ಬಯಸಿರುವುದು ಕೂಡ ಯೋಗ್ಯವಾಗಿಯೇ ಇದೆ. ಇಂತಹ ಗೌರವಕ್ಕೆ ನಾಟಕರತ್ನ ವೀರಣ್ಣನವರು ಸಂಪೂರ್ಣವಾಗಿ ಅರ್ಹರಾಗಿದ್ದಾರೆ. ಈ ಕಾರ್ಯವನ್ನು ನಾವು ಸಂತೋಷವಾಗಿ ನೆರವೇರಿಸುತ್ತೇವೆ. ಕರುಣಾಳುವಾದ ಪರಮೇಶ್ವರನೂ, ಕಲಾಭಿಮಾನ ದೇವತೆಯೂ ನಾಟಕರತ್ನ ಶ್ರೀ ವೀರಣ್ಣನವರನ್ನೂ, ಗುಬ್ಬಿ ಶ್ರೀ ಚೆನ್ನಬಸವೇಶ್ವರಸ್ವಾಮಿ ನಾಟಕಮಂಡಲಿಯವರನ್ನೂ ಅನುಗ್ರಹಿಸಲಿ, ಅವರ ಪ್ರಯತ್ನಗಳು ಇತೋಪ್ಯತಿಶಯವಾಗಿ ಅಭಿವೃದ್ಧಿ ಹೊಂದಲಿ ಎಂದು ನಾವು ಹಾರೈಸುತ್ತೇವೆ.

॥ ಸತ್ಯಂ-ಶಿವಂ-ಸುಂದರಂ॥

ಅನುಬಂಧ ೨

ಸನ್ಮಾನ ಪತ್ರಗಳು

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಸಂಘದ

ಪ್ರೊಪ್ರೈಟರವರಾದ

ವರ್ಸ್‌ಟೈಲ್ ಕಮೆಡಿಯನ್ ವಿನೋದರತ್ನಾಕರಾದಿ ಬಿರುದಾಂಕಿತ

ಶ್ರೀಯುತ ಜಿ.ಹೆಚ್. ವೀರಣ್ಣನವರಿಗೆ

ಬೆಂಗಳೂರು ನಗರದ ವರ್ತಕ ಮಂಡಲಿಯವರು ನಿಮ್ಮ ನಾಟಕ ಸಂಘದ

ಸುವರ್ಣ ಮಹೋತ್ಸವದಲ್ಲಿ ಅರ್ಪಿಸಿದ ಅಭಿವಂದನ ಪತ್ರಿಕೆ.

ನಾಟಕ ಕಲಾ ನಿಪುಣರಾದ ವಿನೋದರತ್ನಾಕರ ವೀರಣ್ಣನವರೇ,

ಇಂದಿನ ಸುದಿನವು. ನಿಮ್ಮ ಪ್ರಿಯ ಸಂಘದ ಸ್ವರ್ಣಮಹೋತ್ಸವ ಮಹರ್ದಶೆಯ ಸುದಿನವು-ಕನ್ನಡಿಗರೆಲ್ಲರ ಹೃದಯಗಳನ್ನು ಆನಂದ ತರಂಗಗಳಿಂದುಬ್ಬಿಸುವ ಕೀರ್ತಿವಂತದಿನವು ಈ ನಿಮ್ಮ ಸಂಘದ ಐವತ್ತನೆಯ ವರ್ಷದ ಮಹಾದಿನವು. ಕರ್ನಾಟಕದಲ್ಲಿ ಇಂತಹ ಸಂಘವನ್ನು ತಮ್ಮ ಕಲಾ ಪ್ರೌಢಿಮೆಯಿಂದಲೂ, ಅಸಾಧಾರಣ ಕಾರ್ಯನಿರ್ವಾಹಕ ಶಕ್ತಿಯಿಂದಲೂ ನಡೆಸಿಕೊಂಡು ಬರುತ್ತಿರುವ ತಮಗೆ ನಮ್ಮಗಳ ಅಭಿವಂದನಗಳು. ಕರ್ಣಾಟಕ ಮಾತ್ರದಲ್ಲೇಕೆ? ಇಡೀ ಭಾರತದಲ್ಲಿ ಯಾವ ನಾಟಕ ಸಂಘದೊಡೆಯನು ತನ್ನ ಮಂಡಳಿಯ "ಸ್ವರ್ಣಮಹೋತ್ಸವ"ದ ವೈಭವ ಸಮಾರಂಭವನ್ನು ಯಶಸ್ವಿಯಾಗಿ ನೆರವೇರಿಸಿರುವನು? ಯಾವ ಸಂಘವು ಇಷ್ಟು ಕಾಲ ಬದುಕಿ, ಬಾಳಿ, ತನ್ನ ಕೀರ್ತಿ ಧ್ವಜವನ್ನು ಅಂಬರದಲ್ಲಿ ಮೆರೆಸಿಹುದು. ಈ ಭಾಗ್ಯವು, ನಿಮಗೂ ನಿಮ್ಮ ಸಂಘಕ್ಕೂ, ಇಡೀ ಭಾರತ ರಂಗ ಮಂಚದ ಇತಿಹಾಸದಲ್ಲಿ ಶಾಶ್ವತ ಗೌರವ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ ಸಂಘವನ್ನು ಅತ್ಯುತ್ತಮ ರೀತಿಯಿಂದಾಳುತ್ತಾ, ಕಲಾವಂತರಿಗೂ, ಕವಿಗಳಿಗೂ, ಇತರ ಕಾರ್ಯನಿರ್ವಾಹಕ ಶಕ್ತಿಯುಳ್ಳ ನಾನಾ ತೆರದ ಕುಶಲ ವಿದ್ಯೆಗಳನ್ನರಿತವರಿಗೂ ಆಶ್ರಯವೀಯುತ್ತಾ, ಮಿರುಗುತ್ತಿರುವ ನಿಮ್ಮನ್ನು ಈ ಮಹೋತ್ಸವದಲ್ಲಿ ಅಭಿನಂದಿಸಿ ಆನಂದಿಸುವಂತೆ ಅನುಗ್ರಹಿಸಿ ಆ ಸರ್ವೇಶ್ವರನು, ತಮಗೆ ಈ ಸಂಘದ "ಡೈಮಂಡ್ ಜೂಬಿಲಿ" ಮಹೋತ್ಸವವನ್ನು ಸಹ ನೆರವೇರಿಸುವ ಸುದಿನ ಮತ್ತು ಅದನ್ನೆರವೇರಿಸಲು, ಆಯುಸ್ಸು, ಆರೋಗ್ಯ, ಐಶ್ವರ್ಯಾದಿಗಳನ್ನು ಕೊಡಲೆಂದು ಪ್ರಾರ್ಥಿಸಿ, ನಮ್ಮನ್ನಾಳುವ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಸ್ವಾಮಿಗಳವರಿಂದ "ವರ್ಸಟೈಲ್ ಕಮೆಡಿಯನ್" ಎಂಬ ಪ್ರಖ್ಯಾತಿಯಾದ ಬಿರುದನ್ನು ಹೊಂದಿ ಮತ್ತು ರಾಜ ಮನೆತನದವರೆಲ್ಲರ ಮೆಚ್ಚುಗೆ ಸನ್ಮಾನವನ್ನೂ ಪಡೆದಿರುವ ತಮಗೆ, ಈ ದಿನ ನಮ್ಮ

ಮೆಚ್ಚಿಗೆ ಮತ್ತು ನಿಶ್ಚಲ ವಿಶ್ವಾಸದಿಂದ ಸುಂದರವಾದ ಒಂದು ತೆರೆಯನ್ನು ಜ್ಞಾಪಕಾರ್ಥವಾಗಿ

"ಕರ್ನಾಟಕ ನಾಟಕ ಕಂಠೀರವ"

ಎಂಬ ಬಿರುದನ್ನು ಈ ಸ್ವರ್ಣ ಪದಕದೊಡನೆ ಈ ಮಹೋತ್ಸವದಲ್ಲಿ ಅಧ್ಯಕ್ಷ ಸ್ಥಾನವನ್ನಲಂಕರಿಸಿರುವ ನಮ್ಮ ಸಂಸ್ಥಾನದ ಮಂತ್ರಿ ಶ್ರೇಷ್ಠರಾದ ಅಮೀನ ಉಲ್-ಮುಲ್ಕ್, ಸರ್. ಮಿರ್ಜಾ ಎಂ. ಇಸ್ಮಾಯಿಲ್ ಕೆ.ಟಿ., ಸಿ.ಐ.ಇ., ಒ.ಬಿ.ಇ., ರವರ ಸಮ್ಮುಖದಲ್ಲಿ ಅರ್ಪಿಸಿದ್ದೇವೆ. ಇದರಲ್ಲಿ ಕಲ್ಯಾಣಪುರ ನಿವಾಸಿಗಳಾದ ನಮ್ಮ ಪರಿಪೂರ್ಣ ಪ್ರೇಮವು ತುಂಬಿರುವುದೆಂದು ತಿಳಿದು, ನೀವು ಇದನ್ನು ಪರಿಗ್ರಹಿಸಬೇಕಾಗಿ ಕೋರುತ್ತೇವೆ.

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ ಸಂಘವು ಚಿರಕಾಲ ಬಾಳಲಿ! ಕನ್ನಡ ರಂಗ ಮಂಚವು ಜಗತ್ತಿನ ಯಾವುದೇ ದೇಶದ ಮುಂದರಿದ ರಂಗಮಂಚಕ್ಕೂ ಎರಡನೆಯದಲ್ಲವೆಂಬ ಯಶೋ ಕುಸುಮ ಮಾಲೆಯು ನಮ್ಮವರಿಗೆ ಲಭಿಸುವಂತೆ ಮಾಡುವ ಅಪಾರಶಕ್ತಿಯನ್ನು ಲೋಕೇಶ್ವರನು ನಿಮಗೆ ನೀಡಲಿ.

ಮ।। ಚಿರಕಾಲಂ ಪ್ರಭುಕೃಷ್ಣಭೂಪನಿಳೆಯಂ ಪಾಲಿಕ್ಕೆ ವಿಖ್ಯಾತಿವಿ ।
ಸ್ತರದಿಂ ಭವ್ಯಕಾಲ ವಿಲಾಸಿನಿ ಹಲಂನರ್ತಿಕ್ಕೆತಾನೀ ಮಹೀ ।।
ಸುರರಾಜ್ಯಾಂಗಣದಾವಗಂ ಸಿರಿಸದಾ ವರ್ಷಿಕ್ಕೆ ಸೌಭಾಗ್ಯಮಂ ।
ಪರಮಖ್ಯಾತಿಯನಾಂತು ವರ್ಧಿಕೆಲಸತ್ಕರ್ಣಾಟಕಂ ನಾಟಕಂ ।।

ಮಂಗಳಮಸ್ತು

ಬೆಂಗಳೂರು ಇತಿ

ತಾ।। ೩೧-೧೨-೧೯೩೪ **ಬೆಂಗಳೂರು ನಗರದ ವರ್ತಕ ಮಂಡಲಿ**

ಮೈಸೂರು ಶ್ರೀಮನ್ಮಹಾಜರವರ ಕೃಪಾಪೋಷಿತರಾದ

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಥಿಯೇಟ್ರಿಕಲ್ ಕಂಪೆನಿ (ರಿಜಿಸ್ಟರ್ಡ್)

ಮಾಲಿಕರಾದ

ವಿನೋದರತ್ನಾಕರ, ಕರ್ಣಾಟಕಾಂಧ್ರನಾಟಕ ಸಾರ್ವಭೌಮ, ನಾಟಕ ಚಿಂತಾರತ್ನ, ನಾಟಕ ಕಂಠೀರವ, ಮುಂತಾದನೇಕ ಬಿರುದಾಂಕಿತರಾದ ಶ್ರೀಮಾನ್ ಜಿ.ಹೆಚ್. ವೀರಣ್ಣ, ವರ್ಸ್‌ಟೈಲ್ ಕಮೆಡಿಯನ್‌ರವರ ಸನ್ನಿಧಾನಂಗಳಲ್ಲಿ

ಶ್ರೀ ಮನ್ಮಹೀಶೂರ ನಗರದ ವರ್ತಕ ಮಂಡಲಿಯವರು ಆದರಾತಿಶಯ ಮಹದಾನಂದಗಳಿಂದ ವಿಶ್ವಾಸಪೂರ್ವಕವಾಗಿ ಅರ್ಪಿಸಿದ ಅಭಿನಂದನ ಪತ್ರಿಕೆ

ಕರ್ನಾಟಕ ನಾಟಕ ಕಂಠೀರವ!

ಕರ್ನಾಟಕ ಪ್ರಾಂತ್ಯವು ಮೊದಲಿನಿಂದಲೂ ಕಲೆಯ ಉಗಮಸ್ಥಾನವೆಂಬುದು ಸರ್ವತ್ರ ವಿಖ್ಯಾತವಾಗಿರುವ ಅಂಶ. ನಮ್ಮ ಪುಣ್ಯಪ್ರಭಾವದಿಂದ ರತ್ನ ಸಿಂಹಾಸನಾಧೀಶ್ವರರೂ ಸ್ವಯಂ ಪಾಂಡಿತ್ಯವುಳ್ಳವರೂ, ವಿದ್ವತ್ಪಕ್ಷಪಾತಿಗಳೂ ಮಹಾಕಲಾಭಿಜ್ಞರೂ, ವಿದ್ವಜ್ಜನ ಸಂಸೇವಿತರೂ ಆದವರೇ ಆಗಿದ್ದಾರೆ. ಅಳಿದ ಮಹಾಸ್ವಾಮಿಯವರಾದ ಶ್ರೀಮನ್ ಮುಮ್ಮುಡಿ ಕೃಷ್ಣರಾಜ ಒಡೆಯರವರು, ಶ್ರೀ ಮಚ್ಛಾಮ ರಾಜೇಂದ್ರ ಒಡೆಯರವರು ಇವರುಗಳ ಕಲಾಪ್ರೋತ್ಸಾಹ-ಅದರಲ್ಲೂ ಕರ್ಣಾಟಕ ನಾಟಕ ಕಲೆಯ ಪ್ರೋತ್ಸಾಹದ ಹಿರಿಮೆಯನ್ನು ಕಂಡವರು ಇನ್ನೂ ಇದ್ದಾರೆ. ಆಳುವ ಮಹಾಸ್ವಾಮಿಯರು ಕರ್ಣಾಟಕದ ನಾಟಕ ಕಲೆಗೆ ತೋರುತ್ತಿರುವ ಪಕ್ಷಪಾತವನ್ನಂತೂ ತಾವೇ ಚೆನ್ನಾಗಿ ಬಲ್ಲಿರಿ. ಅವರು ನಿಮ್ಮ ನಟನಕಲಾ ವೈಖರಿಯನ್ನು ಕಂಡು ದಯಪಾಲಿಸಿರುವ "ವರ್ಸ್‌ಟೈಲ್ ಕಮೆಡಿಯನ್" ಎಂಬ ಬಿರುದೇ ಶ್ರೀಮನ್ಮಹಾರಾಜರವರ ಕಲಾಪ್ರೋತ್ಸಾಹವನ್ನು ಮೇಲೆ ಹಿಡಿದೆತ್ತಿ ತೋರಿಸಲು ಸಾಕಾಗಿದೆ. ತದೇಕಕಾಲದಲ್ಲಿಯೇ ನಾಟಕ ಕಲಾಭಾಗದಲ್ಲಿ ತಮಗಿರುವ ಅಪಾರ ಕೌಶಲವನ್ನೂ, ವೈವಿಧ್ಯ, ವೈಶಿಷ್ಟ್ಯ, ವೈಶಾಲ್ಯಗಳನ್ನು ಜಗತ್ತಿಗೆ ಸಾರುತ್ತಿದೆ.

ಕರ್ಣಾಟಕ ನಾಟಕ ಕಲೆಯ ಪೂರ್ವೇತಿಹಾಸವೇನೋ ಹಿರಿದೆಂಬುದು ನಿಜವಾದರೂ ಕಳೆದ ಹಲವು ವರ್ಷಗಳಿಂದೀಚೆಗೆ ಈ ಕಲೆಯು ಕ್ಷೀಣ ದೆಸೆಗೆ ಬರುತ್ತಿರುವ ಚಿಹ್ನೆಗಳು ತಲೆದೋರುತ್ತಿದ್ದವು. ಅಂತಹ ಸನ್ನಿವೇಶದಲ್ಲಿ ತಾವು ಮುಂದೆ ಬಂದು ಕರ್ಣಾಟಕ ನಾಟಕ ಕಲೆಗೆ ಆ ಅವನತಿಯುಂಟಾಗದಂತೆ ಕಾಪಾಡಿದಿರಿ. ಅಷ್ಟೇ ಅಲ್ಲ; ಕರ್ಣಾಟಕ ನಾಟಕ ಕಲೆಯ ಶ್ರೇಷ್ಠತೆಯ ಧ್ವಜವನ್ನು ಹಿಡಿದೆತ್ತಿ ನಿಲ್ಲಿಸಿದ್ದೀರಿ. ಅದಕ್ಕೊಂದು ಮಹತ್ವದ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದೀರಿ. ಕನ್ನಡಿಗರು ಹೆಮ್ಮೆ ಪಡುವ ಸೌಭಾಗ್ಯವನ್ನು ದಯಪಾಲಿಸಿದ್ದೀರಿ.

ಮತ್ತೊಂದು ವಿಚಾರ-ಇಡೀ ಕರ್ಣಾಟಕದಲ್ಲಿಯೇ ಏಕೆ? ಇಡೀ ಭಾರತದಲ್ಲಿಯೇ ತಾವು ಒಂದು ವೈಶಿಷ್ಟ್ಯ (Record)ವನ್ನು ತೋರಿದ್ದೀರಿ. ಕಳೆದ ಐವತ್ತು ನಾಲ್ಕು ವರ್ಷಗಳಿಂದಲೂ ಒಂದು ನಾಟಕ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದೀರಿ. ಅಂದರೆ ಎಲ್ಲೋ ಸ್ವಲ್ಪಕಾಲ ನಡೆದುಕೊಂಡು ಬಂದಿದ್ದ ಸಂಸ್ಥೆಯನ್ನು ತಮ್ಮ ವಶಕ್ಕೆ ವಹಿಸಿಕೊಂಡು ಮಹಾಯಶಸ್ವಿಯಾಗಿ ನಡೆಸುತ್ತಿದ್ದೀರಿ. ಈ ಸುಯೋಗವು ನಾಟಕ ಮಂಡಳಿಗಳನ್ನು ನಡೆಸುತ್ತಿರುವವರೆಲ್ಲರ ಪಾಲಿಗೂ ಬರಲಾರದು. ಹತ್ತಾರು ವರುಷಗಳಿಂದ ನೂರಾರು ಮಂದಿಯಿರುವ ನಟ-ನಟಿಯರ ವರ್ಗವನ್ನು ದರ್ಪದಿಂದ ಆಳುತ್ತಿದ್ದೀರಿ. ಕಲಾಸೇವೆಯ ಜತೆಗೆ ಈ ಕಲೆಯ ಉಪಕಸಬುಗಳನ್ನೂ ಪ್ರೋತ್ಸಾಹಿಸಿದ್ದೀರಿ.

ಇದುವರೆಗೂ ನಮ್ಮ ಸೀಮೆಯ ನಾಟಕ ಮಂಡಲಿಯವರು ಸಂಯುಕ್ತ ಕರ್ಣಾಟಕ ಪ್ರಾಂತ್ಯವನ್ನು ಸಹ ಪೂರ್ಣವಾಗಿ ಕಂಡಿರಲಿಲ್ಲ. ತಾವಾದರೋ ಆ ಲೋಪವನ್ನು ನಿವಾರಿಸಿ ಬರಿಯ ಅಖಂಡ ಕರ್ನಾಟಕವನ್ನೇ ಅಲ್ಲದೆ ಮರಾಠ ಪ್ರಾಂತ್ಯ, ಆಂಧ್ರಪ್ರಾಂತ್ಯಗಳಿಗೂ ಹೋಗಿ ನಾಟಕ ಪ್ರಪಂಚದಲ್ಲಿ ದಿಗ್ವಿಜಯ ಪಡೆದು ಕೀರ್ತಿಯನ್ನು ಗಳಿಸಿ ಕರ್ನಾಟಕದ ಕೇಂದ್ರವಾದ ರಾಜಧಾನಿಗೆ ಬಂದು ತಮ್ಮ ನಾಟಕಗಳಿಂದ ನಮ್ಮ ಪುರಜನರಿಗೆ ಆನಂದವನ್ನುಂಟುಮಾಡಿದ್ದೀರಿ.

ಇನ್ನು ತಾವು ಮಾಡಿರುವ ದಾನಕಾರ್ಯಗಳನ್ನು ಹೇಳುತ್ತಾ ಹೋದಲ್ಲಿ ಅದೊಂದು ಸಾಗರದಂತಿದೆ. ಲಕ್ಷಾಂತರ ರೂಪಾಯಿಗಳನ್ನು ಸಾವಿರಾರು ಸಂಸ್ಥೆಗಳಿಗೆ ದಾನಮಾಡುವ ಕೊಡುಗೈ ಎಷ್ಟು ಮಂದಿಗೆ ಇದ್ದೀತು?

ವಿನೋದ ರತ್ನಾಕರರೇ, ತಮ್ಮಿಂದ ಕರ್ಣಾಟಕ ಭಾಷೆಗೂ, ಕಲೆಗೂ, ಪ್ರಾಂತ್ಯಕ್ಕೂ ಉಂಟಾಗಿರುವ ಕೀರ್ತಿ ಅಮಿತವಾದುದು. ಮುಂದೆಯೂ ತಮ್ಮಿಂದ ನಿರಂತರವಾದ ಕಲಾಸೇವೆಯು ಲಭಿಸುವಂತೆ ಶ್ರೀಮಚ್ಚಾಮುಂಡಾಂಬೆಯು ತಮಗೆ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುವ.

ಮೈಸೂರು ರಾಜಧಾನಿ **ಮೈಸೂರು ನಗರದ ವರ್ತಕಮಂಡಲಿ**

ತಾ|| ೩೦-೧೦-೧೯೩೮

ಪ್ರಸಿದ್ಧ ಪತ್ರಿಕೆ

ಶ್ರೀ

ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹೀಶೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನ ನಿಖಿಲ ಕಲಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲ ಪ್ರಮುಖ ನಿಖಿಲ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರ ನರಪತಿ ಬಿರುದೆಂತೆಬರಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಲಾನಿಧಿಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡ ಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ರಾಜ ಕರ್ನಾಟಕ ಸಿಂಹಾಸನಾಧೀಶ್ವರ

ಶ್ರೀಮಜ್ಜಯ ಚಾಮರಾಜೇಂದ್ರ ಒಡೆಯರ್ ಬಹದೂರವರು ಶಾಲಿವಾಹನಶಕ ೧೮೬೩ನೆಯ ವೃಷನಾಮ ಸಂವತ್ಸರದ ಆಶ್ವಯುಜ ಶುದ್ಧ ಏಕಾದಶೀ ಬುಧವಾರದಲ್ಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ನಮ್ಮ ಅನುಗ್ರಹಕ್ಕೆ ಪಾತ್ರ ರಾಜ ಶ್ರೀಮಾನ್ ಗುಬ್ಬಿ ಹಂಪಣ್ಣನವರ ವೀರಣ್ಣನವರಿಗೆ

'ನಾಟಕರತ್ನಂ' ಎಂಬ ಬಿರುದನ್ನು ತಕ್ಕ ಮರ್ಯಾದೆಗಳೊಡನೆ ದಯಪಾಲಿಸಿರುತ್ತಾರೆ.

ಶ್ರೀ ಜಯಚಾಮರಾಜೇಂದ್ರ ಒಡೆಯರ್

ಶ್ರೀ ಗುರು ಕುಮಾರ

ಶ್ರೀಯುತ ಹಾಸ್ಯರತ್ನ

ವೀರಣ್ಣನವರು ಗುಬ್ಬಿ

ಮಾನ್ಯ ಅಣ್ಣನವರೇ, ನಿಮ್ಮ ಜನ್ಮವು ಬೆಡಗಿನ ಮೈಸೂರು ಸೀಮೆಯ ಗುಬ್ಬಿಯಲ್ಲಿ ಯೆನ್ನುವ ಮಾತು ಯಾರಿಗೂ ಅರಿಯದಿಲ್ಲ. ಆದರೆ ಗುಬ್ಬಿ ಚಿಕ್ಕದು, ಅದರ ಯೋಗ್ಯತೆ ದೊಡ್ಡದು. ನಿಮ್ಮಂಥ ಸಾಹಸಿಗಳಿಗೆ ಜನ್ಮಕೊಟ್ಟು ತನ್ನ ಯೋಗ್ಯತೆಯನ್ನು ಬೆಳೆಸಿಕೊಂಡಿದೆಯಂದು ಅಂಜಿಕೆ ಇಲ್ಲದೆ ಹೇಳುವೆವು.

ನಮ್ಮ ಕನ್ನಡನಾಡು ಒಡೆದ ಜಾಡಿನಂತೆ ಸಿಡಿದು ನಿಂತಿರುವಾಗ ದುಡಿಮೆಯ ಜೀವಿಗಳಾದ ನೀವು ಆ ಒಡಕಲವನ್ನು ಒಂದು ಗೂಡಿಸಲಿಕ್ಕೆ ಹಗಲಿರುಳು ದುಡಿಯುತ್ತಿರುವುದು ನಿಮ್ಮ ಆತ್ಮೀಯತೆಯನ್ನು ಎತ್ತಿ ತೋರಿಸುತ್ತದೆ. ಕನ್ನಡ ರಂಗಭೂಮಿಯನ್ನು ರಂಜನಗೊಳಿಸಿ ಪರಕೀಯ ನಾಟ್ಯ ಸಂಘಗಳು ಸಹ ನಿಮ್ಮ ಅನುಕರಣವನ್ನು ಮಾಡುವಂತೆ ಅಗಾಧವಾದ ಸಲಕರಣೆಗಳಿಂದ ನಮ್ಮ ಕನ್ನಡ ರಂಗಭೂಮಿಯ ಬೆಳಕನ್ನು ಪ್ರಪಂಚಕ್ಕೆಲ್ಲ ತೋರಿಸಿದ್ದೀರಿ.

ಪರಿಚಯವಿಲ್ಲದ ಯಾರನ್ನಾದರೂ ಪಂಚ ನಿಮಿಷಗಳಲ್ಲಿ ನಿಮ್ಮವರನ್ನಾಗಿ ಮಾಡಿಕೊಳ್ಳುವ ಕಲೆಯು ನಿಮ್ಮೊಡನೆಯೇ ಹುಟ್ಟಿ ಬಂದಿದೆಯೆಂದು ಅನಿಸುತ್ತದೆ. ಆದರೂ ನೀವು ನಾಟ್ಯಕಲೆಗಾಗಿ ಪಟ್ಟ ಕಷ್ಟವನ್ನು ಪಾಂಡವರು ಸಹ ಪಟ್ಟಿರಲಿಕ್ಕಿಲ್ಲವೆಂದು ನಿಮ್ಮ ಚರಿತ್ರೆಯಿಂದ ನಮಗೆ ಕಂಡುಬರುತ್ತದೆ. ಹತ್ತಿಗೆ ಹತ್ತು ಕುತ್ತು ಎನ್ನುವಂತೆ ಮೂರು ತಾಸಿನ ಒಂದು ನಾಟಕ ಪ್ರಯೋಗಕ್ಕೆ ಮೂವತ್ತಾರು ಕುತ್ತುಗಳು ಸುತ್ತುವುದು ಸಹಜವಿದೆ. ಇಂಥ ಕಷ್ಟ ಜೀವನದ ಕಲೆಯಲ್ಲಿ ನೀವು ಬೆಳೆದು ಬೆಲೆಯುಳ್ಳ ರತ್ನವಾಗಿ ಎಲ್ಲರ ಮನಗಳನ್ನು ಬೆಳಗಹತ್ತಿರುವಿರಿ-ತಾಪತ್ರಯಗಳನ್ನು ನೀಗಿ ನಾಡಿನಲ್ಲಿಯೇ ಹಿರಿಯ ಸಂಘವೆಂದು ಬೆರಗು ಪಟ್ಟು ನೋಡುವಂತೆ ಮಾಡಿರುವದಲ್ಲದೆ ಸಿನೇಮಾ ಪ್ರಪಂಚಕ್ಕೆ ನಿಮ್ಮ ಸ್ವಾಭಾವಿಕ ಕಲೆಯ ಸೇವೆಯನ್ನು ಸುಭದ್ರಾ, ಮಲ್ಲಮ್ಮ ಗುಣಸಾಗರಿಯಥ ಪವಿತ್ರ ಚರಿತ್ರೆಗಳಿಂದ ಸಲ್ಲಿಸಿ ಕೀರ್ತಿಕಾಯರಾಗಿರುವಿರಿ.

ಸರ್ವತೋಮುಖದಿಂದ ನೋಡಿದರೆ ಈ ವ್ಯವಸಾಯದಲ್ಲಿ ನಷ್ಟಹೊಂದಿ ಕಷ್ಟಪಟ್ಟವರ ಸಂಖ್ಯೆಯೇ ಹೆಚ್ಚಾಗಿರುವಾಗ ನೀವು ನಿಮ್ಮ ಇಷ್ಟದಂತೆ ಸಂಘವನ್ನು ಬೆಳೆಸಿ ಉಳಿಸಿ ಅಂತಿಮ ಧ್ಯೇಯವನ್ನು ಮೆಟ್ಟಿ, ಮುಟ್ಟಿ ನಿಂತದ್ದು ಕನ್ನಡ ನಾಟ್ಯ ಪ್ರಪಂಚಕ್ಕೆ ಆನಂದ ಸಂಗತಿಯಾಗಿದೆ.

ಮನದಿಂದಲೂ ಹಿರಿಯರು, ತನುವಿನಿಂದಲೂ ಹಿರಿಯರು, ಧನದಿಂದಲೂ ಹಿರಿಯರೆಂಬ ನಿದರ್ಶನಕ್ಕೆ ನಿಮ್ಮ ಅನಂತ ಕರ್ತವ್ಯಗಳು ಕಣ್ಮುಂದೆ ಕುಣಿಯುತ್ತವೆ.

ದರ್ಪಕ್ಕೆ ನಿಮ್ಮಲ್ಲಿ ಸ್ಥಾನವಿಲ್ಲದ್ದರಿಂದ ನಮ್ಮ ಚಿಕ್ಕ ಸಂಸ್ಥೆಚಿಕ್ಕ ಊರಿಗೆ ಆದರದಿಂದ ಆಗಮಿಸಿ ನಮಗೆಲ್ಲ ನಿಮ್ಮ ಅನಂತಕಾಲದ ಅನುಭವವನ್ನು ತಿಳಿಸಿ ಆನಂದದಲ್ಲಿ ಮುಳುಗಿಸಿದಿರಿ. ಶ್ರೀ ನವಿಲುಗುಂದದ ಶ್ರೀಗಳವರ ಅಪ್ಪಣೆಯನ್ನು ಶಿರಸಾವಹಿಸಿ ನಿಮ್ಮ ಹಾಸ್ಯಕಲೆಯ ರತ್ನದ ಪ್ರಭೆಯನ್ನು ನಮ್ಮೆಲ್ಲರ ಮೇಲೆ ಚೆಲ್ಲಿ ನಮ್ಮ ಉತ್ಸವಕ್ಕೆ ಅತ್ಯಂತ ಕಳೆಯನ್ನು ತಂದುದಕ್ಕಾಗಿ ದಕ್ಷಿಣ ಉತ್ತರ ಕನ್ನಡನಾಡು ಒಂದುಗೂಡುವ ಈ ಸುವರ್ಣ ಸಂಧಿ ಕಾಲದಲ್ಲಿ ನಮ್ಮ ಕನ್ನಡ ನಾಟ್ಯ ಸಂಘಗಳು ಮುಂಚಿತವಾಗಿ ಒಂದುಗೂಡಿ ದುಡಿಯುವ ಹಂಬಲವನ್ನು ತಾವು ಸಾಧಿಸಿಕೊಟ್ಟುದ್ದಕ್ಕಾಗಿ ತಮ್ಮನ್ನು ನಾಟ್ಯರಂಗದ ಪಿತಾಮಹರೆಂಬ ಗೌರವ ನಾಮದೊಂದಿಗೆ ಆದರಿಸಿ ಈ ಮಾನಪತ್ರವನ್ನು ಶ್ರೀ ಚಿತ್ತರಗಿ ಕುಮಾರವಿಜಯ ನಾಟ್ಯಸಂಘವು ತನ್ನ ಹನ್ನೆರಡನೆಯ ವರ್ಷದ ಉತ್ಸವ ಸಮಾರಂಭದ ಪರ್ವಕಾಲದಲ್ಲಿ ಉತ್ಸವ ಸಮಿತಿಯೊಡನೆ ಆದರದಿಂದ ಅರ್ಪಿಸುತ್ತದೆ.

ಉತ್ಸವ ಸಮಿತಿ,

ಕಮತಗಿ **ವೇ. ಗಂಗಾಧರ ಶಾಸ್ತ್ರಿಗಳು ಚಿತ್ತರಗಿ**

ತಾ|| ೧೩-೨-೧೯೫೫

सत्यमेव जयते

श्री गुब्बी वीरण्णा
१९५५ मे
प्रमुख अभीनेत हुए है जीसके [illegible] मे
यह सनद उन्हे दी जाती है ।

राजेन्द्र प्रसाद

राष्ट्रपती — भारत राष्ट्रपती

२९ मार्च १९५५ — भारत गणराज्य

|| ಓಂ ||

ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘದ ಯಜಮಾನರು, ಪ್ರಸಿದ್ಧ ಚಲನಚಿತ್ರ ನಿರ್ಮಾತೃಗಳೂ ಮತ್ತು ಮೈಸೂರು ವಿಧಾನ ಪರಿಷತ್ತಿನ ಸದಸ್ಯರೂ, ರಾಷ್ಟ್ರ ಪುರಸ್ಕೃತರೂ ಆದ ನಾಟಕರತ್ನ ವಿನೋದರತ್ನಾಕರ ಶ್ರೀ ಜಿ.ಹೆಚ್. ವೀರಣ್ಣನವರಿಗೆ ವೀರಶೈವ ತರುಣ ಸಂಘದವರು ಶ್ರೀಮನ್ಮಥನಾಮ ಸಂವತ್ಸರದ ಶ್ರೀ ಬಸವೇಶ್ವರ ಜಯಂತೀ ಮಹೋತ್ಸವ ಸಮಾರಂಭದಲ್ಲಿ ಸಂಸ್ಥಾನದ ನಾಟಕ ನೃತ್ಯ ಸಂಗೀತ ಕಲಾಪರಿಷತ್ತಿನ ಅಧ್ಯಕ್ಷರಾದ

ಶ್ರೀ ಬಿ.ಎಸ್. ಪುಟ್ಟಸ್ವಾಮಿ, ಬಿ.ಎ.ಬಿ.ಎಲ್. ಇವರ ಘನ ಅಧ್ಯಕ್ಷತೆಯಲ್ಲಿ ಸಮರ್ಪಿಸಿದ ಅಭಿನಂದನಾ ಪತ್ರಿಕೆ

ನಾಟಕ ಶಿರೋಮಣಿಗಳೇ:

ಮಾನವ, ಸುಖಸಂತೋಷಾಭಿಲಾಷಿ! ಆತ್ಮ ವಿಕಾಸವೇ ಸುಖ. ಮನೋವಿಲಾಸವೇ ಸಂತೋಷ. ಆತ್ಮವಿಕಾಸ ಮತ್ತು ಮನೋಲ್ಲಾಸಗಳ ಸಿದ್ಧಿಗೆ ಕಲೆಯೇ ಸಾಧನ. ಕಲೆ ಅವರ್ಣನೀಯ. ಅದು ಸರ್ವಾಂತರ್ಯಾಮಿಯಾದ ಸರ್ವೇಶ್ವರನಂತೆ ಸರ್ವವ್ಯಾಪಿ ಮತ್ತು ಸರ್ವತೋಮುಖವಾದದು. ಜೀವನವೇ ಒಂದು ಕಲೆ. ವಿಶ್ವೇಶ್ವರನ ಸೃಷ್ಟಿಯೇ ಒಂದು ಕಲೆ ಅದರಲ್ಲಿ ನಾಟಕವು ವಿಶಿಷ್ಟವಾದ ಕಲೆ. ಭಿನ್ನರುಚಿಯ ಜನತೆಗೆ ಪೂರ್ಣಾನಂದವನ್ನು ಒದಗಿಸಿ ಬಲವು ಮೂಡಿಸುವ ಶಕ್ತಿ ನಾಟಕ ಕಲೆಯಲ್ಲಿರುತ್ತದೆ. ಪ್ರಾಜ್ಞರು ಪರರನ್ನು ಸಂತೋಷಪಡಿಸುವುದೇ ಧರ್ಮವೆನ್ನುವರು. ನಾಟಕವು ಪ್ರಾಜ್ಞರಂತೆ ಪರರ ಆನಂದದಾಯಕ ಸಾಧನ. ಈ ಸಾಧನ ಸಂಪತ್ತಿನ ಆಜೀವ ಉಪಾಸಕರಾಗಿ ಕನ್ನಡ ರಂಗಭೂಮಿ ಕೀರ್ತಿಶಿಖರಿಗೆ ಹೊಂಗಳಸವಾಗಿ ಕನ್ನಡ ಕಲಾಭಿಜ್ಞರ ಕಣ್ಮಣಿಯಾಗಿ ಕಂಗೊಳಿಸುತ್ತಾ ರಾಷ್ಟ್ರಾಧ್ಯಕ್ಷರಿಂದ ಪುರಸ್ಕೃತರಾದ ತಮ್ಮನ್ನು ಮೈಸೂರು ನಗರದ ವೀರಶೈವ ಸಂಘದ ಪರವಾಗಿ ಸ್ವಾಗತಿಸಿ ಅಭಿನಂದಿಸಲು ನಮಗೆ ಅಪಾರ ಸಂತೋಷವಾಗಿದೆ. ಈ ರಾಷ್ಟ್ರಗೌರವ ತಮಗೆ ದೊರೆತಿರುವುದು ಕೇವಲ ವೀರಶೈವ ಸಮಾಜಕ್ಕಷ್ಟೇ ಅಲ್ಲ, ಇಡೀ ಕನ್ನಡದ ರಸಿಕವೃಂದಕ್ಕೆ ಅಮರತೆಯನ್ನೊದಗಿಸಿದೆಯೆನ್ನಬಹುದು. ಈ ರಾಷ್ಟ್ರ ಸನ್ಮಾನದ ಸ್ಮರಣೆಯ ಭಾಗ್ಯ ನಮಗೆ ದೊರೆತದ್ದು ನಿಮ್ಮ ಉದಾರತೆಯ ಸಹೃದಯದಿಂದೆಂಬುದನ್ನು ಮರೆಯಲಾಗುವುದಿಲ್ಲ, ಆಜೀವಕಲೋಪಾಸಕರೇ!

ಅಜೀವಕಲೋಪಾಸಕರೇ! ಕೇವಲ ೬ ವರ್ಷದ ಶೈಶವದಲ್ಲಿ ದಿವಂಗತ ಶ್ರೀ ಚಂದಣ್ಣನವರಿಂದ ಸ್ಥಾಪಿಸಲ್ಪಟ್ಟು ಘನಹೊಂದಿದ ಪ್ರಭುಗಳಾದ ಶ್ರೀ ಚಾಮರಾಜೇಂದ್ರ ಒಡೆಯರಿಂದ ಪರಿಪೋಷಿತವಾದ ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕಮಂಡಳಿಯನ್ನು ಪ್ರವೇಶಿಸಿ ಚಂದಣ್ಣನವರ ಆಶೀರ್ವಾದದಿಂದ ಬಿದಿಗೆಯ ಚಂದ್ರನಂತೆ ಬೆಳೆದು ನಟಸಮುದಾಯದಲ್ಲಿ ಪೂರ್ಣ ಕೀರ್ತಿಗಳಿಸಿದಿರಿ. ವಾಸ್ತವಿಕವಾಗಿ ಆಜನ್ಮ ಸಂಸ್ಕಾರವಾಗಿ

ಪ್ರಚೋದನಗೊಂಡ ಹಾಸ್ಯರಸ ಪ್ರಸರಣ ಕಲೆಯು ತಮ್ಮ ಹೃದಯದಿಂದ ಹೊರಹೊಮ್ಮಿ ಪ್ರೇಕ್ಷಕರ ಮುಖದಮೇಲೆ ಲಾಸ್ಯವಾಡಿತು. ಕಲಾಭಿಮಾನಿಗಳ ಹೃದಯವನ್ನು ಸೂರೆಗೊಂಡಿತು. ಹಾಸ್ಯರಸ ಚಕ್ರವರ್ತಿಯೆನಿಸಿತು. ಪ್ರಾಜ್ಞರಿಂದ ಹಿಡಿದು ಪಾಮರರವರೆಗೆ ಸರ್ವರಿಂದಲೂ ಮೆಚ್ಚಿಗೆ ಪಡೆದು "ವಿನೋದರತ್ನಾಕರ" ಎಂಬ ಬಿರುದನ್ನು ಪಡೆದಿರುವಿರಿ. ನಾಟಕ ಮಂಡಳಿಯ ಆಡಳಿತ ನಿರ್ವಹಣೆಯಲ್ಲಿ ದಕ್ಷ ಆಡಳಿತಗಾರರೆನಿಸಿ ಕಾಲಾನಂತರ ಶ್ರೀ ಚನ್ನಬಸವೇಶ್ವರ ನಾಟಕ ಮಂಡಳಿಯ ಮಾಲೀಕರಾಗಿ ನಾಟಕ ಸಂಸ್ಥೆಯನ್ನು ಬೆಳೆಸಿರುವಿರಿ. ಅರವತ್ತು ವರ್ಷಗಳಿಗಿಂತಲೂ ಹೆಚ್ಚುಕಾಲ ಬಾಳಿ ಸ್ವರ್ಣೋತ್ಸವ ವಜ್ರೋತ್ಸವಗಳನ್ನು ನೆರವೇರಿಸಿಕೊಂಡು ನಾಟಕ ಸಂಸ್ಥೆ ಭಾರತದಲ್ಲಿ ಮತ್ತೊಂದಿಲ್ಲವೆಂದರೆ ಕನ್ನಡಿಗರು ನಿಜವಾಗಿಯೂ ಹೆಮ್ಮೆಪಡುವ ವಿಷಯವಾಗಿದೆ. ಇದಕ್ಕೆಲ್ಲಾ ನಿಮ್ಮಲ್ಲಿರುವ ಜನಾದರಣೀಯವಾದ ಸರ್ವಜನ ಪ್ರೇಮ, ಕಲಾವಿದರಲ್ಲಿರುವ ಅಭಿಮಾನ ಕಲೆಯಲ್ಲಿ ನಿಮಗಿರುವ ಶ್ರದ್ಧಾ ಭಕ್ತಿಗಳೇ ಕಾರಣವೆಂದರೆ ಉತ್ಪ್ರೇಕ್ಷೆಯಲ್ಲ. ಕಲಾಭಿಮಾನಿಗಳಿಗೆ ಸೂಕ್ತ ಮನೋಲ್ಲಾಸವನ್ನು, ಕಲಾವಿದರಿಗೆ ಸೂಕ್ತ ಜೀವನ ಸೌಲಭ್ಯವನ್ನು ಒದಗಿಸಿ ರಸಿಕ ಜನಮನರಂಜಕರಾಗಿ ಬೆಳಗಿರುವಿರಿ.

ಹಾಸ್ಯರಸ ರತ್ನಾಕರರೇ!

ಶ್ರೀ ಚನ್ನಬಸವೇಶ್ವರ ನಾಟಕ ಸಂಸ್ಥೆಯ ಮುಖಾಂತರವಾಗಿ ಕನ್ನಡ ರಂಗಭೂಮಿಯ ಹಿರಿಮೆಯನ್ನು ಹೆಚ್ಚಿಸಿರುವಿರಿ. ಸುಪ್ರಸಿದ್ಧ ಪುರಾಣ ಕಥೆಗಳನ್ನು ಅಭಿನಯಿಸಿ ಕಲೆಯ ಕನ್ನಡಿ ಹಿಡಿದು ಪ್ರೇಕ್ಷಕರ ಹೃದಯದಲ್ಲಿರುವ ಆಧ್ಯಾತ್ಮ ದರ್ಶನ ಮಾಡಿಸಿದಿರಿ. ಚಾರಿತ್ರಿಕ ನಾಟಕಗಳನ್ನು ಪ್ರದರ್ಶಿಸಿ ರಾಷ್ಟ್ರಪ್ರೇಮ ಪ್ರಚೋದನ ಗೊಳಿಸಿರುವಿರಿ. ಸಾಮಾಜಿಕ ನಾಟಕಗಳನ್ನು ರಂಗಭೂಮಿಗೆ ತಂದು ಜನಜೀವನದಲ್ಲಿ ನಾಗರೀಕತೆಯ ನವೋದಯ ವನ್ನುಂಟುಮಾಡಿರುವಿರಿ. ಹಿಂದೆ ಲಕ್ಷಾಂತರ ರೂ. ವೆಚ್ಚ ಮಾಡಿ ಕುರುಕ್ಷೇತ್ರ ನಾಟಕವನ್ನು ರಂಗಭೂಮಿಗೆ ತಂದು "ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂಬ ಶ್ರೀಕೃಷ್ಣಸಂದೇಶವನ್ನು ಭಾರತದಲ್ಲೆಲ್ಲಾ ಸಾರಿ ದಿಗ್ವಿಜಯ ಪಡೆದಂತೆ "ದಶಾವತಾರ" ನಾಟಕವನ್ನು ಜೂನ್ ಮಾಹೆಯಲ್ಲಿ ಶ್ರೀಮನ್ ಮಹಾರಾಜರವರ ನೇತೃತ್ವದಲ್ಲಿ ಪ್ರಾರಂಭಿಸಿ ಮತ್ತೆ ಪರಮಾತ್ಮನ ವಿಶ್ವರೂಪದರ್ಶನ ಮಾಡಲಿರುವಿರೆಂದು ಕೇಳಿ ಸಂತೋಷಿಸುತ್ತೇವೆ. ಈ ನಾಟಕವು ವಿಖ್ಯಾತವಾಗಲೆಂದು ಹಾರೈಸುತ್ತೇವೆ. ಪೂರ್ವಜನ್ಮ ಸಂಸ್ಕಾರದಿಂದ ಕಲೆಯು ಅಳವಟ್ಟಿದ್ದರೂ ಅವಕಾಶವಿಲ್ಲದೆ ಮೂಲೆಯಲ್ಲಿ ಅಡಗಿರುವ ಅನಂತ ವ್ಯಕ್ತಿಗಳನ್ನು ಬೆಳಕಿಗೆ ತಂದು ಅವರಲ್ಲಿರುವ ಕಲಾವೃಕ್ಷವನ್ನು ಬೆಳೆಸಿ ಕಲಾವೃಂದಕ್ಕೆ ಫಲನೀಡುವಂತೆ ಮಾಡಿರುವ ನಿಮ್ಮ ಕೀರ್ತಿ ಚಿರವಾದುದು. ದೇಶದ ಆಗುಹೋಗುಗಳ ವಿಷಮ ಪರಿಸ್ಥಿತಿಗಳ ಧಾಳಿಯಲ್ಲಿಯೂ ತಮ್ಮ ಕಲಾಕ್ಷೇತ್ರದ ಕೀರ್ತಿಗೆ ಕುಂದುತಾರದಂತೆ ಕಲಾದೀವಿಗೆಯು ನಂದದಂತೆ ಸತತವಾಗಿ ನಡೆಸಿಕೊಂಡು ಬಂದ ನಿಮ್ಮ ಸಾಮರ್ಥ್ಯ ಮತ್ತು ಸುದೃಢಸಂಕಲ್ಪ ಇವು ಚಿರಸ್ಮರಣೀಯವೂ ಸರ್ವಜೀವನಾದರ್ಶವೂ ಆಗಿರುತ್ತವೆ. ನಿಮ್ಮನ್ನು ಬೆಳಸಿ

ಬೆಳಗಿಸಿದ ಕನ್ನಡದ ಮಹಾಮಾತೆ ಧನ್ಯಳು, ವಿಶ್ವಮಾನ್ಯಳು.

ಉದಾರ ಹೃದಯರೆ!

ಕನ್ನಡ ಕಲಾಕ್ಷೇತ್ರದಲ್ಲಿ ಕೊರತೆಯಾಗಿದ್ದ ಚಿತ್ರೋದ್ಯಮವನ್ನು ಕೈಗೊಂಡು ಜೀವನ ನಾಟಕ, ಸುಭದ್ರ, ಮಲ್ಲಮ್ಮ, ಗುಣಸಾಗರಿ, ಬೇಡರಕಣ್ಣಪ್ಪ ಮುಂತಾದ ಚಿತ್ರಗಳನ್ನು ತಯಾರಿಸಿ ಚಿತ್ರರಂಗದಲ್ಲಿಯೂ ಸಮರ್ಥ ಕಲಾವಿದರೆನಿಸಿರುವಿರಿ. ನಿಮ್ಮ ಕಲಾ ಸಂರಕ್ಷಣ ಶಕ್ತಿ ಮತ್ತು ನಿಮ್ಮಲ್ಲಿರುವ ಕಲಾಪ್ರತಿಭೆಯನ್ನು ಮನಸಾರೆ ಮೆಚ್ಚಿ ಮೈಸೂರಿನ ಮಹಾ ಪ್ರಭುಗಳೂ ಭವಿಷ್ಯ ಕರ್ಣಾಟಕದ ರತ್ನ ಸಿಂಹಾಸನಾಧೀಶ್ವರರೂ ಆದ ಶ್ರೀ ಜಯ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು "ನಾಟಕರತ್ನ" ಎಂಬ ಬಿರುದನ್ನು ದಯಪಾಲಿಸಿ ಸನ್ಮಾನಿಸಿದರು. ಶೈಶವದಿಂದಲೂ ಕಲಾಮಯ ಜೀವಿಗಳಾಗಿ ಅನೇಕಾನೇಕ ವಿದ್ವನ್ಮಣಿಗಳಿಂದಲೂ ದೇಶದ ನಾಯಕರಿಂದಲೂ ಮಾನಸನ್ಮಾನಗಳನ್ನು ಪಡೆದು "ನಾಟಕಮಣಿ" "ನಾಟಕ ಕಲಾ ನಿಪುಣ" ಎಂದೂ ಶ್ರೀ ಮನ್ನಾಲ್ವಡಿ ಕೃಷ್ಣರಾಜ ಒಡೆಯರವರಿಂದ "ವರ್ಸ್‌ಟೈಲ್ ಕಮೆಡಿಯನ್" ಎಂಬ ಬಿರುದನ್ನು ಪಡೆದು ಪ್ರಖ್ಯಾತರಾಗಿರುವಿರಿ. ನಿಮ್ಮ ಈ ಎಲ್ಲಾ ಸೇವೆಗಿಂತಲೂ ಮಿಗಿಲಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಅಪಾರ ಸೇವೆಯೆಸಗಿರುವಿರಿ. ನಾಟಕ ಸಂಸ್ಥೆಯ ಮುಖಾಂತರ ವಿವಿಧ ಧರ್ಮಕಾರ್ಯಗಳಿಗೆ ೫ ಲಕ್ಷ ರೂ.ಗಳಿಗಿಂತಲೂ ಹೆಚ್ಚಿನ ಸಹಾಯ ನೀಡಿರುವ ತಮ್ಮನ್ನು ಇಡೀ ಕನ್ನಡಿಗರ ಪರವಾಗಿ ಅಭಿನಂದಿಸಲು ನಮಗೆ ಅಪಾರವಾದ ಆನಂದವಾಗುತ್ತದೆ.

ಶಿವಭಕ್ತ ಶೀಲರೆ!

ಜ್ಞಾನಯೋಗಿಗಳೆನಿಸಿ ವಿಖ್ಯಾತರಾದ ಶ್ರೀಗುರು ಚನ್ನಬಸವಣ್ಣನವರ ಸುಕ್ಷೇತ್ರವೂ ಮಲ್ಲಣಾರ್ಯ ಮಹಾಕವಿಯ ಜ್ಞಾನ ಕ್ಷೇತ್ರವೂ ಆದ ಗುಬ್ಬಿಯಲ್ಲಿ ಪ್ರಜ್ವಲಿಸಿ ಕರ್ಣಾಟಕ, ಆಂಧ್ರ, ತಮಿಳು, ಮಹಾರಾಷ್ಟ್ರ ಮುಂತಾದ ಕಡೆಗಳಲ್ಲೆಲ್ಲಾ ಪ್ರಕಾಶಿಸಿದ ತಮ್ಮನ್ನು ಮೈಸೂರಿನ ಘನ ಸರ್ಕಾರದವರು ವಿಧಾನ ಪರಿಷತ್ತಿಗೆ ಸದಸ್ಯರಾಗಿ ನಾಮಕರಣಮಾಡಿ ಕಲೆಗೆ ಉತ್ತಮ ಸ್ಥಾನ ದೊರಕಿಸಿಕೊಟ್ಟರು. ಹಾಗೆಯೇ ಭಾರತದ ರಾಷ್ಟ್ರಪತಿಗಳು ಮೊನ್ನೆತಾನೆ ರಾಷ್ಟ್ರಸನ್ಮಾನವನ್ನಿತ್ತು ಪುರಸ್ಕರಿಸಿರುವುದು ಕನ್ನಡಿಗರೆಲ್ಲರ ಸೌಭಾಗ್ಯ. ಈ ಭಾಗ್ಯಸ್ಮರಣೆ ನಮ್ಮ ಸಂಘಕ್ಕೆ ದೊರೆತುದು ಮಹಾಭಾಗ್ಯ.

ನಮ್ಮ ಸಂಘವು ೯ ವರ್ಷಗಳ ಹಿಂದೆ ಪ್ರಸಿದ್ಧ ವಿದ್ವನ್ಮಣಿಗಳೂ ತಪೋಧನರೂ ಆದ ಕೈ|| ಶ್ರೀ ಗೌರಶಂಕರ ಮಹಾಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟು ಉದಾರಿಗಳಾದ ಡಾ|| ಅಣ್ಣಾಜಪ್ಪನವರ ಅಧ್ಯಕ್ಷತೆಯಲ್ಲಿ ಬೆಳೆದು ಪ್ರತಿವರ್ಷವೂ ಭಗವಾನ್ ಬಸವಣ್ಣನವರ ಜಯಂತೀ ಮಹೋತ್ಸವವನ್ನು ಮತ್ತು ಇತರ ಸಮಾಜಾಭ್ಯುದಯ ಸಮಾರಂಭಗಳನ್ನು ವಿಜೃಂಭಣೆಯಿಂದ ನೆರವೇರಿಸುತ್ತಾ ಬಂದಿವೆ. ಈ ವರ್ಷ ನಿಮ್ಮ ಸಂಸ್ಥೆಯಲ್ಲಿ ೨೭ ವರ್ಷಗಳ ಕಾಲ ಸೇವೆ ಸಲ್ಲಿಸಿ ನಿಮ್ಮ ಪ್ರೀತಿ ಗೌರವಗಳಿಗೆ ಪಾತ್ರರಾಗಿ ಶ್ರೀಮನ್ಮಹಾರಾಜರಿಂದ ಸನ್ಮಾನಿತರಾಗಿ ಮೈಸೂರು ವಿಧಾನ ಪರಿಷತ್ತಿನ ಸದಸ್ಯರಾದ

ನಾಟ್ಯಕಲಾ ವಿಶಾರದ ಶ್ರೀ ಎಂ.ಸಿ. ಮಹಾದೇವಸ್ವಾಮಿಯವರು ಅಧ್ಯಕ್ಷರಾಗಿ ಸಂಘವು ಯಶಸ್ವಿಯಾಗಿ ಕೆಲಸಮಾಡಲು ಶ್ರಮಿಸುತ್ತಿದ್ದಾರೆ. ಭಕ್ತಿಯುಗದ ಕಾರಣ ಪುರುಷ ಶ್ರೀ ಬಸವಣ್ಣನವರ ಪುಣ್ಯನಾಮ ಸ್ಮರಣೆಯ ಈ ಶುಭದಿನದಲ್ಲಿ ತಮ್ಮನ್ನು ಸಂಘದವರ ಪರವಾಗಿ ಸ್ವಾಗತಿಸಿ ಅಭಿನಂದಿಸಲು ಅಪಾರ ಆನಂದವಾಗುತ್ತದೆ. ಈ ಸಮಯದಲ್ಲಿ ಸಂಗೀತ ನಾಟಕ ನೃತ್ಯ ಕಲಾ ಪರಿಷತ್ತಿನ ಅಧ್ಯಕ್ಷರೂ ಮತ್ತು ಜನಪ್ರಿಯ ವ್ಯಕ್ತಿಗಳೂ ಆದ ಶ್ರೀ ಬಿ.ಎಸ್. ಪುಟ್ಟಸ್ವಾಮಿಯವರ ಈ ಸಮಾರಂಭದ ಅಧ್ಯಕ್ಷತೆ ಮತ್ತು ಉಜ್ವಲ ಸಾಹಿತಿಗಳೂ ಇತಿಹಾಸ ಶಾಸ್ತ್ರಪರಿಣತರೂ ಮತ್ತು ಸಂಸ್ಕೃತಿ ಪ್ರಸಾರದ ಪ್ರಧಾನಾಧಿಕಾರಿಗಳೂ ಆದ ರಾಜಸೇವಾಸಕ್ತ ಶ್ರೀ ಸಿ. ಕೆ. ವೆಂಕಟರಾಮಯ್ಯನವರ ನೇತೃತ್ವದಲ್ಲಿ ಈ ಅಭಿನಂದನೆ ಸಲ್ಲಿಸುವುದು ನಮ್ಮ ಪುಣ್ಯೋದಯವೆನಿಸಿದೆ. ಪರಮಾತ್ಮನು ತಮಗೂ ತಮ್ಮ ಕಲಾಕ್ಷೇತ್ರದ ಬಂಧುಮಿತ್ರ ವರ್ಗಕ್ಕೂ ಸನ್ಮಂಗಳವನ್ನುಂಟುಮಾಡಿ ತಮ್ಮ ಸೇವೆಯು ಅನಂತಕಾಲದವರೆಗೆ ಸಲ್ಲುವಂತೆ ಸರ್ವಶಕ್ತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸಿ ನಮ್ಮ ಸಂಘದ ಪರವಾಗಿ ಈ ಅಭಿನಂದನೆಗಳನ್ನು ಅರ್ಪಿಸುತ್ತೇವೆ.

॥ಚಿರಂ ಅಭ್ಯುದಯತಾಂ ಕಲಾತ್ಮಜೇ॥

ತಾ॥ ೧-೪-೧೯೫೫

ಮೈಸೂರು

ತಮ್ಮ ವಿಶ್ವಾಸಿಗಳಾದ

ವೀರಶೈವ ಸಂಘದ ಅಧ್ಯಕ್ಷರು ಮತ್ತು ಸದಸ್ಯರು

ಜೈ ನಟರಾಜ

ವಿನೋದರತ್ನಾಕರ ನಾಟಕರತ್ನ

ಶ್ರೀಮಾನ್ ಜಿ.ಹೆಚ್. ವೀರಣ್ಣನವರು, ಎಂ.ಎಲ್.ಸಿ. ಇವರಿಗೆ ಬಳ್ಳಾರಿಯ ಕಲಾಪ್ರೇಮಿಗಳು ಸಮರ್ಪಿಸಿದ ಸನ್ಮಾನಪತ್ರ

ಕಲಾತಪಸ್ವಿಯೆ!

೧೮೮೪ರಲ್ಲಿ ಸ್ಥಾಪಿತವಾಗಿ ೧೯೪೮ರಲ್ಲಿ ಅತ್ಯಂತ ವಿಜೃಂಭಣೆಯಿಂದ ವಜ್ರಮಹೋತ್ಸವವನ್ನು ನೆರವೇರಿಸಿಕೊಂಡ ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ ಸಂಸ್ಥೆಯ ಮಾಲಿಕರಾಗಿ ತಾವು ಮಾಡಿರುವ ರಂಗಭೂಮಿಯ ಸೇವೆ ಅಮೋಘವಾದದ್ದು. ನಾಟಕದಿಂದ ನಿಮ್ಮ ಜೀವನವೆಂಬಂತೆ ಹೊರಗೆ ಕಂಡರೂ ನಾಟಕವೇ ನಿಮ್ಮ ಜೀವ ಮತ್ತು ಜೀವನವೆಂಬ ಮಾತು ನಿಮ್ಮ ಒಳ ಹೊರಗುಗಳನ್ನೆರಡನ್ನೂ ಅರಿತ ಸಹೃದಯರಿಗೆ ಮನಗಂಡ ಮಾತು. ನಾಟಕವೇ ನಿಮ್ಮ ಕುಟುಂಬ; ಕುಟುಂಬವೇ ನಾಟಕ. ನೀವು ಧನ್ಯರು. ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸ್ವೀಕರಿಸಿರಿ.

ನವರಸೋಪೇತವಾದ ಜೀವನದ ಸಮ್ಯಗ್ದರ್ಶನವೇ ನಾಟಕ. ನಾಟಕ ಎಲ್ಲಾ ಕಲೆಗಳನ್ನೂ ಒಪ್ಪಿ ತನ್ನ ನೀಳ್‌ತೆಕ್ಕೆಯಲ್ಲಿ ಅಪ್ಪಿ ಬಾಳಿನ ಭವ್ಯತೆಗೆ ಪ್ರತೀಕವಾಗಿ ದಿವ್ಯತೆಯ ಪ್ರಚೋದಕವಾಗಿ ನಿಂತಿದೆ. ನಾಟಕವು ಸಾಹಿತ್ಯದ ಕೊನೆಮಾತ್ರವಲ್ಲ; ಸಾಹಿತ್ಯದ ತೆನೆ. ಕಸದಿಂದ ಕಲ್ಮಷಗೊಂಡಿರುವ ಜೀವನದ ಸ್ವಚ್ಛತೆಗೆ ರಸಸ್ನಾನ ಅಗತ್ಯ. ಅಂತಹ ನವರಸಸ್ನಾನದಿಂದ ಮನಸ್ಸಿನ ಮಾಲಿನ್ಯವನ್ನು ಕಳೆದು ಮಾನವ ಜೀವನವನ್ನು ದಿವ್ಯಜೀವನದ ಕಡೆ ನಡೆಸುತ್ತಿರುವ ನಾಲ್ಕಾರು ಶಕ್ತಿಗಳಲ್ಲಿ ಕಲೆಯೂ ಒಂದು.

ನೀವು ನಾಟಕ ರಂಗಭೂಮಿಯ ಮೇಲೆ ನವಮನ್ವಂತರವನ್ನೇ ಆರಂಭಿಸಿದಿರಿ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಾರಂಭವಾದ ರಂಗಭೂಮಿಯ ಏಳ್ಗೆಗೆ ಹೆಗಲೆತ್ತಿದ ಹಲವಾರು ವ್ಯಕ್ತಿಗಳಲ್ಲಿ ತಾವೂ ಒಬ್ಬರು. ಸಾಮಾನ್ಯ ಮನುಷ್ಯನಿಂದ ಹಿಡಿದು ಶ್ರೀಮನ್ಮಹಾರಾಜರವರೆಗೂ ಬೇಕಾದ ತಾವೇ ಪ್ರತ್ಯಕ್ಷ ನಿದರ್ಶನ. ಕಲೆ ಸರ್ವತೋಮಾನ್ಯವಾದದ್ದು ಮತ್ತು ಸರ್ವತ್ರ ಮಾನ್ಯವಾದದ್ದು ಎಂಬ ಮಾತಿಗೆ ಕನ್ನಡ ರಂಗಭೂಮಿಯ ಪ್ರತಿಭೆಯನ್ನೂ, ಪ್ರಭೆಯನ್ನೂ ಹೊರನಾಡುಗಳಲ್ಲಿಯೂ ಮೆರೆದು ತೋರಿಸಿದ ಕೀರ್ತಿ ತಮ್ಮದು. ರಂಗಭೂಮಿಯ ಮೇಲೆ ವಿವಿಧ ರಸಪ್ರಧಾನವಾದ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳನ್ನು ಆಡಿ ಬಳ್ಳಾರಿಯ ಪುರಜನರಿಗೆ ರಸದ ಊಟವನ್ನು ನೀಡಿ ಎಲ್ಲರ ಮೆಚ್ಚಿಕೆಗೆ ಪಾತ್ರರಾಗಿದ್ದೀರಿ. ಈ ಅಪರ ಪ್ರಾಯದಲ್ಲಿಯೂ ತಾವು ರಂಗಭೂಮಿಯ ಮೇಲೆ ಪಾದರಸದಂತೆ ಆಡುವುದನ್ನು ನೋಡಿದಾಗ ಕಲಾವಿದನಿಗೆ ಕಾಲದಭಯವೇ ಇಲ್ಲವೇನೋ ಅನಿಸುತ್ತದೆ. ಕಾಲನನ್ನು ಅಡಿಯಿಂದ ತುಳಿದು ಕಲೆಯನ್ನು ಮುಡಿಗೇರಿಸಿಕೊಂಡ ಪರಮ ಶಿವನ ಪೂರ್ಣಾನುಗ್ರಹವನ್ನು ಹುಟ್ಟಾಪಡೆದು ಹುಟ್ಟಿದ್ದೀರಿ.

"ಭಾವಸ್ಥಿರಾಣಿ ಜನನಾನಂತರಸೌಹೃದಾನಿ" ಎಂಬಂತೆ ಕಲಾವಿದನಿಗೂ ಸಹೃದಯ ರಸಿಕನಿಗೂ ಇರುವ ನಮ್ಮ ನಿಮ್ಮ ಸಂಬಂಧ ಇಂದಿನದಲ್ಲ; ಬಹುಹಿಂದಿನದು; ಮುಂದೆ ಎಂದೆಂದಿನದು. ".... ಈ ವರಬಂಧನವು ಇಂದಿನದು ತಾನಲ್ಲೆಂದಿನದೋ ಬಹುಜನ್ಮದಿಂ ಮುಡಿಬಿದ್ದ ಬಂಧನವು."

ನಿಮ್ಮನ್ನೂ ನಿಮ್ಮೊಂದಿಗರೆಲ್ಲರನ್ನೂ ತಾವು ಆಡಿ, ಆಡುವ ಎಲ್ಲರನ್ನೂ ನೋಡಿ, ಆಡಿ ಆಡಿಸುವ ನಟರಾಜ ರಾಜ್ಞಿಯರು ಸದಾ ಸಂರಕ್ಷಿಸಲಿಯೆಂದು ಹಾರ್ದಿಕವಾಗಿ ಹಾರೈಸುತ್ತೇವೆ.

– ಜೈಶಿವೇ!

ಜೈ ಶಿವೇ!

॥ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯಾಃ ಪ್ರಸೀದಂತು ॥
ಶ್ರೀ ಗುರು ಮಲೆಯಶಾಂತೇಶ್ವರ ಸಂಸ್ಥಾನ ನಂದೂರ
ಪದವೀ ಪ್ರದಾನ ಪತ್ರಿಕಾ

ನಮನ್ನರಾಲಿನಾಕಿದ್ಯಂ । ನಗಜಾಜಾನಿಭಾಸುರಂ ॥
ವಂದೇ ಮಲೆಯ ಶಾಂತೇಶಂ । ಸದ್ಗುರುಂ ಮುಕ್ತಿದಾಯಕಂ ॥

ಉಭಯ ನಂದೂರ ಕೋಪಕಟ್ಟ ಹಿರೇಮಠದ ಚರಸ್ಥಿರ ಪಟ್ಟಾಧ್ಯಕ್ಷ ವೈದ್ಯಭೂಷಣ ವೈದ್ಯಮಾರ್ತಂಡ ಬಿರುದಾಂಕಿತ ಶ್ರೀ ಷ ॥ ಬ್ರ॥

ಸದಾಶಿವ ಶಿವಾಚಾರ್ಯ ಮಹಾಸ್ವಾಮಿಗಳವರ ಅಧಿಕಾರಸ್ಥಾನದಿಂದ

ವಿವಿದ ವಿಧ್ಯಾಭೂಷಿತರು, ಸಕಲಶಾಸ್ತ್ರ ಪ್ರತಿಪಾದಿತ ಸದ್ಧರ್ಮಾಚಾರ ನಿರತರು. ಸಮಸ್ತ ಸದ್ಗುಣ ಭರಿತರು, ಪರಮಶಿವಭಕ್ತಿನಿಷ್ಠರು, ಗುರುಸೇವಾಸಕ್ತರು. ಉದಾರಿಗಳು ತುಮಕೂರ ಜಿಲ್ಲೆಗೆ ಸಂಬಂಧಿಸಿದ ಗುಬ್ಬಿ ನಿವಾಸಿಗಳಾದ ಶ್ರೀಯುತ ಜಿ.ಎಚ್. ವೀರಣ್ಣನವರು ಮಹನೀಯರಿಗೆ ಪ್ರಗಲ್ಭ ಪಾಂಡಿತ್ಯ ಪ್ರಭೆಯಿಂದ ಸಂಪಾದಿಸಿದ ಲೋಕಾನುರಾಗದಿಂದ ಕೀರ್ತಿವೆತ್ತ ಇವರಿಗೆ ಭರತ ನಾಟ್ಯಕಲಾ ಪ್ರವೀಣ ಎಂಬ ಪದವಿಯನ್ನು ದಯಪಾಲಿಸಲಾಗುತ್ತದೆ.

ಯಾವಾಗಲೂ ಆಯುರಾರೋಗ್ಯೈಶ್ವರ್ಯ ಸತ್ಸಂತಾನಾದಿ ಸಮಸ್ತ ಸಂಪತ್ತುಗಳಾಗಲೆಂದು ಆಶೀರ್ವದಿಸುತ್ತೇವೆ.

ಸಕಲ ಸನ್ಮಂಗಲಾನಿ ಭವಂತು

ಮುಕ್ಕಾಂ ಗುಲ್ಲಬರ್ಗಾ
ತಾಲ್ಲೂಕ
ಜಿಲ್ಲ ಗುಲ್ಲಬರ್ಗಾ

ದಿನಾಂಕ ೨-೧೦-೧೯೫೮

"ನಾಟಕರತ್ನ"

ಶ್ರೀಮಾನ್ ಗುಬ್ಬಿ ವೀರಣ್ಣನವರಿಗೆ
ತೀರ್ಥಹಳ್ಳಿಯ ಕಲಾವೃಂದ ಅರ್ಪಿಸಿದ ಸನ್ಮಾನ

ಸ್ವಾಮಿ,

ಕನ್ನಡ ರಂಗಭೂಮಿಗೆ ಕಣ್ಣಿತ್ತು ಕಾಪಾಡಿಕೊಂಡು ಬರುತ್ತಿರುವವರು ನೀವು. ನಿಮ್ಮ ಮಡಿಲಿನಲ್ಲಿ ಬೆಳೆದ ಕನ್ನಡ ನಾಟಕದ ಕೂಸು, ಕೈ ಗೊಂಬೆಯಾಗಿ, ಹೆಗಲೇರಿ, ಬಿದ್ದೆದ್ದು, ಹೊಸಲಾಚೆ ದಾಟಿನಿಂತು, ಈಗ ಮೊಗವೆತ್ತಿ, ನಗೆನಕ್ಕು ಓಡಾಡುತ್ತಿದೆ. ಕನ್ನಡಾಂಬೆಯ ಕಣ್ಣಂಗಳದಲ್ಲಿ ಕುಣಿದು ಕುಪ್ಪಳಿಸಿ ನೆಗೆದಾಡುತ್ತಿದೆ; ನಗೆದಾಡುತ್ತಿದೆ. ಇನ್ನಿದರ ಧಾಳಿಯನು ತಡೆವರಾರು?

ನಾಟಕದ ಕಲ್ಪನೆಯನ್ನೇ ಕಾಣದ ಕನ್ನಡಿಗರಿಗೆ ಅದರ ಸವಿರುಚಿಕಾಣಿಸಿದವರು ನೀವು. ಶ್ರೀ ಚಾಮರಾಜೇಂದ್ರ ಒಡೆಯರ್ ಅವರ ಕಲಾ ಪ್ರೋತ್ಸಾಹದಿಂದ ಬೆಳೆದು ಬಂದ ಗುಬ್ಬಿ ಶ್ರೀ ಚೆನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘವು ೧೮೮೪ರಲ್ಲಿ ಗುಬ್ಬಿ ಶ್ರೀ ಚಂದಣ್ಣನವರು, ಹ|| ಅಬ್ದುಲ್ ಅಜೀಜ್ ಸಾಹೇಬರು-ಮುಂತಾದವರ ದಕ್ಷ ಆಡಳಿತದಿಂದ ರೂಪಗೊಂಡಿತೆಂದು ತಿಳಿದಿದ್ದೇವೆ. ಪ್ರಾರಂಭದಲ್ಲಿ ಬಯಲಾಟದ ರೂಪದಲ್ಲಿ ಪ್ರಸಿದ್ಧಿಯಾಗಿದ್ದ "ಕುಮಾರ ರಾಮ ಚರಿತ್ರೆ" ನಿಮ್ಮ ನಾಟಕ ಸಂಘದ ನಾಂದಿಯಾಯಿತೆಂದು ತಿಳಿಯುತ್ತದೆ. ಈ ವೇಳೆಗೆ ಮೈಸೂರು ಸೀಮೆಗೆ ಕಾಲಿಟ್ಟ ಮಹಾರಾಷ್ಟ್ರ ನಾಟಕ ಸಂಘಗಳ ಪ್ರಭಾವ ನಿಮ್ಮ ಕಂಪೆನಿಯ ಮೇಲೂ ವರ್ಚಸ್ಸನ್ನು ಬೀರಿದವು.

೧೮೯೬ರಲ್ಲಿ ೬ ವರ್ಷದ ಹಸುಳೆಯೊಂದು ಹುಲಿಕಲ್ಲು ಮೊಕ್ಕಾಮಿನಲ್ಲಿದ್ದ ಗುಬ್ಬಿ ಕಂಪನಿಯ ರಂಗಭೂಮಿಯೊಳಗೆ ಅಡಿಯಿಟ್ಟಿತು. ಕನ್ನಡ ರಂಗಭೂಮಿಯ ಭವ್ಯ ಭವಿಷ್ಯವನ್ನು ಆಗಲೇ ಕನ್ನಡದ ಜನ ಕಂಡುಕೊಂಡರು. ಚಿಕ್ಕಂದಿನಿಂದ ಚೊಕ್ಕವಾದ ಅಭಿನಯ ಹಾಗೂ ಸೇರಿದ್ದ ನಾಟಕ ಕಂಪೆನಿಯ ಮೇಲ್ಮೆಯಲ್ಲಿ ನೀವು ಆಗಲೇ ವಹಿಸುತ್ತಿದ್ದ ತೀವ್ರಾಸಕ್ತಿ-ಇವು ನಿಮ್ಮನ್ನು ರಂಗಭೂಮಿಯ ಈ ಉಚ್ಚ ಪೀಠಕ್ಕೆ ಏರಿಸುವ ಸೋಪಾನ ಪಂಕ್ತಿಗಳಾದುವು.

ಮುಂದೆ ೧೯೧೯ರಿಂದ ನಾಟಕ ಸಂಘದ ಸಂಪೂರ್ಣ ಸ್ವಯಂ ಆಡಳಿತ ನಿಮ್ಮ ಕೈಗೆ ಸಿಕ್ಕು, ಹೊಸದೃಷ್ಟಿಯನ್ನು ಸಂಪಾದಿಸಿದಿರಿ; ಹೊಸ ದೃಷ್ಟಿಯನ್ನು ಜನಕ್ಕೂ ಕೊಟ್ಟಿರಿ. ನಗೆಯರಿಯದ ಕನ್ನಡದ ಜನಕ್ಕೆ ಕಚಗುಳಿಯಿಟ್ಟು ಹಿರಿಹಿರಿ ಹಿಗ್ಗಿಸಿದಿರಿ. ಸಿನಿಮಾ ಪ್ರಪಂಚದ ಧಾಳಿಯನ್ನೂ ಅರಗಿಸಿಕೊಂಡು, ನಾಟಕ ಪ್ರಪಂಚವನ್ನು ಸಲಹಿದಿರಿ.

ಸಂಪೂರ್ಣ ಶ್ರೀ ಕೃಷ್ಣಲೀಲಾ, ಶ್ರೀ ಕೃಷ್ಣಪಾರಿಜಾತ, ಮಹಾತ್ಮ ಕಬೀರ್ ದಾಸ್, ಸದಾರಮೆ, ಕುರುಕ್ಷೇತ್ರ, ದಶಾವತಾರ-ಮುಂತಾದ ಜನಾದರಣೀಯವಾದ ನಾಟಕಗಳನ್ನು ಆಡಿ ಜನಮನ ರಂಜಿಸಿದ್ದೀರಿ. ನಿಮ್ಮ ನಾಟಕಗಳಲ್ಲಿ ಕಂಡುಬರುವ ರಂಗಕೌಶಲ,

ದೃಶ್ಯಜೋಡಣೆ ರಂಗಭೂಮಿಗೆ ಮಾದರಿಯಾಗಿವೆ. ಸಮಗ್ರ ದೃಷ್ಟಿಯಿಂದ ನಿಮ್ಮ ನಾಟಕಗಳನ್ನೀಕ್ಷಿಸಿದವರಿಗೆ ಮನವರಿಕೆಯಾಗುವುದು. ನೀವು ಇಮಿಟೇಷನ್ ಹರಳಲ್ಲ ; ದಿಟವಾಗಿಯೂ 'ನಾಟಕರತ್ನ' ಎಂದು.

ಚಿಕ್ಕಂದಿನಿಂದ ಕಲೆಗಾಗಿ ದುಡಿಯುತ್ತ ನಿಂದು, ಸಂಘಕ್ಕೆ ಸುವರ್ಣೋತ್ಸವ ಮತ್ತು ವಜ್ರೋತ್ಸವಗಳನ್ನು ನಡೆಸಿ ಕನ್ನಡ ರಂಗಭೂಮಿಗೆ ಕಳಶವಿಕ್ಕಿದಿರಿ.

ಶ್ರೀ ಚನ್ನಬಸವೇಶ್ವರನ ಕೃಪಾರಕ್ಷೆ ಎಂದೆಂದೂ ನಿಮ್ಮ ಮೇಲಿರಲೆಂದು ಪ್ರಾರ್ಥಿಸುತ್ತೇವೆ.

ತೀರ್ಥಹಳ್ಳಿ

೧೯-೧೨-೧೯೫೮

ಇಂತು, ತಮ್ಮವರು,

ಅಧ್ಯಕ್ಷ ಮತ್ತು ಸದಸ್ಯರು, ಕಲಾ-ವೃಂದ

ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡಮಿಯವರು
ವಿನೋದರತ್ನಾಕರ, ವರ್ಸಟೈಲ್ ಕಮೆಡಿಯನ್, ನಾಟಕರತ್ನ

ಇತ್ಯಾದಿ ಬಿರುದಾಂಕಿತರಾದ
ಶ್ರೀ ಗುಬ್ಬಿ ಎಚ್. ವೀರಣ್ಣನವರಿಗೆ
ಮೈಸೂರು ರಾಜ್ಯದ ಮುಖ್ಯಮಂತ್ರಿ
ಶ್ರೀ ಬಿ.ಡಿ. ಜತ್ತಿಯವರ
ಘನ ಅಧ್ಯಕ್ಷತೆಯಲ್ಲಿ ಸಮರ್ಪಿಸಿದ ಪ್ರಶಸ್ತಿ ಪತ್ರಿಕೆ

ಸ್ವಾಮಿ,

ಕರ್ನಾಟಕದ ನಟನ ಕಲೆಯಲ್ಲೂ ನಾಟಕ ಸಂಪ್ರದಾಯವನ್ನು ಸಾಂಸ್ಥಿಕವಾಗಿ ಪೋಷಿಸಿಕೊಂಡು ಬಂದಿರುವುದರಲ್ಲೂ ಏಕಮೇವಾದ್ವಿತೀಯರಾದ ನಾಟಕರತ್ನ ಶ್ರೀ ಜಿ.ಎಚ್. ವೀರಣ್ಣನವರಿಗೆ ಪ್ರಶಸ್ತಿ ಪತ್ರಿಕೆಯನ್ನು ಸಲ್ಲಿಸಲು ಅಧ್ಯಕ್ಷರ ಅನುಮತಿಯನ್ನು ಕೋರುತ್ತೇವೆ.

ಕೇವಲ ಬಾಲ್ಯದಲ್ಲೇ ರಂಗಭೂಮಿಯನ್ನು ಹತ್ತಿದ ಶ್ರೀ ವೀರಣ್ಣನವರು ಸ್ತ್ರೀ ಪಾತ್ರಗಳೇ ಮುಂತಾಗಿ ವಿವಿಧ ಪಾತ್ರಗಳನ್ನು ನಿರ್ವಹಿಸಿ, ಕಡೆಗೆ ತಮ್ಮ ನಟನ ವೈಶಿಷ್ಟವನ್ನು ಹೊರಹೊಮ್ಮಿಸಿದ ವಿದೂಷಕ ಪಾತ್ರಗಳಲ್ಲಿ ಅಗಾಧ ಖ್ಯಾತಿಯನ್ನು ಸಂಪಾದಿಸಿದ್ದಾರೆ ಮತ್ತು ಜನಪ್ರಿಯತೆ, ವ್ಯವಹಾರ ಕೌಶಲಗಳಿಂದ ತಾವು ಸೇರಿದ್ದ ನಾಟಕ ಸಂಸ್ಥೆಯ ಒಡೆಯರಾಗಿ ಅದನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಅರವತ್ತೊಂಬತ್ತರ ವಯಸ್ಸಿನಲ್ಲಿಯೂ ಶ್ರೀ ವೀರಣ್ಣನವರ ಅಭಿನಯ ಕೌಶಲವೂ ಪ್ರತಿಭೆಯೂ ಅಚ್ಚಳಿಯದೆ ಉಳಿದಿದೆ, ಅನುಭವ ಪರಿಪೂರ್ಣವಾಗಿವೆ.

ನಾಟಕರತ್ನ ಶ್ರೀ ವೀರಣ್ಣನವರು ತಮ್ಮ ಅಭಿನಯ ಪ್ರಾವೀಣ್ಯವನ್ನು ಬೆಳೆಸಿ ಕೊಂಡಂತೆ, ತಮ್ಮ ನಾಟಕ ಸಂಸ್ಥೆಯನ್ನೂ ಬೆಳೆಸಿಕೊಂಡು ಬಂದಿದ್ದಾರೆ, ಹೆಚ್ಚು ಹೆಚ್ಚು ಜನವತ್ಸಲರಾಗಿದ್ದಾರೆ. ಬೆಂಗಳೂರು ಸಾರ್ವಜನಿಕರು ವಿನೋದರತ್ನಾಕರ ಎಂಬ ಬಿರುದನ್ನೂ, ಶ್ರೀಮಾನ್ ಮಹಾರಾಜರು ವರ್ಸಟೈಲ್ ಕಮೆಡಿಯನ್ ಮತ್ತು ನಾಟಕರತ್ನ ಎಂಬ ಬಿರುದುಗಳನ್ನೂ ಶ್ರೀ ವೀರಣ್ಣನವರಿಗೆ ದಯಪಾಲಿಸಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡಮಿಯವರು ರಾಷ್ಟ್ರಪ್ರಶಸ್ತಿಯನ್ನು ನೀಡಿದ್ದಾರೆ.

ಕನ್ನಡನಾಡಿನಲ್ಲೂ ಹೊರಗಡೆಯೂ ತಮ್ಮ ನಾಟಕ ಮಂಡಲಿಯನ್ನು ಕೊಂಡೊಯ್ದು ಕನ್ನಡ ನಾಟಕ ಕಲೆಯ ಹಿರಿಮೆಯನ್ನೂ ನಟನ ವೈಭವದ ಔನ್ನತ್ಯವನ್ನೂ ಸಾರಿ ಕನ್ನಡನಾಡಿಗೆ

ಭೂಷಣರಾದಂಥ ಶ್ರೀ ಜಿ. ಎಚ್. ವೀರಣ್ಣನವರನ್ನು ಯಥಾಶಕ್ತಿ ಆದರಿಸಿ ಸತ್ಕರಿಸುವ ಸೌಭಾಗ್ಯವು ಇವತ್ತು ನಮಗೆ ಲಭ್ಯವಾಗಿರುವುದು ನಮಗೆಲ್ಲಾ ಧನ್ಯತೆಯ ವಿಷಯವಾಗಿದೆ. ಶ್ರೀ ವೀರಣ್ಣನವರಿಗೆ ನಮ್ಮ ಗೌರವದ ಸಂಕೇತವಾಗಿ ಈ ಶಾಲ ಜೋಡಿಯನ್ನೂ ಈ ನಟರಾಜ ವಿಗ್ರಹವನ್ನೂ ಸಮರ್ಪಿಸುವಂತೆ ತಮ್ಮನ್ನೂ, ಅವನ್ನು ಅಂಗೀಕರಿಸಿ ನಮ್ಮ ಮನಸ್ಸಂತೋಷಪಡಿಸುವಂತೆ ಶ್ರೀ ವೀರಣ್ಣನವರನ್ನೂ ಪ್ರಾರ್ಥಿಸಿಕೊಳ್ಳುತ್ತೇವೆ.

(Sd) ಬಿ.ಡಿ. ಜತ್ತಿ

ಬೆಂಗಳೂರು **ಇತಿ, ಮೈಸೂರು ರಾಜ್ಯದ ಸಂಗೀತ ನಾಟಕ**

ತಾ|| ೧೬-೪-೧೯೬೯ **ಅಕಡೆಮಿಯ ಸದಸ್ಯರ ಪರವಾಗಿ ಅಧ್ಯಕ್ಷರ ಕೋರಿಕೆ**

ॐ

सोलापूर नागरिकोंके ओरसे

श्री० नट साम्राट गुब्बी वीरण्णा सहाशथजीको

सादर समर्पित

अभिनन्दन पत्र

बुधवार दिनांक २८-१०१९५९

श्री कलारत्न वीरण्णाजी,

कर्नाटक नाट्य कला, बद्य प्रतिपन्चद्रमाकी तरह नवरस हीन, दीन, क्षीन बोरसकी दुःस्थिती के समय नाट्य रंग मंचपर विराजमान होकर सतत अर्ध शतमानके उपर शेकाकी । कारण कर्नाटक नाट्य कला नवरससे सींचित हौकर समग्र मे ही शुक्ल प्रतीपत्त चंद्रमा कफ तरह दिने दिने वृद्धी होती हुई अब पूर्ण चंद्रमा के रूपसे दिग दिगन्तर में हुई है। ऐसें कलारत्न, पुत्ररत्नसे कर्नाटक साता बहुत हर्षित हुई है। इथ्थंभूत आपको कर्नाटक मणिमुकुट पुण्यधाम श्री सिद्धरामेश्वर नागरवासियोंने सहर्ष हार्दिक स्वागत करते हैं ।

नवरस जवाहरजी !

नाटक कला ऐसे एक चीज है । जीसमें सब परिपूर्णतः पाते हैं । उसमें भी हास्यरस तो राजा-करं योगियोंको भी मान्य है । आप नाटक कला में निपुण होते हुए भी हास्य कला में तो सिद्ध हस्त है, कारण आपको मैसूर महाराज ने 'नाटकरन्त' 'विनोदरत्नाकर' इत्यादि पदवियोंसे गौरव किये हैं और आपको विधान परिषद् में सतत छे वर्षोंतक सदस्य दिये तक आपकी नाव्य-हास्यकला तामिल, आन्ध्र, महाराष्ट्र आदि प्रान्तोंमें भी प्रसिद्धि हुई आपके दशावतार, कुरुक्षेत्र और अन्न-तम्मा आदि नाटकोंको देखकर प्रसिद्ध कलाभिज्ञ श्री पृथ्वीराज कपुर और राजकपुर पेंढारकर आदि महाशयोंने प्रशंशा की हैं ।

कारण बारत सरकार ''पद्मश्री'' पदवीसे विभूषित की है ।

नाठ्य-पितामह ! भूत, वर्तमान समय में कर्नाटक में. प्रसिद्ध नट-नटियों के नाम विराजमान हो रहे हैं । सब आपके परुष प्रभाव है और आपकी कला की प्रसरता, जीवन नाटक, हेमरड्डी मल्लम्मा, क्रनण्पा वगैरे चलचित्रों से भी हुई इसी लिए आपको हमारे पूज्य कीर्तिमानध्यक्ष महास्वमीजीने ''नाठ्य-पितामह'' उपाधि देकर सार्थकता की ।

दानवीर,

आप महान् कलाभिज्ञ होनेके नाते अनेक विद्या, कला संस्थाओं को उदार

हृदयसे पांच लाख तक दान की हैं । इसी वजह से आपको शोलापूर सहर्ष सहृदयसे ''दानवीर'' नामसे पुकारते हैं । आपको श्री सिद्धरामेश्वर आयु आरोग्य सम्पदादिओंको अनुग्रह करके कर्नाटक माताके इतोप्यतिशयसे सेवा करनेकी शक्ति दे ऐसी प्रार्थना हैं ।

जय-हिन्द

एम. वी. काडादी
अध्यक्ष, सिद्धश्वर देवस्थान पंच कमिटी

घ.म. वारद
अध्यक्ष, महिला ज्ञान मंदिर

पी. एस. जीरगे
अध्यक्ष, श्रद्धानन्द समाज, सोलापुर

आर. के. दुलंगेए.
अध्यक्ष, सं. कर्नाटक समिती

एस. आर. चिप्पा
(नगराध्यक्ष) अध्यक्ष, सत्कार समिती

रजशफ्खर मडको
अध्यक्ष, कन्नड शिक्षण समिती

एस. पी. हनुगुंद
सेक्रेटरी, ललितकला मंडल

केशवलाल वीरचंद शहा, एम्.एल.ए.
सेक्रेटरी, रिमांड होम

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೫ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ-ಕನ್ನಡಿಗ-ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಗದಗದಲ್ಲಿ ನಡೆಯುತ್ತಲಿರುವ ಅಖಿಲ ಭಾರತ ೭೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮